ಭಾನುವಾರ, ಜುಲೈ 21, 2024 | ₹ 7.00
www.prajavani.net
prajavani.net prajavani Prajavani Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ವರ್ಷಧಾರೆಯ ಹರ್ಷ**
ಕಲಬುರಗಿಯ ಬಹಮನಿ ಕೋಟೆಯ ಬಳಿ ಜಿಟಿ ಜಿಟಿ ಮಳೆಯಲ್ಲೇ ನಡೆದ ಶನಿವಾರದ ಸಂತೆಯ ಚಿತ್ರಣ ಕ್ಯಾಮೆರಾ ಕಣ್ಣಲ್ಲಿ ಸೆರೆಯಾದದ್ದು ಹೀಗೆ...

ಕೇಂದ್ರ ಸಚಿವ ಎಚ್‌ಡಿ.ಕೆ ಪ್ರಶ್ನೆ ● ವಾಲ್ಮೀಕಿ ನಿಗಮದ ಹಗರಣ–ಅಧಿಕಾರಿಗಳಿಂದ ತಪ್ಪಾಗಿದ್ದರೂ ಸರ್ಕಾರವೇ ಹೊಣೆ

# ಬಿಜೆಪಿ ಹಗರಣ: ಇಷ್ಟು ದಿನ ಸುಮ್ಮನಿದ್ದರೇಕೆ?

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಬಿಜೆಪಿ ಆಡಳಿತದಲ್ಲಿ ಹಗರಣಗಳಾಗಿವೆ ಎಂದು ಆರೋಪಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಇಷ್ಟು ದಿನ ಏಕೆ ಸುಮ್ಮನಿದ್ದರು. ತಮ್ಮ ತಪ್ಪು ಮುಚ್ಚಿಕೊಳ್ಳಲು ಇಂತಹ ಹೇಳಿಕೆ ನೀಡಿದ್ದಾರೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಶನಿವಾರ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, '2010, 2011 ಮತ್ತು 2012ರಲ್ಲಿ ಅಕ್ರಮ ನಡೆದಿವೆ ಎನ್ನುತ್ತಾರೆ. 2013ರಲ್ಲಿ ಅವರದ್ದೇ ಸರ್ಕಾರ ಇದ್ದಾಗ ಏಕೆ ಕ್ರಮಕೈಗೊಳ್ಳಲಿಲ್ಲ. ಈಗ 1 ವರ್ಷದಿಂದ ಅಧಿಕಾರದಲ್ಲಿದ್ದಾರೆ. ಏಕೆ ಕ್ರಮ ಕೈಗೊಂಡಿಲ್ಲ. ಈಗ ತನಿಖೆ ಮಾಡುವುದಾಗಿ ಗುಮ್ಮ ಬಿಟ್ಟಿದ್ದಾರೆ' ಎಂದರು.

'ವಾಲ್ಮೀಕಿ ನಿಗಮದಲ್ಲಿ ಹಗರಣ ನಡೆದಿದೆ ಎಂದು ಸಿ.ಎಂ ಅವರೇ ಹೇಳಿದ್ದಾರೆ. ಅಧಿಕಾರಿಗಳಿಂದ ತಪ್ಪಾಗಿದ್ದರೂ ಸರ್ಕಾರವೇ ಹೊಣೆ. ಸಚಿವರು ಮೌಖಿಕ ಆದೇಶ ನೀಡಿದ್ದಾರೆ ಎಂದು ಮೃತ ಅಧಿಕಾರಿ ಡೆತ್‌ನೋಟ್‌ನಲ್ಲಿ ಬರೆದಿದ್ದರ ಅರ್ಥ ಏನು?' ಎಂದು ಪ್ರಶ್ನಿಸಿದರು.

**ನಾಗೇಂದ್ರ, ದದ್ದಲ್ ರಕ್ಷಣೆಗೆ ರಾಜ್ಯ ಸರ್ಕಾರ ಯತ್ನ:** ಸಂಡೂರು (ಬಳ್ಳಾರಿ ಜಿಲ್ಲೆ): 'ವಾಲ್ಮೀಕಿ ನಿಗಮ ಹಗರಣದ ತನಿಖೆಯಲ್ಲಿ ಮಾಜಿ ಸಚಿವ ಬಿ. ನಾಗೇಂದ್ರ ಬಾಯಿಬಿಟ್ಟರೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಬುಡಕ್ಕೆ ಬರುತ್ತದೆ' ಎಂದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದ್ದಾರೆ.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಇದೇ ಕಾರಣದಿಂದಲೇ ನಾಗೇಂದ್ರ ಅವರನ್ನು ರಕ್ಷಿಸುವ ಪ್ರಯತ್ನ ರಾಜ್ಯ ಸರ್ಕಾರದಿಂದ ನಡೆದಿದೆ' ಎಂದು ಆರೋಪಿಸಿದರು.

'ನಿಗಮದ ಅಧಿಕಾರಿಗಳ ಮೇಲೆ ಗೂಬೆ ಕೂರಿಸಿ ನಾಗೇಂದ್ರ, ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರ ರಕ್ಷಣೆ ಕೆಲಸ ನಡೆದಿದೆ. ನಾಗೇಂದ್ರ, ದದ್ದಲ್‌ಗೆ ಎಸ್‌ಐಟಿ ಒಂದೂ ನೋಟಿಸ್ ಕೊಟ್ಟಿರಲಿಲ್ಲ. ಇ.ಡಿ ತನಿಖೆಗೆ ಬರುವುದೆಂದು ಗೊತ್ತಾದ ಕೂಡಲೇ ನಾಗೇಂದ್ರ ರಾಜೀನಾಮೆ ಪಡೆಯಲಾಯಿತು' ಎಂದು ತಿಳಿಸಿದರು.

'ಹಣವನ್ನು ಚುನಾವಣೆಗೆ ಮತ್ತು ಲ್ಯಾಂಬೋರ್ಗಿನಿ ಕಾರು ಖರೀದಿಸಲು ಬಳಸಲಾಗಿದೆ ಎಂದು ಇ.ಡಿ ಹೇಳಿದೆ. ಸತ್ಯನಾರಾಯಣ ವರ್ಮಾ ಅವರ ಮನೆಯಲ್ಲಿ ಸಿಕ್ಕ ಹಣ ಸರ್ಕಾರವೇ ಇರಿಸಿದ್ದೇ ಎಂಬ ಅನುಮಾನವಿದೆ' ಎಂದರು. 'ಹಗರಣ ನಡೆದಿರುವುದು ನಿಜ. ಅಧಿಕಾರಿಗಳ ಹಂತದಲ್ಲಿ ಆಗಿದೆ ಎಂದು ಸಿ.ಎಂ ಹೇಳುತ್ತಾರೆ. ಹಾಗಾದರೆ, ನಾಗೇಂದ್ರ ರಾಜೀನಾಮೆ ಯಾಕೆ ಪಡೆಯಲಾಯಿತು' ಎಂದು ಹೇಳಿದರು.

**ಸರ್ಕಾರ ವಿವಿಧ ಹಗರಣಗಳಲ್ಲಿ ಭಾಗಿಯಾಗಿರುವ ಕಾರಣ ಸಿ.ಎಂ ಸಿದ್ದರಾಮಯ್ಯ ಅವರು ನೈತಿಕತೆ ಉಳಿಸಿಕೊಂಡಿಲ್ಲ. ಸಾರ್ವಜನಿಕವಾಗಿ ಮುಖ ತೋರಿಸಲು ಆಗದ ಸ್ಥಿತಿಯಲ್ಲಿದ್ದಾರೆ**
**ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

**ರಾಜ್ಯ ಸರ್ಕಾರದ ವಿವಿಧ ನಿಗಮಗಳಲ್ಲಿ ಕೆಲವು ಖದೀಮ ಅಧಿಕಾರಿಗಳಿದ್ದಾರೆ. ಬಿಜೆಪಿ ಆಡಳಿತದಲ್ಲೂ ತಿಂದು ಈಗಲೂ ಸೇರಿಕೊಂಡಿದ್ದಾರೆ**
**ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 40 ವರ್ಷಗಳ ಶುದ್ಧ ಹಸ್ತದ ಮುಖವಾಡ ಕಳಚಿದೆ. ಹಗರಣ ಮಾಡಿದ್ದರಿಂದಲೇ ಬೆಚ್ಚಿ ಬಿದ್ದಿದ್ದಾರೆ**
**ಆರ್. ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

## ಇ.ಡಿ ಓಡೋಡಿ ಬಂದಿದ್ದೇಕೆ; ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರುಪಯೋಗ ಪ್ರಕರಣ ಕುರಿತು ಎಸ್‌ಐಟಿ ತನಿಖೆ ನಡೆಯುವ ಸಂದರ್ಭದಲ್ಲಿ ಇ.ಡಿ ಓಡೋಡಿ ಬಂದಿದ್ದು ಏಕೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಪ್ರಶ್ನಿಸಿದರು.

'ಬಿಜೆಪಿಯವರು ನಡೆಸಿರುವ ಕೆಲವು ಹಗರಣಗಳ ತನಿಖೆಯೂ ನಡೆಯುತ್ತಿದೆ. ಅವರ ವಿರುದ್ಧ ಆರೋಪ ಬಂದಾಗ ಯಾವ ಇ.ಡಿ.ಯೂ ಬರಲಿಲ್ಲ. ಅವರು ಕೊಳ್ಳೆ ಹೊಡೆದದ್ದು ಜನರ ಹಣ ಅಲ್ಲವೇ? ಬಿಜೆಪಿಯ ಅವ್ಯವಹಾರಗಳನ್ನು ಸದನದ ಮುಂದಿಟ್ಟದ್ದೇನೆ. ಈ ವಿಚಾರದಲ್ಲಿ ನಾವು ಯಾರನ್ನೂ ಬೆದರಿಸುವ ಕೆಲಸ ಮಾಡುತ್ತಿಲ್ಲ' ಎಂದು ಸುದ್ದಿಗಾರರಿಗೆ ಹೇಳಿದರು.

'ಡಿ.ಎಸ್.ವೀರಯ್ಯ, ಶಂಕರಪ್ಪ ಜೈಲಿಗೆ ಹೋಗಿದ್ದಾರೆ. ಅದನ್ನು ಬಿಜೆಪಿಯವರು ಪ್ರಸ್ತಾಪ ಮಾಡುತ್ತಿಲ್ಲ. ಭೋವಿ ಅಭಿವೃದ್ಧಿ ನಿಗಮದಲ್ಲಿ ಅವ್ಯವಹಾರ ನಡೆಸಿ ಜೈಲಿಗೆ ಹೋದವರು ಯಾರು? ನಮ್ಮ ವಿರುದ್ಧ ಮಾತ್ರ ಟೀಕೆ ಮಾಡುತ್ತಾರೆ. ಅವರು ಮಾಡಿದ ಅಕ್ರಮಗಳನ್ನು ಮುಚ್ಚಿಕೊಳ್ಳುತ್ತಾರೆ' ಎಂದು ಆರೋಪಿಸಿದರು.

'ಬಿಜೆಪಿ ಅಕ್ರಮಗಳ ಬಗ್ಗೆ ನಾನು ಪ್ರಸ್ತಾಪಿಸಿದಾಗ ಬಿಜೆಪಿ ಸದಸ್ಯರಿಂದ ಯಾವುದೇ ಉತ್ತರ ಬರಲಿಲ್ಲ. ನಾವು ಆರೋಪಗಳ ಸತ್ಯಾಸತ್ಯತೆ ಅರಿಯಲು ತನಿಖೆ ನಡೆಸುತ್ತಿದ್ದೇವೆ. ಬಿಜೆಪಿ ಮುಖಂಡರು ತಮ್ಮ ಮೇಲಿನ ಆರೋಪಗಳನ್ನು ಒಪ್ಪಿಕೊಳ್ಳುವರೇ' ಎಂದು ಪ್ರಶ್ನಿಸಿದರು.

## ಸುದ್ದಿ 2 ನಿಮಿಷ

### ಸಿಎಂ ಆರೋಪ ವಾಪಸ್ ಪಡೆಯದಿದ್ದರೆ ಧರಣಿ: ಕೋಟ

ಉಡುಪಿ: 'ಕೊಳವೆಬಾವಿ ಯೋಜನೆಯಲ್ಲಿ ಭ್ರಷ್ಟಾಚಾರ ಎಸಗಿದ್ದೇನೆ ಎಂದು ಸಿ.ಎಂ ಸಿದ್ದರಾಮಯ್ಯ ಮಾಡಿರುವ ಆರೋಪವನ್ನು ವಾರದಲ್ಲಿ ಹಿಂಪಡೆಯದಿದ್ದರೆ ವಿಧಾನಸೌಧದ ಗಾಂಧಿಪ್ರತಿಮೆ ಮುಂದೆ ಧರಣಿ ಕೂರುತ್ತೇನೆ' ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೊಳವೆಬಾವಿ ಯೋಜನೆಯಲ್ಲಿ ಹಾಗೂ ಭೋವಿ ನಿಗಮದಲ್ಲಿ ನಾನು ಒಂದೇ ಒಂದು ರೂಪಾಯಿ ಹಗರಣ ನಡೆಸಿದ್ದರೂ ಅದರ ತನಿಖೆಯನ್ನು ಸಿಬಿಐಗೆ ನೀಡಲಿ' ಎಂದೂ ಸವಾಲು ಹಾಕಿದರು.

'ಸಿಐಡಿ ನಿಮ್ಮ ಕೈಯಲ್ಲಿದೆ. ನೀವು ಮುಖ್ಯಮಂತ್ರಿ ಆಗಿ ವರ್ಷವಾಯಿತು. ನಾನು ತಪ್ಪು ಮಾಡಿದ್ದರೆ ತನಿಖೆ ನಡೆಸುವ ಅಧಿಕಾರ ನಿಮಗೆ ಇತ್ತು. ಅದನ್ನು ಮಾಡಿಲ್ಲ. ಈಗ ವಾಲ್ಮೀಕಿ ನಿಗಮ ಹಗರಣದ ಆರೋಪ ಬಂದಾಗ ಅದನ್ನು ಬೇರೆಯವರ ತಲೆಗೆ ಕಟ್ಟಲು ಪ್ರಯತ್ನಿಸುತ್ತಿದ್ದೀರಿ. ಅದೇ ಕಾರಣಕ್ಕೆ ನನ್ನ ಹೆಸರೂ ಉಲ್ಲೇಖಿಸಿದ್ದೀರಿ' ಎಂದರು.

'ಹಿಂದೆ ಸಿದ್ದರಾಮಯ್ಯ ಅವರು ಸಿ.ಎಂ ಆಗಿದ್ದಾಗ ಕೆಲ ಅಧಿಕಾರಿಗಳನ್ನು ನೇಮಿಸಿದ್ದರು. ಅವರು ದುರ್ನಡತೆಯವರಾಗಿದ್ದು, ಹಗರಣ ಮಾಡಿದ್ದರು. ನಾನು ಸಚಿವನಾಗಿದ್ದಾಗ ಅವರನ್ನು ಅಮಾನತು ಮಾಡಿದ್ದೆ. ಸಿಐಡಿ ತನಿಖೆಗೂ ಆದೇಶಿಸಿದ್ದೆ' ಎಂದು ಹೇಳಿದರು.

### ಶೃಂಗೇರಿ ಶಾರದೆ ದರ್ಶನಕ್ಕೆ ವಸ್ತ್ರ ಸಂಹಿತೆ ಆ.15ರಿಂದ

ಶೃಂಗೇರಿ (ಚಿಕ್ಕಮಗಳೂರು): ಇಲ್ಲಿಯ ಶಾರದಾ ದೇವಿಯ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ವಸ್ತ್ರಸಂಹಿತೆಯನ್ನು ಶಾರದಾ ಪೀಠ ರೂಪಿಸಿದ್ದು, ಆಗಸ್ಟ್ 15ರಿಂದ ಜಾರಿಗೆ ಬರಲಿದೆ.

ಭಾರತೀಯ ಸಾಂಪ್ರದಾಯಿಕ ಉಡುಗೆಯಲ್ಲಿ ಭಕ್ತರು ದರ್ಶನಕ್ಕೆ ಬರಬೇಕು. ಪುರುಷರು ಧೋತಿ, ಶಲ್ಯ ಮತ್ತು ಉತ್ತರೀಯ, ಮಹಿಳೆಯರು ಸೀರೆ–ರವಿಕೆ, ಸಲ್ವಾರ್ ಜೊತೆಗೆ ದುಪ್ಪಟ್ಟ ಅಥವಾ ಲಂಗ ದಾವಣಿ ಧರಿಸಲು ಅವಕಾಶ ಇದೆ.

ಭಾರತೀಯ ಸಂಪ್ರದಾಯವಲ್ಲದ ಉಡುಗೆ ತೊಟ್ಟು ಬಂದವರಿಗೆ ಮಹಾ ಮಂಟಪ, ಗುರು ನಿವಾಸ, ಪಾದಪೂಜೆ, ಗುರುಗಳ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಹೊರಗಿನ ಪ್ರಾಕಾರದಿಂದಲೇ ದೇವರ ದರ್ಶನ ಪಡೆಯಬೇಕು ಎಂದು ಶೃಂಗೇರಿ ಶಾರದಾ ಪೀಠದ ಆಡಳಿತಾಧಿಕಾರಿ ಪ್ರಕಟಣೆ ಹೊರಡಿಸಿದ್ದಾರೆ.

## ಎಂಜಿನಿಯರಿಂಗ್ ಕೋರ್ಸ್ ಶುಲ್ಕ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಶುಲ್ಕವನ್ನು ಶೇ 10 ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಪರಿಷ್ಕೃತ ಶುಲ್ಕ 2024–25ನೇ ಶೈಕ್ಷಣಿಕ ಸಾಲಿನಿಂದಲೇ ಅನ್ವಯವಾಗಲಿದೆ.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ನೇತೃತ್ವದಲ್ಲಿ ವಿವಿಧ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳ ಜತೆ ಜೂನ್ 14ರಂದು ನಡೆದಿದ್ದ ಸಭೆಯಲ್ಲಿ ಶೇ 10ರಷ್ಟು ಹೆಚ್ಚಳ ಮಾಡಲು ಒಮ್ಮತದ ನಿರ್ಧಾರ ತೆಗೆದುಕೊಳ್ಳಲಾಗಿತ್ತು.

ವಾಸ್ತುಶಿಲ್ಪ ಶಾಸ್ತ್ರ ಕೋರ್ಸ್‌ಗೆ ಪ್ರವೇಶ ಪಡೆಯುವವರಿಗೆ ₹42,116 ಶುಲ್ಕ ನಿಗದಿ ಮಾಡಲಾಗಿದೆ. ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಪ್ರತಿ ವಿದ್ಯಾರ್ಥಿಯಿಂದ ಇತರೆ ಶುಲ್ಕವಾಗಿ ವಾರ್ಷಿಕ ಗರಿಷ್ಠ ₹20 ಸಾವಿರ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

| ಕಾಲೇಜುಗಳು | ಶುಲ್ಕ(₹ಗಳಲ್ಲಿ) |
|---|---|
| ಸರ್ಕಾರಿ/ಅನುದಾನಿತ ಕಾಲೇಜು | 42,116 |
| ಯುವಿಸಿಇ, ಬೆಂಗಳೂರು | 47,250 |
| ಖಾಸಗಿ ಕಾಲೇಜು ಸರ್ಕಾರಿ ಕೋಟಾ | 76,135-84,596 |
| ಕಾಮೆಡ್‌-ಕೆ | 1,86,111- 2,61,477 |

# 56 ಲಕ್ಷ ಮಕ್ಕಳಿಗೆ ವಾರಕ್ಕೆ 6 ದಿನ ಮೊಟ್ಟೆ

₹1500 ಕೋಟಿ ಕೊಟ್ಟ ಅಜೀಂ ಪ್ರೇಮ್‌ಜಿ ●ಪೌಷ್ಟಿಕ ಆಹಾರಕ್ಕೆ ನೆರವಿನ ಪುಣ್ಯಕಾರ್ಯ–ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳ 56 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ವಾರದ ಆರು ದಿನ ಬೇಯಿಸಿದ ಮೊಟ್ಟೆ ಸಿಗಲಿದೆ. ಸರ್ಕಾರ ಎರಡು ದಿನ ಪೂರೈಸಿದರೆ, ಉಳಿದ ನಾಲ್ಕು ದಿನ ಅಜೀಂ ಪ್ರೇಮ್‌ಜಿ ಫೌಂಡೇಷನ್ ನೀಡಲಿದೆ.

ಮೂರು ವರ್ಷಗಳ ಅವಧಿಗೆ ಮೊಟ್ಟೆ ಪೂರೈಸಲು ₹1,500 ಕೋಟಿ ನೆರವು ನೀಡುವ ಒಪ್ಪಂದಕ್ಕೆ ಶನಿವಾರ ಶಾಲಾ ಶಿಕ್ಷಣ ಇಲಾಖೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಷನ್ ನಡುವೆ ಒಪ್ಪಂದ ಮಾಡಿಕೊಳ್ಳಲಾಯಿತು.

ಒಪ್ಪಂದದ ನಂತರ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ವಾರದಲ್ಲಿ ಆರು ದಿನ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಚಾರಿತ್ರಿಕ ಪುಣ್ಯ ಕಾರ್ಯಕ್ಕೆ ಅಜೀಂ ಪ್ರೇಮ್‌ಜಿ ನೆರವಾಗುತ್ತಿರುವುದು ಇತರೆ ಎಲ್ಲ ಉದ್ಯಮಿಗಳಿಗೂ ಮಾದರಿ. ಬಡವರೇ ಅಧಿಕ ಸಂಖ್ಯೆಯಲ್ಲಿರುವ ಸರ್ಕಾರಿ ಶಾಲೆಗಳ ಮಕ್ಕಳು ಅಪೌಷ್ಟಿಕತೆಯಿಂದ ಬಳಲಬಾರದು ಎಂಬ ಕಾರಣಕ್ಕೆ ಮಧ್ಯಾಹ್ನದ ಬಿಸಿಯೂಟಕ್ಕೆ ಮೊಟ್ಟೆ ನೀಡುವ ಕಾರ್ಯಕ್ರಮ ಆರಂಭಿಸಲಾಗಿತ್ತು. ವಾರಕ್ಕೆ ಒಂದು ದಿನ ಇದ್ದ ಮೊಟ್ಟೆಯನ್ನು ಎರಡು ದಿನಕ್ಕೆ ವಿಸ್ತರಿಸಲಾಗಿತ್ತು. ಈಗ ಒಂದರಿಂದ ಹತ್ತನೇ ತರಗತಿಯವರೆಗೆ ಎಲ್ಲ ಸರ್ಕಾರಿ, ಅನುದಾನಿತ ಶಾಲೆಯ ಮಕ್ಕಳಿಗೆ ವಾರದ ಆರು ದಿನವೂ ಮೊಟ್ಟೆ ನೀಡಲಾಗುವುದು ಎಂದರು.

ಸರ್ಕಾರಿ ಶಾಲಾ ಮಕ್ಕಳಿಗೆ ಮೂರು ವರ್ಷಗಳ ಅವಧಿಗೆ ಮೊಟ್ಟೆ ಪೂರೈಸಲು ₹1,500 ಕೋಟಿ ನೆರವು ನೀಡುವ ಒಪ್ಪಂದ ಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಪ್ರೊ ಮುಖ್ಯಸ್ಥ ಅಜೀಂ ಪ್ರೇಮ್‌ಜಿ ಬೆಂಗಳೂರಿನಲ್ಲಿ ಶನಿವಾರ ವಿನಿಮಯ ಮಾಡಿಕೊಂಡರು. ಯಾಸ್ಮಿನ್ ಪ್ರೇಮ್‌ಜಿ, ಮಧು ಬಂಗಾರಪ್ಪ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

**ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾಳೆ. ಸರ್ಕಾರಿ ಶಾಲೆಯನ್ನು ಬಲಗೊಳಿಸುವ ಮೂಲಕ ಮಕ್ಕಳ ಸಂಖ್ಯೆಯನ್ನು 60 ಲಕ್ಷ ದಾಟಿಸುವ ಗುರಿ ಹೊಂದಲಾಗಿದೆ**
**ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಸಚಿವ

ಬಡವರ ಮಕ್ಕಳಿಗೂ ಉತ್ತಮ ಶಿಕ್ಷಣ, ಆರೋಗ್ಯ ದೊರಕಿಸಲು ರಾಜ್ಯ ಸರ್ಕಾರ ಅವಕಾಶಗಳನ್ನು ಸೃಷ್ಟಿಸುತ್ತಿದೆ. ಹಿಂದೆ ಅಧಿಕಾರದಲ್ಲಿ ಇದ್ದಾಗ ಕ್ಷೀರಭಾಗ್ಯ ಯೋಜನೆ ಮೂಲಕ ಬೆಳಿಗ್ಗೆ ಮಕ್ಕಳಿಗೆ ಹಾಲು ನೀಡಲು ಆರಂಭಿಸಿದ್ದೆವು. ಈಗ ಹಾಲಿನ ಜೊತೆ ರಾಗಿ ಮಾಲ್ಟ್ ಸಹ ನೀಡಲಾಗುತ್ತಿದೆ ಎಂದು ಹೇಳಿದರು.

ಮಕ್ಕಳು ಜಾತಿಗಳ ಸಂಕೋಲೆಗೆ ಸಿಲುಕದೆ ವೈಚಾರಿಕ ಜ್ಞಾನ ಬೆಳೆಸಿಕೊಳ್ಳುವುದೇ ನಿಜವಾದ ಶಿಕ್ಷಣ. ಮಕ್ಕಳು ಜಾತ್ಯತೀತವಾಗಿ ಬೆಳೆಯಲು ಅಗತ್ಯವಾದ ವಾತಾವರಣವನ್ನು ರಾಜ್ಯ ಸರ್ಕಾರ ಕಲ್ಪಿಸುತ್ತಿದೆ. ಇಂತಹ ಜ್ಞಾನ ವಿಕಸನಗೊಳ್ಳಲು ಆರೋಗ್ಯವೂ ಮುಖ್ಯ. ಅದಕ್ಕಾಗಿ ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಸಲಾಗುತ್ತಿದೆ ಎಂದರು.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ವಿಪ್ರೊ ಮುಖ್ಯಸ್ಥ ಅಜೀಂ ಪ್ರೇಮ್‌ಜಿ, ಅವರ ಪತ್ನಿ ಯಾಸ್ಮಿನ್ ಪ್ರೇಮ್‌ಜಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್, ಆಯುಕ್ತೆ ಬಿ.ಬಿ. ಕಾವೇರಿ, ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಮೆಹರೂಜ್, ಅಜೀಂ ಪ್ರೇಮ್‌ಜಿ ಫೌಂಡೇಷನ್ ಸಂಚಾಲಕ ಅನುರಾಗ್ ಬೆಹರ್, ಶಾಸಕ ರಿಜ್ವಾನ್ ಅರ್ಷದ್ ಉಪಸ್ಥಿತರಿದ್ದರು.

## ಡೆಂಗಿ: 486 ಪ್ರಕರಣ ದೃಢ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 296 ಸೇರಿ ರಾಜ್ಯದಲ್ಲಿ 486 ಡೆಂಗಿ ಪ್ರಕರಣಗಳು ಶನಿವಾರ ದೃಢಪಟ್ಟಿವೆ.

24 ಗಂಟೆಗಳ ಅವಧಿಯಲ್ಲಿ 3,579 ಪರೀಕ್ಷೆಗಳನ್ನು ನಡೆಸಲಾಗಿದೆ. ಹೊಸದಾಗಿ ಜ್ವರಪೀಡಿತರಾದವರಲ್ಲಿ ಒಂದು ವರ್ಷದೊಳಗಿನ 14 ಮಕ್ಕಳೂ ಸೇರಿದ್ದಾರೆ. ಸದ್ಯ 3,404 ಡೆಂಗಿ ಸಕ್ರಿಯ ಪ್ರಕರಣಗಳಿದ್ದು, 2,923 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. 15 ಮಂದಿ ಐಸಿಯು ಸೇರಿ 481 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ.

20 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ದೃಢಪಟ್ಟಿವೆ. ಹಾಸನದಲ್ಲಿ 45, ಧಾರವಾಡದಲ್ಲಿ 23, ದಾವಣಗೆರೆಯಲ್ಲಿ 20, ಬೀದರ್‌ನಲ್ಲಿ 16, ಮಂಡ್ಯ ಹಾಗೂ ಹಾವೇರಿಯಲ್ಲಿ ತಲಾ 13, ಕಲಬುರಗಿ ಹಾಗೂ ಬೆಂಗಳೂರು ನಗರ ಜಿಲ್ಲೆಯಲ್ಲಿ ತಲಾ 11 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ

## ವಾಂತಿ–ಭೇದಿ ಉಲ್ಬಣ: ಮತ್ತೆ 37 ಮಂದಿ ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಕೆಂಭಾವಿ (ಯಾದಗಿರಿ ಜಿಲ್ಲೆ): ಸಮೀಪದ ಮುದನೂರ (ಬಿ) ಗ್ರಾಮದಲ್ಲಿ ವಾಂತಿಭೇದಿ ಪ್ರಕರಣ ಶುಕ್ರವಾರ ಮತ್ತಷ್ಟು ಉಲ್ಬಣಗೊಂಡಿದೆ. ಶನಿವಾರ ಸಂಜೆವರೆಗೆ ಆಸ್ಪತ್ರೆಗೆ ದಾಖಲಾದವರ ಸಂಖ್ಯೆ 57ಕ್ಕೆ ತಲುಪಿದೆ.

ಆರು ಮಕ್ಕಳು ಸೇರಿ 37 ಮಂದಿಯಲ್ಲಿ ಶನಿವಾರ ವಾಂತಿ–ಭೇದಿ ಕಾಣಿಸಿಕೊಂಡಿದೆ. ಈವರೆಗೆ 57 ಮಂದಿ ಅಸ್ವಸ್ಥಗೊಂಡಿದ್ದಾರೆ. 6 ಮಕ್ಕಳನ್ನು ಶಹಾಪುರ ತಾಲ್ಲೂಕು ಆಸ್ಪತ್ರೆಗೆ ಸೇರಿಸಿದ್ದು, ಉಳಿದವರಿಗೆ ಕೆಂಭಾವಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ.

## ‘ತಾಕತ್ತಿದ್ದರೆ ಉಚ್ಚಾಟಿಸಲಿ’

ಪ್ರಜಾವಾಣಿ ವಾರ್ತೆ

ಶಿರಸಿ: 'ನಾನು ಮತ್ತು ಎಸ್.ಟಿ. ಸೋಮಶೇಖರ್ ಬಿಜೆಪಿ ಅಥವಾ ಕಾಂಗ್ರೆಸ್ ಅಲ್ಲ. ನಮ್ಮದು ಕರ್ನಾಟಕ ಶಾಸಕಾಂಗ ಪಕ್ಷ. ನಮ್ಮ ರಾಜೀನಾಮೆ ಫಲವಾಗಿ ಅಧಿಕಾರ ಅನುಭವಿಸಿದ ಬಿಜೆಪಿಯವರಿಗೆ ಈಗ ರಾಜೀನಾಮೆ ಕೇಳುವ ನೈತಿಕ ಹಕ್ಕಿಲ್ಲ. ತಾಕತ್ತಿದ್ದರೆ ಉಚ್ಚಾಟಿಸಲಿ' ಎಂದು ಯಲ್ಲಾಪುರ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ್ ಸವಾಲು ಹಾಕಿದರು.

'ಶಾಸನ ಸಭೆಯಲ್ಲಿ ಬಿಜೆಪಿಯವರಿಗೆ ನನ್ನ ಜತೆ ಗುರುತಿಸಿಕೊಳ್ಳಲು ಮುಜುಗರವಾದರೆ, ಅದು ಅವರಿಗೆ ಬಿಟ್ಟಿದ್ದು. ಅವರು ನನ್ನನ್ನು ಯಾವುದೇ ಪ್ರತಿಭಟನೆಗೂ ಕರೆದಿಲ್ಲ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಹಿಂದೆ ನಾನು ರಾಜೀನಾಮೆ ನೀಡಿಯೇ ಚುನಾವಣೆ ಎದುರಿಸಿದವನು. ರಾಜೀನಾಮೆ ಬಗ್ಗೆ ಉಪದೇಶ ಬೇಕಿಲ್ಲ. ಹಿಂದೆ ರಾಜೀನಾಮೆ ಕೊಟ್ಟು ಬಂದಾಗ, ಕಾಂಗ್ರೆಸ್‌ಗೆ ಅನ್ಯಾಯ ಮಾಡಿದೆ ಎಂದು ಬಿಜೆಪಿಯವರಿಗೆ ಅನಿಸಿಲಿಲ್ಲವೇ? ಅಧಿಕಾರ ಬರುವಾಗ ಅನಿಸಲ್ಲ. ಬಿಜೆಪಿಗೆ ಈಗೇಕೆ ನಾನು ಅನ್ಯಾಯ ಮಾಡುತ್ತಿರುವೆ ಎಂದು ಅನ್ನಿಸುತ್ತಿದೆ' ಎಂದೂ ಪ್ರಶ್ನಿಸಿದರು.

ಮಗುವಿನ ಭವಿಷ್ಯಕ್ಕೆ ಭಾಷ್ಯ ಬರೆದ ಹೈಕೋರ್ಟ್

# ಪೋಕ್ಸೊ ಸುಖಾಂತ್ಯಕ್ಕೆ ಪಾಣಿಗ್ರಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಗು ಮತ್ತು ತಾಯಿಯ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸಮಾಜದ ಅಪಕೀರ್ತಿ ತಪ್ಪಿಸಲು ಪ್ರೇಮಿಗಳನ್ನು ಒಂದಾಗಿ ಬಾಳಲು ಇತ್ತೀಚೆಗಷ್ಟೇ ಅನುಮತಿ ನೀಡಿದ್ದ ಹೈಕೋರ್ಟ್, ಯುವಕನೊಬ್ಬನ ವಿರುದ್ಧದ ಅತ್ಯಾಚಾರ ಮತ್ತು ಪೋಕ್ಸೊ ಪ್ರಕರಣವನ್ನು ರದ್ದುಪಡಿಸಿದೆ.

'ನನ್ನ ವಿರುದ್ಧದ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ) ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ 23 ವರ್ಷದ ಯುವಕನೊಬ್ಬ ಸಲ್ಲಿಸಿದ್ದ ಅರ್ಜಿ ವಿಲೇವಾರಿ ಮಾಡಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಜೈಲಿನಲ್ಲಿರುವ ಯುವಕನ ಬಿಡುಗಡೆಗೆ ರಿಜಿಸ್ಟ್ರಿ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಆದೇಶಿಸಿದೆ.

'ಅರ್ಜಿ ಇತ್ಯರ್ಥವಾಗಿದೆ ಎಂದು ಒಂದು ವೇಳೆ ಮಗು ಮತ್ತು ತಾಯಿಯನ್ನು ಮತ್ತೇನಾದರೂ ಬಿಕ್ಕಟ್ಟಿಗೆ ದೂಡಿದರೆ ಪ್ರಕರಣ ಮರು ಚಾಲನೆ ಪಡೆಯಲಿದೆ' ಎಂದು ನ್ಯಾಯಪೀಠ ಯುವಕನಿಗೆ ಎಚ್ಚರಿಕೆ ನೀಡಿದೆ.

'ಮದುವೆಗೂ ಮುನ್ನವೇ ಅರ್ಜಿದಾರ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿರುವ ಪರಿಣಾಮ ಮಗು ಜನಿಸಿದೆ. ಮಗುವಿಗೆ ಏನೆಲ್ಲಾ ಘಟನೆ ನಡೆದಿದೆ ಎಂಬುದು ತಿಳಿದಿಲ್ಲ. ಪ್ರಕರಣ ಇತ್ಯರ್ಥಪಡಿಸಿ, ಅರ್ಜಿದಾರನನ್ನು ಬಿಡುಗಡೆ ಮಾಡದೇ ಇದ್ದರೆ ಮಗು ಮತ್ತು ತಾಯಿಯ ಬದುಕು ಬಿಕ್ಕಟ್ಟಿಗೆ ಸಿಲುಕುತ್ತದೆ. ಅರ್ಜಿದಾರ ಮತ್ತು ಸಂತ್ರಸ್ತೆ ವಿವಾಹವಾಗಲು ಈಗಾಗಲೇ ನ್ಯಾಯಾಲಯ ಮಧ್ಯಂತರ ಜಾಮೀನು ನೀಡಿತ್ತು. ಮದುವೆಯ ಬಳಿಕ ಅರ್ಜಿದಾರ ಜೈಲಿಗೆ ಮರಳಿದ್ದ. ಈ ಪರಿಸ್ಥಿತಿಯಲ್ಲಿ ಇಬ್ಬರ ಮಧ್ಯದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸದೇ ಇದ್ದರೆ ಮಗು ಮತ್ತು ತಾಯಿಯ ಬದುಕು ಅತಂತ್ರವಾಗಲಿದೆ. ಸಮಾಜದಲ್ಲಿ ಅವರು ಅಪಖ್ಯಾತಿಗೆ ಗುರಿಯಾಗಬೇಕಾಗುತ್ತದೆ. ಇದನ್ನು ತಪ್ಪಿಸಲು ಪ್ರಕರಣವನ್ನು ರದ್ದುಪಡಿಸುವುದು ಸೂಕ್ತ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಪ್ರಕರಣವನ್ನು ವಾಸ್ತವ ಅಂಶಗಳ ಹಿನ್ನೆಲೆಯಲ್ಲಿ ಗಮನಿಸಿದರೆ ಮುಂದೊಂದು ದಿನ ವಿಚಾರಣೆಯಲ್ಲಿ ಸಂತ್ರಸ್ತೆಯು ನಿಸ್ಸಂಶಯವಾಗಿ ವಿರುದ್ಧವಾದ ಸಾಕ್ಷಿಯನ್ನೇ ನುಡಿಯುತ್ತಾಳೆ. ಆಗ ಅರ್ಜಿದಾರನಿಗೆ ಶಿಕ್ಷೆಯಾಗುವುದು ಅಸಾಧ್ಯವಾಗಲಿದೆ. ಹೀಗಾಗಿ, ಕ್ರಿಮಿನಲ್ ಪ್ರಕ್ರಿಯೆ ಕೊನೆಯವರೆಗೂ ವೇದನೆ ತಂದೊಡ್ಡಲಿದೆ. ಇಂತಹ ಸಂಕಟವು, ಖುಲಾಸೆಯ ಸಂತೋಷಕ್ಕೆ ಮಸುಕು ಕವಿಯುವಂತೆ ಮಾಡುತ್ತದೆ' ಎಂದು ನ್ಯಾಯಪೀಠ ಕಾಳಜಿ ವ್ಯಕ್ತಪಡಿಸಿದೆ.

'ತಾಯಿ-ತಂದೆ ಮತ್ತು ಮಗುವಿನ ವಂಶವಾಹಿ (ಡಿಎನ್‌ಎ) ಪರೀಕ್ಷೆ ನಡೆಸಲಾಗಿದ್ದು, ಅರ್ಜಿದಾರ ಮತ್ತು ಸಂತ್ರಸ್ತೆಯೇ ಮಗುವಿನ ಪೋಷಕರು ಎಂಬುದು ರುಜುವಾತವಾಗಿದೆ' ಎಂದು ಆದೇಶದಲ್ಲಿ ದಾಖಲಿಸಲಾಗಿದೆ.

**ಅರ್ಜಿದಾರಲ್ಲಿ ಏನಿತ್ತು?:** 'ಸಂತ್ರಸ್ತೆ ಮತ್ತು ಯುವಕ ಪರಸ್ಪರ ಪ್ರೇಮಿಸುತ್ತಿದ್ದರು. ಘಟನೆ ನಡೆದ ಸಂದರ್ಭದಲ್ಲಿ ಯುವಕನಿಗೆ 21 ವರ್ಷ ಹಾಗೂ ಸಂತ್ರಸ್ತೆಗೆ 16 ವರ್ಷ 9 ತಿಂಗಳಾಗಿತ್ತು. ಸಂತ್ರಸ್ತೆಯ ತಾಯಿ ಮಗಳನ್ನು ಮದುವೆ ಮಾಡಿ ಕೊಡಲು ಒಪ್ಪದೇ ದೂರು ದಾಖಲಿಸಿದ್ದರು. ಈ ಸಂದರ್ಭದಲ್ಲಿ ಸಂತ್ರಸ್ತೆ ಗರ್ಭಿಣಿಯಾಗಿದ್ದರು. ಆದರೆ, ಈಗ ಎರಡೂ ಕುಟುಂಬಗಳು ಮದುವೆಗೆ ನಿಶ್ಚಯಿಸಿದ್ದು, ಅರ್ಜಿದಾರನೂ ಸಂತ್ರಸ್ತೆಯನ್ನು ಪ್ರೀತಿಸುತ್ತಿದ್ದ ಕಾರಣ ಮದುವೆಯಾಗಿದ್ದಾನೆ. ಹೀಗಾಗಿ, ಕಾನೂನು ಪ್ರಕ್ರಿಯೆ ವಜಾ ಮಾಡಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿತ್ತು. ಸಂತ್ರಸ್ತೆಯನ್ನು ವರಿಸಲು ಅರ್ಜಿದಾರನಿಗೆ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿತ್ತು. 2024ರ ಜೂನ್ 21ರಂದು ಮದುವೆ ನೆರವೇರಿತ್ತು. ಅರ್ಜಿದಾರನ ಪರ ವಕೀಲ ಎಸ್.ವಿ.ರೋಹಿತ್ ಮತ್ತು ಎಂ.ಶರಶ್ಚಂದ್ರ ವಾದ ಮಂಡಿಸಿದ್ದರು.

**ಪ್ರಕರಣವೇನು?:** 'ಆರೋಪಿ ಯುವಕ ನನ್ನ ಮಗಳನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ' ಎಂದು ಸಂತ್ರಸ್ತೆಯ ತಾಯಿ 2023ರ ಫೆ. 15ರಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ದೂರು ಆಧರಿಸಿ ಪೊಲೀಸರು ಯುವಕನ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ-2012ರ ಕಲಂ 5 (ಎಲ್), 5 (ಜೆ)(II), 6 ಹಾಗೂ ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 376(2)(ಎನ್), 506ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. 2023ರ ಫೆಬ್ರುವರಿ 16ರಂದೇ ಯುವಕನನ್ನು ಬಂಧಿಸಲಾಗಿತ್ತು.

**ರಥೋತ್ಸವ...** ಚಾಮರಾಜನಗರದ ಐತಿಹಾಸಿಕ ಚಾಮರಾಜೇಶ್ವರಸ್ವಾಮಿ ರಥೋತ್ಸವ ಅಪಾರ ಸಂಖ್ಯೆಯ ಭಕ್ತರ ನಡುವೆ ಶನಿವಾರ ವಿಜೃಂಭಣೆಯಿಂದ ನಡೆಯಿತು. ನೂರಾರು ನವದಂಪತಿಗಳು ಭಾಗವಹಿಸಿ ಹರಕೆ ತೀರಿಸಿದರು ಚಿತ್ರ: ಚರಣ್ ಚಾಮರಾಜನಗರ

## ರೇಣುಕಸ್ವಾಮಿ ಕೊಲೆ: ಐಫೋನ್‌ನಲ್ಲಿದ್ದ ವಿಡಿಯೊ ಡಿಲಿಟ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆಯನ್ನು ಪಶ್ಚಿಮ ವಿಭಾಗದ ಪೊಲೀಸರು ಮುಂದುವರೆಸಿದ್ದು, ಆರೋಪಿಗಳು ಅಳಿಸಿ ಹಾಕಿರುವ ದತ್ತಾಂಶವನ್ನು ಮರು ಸಂಗ್ರಹ (ರಿಟ್ರಿವ್) ಕಾರ್ಯದಲ್ಲಿ ತೊಡಗಿದ್ದಾರೆ.

ಆರೋಪಿಗಳು ತಮ್ಮ ಮೊಬೈಲ್, ಕೃತ್ಯ ನಡೆದ ಸ್ಥಳ ಹಾಗೂ ರೆಸ್ಟೋರೆಂಟ್‌ನಲ್ಲಿದ್ದ ಸಿಸಿ ಟಿ.ವಿ ಕ್ಯಾಮೆರಾ ಡಿವಿಆರ್‌ನಲ್ಲಿದ್ದ ದೃಶ್ಯಾವಳಿಯನ್ನು ಆರೋಪಿಗಳು ಅಳಿಸಿ ಹಾಕಿದ್ದರು ಎಂದು ಮೂಲಗಳು ತಿಳಿಸಿವೆ.

'ಕೆಲವು ಆರೋಪಿಗಳಿಂದ ಐಫೋನ್‌ಗಳನ್ನು ಜಪ್ತಿ ಮಾಡಲಾಗಿದೆ. ಒಂದು ಐಫೋನ್‌ನಲ್ಲಿ ನಾಲ್ಕರಿಂದ ಐದು ಸೆಕೆಂಡ್ ವಿಡಿಯೊ ಇತ್ತು. ಅದು ಈ ಪ್ರಕರಣದಲ್ಲಿ ಮಹತ್ವದ ಸಾಕ್ಷ್ಯ ಆಗುತ್ತಿತ್ತು. ಅದೇ ವಿಡಿಯೊವನ್ನೇ ಆರೋಪಿಗಳು ಅಳಿಸಿ ಹಾಕಿದ್ದಾರೆ. ಅದನ್ನು ಮರು ಸಂಗ್ರಹಿಸುವ ಕಾರ್ಯ ನಡೆಯುತ್ತಿದೆ. ಆರೋಪಿಗಳು ಹಾಗೂ ಸಾಕ್ಷಿದಾರರಿಂದ ಜಪ್ತಿ ಮಾಡಲಾದ ಎಲ್ಲ ಮೊಬೈಲ್‌ಗಳನ್ನೂ ಹೈದರಾಬಾದ್‌ನ ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಪ್ರದೋಷ್ ಕೃತ್ಯದ ಸಂದರ್ಭದಲ್ಲಿ ಬಳಸಿದ್ದ ಮೊಬೈಲ್ ನಂಬರ್ ಅವರು ಕೆಲಸ ಮಾಡುತ್ತಿದ್ದ ಕಂಪನಿ ನೀಡಿತ್ತು. ಕಂಪನಿಯ ಅಧಿಕೃತ ಸಿಬ್ಬಂದಿಯನ್ನು ಕರೆಸಿ ವಿಚಾರಣೆ ನಡೆಸಿ ಹೇಳಿಕೆ ದಾಖಲು ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

### ಕೊಲೆ ಆರೋಪಿಯ ತಾಯಿ ಸಾವು

ಚಿತ್ರದುರ್ಗ: ರೇಣುಕಸ್ವಾಮಿ ಕೊಲೆ ಪ್ರಕರಣದ 4ನೇ ಆರೋಪಿ, ದರ್ಶನ್ ತೂಗುದೀಪ ಸೇನಾ ಅಧ್ಯಕ್ಷ ರಾಘವೇಂದ್ರನ ತಾಯಿ ಮಂಜುಳಮ್ಮ (70) ಅನಾರೋಗ್ಯದಿಂದ ಶನಿವಾರ ನಿಧನರಾದರು. ಮಗ ಜೈಲು ಸೇರಿದ ನಂತರ ಹಾಸಿಗೆ ಹಿಡಿದಿದ್ದರು. ಇಲ್ಲಿನ ಕೋಳಿಬುರುಜಿನಹಟ್ಟಿಯ ತಮ್ಮ ಮನೆಯಲ್ಲಿ ಕೊನೆಯುಸಿರೆಳೆದರು. ಅವರಿಗೆ ರಾಘವೇಂದ್ರ ಸೇರಿ ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಅಂತ್ಯಕ್ರಿಯೆಗೆ ರಾಘವೇಂದ್ರನನ್ನು ಕರೆತರಬೇಕು ಎಂದು ಕುಟುಂಬ ಸದಸ್ಯರು ಶನಿವಾರ ಮಧ್ಯಾಹ್ನದವರೆಗೂ ಅಧಿಕಾರಿಗಳನ್ನು ಒತ್ತಾಯಿಸಿದ್ದರು. ಅಧಿಕಾರಿಗಳಿಂದ ಸ್ಪಂದನೆ ದೊರೆಯದಿದ್ದಾಗ, ಕಾಯುವುದು ಬೇಡ ಎಂದು ನಿರ್ಧರಿಸಿ ಸಂಜೆಯ ವೇಳೆಗೆ ಅಂತ್ಯಕ್ರಿಯೆ ನೆರವೇರಿಸಿದರು.

## ‘ಅಲೆಮಾರಿಗಳ ಅಭಿವೃದ್ಧಿಗೆ ಆಯೋಗ ರಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರನ್ನು ಒಳಗೊಳ್ಳುವ ಆಯೋಗ ರಚಿಸುವಂತೆ ಕರ್ನಾಟಕ ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾದ ಗೌರವಾಧ್ಯಕ್ಷ ಸಿ.ಎಸ್.ದ್ವಾರಕನಾಥ್ ಅವರು ಸರ್ಕಾರವನ್ನು ಒತ್ತಾಯಿಸಿದರು.

ಶಾಸಕರ ಭವನದಲ್ಲಿ ಶನಿವಾರ ನಡೆದ ರಾಜ್ಯಮಟ್ಟದ ಅಲೆಮಾರಿ ಸಮುದಾಯಗಳ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಅಲೆಮಾರಿ ಸಮುದಾಯದ ಜನಸಂಖ್ಯೆ 50 ಲಕ್ಷದಷ್ಟಿದೆ. ಅಲೆಮಾರಿ, ಆದಿವಾಸಿ ಸಮುದಾಯ ಶೈಕ್ಷಣಿಕ, ರಾಜಕೀಯ, ಸಾಮಾಜಿಕವಾಗಿ ಹಿಂದುಳಿದಿದೆ. ಭೂಮಿ, ನಿವೇಶನ, ವಸತಿ ಸೇರಿದಂತೆ ಇತರೆ ಮೂಲ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಎಲ್ಲರನ್ನೂ ಒಳಗೊಂಡ ಆಯೋಗ ರಚಿಸಿದರೆ ಅಲೆಮಾರಿ ಸಮುದಾಯಕ್ಕೆ ಅನುಕೂಲವಾಗಲಿದೆ ಎಂದು ಹೇಳಿದರು.

ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ₹1 ಸಾವಿರ ಕೋಟಿ ಅನುದಾನ ಮೀಸಲಿಡಬೇಕು ದ್ವಾರಕನಾಥ್ ಹೇಳಿದರು. ಇದೇ ವೇಳೆ, ಸಮುದಾಯದ ಬೇಡಿಕೆ ಈಡೇರಿಕೆಗಾಗಿ ಸರ್ಕಾರದ ಮೇಲೆ ಒತ್ತಡ ಹೇರುವಂತೆ ಸಮುದಾಯದ ಮುಖಂಡರು ಆಗ್ರಹಿಸಿದರು.

ರಾಯಚೂರು ಜಿಲ್ಲೆಯ ಮುಖಂಡ ಶ್ರೀನಿವಾಸ್ ಹಾಗೂ ಬೆಳಗಾವಿಯ ಮಾರುತಿ ಮಾತನಾಡಿ,'ಸಮುದಾಯದವರು ಭಿಕ್ಷಾಟನೆ ಮಾಡಿ ಜೀವನ ನಡೆಸುತ್ತಿದ್ದಾರೆ. ಸಾಲ ಸೌಲಭ್ಯ, ಭೂಮಿ, ಜಾತಿ ಪ್ರಮಾಣ ಪತ್ರ ಸಿಗುತ್ತಿಲ್ಲ. ರಾಜ್ಯಮಟ್ಟದಲ್ಲಿ ಬೃಹತ್ ಸಮಾವೇಶ ಮಾಡುವ ಮೂಲಕ ಸರ್ಕಾರದ ಗಮನ ಸೆಳೆಯಬೇಕು' ಎಂದು ಸಲಹೆ ನೀಡಿದರು.

ಧಾರಾವಾಡ ಜಿಲ್ಲಾ ಘಟಕದ ಅಧ್ಯಕ್ಷ ಹನುಮಂತ, 'ಜಿಲ್ಲೆಗೊಂದು ಅಲೆಮಾರಿ ಸಮುದಾಯ ಭವನ ನಿರ್ಮಿಸಬೇಕು. ಕುಲಶಾಸ್ತ್ರೀಯ ಅಧ್ಯಯನ ನಡೆಸಬೇಕು' ಎಂದರು. ಮಹಾಸಭಾದ ಅಧ್ಯಕ್ಷ ಬಿ.ಎಲ್.ಹನುಮಂತಪ್ಪ, ಪ್ರಧಾನ ಕಾರ್ಯದರ್ಶಿ ನಾಗರಾಜು, ಕಾರ್ಯಾಧ್ಯಕ್ಷೆ ಫರ್ಜಾನಾ, ಜಿಲ್ಲಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಪಾಲ್ಗೊಂಡಿದ್ದರು.

ಬೆಂಗಳೂರಿನಲ್ಲಿ ಶನಿವಾರ ನಡೆದ ರಾಜ್ಯಮಟ್ಟದ ಅಲೆಮಾರಿ ಸಮುದಾಯಗಳ ಮುಖಂಡರ ಸಭೆಯಲ್ಲಿ ಸಿ.ಎಸ್‌.ದ್ವಾರಕನಾಥ್ ಮಾತನಾಡಿದರು

‘ಗಣಕ ಘಟಕ’ದ ಅಧಿಕಾರಿಗೆ ಬಡ್ತಿ; ಸಚಿವಾಲಯ ನೌಕರರ ಸಂಘದ ತೀವ್ರ ವಿರೋಧ

# ಮುನಿಯಪ್ಪ ಅಳಿಯನಿಗಾಗಿ ‘ಕಾರ್ಯದರ್ಶಿ –2’ ಹುದ್ದೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಗೆ ಹೊಸತಾಗಿ ಸೃಜಿಸಿರುವ 'ಕಾರ್ಯದರ್ಶಿ- 2' ಹುದ್ದೆಗೆ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರ ಅಳಿಯ, ಕೆಜಿಎಫ್ ಶಾಸಕಿ ರೂಪಾ ಅವರ ಪತಿ, ಗಣಕ ಘಟಕ ನಿರ್ದೇಶಕ ಶಶಿಧರ್‌ಗೆ ಬಡ್ತಿ ನೀಡಲು ವಿಧಾನಸಭೆ ಸಚಿವಾಲಯ ಮುಂದಾಗಿದೆ.

ಆದರೆ, ಸಚಿವಾಲಯದಲ್ಲಿ ಸಾಮಾನ್ಯ ಘಟಕದಿಂದ ಬಡ್ತಿ ನೀಡಬೇಕಾದ, ಹೊಸತಾಗಿ ಸೃಜಿಸಿದ ಹುದ್ದೆಗೆ ಗಣಕ ವಿಭಾಗದ ಅಧಿಕಾರಿಗೆ ಬಡ್ತಿ ನೀಡಲು ಮುಂದಾಗಿರುವುದಕ್ಕೆ ವಿಧಾನಸಭೆ ಸಚಿವಾಲಯ ನೌಕರರ ಸಂಘ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

**ಏನಿದು ಗೊಂದಲ:** ಕಾರ್ಯದರ್ಶಿ- 2 ಹುದ್ದೆ ಸೃಜಿಸುವ ಸಂಬಂಧ ವಿಧಾನಸಭೆ ಸಚಿವಾಲಯವು ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಂಡಿದ್ದು, ವಿಶೇಷ ಮಂಡಳಿಯ ಒಪ್ಪಿಗೆ ಸಿಗಬೇಕಿದೆ. ಹುದ್ದೆ ಸೃಜಿಸಲು ಸಚಿವಾಲಯದ ವೃಂದ ಮತ್ತು ನೇಮಕಾತಿ ನಿಯಮದ ತಿದ್ದುಪಡಿಯೂ ಆಗಬೇಕಿದೆ. ಈ ಮಧ್ಯೆ, ಶಶಿಧರ್ ಅವರಿಗೆ ಬಡ್ತಿ ನೀಡುವ ಉದ್ದೇಶದಿಂದಲೇ ಈ ಹುದ್ದೆಯನ್ನು ಸೃಜಿಸಲಾಗುತ್ತಿದೆ ಎಂಬ ಆರೋಪ ಎದುರಾಗಿದೆ.

ವಿಧಾನಸಭಾ ಸಚಿವಾಲಯದಲ್ಲಿ ಗಣಕ, ಸಾಮಾನ್ಯ (ಮುಖ್ಯ ವಾಹಿನಿ), ಗ್ರಂಥಾಲಯ, ವರದಿಗಾರರು, ಕಣ್ಗಾವಲು, ಹೆಲ್ತ್ ಕ್ಲಬ್, ವಾಹನ ಮೇಲ್ವಿಚಾರಕರು ಹೀಗೆ ಹಲವು ಘಟಕಗಳಿವೆ. ಈ ಘಟಕಗಳಿಗೆ ನೇಮಕಗೊಳ್ಳುವವರು ಆಯಾ ಘಟಕದಲ್ಲಿಯೇ ಬಡ್ತಿ ಪಡೆದು ನಿವೃತ್ತರಾಗಬೇಕು. ಒಂದು ಘಟಕಕ್ಕೆ ನೇಮಕಗೊಂಡು ಇನ್ನೊಂದು ಘಟಕದಲ್ಲಿ ಕೆಲಸ ಮಾಡಲು ಅಥವಾ ಬಡ್ತಿ ಪಡೆಯಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅವಕಾಶ ಇಲ್ಲ ಎಂದು ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಹೀಗಾಗಿ, ಸಾಮಾನ್ಯ ಘಟಕದಲ್ಲಿ ಹೊಸತಾಗಿ ಸೃಜಿಸುವ ಕಾರ್ಯದರ್ಶಿ–2 ಹುದ್ದೆಗೆ ಅದೇ ಘಟಕದಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗೆ ಬಡ್ತಿ ನೀಡಬೇಕು. ಗಣಕ ಘಟಕದ ಅಧಿಕಾರಿಗೆ ಬಡ್ತಿ ನೀಡಿ, ಆ ಹುದ್ದೆಗೆ ಪರಿಗಣಿಸಲು ಅವಕಾಶ ಇಲ್ಲ. ಗಣಕ ಘಟಕದ ನಿರ್ದೇಶಕರಾಗಿರುವ ಶಶಿಧರ್ ಅವರಿಗಿಂತ ಜ್ಯೇಷ್ಠತೆಯಲ್ಲಿ ಕಿರಿಯರು ಸಾಮಾನ್ಯ ಘಟಕದಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಈ ಕಾರಣಕ್ಕೆ ಸಾಮಾನ್ಯ ಘಟಕದಲ್ಲಿ ಇನ್ನೊಂದು ಕಾರ್ಯದರ್ಶಿ ಹುದ್ದೆ ಸೃಜಿಸಿ, ಅವರಿಗೆ ಬಡ್ತಿ ನೀಡಲು ಉದ್ದೇಶಿಸಲಾಗಿದೆ' ಎಂದೂ ಅವರು ಹೇಳಿದರು.

### ‘ಸಾಮಾನ್ಯ ಘಟಕದಿಂದ ಬಡ್ತಿ ನೀಡಬೇಕು’

'ಕಾರ್ಯದರ್ಶಿ – 2 ಹುದ್ದೆಗೆ ಸಾಮಾನ್ಯ ಘಟಕದಿಂದ ಮುಂಬಡ್ತಿ ನೀಡಬೇಕು' ಎಂದು ಆಗ್ರಹಿಸಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮತ್ತು ಕಾರ್ಯದರ್ಶಿ ಕೆ. ವಿಶಾಲಾಕ್ಷಿ ಅವರಿಗೆ ವಿಧಾನಸಭೆ ಸಚಿವಾಲಯ ನೌಕರರ ಸಂಘ ಮನವಿ ಸಲ್ಲಿಸಿದೆ.

ವಿಧಾನಸೌಧದ ಆವರಣದಲ್ಲಿ ಸಂಘದ ಸದಸ್ಯರು ಶನಿವಾರ ಸಭೆ ನಡೆಸಿದರು.

'ಸಾಮಾನ್ಯ ಘಟಕದಿಂದ ಬಡ್ತಿ ನೀಡಬೇಕಾದ ಹುದ್ದೆಗೆ ಗಣಕ ಘಟಕದ ಅಧಿಕಾರಿಯನ್ನು ಪರಿಗಣಿಸಲು ಕೆಲವು ಅಧಿಕಾರಿಗಳು ಹುನ್ನಾರ ನಡೆಸುತ್ತಿದ್ದಾರೆ. ಈ ವಿಚಾರದಲ್ಲಿ ಸಭಾಧ್ಯಕ್ಷರನ್ನೂ ದಾರಿ ತಪ್ಪಿಸುತ್ತಿದ್ದಾರೆ' ಎಂದು ಆರೋಪಿಸಿದ ಸಂಘದ ಅಧ್ಯಕ್ಷ ಎನ್.ಜೆ.ಮೋಹನ್ ಕುಮಾರ್, 'ಈ ರೀತಿ ಮಾಡಿದರೆ ಮುಂದಿನ ದಿನಗಳಲ್ಲಿ ಸಾಮಾನ್ಯ ಘಟಕದ ಸುಮಾರು 700 ನೌಕರರಿಗೆ ಅನ್ಯಾಯ ಆಗಲಿದೆ' ಎಂದರು.

'ತಂತ್ರಾಂಶ ಅಭಿವೃದ್ಧಿ ಕೆಲಸ ಮಾಡುವ ಗಣಕ ಘಟಕದ ನೌಕರರು, ಅಧಿಕಾರಿಗಳು, ಸಾಮಾನ್ಯ ಘಟಕದ ಸಿಬ್ಬಂದಿ, ನೌಕರರು ಮಾಡುವ ಶಾಸನ ರಚನೆ, ವಿವಿಧ ಸಮಿತಿಗಳು ಹಾಗೂ ಅಧಿವೇಶನದಲ್ಲಿ ಪ್ರಶ್ನೋತ್ತರ ತಯಾರಿ ಮುಂತಾದ ಕೆಲಸಗಳನ್ನು ಮಾಡಲು ಸಾಧ್ಯವೇ? ಗಣಕ ಘಟಕದಲ್ಲಿಯೇ ಉನ್ನತ ಹುದ್ದೆ ಸೃಜಿಸಿ ಬಡ್ತಿ ನೀಡಲಿ. ಅದಕ್ಕೆ ನಮ್ಮ ಆಕ್ಷೇಪ ಇಲ್ಲ. ಸಾಮಾನ್ಯ ಘಟಕದ ಹುದ್ದೆಗೆ ಗಣಕ ಘಟಕದ ಅಧಿಕಾರಿಯನ್ನು ಪರಿಗಣಿಸಬಾರದು. ಸಭಾಧ್ಯಕ್ಷರು, ಕಾರ್ಯದರ್ಶಿಗೆ ಈ ಕುರಿತು ಮನವರಿಕೆ ಮಾಡಿದ್ದೇವೆ' ಎಂದರು.

ಭಾನುವಾರ, ಜುಲೈ 21, 2024 | ₹ 7.00
www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಪ್ರತಿಭಟನೆ**

ದೆಹಲಿಯಲ್ಲಿ ನಡೆಯುತ್ತಿರುವ ಮರಗಳ ಹನನ ವಿರೋಧಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

# WEEKEND CORNER ಕ್ಲಾಸಿಫೈಡ್ಸ್

## REAL ESTATE SELLING

### Sites

#### Banashankari

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

BSK 6TH Stage, 9th Block, 1600 Sqft S/W Corner 60ft Road and 10th Block 30x50 West Contact: 9945964049, 9663184766

#### Bommasandra

BOMMASANDRA HOSUR ROAD KAIDB INDUSTRIAL CONVERTED LAND 1 ACRE 25 GUNTAS WITH 60FT ROAD PRICE 6500/- PERSFT: 9945195134

#### Bannerghatta Road

HULIMAVU 20,000 SFT WITH 43FT ROAD SUITABLE FOR APPARTMENT SHOPING COMPLEX ETC PRICE 6500/- PERSFT: 9945195134

#### General

VIJAYANAGAR 60'X90', 45'x90' RR Nagar: 15,500 Sqft, Magadi Road 45 Acres, Yeshwantpura 2.17 Acres, 30,000 Sqft: 9886112385

#### Hosur Road

"VISHWAPRIYA-LAYOUT BEGUR 30x55_Site East_facing BBMP B-Katha clear_titles Loan_document NRI`owner Rs.1.12`Crore "Sri.Ganesh Estate" 9845286505"

#### Jakkur

SAMPIGEHALLI ARKAVATHI Layout 3rd Block 40X60 N/F G+3 Floor, Lift Prime Location 3.85Cr, 9986356467

#### Jayanagar

PRIME RESIDENTIAL Property SALE in 1st Block near Madhavan Park. 40x60 South Facing. Brokers Excuse. 7760110114.

#### Kanakapura Road

KANAKAPURA ROAD 10000 Square feet Conversion 30x40, 40x60, 50x80, BDA, BMRDA Sites For Sale: 9916817739

EAST FACING 40X60 site for sale behind saint gobain KIADB industry area Harohalli Kanakapura main road 6362905595

#### Magadi Road

SALE, BMRDA Site 40X30, East facing, 40 feet road. 'Raynal Gardens' Thavarekere. 4200/- sqft. 9141326819

40*60 SALE SF 40 ft road 'A' khata BEL Layout 2nd Stage Magadi Road Rs 10500/-. Contact: 9916826976

30*50 PLOT for Sale WF 40 ft road 'A' Khata BEL Layout 2nd Stage Magadi Road Rs 11600/- Contact: 9916826976.

#### Mysore Road

RAILWAY CO-OPERATIVE SOCIETY, 30X40, A Khata, Hejjala Railway Station half Km. 2800/-. Negotiable. Owner: 9486676000.

#### Nagarabhavi

"NAGARABHAVI BDA Complex 30x45 North, 30x50 East facing BDA Site, Full white, Immediate Registration. 9448432633"

#### Out-Station

DOCTORS LAYOUT 2ND Phase, Vajamangala, Mysore 40'X60' West Facing clear Title Site for Sale 2475/sft. Call 9448181786, 9886332364 (Brokers Excuse)

#### Rajajinagar

SALE 30X40,South, With Old House Rajajinagara 5th Block.Full Cheque Payment: 9448508410 " Brokers Excuse "

#### Rajarajeshwari Nagar

SITE FOR SALE KANAKAPURA ROAD & RR NAGAR 5th STAGE 30x45 CALL: 8951748434/ 9986401915

#### R T Nagar

R.T.NAGAR FACING 30X50 Near CBI Road West Facing BDA APPROVED Excellent Location For Sale Call:9341260828

#### Sanjaynagar

RMV BHOOPASANDRA BDA Site 29'x57' East 40' Road, off Chawla Road/Central Excise, 3.15Crore. Owner: 9980555558

#### Vijayanagar

VIJAYNAGAR 25X47 North, 40x60 East M.C.Layout, 30x46 South, 50x80 West RPC layout, 30x46 North, 6500sqft commercial. 9008267445.

#### Vishweshwariah Layout

AVAILABLE 30X40 BDA Site Vishweshwariah Layout 2nd Block 40ft Road Good Location Genuine Buyers: 9844603127

AVAILABLE BDA Site Vishweshwariah Layout 5th Block 40X60 North Facing 40feet Road Good Location Genuine Buyers: 9743381719

"30X40 BDA-SITE for sale Vishveshwaraih 3rd Block near Vidyaniketan School, Good location. Contact: 9845924949"

*DIRECT OWNER* 30x40 BDA N/F Sites Sale VISHVESWARAIAH LAYOUT, close to 100 feet-road,Prime Location.9742681666



DIRECT OWNER, 30X40, 40X60 site for sale. Vishweswaraiah Layout, Near RTO Office. Contact: 8971851966, 9880781399

#### Vidyaranyapura

VIDYARANYAPURA HMT Layout 40X60 BDA APPROVED Site Excellent Location 40 Feet Road For Sale, 9341260828

SITE BBMP A Katha 20x30, 40x30 SEMI COMMERCIAL SF 9200/- THINDLU LAKE SHOW GARDEN: 8296895858

### House

#### Banashankari

SALE 30X50 Banashankari 2nd Stage old House North Facing Excellent Location Contact: 99066399102 9844134068

#### Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms attached bathroom, built with teak wood, Italian Marble Tiles, at BEML Layout, Basaveshwaranagar, Bangalore-560079. Clear Titles & 'A' Katha, Rs.4.8 Crores (single payment preferred), not negotiable. Immediate Registration. 9845765559/ 9845043282

#### Basaweshwaranagar

SALE BUILDING 2500 SQUARE FEET TWO FLOORS A KHATHA RS.1 CRORE 90 LAKHS: 9035883017

#### Frazer Town

HOUSE FOR SALE- 5 Bedroom Independent Duplex house with 1650 sft site, Near Coles Park & St. German Academy, Frazer Town. Call: 6282193406 / 8748077009.

#### Jayanagar

SALE JAYANAGAR 5th Block 35x60 Corner With old House Excellent Location Contact: 9844134068 9066399102

#### J P Nagar

JP-NAGAR 2ND Near Central Mall 40x60 Two Unit House, 6,00,00,000/ 30X50 3 Unite 4,50,00000/- 3rd Phase 60X90 7 BHK Bungalow 19,98,00000: 9739995042

J.P.NAGAR 3RD Phase 45x55, North, Roadhit property, 3 BHK`2 unit House 27,000/-Sft. Final, full cheque payment- 9845059328.

J.P.NAGAR 2ND Phase 30x40 West Facing 2 unit Old House Site Value 26,500/- Sft. 9845144365

#### Ramamurthy Nagar

LUXURY DUPLEX HOUSE 20x30 Sale, Ground+ 3`Floors, 3`BHK, Rammurthy Nagar. 90L. Call: 9110499696.

#### R T Nagar

R.T.NAGAR HMT Layout 40X60 5-BHK Duplex House, Lift, N/W Corner Teak, Italian Marble 4-Carparking 9845378269 7829203369

#### Vijayanagar

BUILDING SALE Vijayanagar 55x65.5 A Katha 3 Floor Rental Income 1.30 Lack Sale 2.75Cr: 6361579235

#### Vidyaranyapura

SALE 5BR/5BATHS 40x60 33sqs spacious excellent house HMT Layout Vidyaranyapura call 8123884809 no agents

#### Mysore

MYSORE (MUDA) site 30x40, 4BHK, 15years Building, Vijaynagar 2nd stage, Carpark, 1.59 crores. Owner 9845130096.

### Flat

#### J P Nagar

SEVENTH PHASE 1100Sft,2BHK Semi-furnished OC,CC Flat 68L, 30X40,North 4BHK Triplex 180L,8904210201

#### Rajajinagar

NEW 3 BHK Attach Wall Mould cum out Teak granite Italian Kitchen 1450 sqft 6th Block, Rajkumar Road, 1.5Cr, 1/2 Km Lulu Mall. Contact:- 9341256998/ 9739217086.



Seshadripuram Institute of Technology
Campus No. 4, 5, 6A, 6B & 7B, Kadakola Industrial Area, Mysuru - 571 311
Contact : Phone No. +91 94485 76430, +91 97420 91755, 080-2346 6215
E-Mail: sitsetmysuru@gmail.com Website: www.set.edu.in/engineering-colleges

N. R. Pandith Aradhya, President
Dr. G. Ravi, Principal
Dr. Wooday P. Krishna, Honorary General Secretary

#### Vidyaranyapura

2BHK FLAT SALE 52 LAKHS Including Registration and Carpark. Near BEL Factory Doddabomsandra: 9035813667/ 9538599224

### Agricultural Land Converted

#### Ramanagar

RESIDENTIAL CONVERTED and Approved Site For Sale near Ramanagar 10000Sq.Ft Developed Area 1650/- P.Sqft Clear Titles. Owner- 9900115519

### Agricultural Land

#### Mysore Road

"CONTACT FOR BUYING/ SELLING AGRICULTURAL LANDS NEAR RAMNAGAR, CHANAPATNA, MADDUR, MALAVALLI AREAS. 'SHIVA'- 9845178335, BANGALORE"

### Commerical

#### Jayanagar

JAYANAGAR 9TH 30x40 Commercial, 5,0000000 4th T Block, 40x82 1148,00000 40x60, 745,00000 JP-Nagar 3rd Phase Corner 42X75 5-Floor Commercial Building 1220,00000 9739995042

SALE COMMERCIAL 45x60 Jayanagar 4th Block With old Building on 60feet and_40feet Road Call:9844134068 9066399102

### Residential/ Commercial

#### Devanahalli

1100 SQFT BIAAPA Approved Residential Plot Sale at Devenahalli Rs 3000000. M 9752121223

## REAL ESTATE BUYING

### Industrial & Factory

#### Devanahalli

NEED INDUSTRIAL land or industrial convertible land of 2 to 3 acres in 10 km surrounding of Devenhalli airport or Dodballapur. Interested sellers may call on below number. 9886020888

### Sites

#### Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

#### Kanakapura Road

WANTED SITE 30x40, 40x60 Anjanapura BDA, Kanakapura Road, Banashankari 6`Stage, Gubblala BCCHS Layout. Agent Excuse. Contact: 9663454878

#### Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

## BUILDERS ESSENTIAL

### Roofing Materials

*WE-FIX* LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

### Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## RENTAL PROPERTIES

### Accommodation Available

#### Commercial

BUILDING AVAILABLE FOR EDUCATIONAL INSTITUTION
20000 square feet building with 2.0 acres campus, in Doddaballapur Road near Toll Gate. Suitable for running School / College is available for rent / lease.
Call: +91 8105520853
MES-24501

SCHOOL BUILDING for Rent Location: Mahalakshmi layout, Vidyaranyapura Available for Coaching Classes Timing: After 4.30 Pm Contact: 9880522554

'11000 SQUARE feet warehouse available for rent near Tin Factory, Old Madras Road, Bangalore contact 9243109977'

#### Industrial And Factory

RENT INDUSTRIAL shed 8100sft @ SAHAKARNAGAR near Airport Road with Power & Water, suitable for Industries, Garage, Service Station, Base Kitchen, Warehouse. (Part or Full) Owner: 9686009911.

#### House

TENANTS PREFERABLY bank/ tech for 2 BHK car park house in Gopallapa layout Kempapura. 9448112614

GROUND FLOOR, 2BHK.Independent House For Rent Near Metro Hosahalli , and Metro Vijayanagar 9945193725

## PUBLIC NOTICE

**PUBLIC NOTICE**

Our client represents that the Original Sale Deed dated 23.10.2009, registered as Document No.VRT-1-03090/ 2009-10, stored in CD No.VRTD54 of Book I before the office of the Sub-Registrar, Varthur Bangalore, in respect of Apartment No.801 in 'F' Block, 8th Floor in **"ADARSH GULMOHAR"**, measuring 1846 Sq.ft., of super built-up with One Car Parking Space in the Basement, with 500 Sq.ft., of undivided right, title and interest and ownership in the residentially converted Properties bearing Survey Nos.95, 96, 105, 106, 107 and 108, its proportionate land area measuring 236453.299 Sq Ft, all situated at **Bhoganahalli Village, Varthur Hobli, Bangalore East Taluk**, has been lost / misplaced and not mortgaged / pledged. We have also lodged a police complaint bearing **Lost Report No. 1128757/2024.**

Person/s in possession of the aforesaid document may return the same to the undersigned.

**Geetha Halliyal,**
Advocate
**TAVISA LEGAL**
42 High Street, No.775,
2nd Floor, 100 feet Road,
Indiranagar, Bangalore-560038
Ph : 9980519476
email : geethahalliyal@gmail.com

MORE Classifieds Ads on Subsequent Pages

## MATRIMONIAL

### Brides Wanted

#### Brahmin

**BRIDE WANTED**
Alliance invited from Girls for Two Boys
1) Software 27 years,
2) 30 years,
Well Placed in Bank
Own house in Bangalore, Strictly from Brahmin Community, Both Malanadu Excellent Traditional Purohit Rich Background.
7899102533

## BUSINESS

### Business to Business

#### Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

### Business Offers

#### Distributors

RS.50.000/- TO Rs.1.50.000/- Or More PM Can Get Housewife/ Your Daughter/Son. If Join Low &Low Investment- 7775842189

#### Finance

WEARE DOING Education/ Purchase/ Mortgage and Home loan, From financial Institutions, Contact Mrs. Jyothi 8971132289/ 9380509779.

**CAUTION NOTICE**

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ವಿಶ್ವದ ಅತ್ಯಂತ ದೊಡ್ಡ ಕ್ರೀಡಾಕೂಟವಾದ ಒಲಿಂಪಿಕ್ಸ್‌ನಲ್ಲಿ ವಿಜೇತರಿಗೆ ನೀಡುವ ಪದಕಗಳಲ್ಲಿ ಅದೆಷ್ಟು ವೈಶಿಷ್ಟ್ಯ

ಒಳನೋಟ: ಬಾಳು ಬೆಳಗಿದ ಸೋಲಾರ್ ಪಾರ್ಕ್
ಕೋವಿಡ್ ಸಾವು: ವರದಿ ಅಲ್ಲಗಳೆದ ಕೇಂದ್ರ 5
ಪೇಟ ಧರಿಸಿದ್ದಕ್ಕೆ ಕುಪಿತರಾದ ಬಲಾಢ್ಯ ಸಮುದಾಯದ ಜನ
ಗುಜರಾತ್: ದಲಿತ ವ್ಯಕ್ತಿಗೆ ಥಳಿತ 5
ಸಹಜ ಸ್ಥಿತಿಗೆ ವಿಮಾನ ಹಾರಾಟ 8

ಬೆಳಗಾವಿಯ 10 ಸೇತುವೆ ಮುಳುಗಡೆ ● ಆಲಮಟ್ಟಿ, ಭದ್ರಾದಿಂದ ನೀರು ಬಿಡುಗಡೆ

# ನದಿಪಾತ್ರಗಳಲ್ಲಿ ಪ್ರವಾಹ ಭೀತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶನಿವಾರ ಮಳೆಯ ಅಬ್ಬರ ತುಸು ತಗ್ಗಿದೆ. ಆದರೆ, ಬಹುತೇಕ ಅಣೆಕಟ್ಟೆಗಳು ಭರ್ತಿಯಾಗುವ ಹಂತಕ್ಕೆ ಬಂದಿದ್ದು, ಹೆಚ್ಚಿನ ಪ್ರಮಾಣದಲ್ಲಿ ನೀರು ಹೊರಗೆ ಹರಿಸುತ್ತಿರುವ ಕಾರಣ ಪ್ರಮುಖ ನದಿಗಳ ಪಾತ್ರದಲ್ಲಿ ಪ್ರವಾಹದ ಭೀತಿ ಎದುರಾಗಿದೆ.

ವಿಜಯಪುರ ಜಿಲ್ಲೆಯ ಆಲಮಟ್ಟಿ ಹಾಗೂ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯಗಳಿಂದ ಮುನ್ನೆಚ್ಚರಿಕೆ ಕ್ರಮವಾಗಿ ಶನಿವಾರವೇ ನೀರು ಹೊರಗೆ ಹರಿಸಲಾಗುತ್ತಿದೆ. ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಅಣೆಕಟ್ಟೆಗೆ ನೀರಿನ ಹರಿವು ಹೆಚ್ಚಿದ್ದು, ನೀರಿನ ಮಟ್ಟ ಒಂದೇ ದಿನ ಐದು ಅಡಿ ಏರಿದೆ.

ಉಡುಪಿ ಜಿಲ್ಲೆಯಲ್ಲಿ ಹೊಳೆ ದಾಟುವಾಗ ಗುರುವಾರ ಕೊಚ್ಚಿ ಹೋಗಿದ್ದ ವ್ಯಕ್ತಿಯ ಶವ ಶುಕ್ರವಾರ ಪತ್ತೆಯಾಗಿದೆ.

7ನೇ ಪುಟ ನೋಡಿ

ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ ಎಲ್ಲಾ 26 ಗೇಟ್ ಶನಿವಾರ ತೆರೆದು ಒಂದು ಲಕ್ಷ ಕ್ಯುಸೆಕ್ ನೀರು ಕೃಷ್ಣಾ ನದಿಗೆ ಹರಿಸಲಾಯಿತು
–ಪ್ರಜಾವಾಣಿ ಚಿತ್ರ: ಚಂದ್ರಶೇಖರ ಕೋಳೇಕರ

## ಚಿನಕುರುಳಿ

ಪ್ರಕಾಶ್ ಶೆಟ್ಟಿ

## ಹರಿಯಾಣ: 'ನೀಟ್'ನಲ್ಲಿ ಯಾರಿಗೂ ಪೂರ್ಣಾಂಕವಿಲ್ಲ

**ನವದೆಹಲಿ (ಪಿಟಿಐ):** ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಈ ವರ್ಷದ 'ನೀಟ್- ಯುಜಿ'ಯ ಕೇಂದ್ರ ಮತ್ತು ನಗರವಾರು ಫಲಿತಾಂಶಗಳನ್ನು ಶನಿವಾರ ಪ್ರಕಟ ಮಾಡಿದ್ದು, ಅಭ್ಯರ್ಥಿಗಳ ಗುರುತನ್ನು ಮರೆಮಾಚಿದೆ.

ಜೂನ್ 4ರಂದು ಪ್ರಕಟವಾಗಿದ್ದ ಫಲಿತಾಂಶದಲ್ಲಿ 720ಕ್ಕೆ 720 ಅಂಕ ಗಳಿಸಿದ್ದ ಹರಿಯಾಣ ಬಹದ್ದೂರ್‌ಗಢ ಪರೀಕ್ಷಾ ಕೇಂದ್ರದ ಆರು ವಿದ್ಯಾರ್ಥಿಗಳಲ್ಲಿ ಯಾರೊಬ್ಬರೂ ಪೂರ್ಣ ಅಂಕಗಳನ್ನು ಪಡೆದಿಲ್ಲ. ಈ ಕೇಂದ್ರದಲ್ಲಿ 682 ಅಂಕಗಳನ್ನು ಪಡೆದ ಅಭ್ಯರ್ಥಿಯೇ 'ಟಾಪರ್' ಆಗಿದ್ದಾರೆ.

'ನೀಟ್-ಯುಜಿ' ಪರೀಕ್ಷೆಯನ್ನು ರದ್ದುಪಡಿಸಬೇಕು, ಮರು ಪರೀಕ್ಷೆ ನಡೆಸಬೇಕು ಮತ್ತು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಇದೇ 22ರಂದು ಪುನರಾರಂಭಿಸಲಿದೆ.

ಇನ್ನಷ್ಟು ಸುದ್ದಿ 05

## ಯುಪಿಎಸ್‌ಸಿ ಅಧ್ಯಕ್ಷ ಸೋನಿ ರಾಜೀನಾಮೆ

ಮನೋಜ್ ಸೋನಿ

**ನವದೆಹಲಿ (ಪಿಟಿಐ):** ಕೇಂದ್ರ ಲೋಕ ಸೇವಾ ಆಯೋಗದ (ಯುಪಿಎಸ್‌ಸಿ) ಅಧ್ಯಕ್ಷ ಮನೋಜ್ ಸೋನಿ ಅವರು ತಮ್ಮ ಅಧಿಕಾರಾವಧಿ ಮುಗಿಯುವ 5ವರ್ಷಗಳ ಮುನ್ನ ವೈಯಕ್ತಿಕ ಕಾರಣಗಳನ್ನು ಉಲ್ಲೇಖಿಸಿ ರಾಜೀನಾಮೆ ನೀಡಿದ್ದಾರೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಐಎಎಸ್ ಪ್ರೊಬೇಷನರಿ ಅಧಿಕಾರಿ ಪೂಜಾ ಖೇಡ್ಕರ್ ಅವರ ನೇಮಕಾತಿ ಕುರಿತ ವಿವಾದ ಮತ್ತು ಆರೋಪಗಳಿಗೂ ಮನೋಜ್ ಅವರ ರಾಜೀನಾಮೆಗೂ ಸಂಬಂಧ ಇಲ್ಲ ಎಂದು ಅವು ಹೇಳಿವೆ. 'ಯುಪಿಎಸ್‌ಸಿ ಅಧ್ಯಕ್ಷರು 15 ದಿನಗಳ ಹಿಂದೆಯೇ ವೈಯಕ್ತಿಕ ಕಾರಣ ಉಲ್ಲೇಖಿಸಿ ರಾಜೀನಾಮೆ ನೀಡಿದ್ದಾರೆ. ಅದಿನ್ನೂ ಅಂಗೀಕಾರ ಆಗಿಲ್ಲ' ಎಂದು ಮೂಲಗಳು ಸ್ಪಷ್ಟಪಡಿಸಿವೆ.

5ನೇ ಪುಟ ನೋಡಿ



## ಮಾರಕಾಸ್ತ್ರಗಳಿಂದ ಹಲ್ಲೆ ಯುವಕನ ಕೊಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಮಮೂರ್ತಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಹೊಯ್ಸಳ ನಗರದಲ್ಲಿ ನಡೆದ ಗಲಾಟೆಯಲ್ಲಿ ಯುವಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಲಾಗಿದೆ.

ಹೊಯ್ಸಳ ನಗರ ನಿವಾಸಿ ಮನೋಜ್(22) ಕೊಲೆಯಾದವರು. ಶನಿವಾರ ಬೆಳಿಗ್ಗೆ 3ನೇ ಮುಖ್ಯರಸ್ತೆಯಲ್ಲಿ ಮನೋಜ್ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಲಾಗಿದ್ದು ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಪದವಿ ವ್ಯಾಸಂಗವನ್ನು ಅರ್ಧಕ್ಕೆ ಮೊಟಕುಗೊಳಿಸಿದ್ದ ಮನೋಜ್, ಪಿಜ್ಜಾ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಸ್ನೇಹಿತರ ಜತೆ ನಡೆದು ತೆರಳುತ್ತಿದ್ದ ವೇಳೆ ಎದುರಿಗೆ ಬಂದ ಆರೋಪಿಗಳು, ಮನೋಜ್ ಅವರನ್ನು ಗುರಾಯಿಸಿದ್ದಾರೆ. ಇದೇ ವಿಚಾರಕ್ಕೆ ಜಗಳವಾಗಿದ್ದು, ಅದು ವಿಕೋಪಕ್ಕೆ ಹೋಗಿದೆ. ಈ ವೇಳೆ ಆರೋಪಿ ಮನೋಜ್ ತಲೆಗೆ ರಾಡ್‌ನಿಂದ ಬಲವಾಗಿ ಹೊಡೆದು ಆರೋಪಿ ಪರಾರಿ ಆಗಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಮನೋಜ್‌ನನ್ನು ಸ್ನೇಹಿತರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಅವರು ಮೃತಪಟ್ಟಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗಿದೆ ಎಂದು ಪೊಲೀಸರು ಹೇಳಿದರು.

## ಕ್ಯೂಆರ್ ಕೋಡ್ ಬಳಸಿ ವಂಚನೆ ನಾಲ್ವರ ವಿರುದ್ಧ ಎಫ್‌ಐಆರ್

**ಬೆಂಗಳೂರು:** ಕಚೇರಿಗೆ ಸಂಬಂಧಿಸಿದ ಕ್ಯೂಆರ್ ಕೋಡ್ ಬಳಸದೆ ವೈಯಕ್ತಿಕ ಕ್ಯೂಆರ್ ಕೋಡ್ ಬಳಸಿ ಲಕ್ಷಾಂತರ ರೂಪಾಯಿ ವಂಚಿಸಿರುವ ಮಯೂರ ಬಾಲಭವನ ಕಿಯೋಸ್ಕ್ ಘಟಕದ ನಾಲ್ವರ ವಿರುದ್ಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಸಂಬಂಧ ಕಬ್ಬನ್ ಪಾರ್ಕ್‌ನಲ್ಲಿರುವ ಬಾಲಭವನದ ಕಿಯೋಸ್ಕ್ ಘಟಕದ ವ್ಯವಸ್ಥಾಪಕ ನಾಗಭೂಷಣ್ ದೂರು ನೀಡಿದ್ದಾರೆ.

ಆರೋಪಿಗಳಾದ ಜೀಪ್ ಚಾಲಕ ಅಬ್ದುಲ್ ವಾಜೀದ್ ಅವರು ತಮ್ಮ ಕ್ಯೂಆರ್ ಕೋಡ್ ಬಳಸಿ ಖಾತೆಗೆ ₹2,66,215, ಸಹಾಯಕ ಕೆ.ವೆಂಕಟೇಶ್ ₹48,642 , ದ್ವಿತೀಯ ದರ್ಜೆ ಸಹಾಯಕ ಕೆ.ರಾಮಚಂದ್ರ ₹ 31,917 ಮತ್ತು ಸಹಾಯಕ ಪರಿಚಾರಕ ಕೋದಂಡರಾಮ ₹3,920 ಅನ್ನು ತಮ್ಮ ಖಾತೆಗೆ ಜಮಾ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ನಾಲ್ವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

### ಹಳೇ ದ್ವೇಷದಿಂದ ಕೃತ್ಯ: ಭದ್ರತಾ ಸಿಬ್ಬಂದಿಗೆ ಸುಳ್ಳು ಹೇಳಿ ಕಳ್ಳತನ

# ಹಿಟಾಚಿ ಯಂತ್ರ ಕಳವು: ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇಲ್ಲಿನ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ನಿಲುಗಡೆ ಮಾಡಿದ್ದ ಹಿಟಾಚಿ ಯಂತ್ರವನ್ನು ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಶನಿವಾರ ಬಂಧಿಸಿ ದ್ದಾರೆ.

ಜಿಗಣಿಯ ಸಚ್ಚಿದಾನಂದ ಹಾಗೂ ಶಕ್ತಿವೇಲು ಬಂಧಿತ ಆರೋಪಿಗಳು. ಇನ್ನೂ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದು ಶೋಧ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯಲ್ಲಿರುವ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಲಿಫ್ಟ್ ನಿರ್ಮಾಣ ಕಾಮಗಾರಿಗಾಗಿ ಗೋವಿಂದರಾಜು ಎಂಬುವವರು ಹಿಟಾಚಿ ತಂದು ನಿಲುಗಡೆ ಮಾಡಿದ್ದರು. ಅವರೊಂದಿಗೇ ಆರೋಪಿಗಳಾದ ಸಚ್ಚಿದಾನಂದ ಹಾಗೂ ಶಕ್ತಿವೇಲು ಅವರು ಕೆಲಸ ಮಾಡುತ್ತಿದ್ದರು. ಜುಲೈ 17ರ ರಾತ್ರಿ 1 ಗಂಟೆ ಸುಮಾರಿಗೆ ಲಾರಿ ಸಮೇತ ಆರೋಪಿಗಳು ಬಂದಿದ್ದರು. ಅದನ್ನು ಪ್ರಶ್ನಿಸಿದ್ದ ಕೋರ್ಟ್‌ನ ಭದ್ರತಾ ಸಿಬ್ಬಂದಿಗೆ 'ಹಿಟಾಚಿ ನಮ್ಮದೇ. ಕಾಮಗಾರಿ ಮುಕ್ತಾಯ ಆಗಿರುವುದರಿಂದ ಬೇರೆ ಕಡೆಗೆ ಕೊಂಡೊಯ್ಯುತ್ತಿದ್ದೇವೆ' ಎಂದು ಸುಳ್ಳು ಹೇಳಿದ್ದರು. ನಂತರ, ಹಿಟಾಚಿ ಯಂತ್ರವನ್ನು ಲಾರಿಯಲ್ಲಿ ಹಾಕಿಕೊಂಡು ಪರಾರಿ ಆಗಿದ್ದರು. ಬೆಳಿಗ್ಗೆ ಬಂದು ಕಾಮಗಾರಿ ನಡೆಸಲು ಮುಂದಾದ ವೇಳೆ ಕಳವು ನಡೆದಿರುವುದು ಗೊತ್ತಾಗಿತ್ತು. ಆರೋಪಿಗಳು ಹಿಟಾಚಿ ಕಳವು ಮಾಡುತ್ತಿರುವುದು ನ್ಯಾಯಾಲಯದ ಆವರಣದಲ್ಲಿ ಅಳವಡಿಸಿದ್ದ ದೃಶ್ಯಾವಳಿ ಸಿಸಿ ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು ಎಂದು ಪೊಲೀಸರು ಹೇಳಿದರು.

**ಫೈನಾನ್ಸ್ ವ್ಯವಹಾರ:** ಹಿಟಾಚಿ ಯಂತ್ರದ ಮಾಲೀಕರು ಹಾಗೂ ಆರೋಪಿಗಳ ನಡುವೆ 15 ವರ್ಷಗಳ ಸ್ನೇಹವಿತ್ತು. ಹಣಕಾಸಿನ ವ್ಯವಹಾರವನ್ನೂ ನಡೆಸಿದ್ದರು. ಹಣಕಾಸು ವ್ಯವಹಾರದಲ್ಲಿ ದ್ವೇಷ ಉಂಟಾಗಿತ್ತು. ಆ ದ್ವೇಷದಿಂದ ಹಿಟಾಚಿ ಯಂತ್ರ ಕಳವು ಮಾಡಿ ಮಾರಾಟಕ್ಕೆ ನಾಲ್ವರು ಆರೋಪಿಗಳು ಮುಂದಾಗಿದ್ದರು. ಜಿಗಣಿಯ ಹೋಟೆಲ್‌ವೊಂದರಲ್ಲಿ ಕುಳಿತು ಚರ್ಚಿಸುತ್ತಿದ್ದ ಇಬ್ಬರನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

### ಅಪರಾಧ ಸುದ್ದಿ

### 4000 ಕೆ.ಜಿ. ಶ್ರೀಗಂಧ ವಶ

ಗೋದಾಮಿನಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 4,000 ಕೆ.ಜಿ. ಶ್ರೀಗಂಧ ಮರದ ತುಂಡುಗಳನ್ನು ಅರಣ್ಯಾಧಿಕಾರಿಗಳು ಜಪ್ತಿ ಮಾಡಿದ್ದಾರೆ.

ದೂರವಾಣಿ ನಗರದಲ್ಲಿರುವ ಐಟಿಐ ಕಾರ್ಖಾನೆಯ ಗೋದಾಮಿನಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಶ್ರೀಗಂಧ ಮರದ ತುಂಡುಗಳನ್ನು ದಾಸ್ತಾನು ಮಾಡಲಾಗಿತ್ತು. ಖಚಿತ ಮಾಹಿತಿಯ ಮೇರೆಗೆ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು, ಶ್ರೀಗಂಧ ವಶಕ್ಕೆ ಪಡೆದು ಕಾರ್ಖಾನೆಯನ್ನು ಬಂದ್ ಮಾಡಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಇಲಾಖೆಯ ರಘು, ಅಮೃತ್ ಎ. ದೇಸಾಯಿ, ಸಿದ್ದರಾಜು ಟಿ , ಅಶ್ವಿನ್ ಎಂ.ಜೆ ಭಾಗವಹಿಸಿದ್ದರು.

### ತಲೆಮರೆಸಿಕೊಂಡಿದ್ದ ರೌಡಿ ಬಂಧನ

ಪ್ರಕರಣವೊಂದರಲ್ಲಿ ನ್ಯಾಯಾಲಯಕ್ಕೆ ಹಾಜರಾಗದೆ 14 ವರ್ಷಗಳಿಂದ ತಲೆಮರೆಸಿಕೊಂಡಿದ್ದ ರೌಡಿ ಯೋಹಾನ್ ಅಲಿಯಾಸ್ ಪಾಲು (36) ಅನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಈತನ ವಿರುದ್ಧ ಚಂದ್ರಾಲೇಔಟ್, ಅನ್ನಪೂರ್ಣೇಶ್ವರಿನಗರ, ಬಾಗಲಗುಂಟೆ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ. ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಆರೋಪಿ ಯೋಹಾನ್ ವಿರುದ್ಧ 2010ರಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು. 2012ರಿಂದ ಈತ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಆರೋಪಿ ಪತ್ತೆಗಾಗಿ ತಂಡ ರಚಿಸಲಾಗಿತ್ತು. ಈತನ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಿ, ಬಂಧಿಸಿ ವೈಯಾಲಿ ಕಾವಲ್ ಠಾಣೆ ಒಪ್ಪಿಸಲಾಗಿದೆ.

### ಪೊಲೀಸರ ಅವಹೇಳನ ಕಲಾವಿದನ ವಿರುದ್ಧ ಎಫ್‌ಐಆರ್

ಪೊಲೀಸರ ಬಗ್ಗೆ ಅವಹೇಳನದ ಟ್ಯಾಟೂ ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ಕಲಾವಿದನ ವಿರುದ್ಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ರಿತೇಶ್ ಅಘಾರಿಯಾ ಎಂಬುವವರ ವಿರುದ್ಧ ಶಾಂತಿ ಭಂಗ, ಉದ್ದೇಶ ಪೂರ್ವಕ ಅವಮಾನ ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

ಬ್ರಿಗೇಡ್ ರಸ್ತೆಯಲ್ಲಿ ಟ್ಯಾಟೂ ಸ್ಟುಡಿಯೊ ಹೊಂದಿರುವ ಅವರಿಗೆ ನೋಟಿಸ್ ನೀಡಲಾಗಿದೆ. ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ರಿತೇಶ್ ಅವರು ವ್ಯಕ್ತಿಯೊಬ್ಬರ ಎದೆಯ ಮೇಲೆ ಪೊಲೀಸರನ್ನು ಅವಹೇಳನ ಮಾಡುವ ರೀತಿಯ ಬರಹವನ್ನು ಟ್ಯಾಟೂ ಹಾಕಿದ್ದರು. ಈ ಫೋಟೋವನ್ನು ತನ್ನ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದರು. ಸಾರ್ವಜನಿಕರು ಈ ಪೋಸ್ಟ್ ಗಮನಿಸಿ 'ಎಕ್ಸ್' ಖಾತೆಯಲ್ಲಿ ನಗರ ಪೊಲೀಸರಿಗೆ ಟ್ಯಾಗ್ ಮಾಡಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದ್ದರು ಎಂದು ಮೂಲಗಳು ತಿಳಿಸಿವೆ.

### ಸುದ್ದಿ 2 ನಿಮಿಷ

## ರಾಮೇಗೌಡಗೆ ದತ್ತಿ ಪುರಸ್ಕಾರ

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಮಳಲಿ ವಸಂತಕುಮಾರ್ ಸಾಹಿತ್ಯ ದತ್ತಿನಿಧಿ' ಪುರಸ್ಕಾರಕ್ಕೆ ಮಂಡ್ಯದ ಬರಹಗಾರ ರಾಮೇಗೌಡ ಆಯ್ಕೆ ಆಗಿದ್ದಾರೆ.

ಈ ಪುರಸ್ಕಾರವು ₹ 10 ಸಾವಿರ ನಗದು ಒಳಗೊಂಡಿದೆ. 'ಮನುಕುಲದ ಮಾತುಗಾರ' ಎಂದೇ ಹೆಸರಾಗಿದ್ದ ಮಳಲಿ ವಸಂತ ಕುಮಾರ್ ಅವರು ಶ್ರೇಷ್ಠ ವಾಗ್ಮಿಗಳು ಮತ್ತು ಬರಹಗಾರರೂ ಆಗಿದ್ದರು. ಅವರ ಹೆಸರಿನಲ್ಲಿ ಕುಟುಂಬದವರು ದತ್ತಿ ಸ್ಥಾಪಿಸಿದ್ದಾರೆ. ಬರಹಗಾರರಿಗೆ, ಕನ್ನಡಪರ ಹೋರಾಟಗಾರರಿಗೆ ಈ ಪುರಸ್ಕಾರವನ್ನು ನೀಡಲಾಗುತ್ತಿದೆ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ರಾಗೌ' ಕಾವ್ಯನಾಮದಿಂದ ಬರೆಯುತ್ತಿರುವ ರಾಮೇಗೌಡ, 37 ವರ್ಷಗಳ ಕಾಲ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕವಿತೆ, ಮಕ್ಕಳ ಸಾಹಿತ್ಯ, ನಾಟಕ, ವಿಮರ್ಶೆ, ಜಾನಪದ, ಗ್ರಂಥ ಸಂಪಾದನೆ ಮೊದಲಾದ ಕ್ಷೇತ್ರಗಳಲ್ಲಿ 80ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

## ಕಾನೂನು ನೆರವು ಶಿಬಿರ ಇಂದು

**ಬೆಂಗಳೂರು:** ಧ್ವನಿ ಲೀಗಲ್ ಟ್ರಸ್ಟ್‌ನಿಂದ ಜುಲೈ 21ರಂದು 'ಉಚಿತ ಕಾನೂನು ನೆರವು ಶಿಬಿರ ಮತ್ತು ವಿದ್ಯಾರ್ಥಿನಿಯರಿಗೆ ಕಾನೂನು ಅರಿವು' ಕಾರ್ಯಕ್ರಮವನ್ನು ಬಾಗಲಗುಂಟೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿದೆ.

ಈ ಶಿಬಿರದಲ್ಲಿ ಕೆಲಸದ ಸ್ಥಳದಲ್ಲಿ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಗಂಡನಿಂದ ಜೀವನಾಂಶ ಪಡೆಯುವುದು, ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲನ್ನು ಪಡೆದುಕೊಳ್ಳುವುದು ಸೇರಿದಂತೆ ಸಿವಿಲ್, ಕ್ರಿಮಿನಲ್ ಪ್ರಕರಣಗಳಲ್ಲಿ ಕಾನೂನು ಸಲಹೆ ನೀಡಲಾಗುತ್ತದೆ. ಆಸಕ್ತರು ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 84313 00745ಗೆ ಸಂಪರ್ಕಿಸಿ.

FARNAZ

## ಕಾರು ಚಾಲನೆ ತರಬೇತಿ ವೇಳೆ ಅಸಭ್ಯ ವರ್ತನೆ; ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಯುವತಿಗೆ ಕಾರು ಚಾಲನೆಯ ತರಬೇತಿ ನೀಡುವ ವೇಳೆ ಅಸಭ್ಯವಾಗಿ ವರ್ತಿಸಿದ್ದ ಆರೋಪದಡಿ ಕಾರು ತರಬೇತಿದಾರನ ವಿರುದ್ಧ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಾಲಕ್ಷ್ಮೀಪುರದ 18 ವರ್ಷದ ಯುವತಿ ನೀಡಿದ ದೂರು ಆಧರಿಸಿ, ಬಸವೇಶ್ವರನಗರದ ಮಾರುತಿ ಡ್ರೈವಿಂಗ್ ಸ್ಕೂಲ್‌ನ ತರಬೇತುದಾರ ಅಣ್ಣಪ್ಪ ಅವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಪರೀಕ್ಷೆ ಮುಗಿಸಿದ್ದ ಯುವತಿ ಕಾರು ಚಾಲನೆ ಕಲಿಯಲು ತರಬೇತಿ ಶಾಲೆಗೆ ಸೇರಿದ್ದರು. ಅಣ್ಣಪ್ಪನೇ ಕಾರು ಚಾಲನೆ ಬಗ್ಗೆ ತರಬೇತಿ ನೀಡಿದ್ದರು. ಕೋರ್ಸ್ ಮುಗಿದ ಬಳಿಕ ಅಣ್ಣಪ್ಪ, ನಿಮ್ಮ ಮನೆಯ ಕಾರಿನಲ್ಲೇ ಪರಿಪೂರ್ಣವಾಗಿ ಚಾಲನೆ ಬಗ್ಗೆ ಹೇಳಿಕೊಡುತ್ತೇನೆ. ಒಂದು ಗಂಟೆಯ ವಿಶೇಷ ಕ್ಲಾಸ್‌ಗೆ ₹750 ಕೊಡಬೇಕು ಎಂದು ಯುವತಿಗೆ ಕೇಳಿದ್ದಾನೆ. ಯುವತಿ 15 ದಿನಗಳ ವಿಶೇಷ ಕ್ಲಾಸ್‌ಗೆ ಅಣ್ಣಪ್ಪನಿಗೆ ₹10,500 ಪಾವತಿಸಿದ್ದಾರೆ. ಅದರಂತೆ ಅಣ್ಣಪ್ಪ ವಿಶೇಷ ಕ್ಲಾಸ್ ಆರಂಭಿಸಿದ್ದರು' ಎಂದು ಪೊಲೀಸರು ಹೇಳಿದರು.

'ಪ್ರತಿ ದಿನ ಯುವತಿಯ ಮನೆ ಬಳಿ ಬಂದು ಯುವತಿಯ ಕಾರಿನಲ್ಲೇ ಚಾಲನೆ ತರಬೇತಿ ನೀಡುತ್ತಿದ್ದ. ಜುಲೈ 7ರಂದು ಬೆಳಿಗ್ಗೆ 6 ಗಂಟೆಗೆ ಯುವತಿ ಮನೆ ಬಳಿ ಬಂದಿರುವ ಅಣ್ಣಪ್ಪ, ಯುವತಿಯನ್ನು ಕಾರಿನಲ್ಲಿ ಕರೆದುಕೊಂಡು ಚಾಲನೆ ಬಗ್ಗೆ ಹೇಳಿಕೊಡಲು ಮುಂದಾಗಿದ್ದರು. ಬಸವೇಶ್ವರ ನಗರದ ನ್ಯಾಷನಲ್ ಶಾಲೆಯ ಮೇಲ್ಸೇತುವೆಯಲ್ಲಿ ತೆರಳುವಾಗ, ಯುವತಿ ಕಾರು ಚಾಲನೆ ಮಾಡುತ್ತಿದ್ದರು. ಆಗ ಅಸಭ್ಯವಾಗಿ ವರ್ತಿಸಿದ್ದರು' ಎಂದು ಪೊಲೀಸರು ತಿಳಿಸಿದರು.

## ಕಾರ್ಯಕಾರಿಣಿ: ದೂರ ಉಳಿದ ಸೈನಿಕ!

**ಚನ್ನಪಟ್ಟಣ:** ಉಪ ಚುನಾವಣೆ ಹಿನ್ನೆಲೆಯಲ್ಲಿ ಶನಿವಾರ ಇಲ್ಲಿ ನಡೆದ ಬಿಜೆಪಿ ತಾಲ್ಲೂಕು ಕಾರ್ಯಕಾರಿಣಿಯಲ್ಲಿ ಪ್ರಬಲ ಟಿಕೆಟ್ ಆಕಾಂಕ್ಷಿ, ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಗೈರು ಹಾಜರಿ ಎದ್ದು ಕಾಣುತಿತ್ತು.

ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸುವ ಇಂಗಿತಕ್ಕೆ ಪಕ್ಷದ ವರಿಷ್ಠರು ಸಮ್ಮತಿ ಸೂಚಿಸದ ಕಾರಣ ಮುನಿಸಿಕೊಂಡಿರುವ ಅವರು ಸಭೆಯಿಂದ ದೂರ ಉಳಿಯುವ ಮೂಲಕ ಅಸಮಾಧಾನ ಹೊರ ಹಾಕಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಚನ್ನಪಟ್ಟಣ ಶಾಸಕರಾಗಿದ್ದ ಎಚ್.ಡಿ. ಕುಮಾರಸ್ವಾಮಿ ಲೋಕಸಭಾ ಚುನಾವಣೆಯಲ್ಲಿ ಮಂಡ್ಯದಿಂದ ಆಯ್ಕೆಯಾದ ನಂತರ ತೆರವಾದ ಸ್ಥಾನಕ್ಕೆ'ನಾನೇ ಅಭ್ಯರ್ಥಿ' ಎಂದು ಘೋಷಣೆ ಮಾಡಿಕೊಂಡಿದ್ದ ಯೋಗೇಶ್ವರ್ ಅವರಿಗೆ ನಂತರ ನಡೆದ ಬೆಳವಣಿಗೆಯಿಂದ ತೀವ್ರ ಅಸಮಾಧಾನವಾಗಿದೆ ಎಂದು ಮೂಲಗಳು ಹೇಳಿವೆ.

# 'ರೈಲ್ವೆ ಯೋಜನೆಗಳು ಶೀಘ್ರ ಪೂರ್ಣ'

### ಜಲಶಕ್ತಿ ಯೋಜನೆಗಳಿಗೆ ಹೊಸ ಕಾಯಕಲ್ಪ: ಕೇಂದ್ರ ಸಚಿವ ವಿ.ಸೋಮಣ್ಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದ ರೈಲ್ವೆ ಯೋಜನೆಗಳು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲಾಗುವುದು. ಜಲಶಕ್ತಿ ಯೋಜನೆಗಳಿಗೆ ಹೊಸ ಕಾಯಕಲ್ಪ ನೀಡಲಾಗುವುದು' ಎಂದು ಕೇಂದ್ರ ಜಲಶಕ್ತಿ, ರೈಲ್ವೆ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರದ ಮಂಡಲ ಬಿಜೆಪಿಯಿಂದ ಹಮ್ಮಿಕೊಂಡಿದ್ದ ವಿ. ಸೋಮಣ್ಣ ಅವರ ಜನ್ಮದಿನಾಚರಣೆ, ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಮತ್ತು ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಹಣ್ಣು-ಹಂಪಲು ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿ. ಸೋಮಣ್ಣ ಎಂಬ ಸಾಮಾನ್ಯ ಕಾರ್ಯಕರ್ತನನ್ನು ಗುರುತಿಸಿ ಬೆಳೆಸಿದ ನಾಡಿನ ಜನರು ಮತ್ತು ಬಿಜೆಪಿ ಮುಖಂಡರು, ಕಾರ್ಯಕರ್ತರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಶಿವಕುಮಾರ ಸ್ವಾಮೀಜಿ ಹಾಗೂ ಬಾಲಗಂಗಾಧರನಾಥ ಸ್ವಾಮೀಜಿ ಆಶೀರ್ವಾದ ಹಾಗೂ ಒಡನಾಟದಿಂದ ಕಳೆದ 45 ವರ್ಷಗಳಲ್ಲಿ ಜನಸೇವೆ ಮಾಡಲು ಸಾಧ್ಯವಾಗಿದೆ' ಎಂದರು.

ಜನ್ಮದಿನದ ಅಂಗವಾಗಿ ಅಭಿಮಾನಿಗಳು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಚಿವ ವಿ.ಸೋಮಣ್ಣ ಮಾತನಾಡಿದರು

'ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಜನರ ಪ್ರೀತಿ, ವಿಶ್ವಾಸದ ಬಲದಿಂದ 1.75 ಲಕ್ಷ ಮತಗಳ ಅಂತರದಿಂದ ಜಯಗಳಿಸಿದ್ದೇನೆ. ತುಮಕೂರು ನಗರವನ್ನು ಹೈಟೆಕ್ ಮಾದರಿ ಕ್ಷೇತ್ರವನ್ನಾಗಿ ಮಾಡಲಾಗುವುದು. ಬಿನ್ನಿಪೇಟೆ, ವಿಜಯನಗರ, ಗೋವಿಂದರಾಜನಗರ ಮತ್ತು ತುಮಕೂರು ಕ್ಷೇತ್ರಗಳು ನನ್ನ ಹೃದಯದಲ್ಲಿ ಇವೆ' ಎಂದು ಹೇಳಿದರು.

ವಿ.ಸೋಮಣ್ಣ ಅವರು ಆದಿಚುಂಚಗಿರಿ ಮಠಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ, ಸೌಮ್ಯನಾಥ ಸ್ವಾಮೀಜಿ ಆಶೀರ್ವಾದ ಪಡೆದರು.

ಶಾಸಕ ಸಿ.ಕೆ. ರಾಮಮೂರ್ತಿ, ಬಿಜೆಪಿ ಯುವ ಮುಖಂಡ ಡಾ. ಅರುಣ್ ಸೋಮಣ್ಣ, ಆಡಳಿತ ಪಕ್ಷದ ಮಾಜಿ ನಾಯಕ ರವೀಂದ್ರ, ಮಂಡಲ ಅಧ್ಯಕ್ಷ ವಿಶ್ವನಾಥಗೌಡ, ಬಿಬಿಎಂಪಿ ಮಾಜಿ ಸದಸ್ಯರಾದ ಮೋಹನ್ ಕುಮಾರ್, ಬಾಬಿ ವೆಂಕಟೇಶ್, ದಾಸೇಗೌಡ, ಸಿ.ಎಂ.ರಾಜಪ್ಪ, ಕನಕಪುರ ರಾಜಣ್ಣ, ಕ್ರಾಂತಿರಾಜು, ಬಿಜೆಪಿ ಮುಖಂಡರಾದ ವೇಣುಗೌಡ, ಶ್ರೀಧರ್, ಡೊಡ್ಡವೀರಯ್ಯ, ರಮೇಶ್, ಮಹಿಳಾ ಘಟಕದ ಅಧ್ಯಕ್ಷೆ ರತ್ನಮ್ಮ ಭಾಗವಹಿಸಿದ್ದರು.

ಸುಧಾ, ಮಯೂರ ಓದಿರಿ

ಬೆಂಗಳೂರಿನ ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾದ 'ಕ್ವೀನ್ಸ್ ಪ್ರೀಮಿಯರ್ ಲೀಗ್' ಪಂದ್ಯದ ಉದ್ಘಾಟನಾ ಸಮಾರಂಭದಲ್ಲಿ ನಟಿಯರಾದ ತಾರಾ ಮತ್ತು ಅನು ಪ್ರಭಾಕರ್ ಅವರು ಟ್ರೋಫಿ ಅನಾವರಣ ಮಾಡಿದರು. ಮಹಿಳಾ ಕ್ರಿಕೆಟ್ ಮಾಜಿ ಆಟಗಾರ್ತಿ ಸಬಾ ಸಿದ್ದೀಕಿ, ನಟ ಪ್ರಮೋದ್ ಶೆಟ್ಟಿ ಮತ್ತು ನಟಿ ಭವ್ಯ ಗೌಡ ಇದ್ದರು
ಪ್ರಜಾವಾಣಿ ಚಿತ್ರ: ರಂಜು ಪಿ

### ಪುಣೆ ರೇಸ್

## ಜೆಂಡಾಯಿ ಗೆಲ್ಲುವ ನಿರೀಕ್ಷೆ

**ಪುಣೆ:** ವಿನ್‌ಫೇರ್247 ಗೇಮಿಂಗ್ ಟ್ರೋಫಿ ಭಾನುವಾರದಿಂದ ಪ್ರಾರಂಭವಾಗಲಿರುವ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜೆಂಡಾಯಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಸೊರೊನೆಟೊ ಸೀಕ್ರೆಟ್ 3, ಜಿಪ್ ಅಲಾಂಗ್ 2, ನೀಲಿನ 4
2ನೇ ರೇಸ್: ನಾರ್ಥರನ್ ಸಿಂಗರ್ 6, ಸೆರಾನೊ 4, ಫಾಸ್ಟ್ ಅಪ್ರೋಚ್ 5, ಕ್ವೀನ್ಸ್ ಪ್ರೈಡ್ 3
3ನೇ ರೇಸ್: ರನ್ನಿಂಗ್ ಸ್ಟಾರ್ 5, ಸ್ಪ್ಯಾನಿಶ್ ಐಸ್ 2, ಮದ್ರಾಸ್ ಚೆಕ್ 9
4ನೇ ರೇಸ್: ಅಪೆರಾಲ್ 1, ಎಕ್ಸ್‌ಪಿಡೈಟ್ 7, ಫೇಬಲ್ 8
5ನೇ ರೇಸ್: ಟರ್ನ್ ಅಂಡ್ ಬರ್ನ್ 1, ರೈಸ್ ದಿ ಸ್ಟೇಕ್ಸ್ 2, ಹೌಸ್ ಆಫ್ ಲಾರ್ಡ್ಸ್ 6
6ನೇ ರೇಸ್: ಡಿವೈನ್ ಹೋಪ್ 1, ಮದರ್ಸ್ ಗ್ರೇಸ್ 9, ಸೈಫಾ 10
7ನೇ ರೇಸ್: ಜೆಂಡಾಯಿ 11, ರಾಯಲ್ ಮೈಸೂರ್ 9, ರಾಸ್ಪುಟಿನ್ 8
8ನೇ ರೇಸ್: ಖಲೀಸಿ 1, ಷಾಂಪೇನ್ ಸ್ಮೈಲ್ 2, ಪ್ರೀಸಿಯೊಸೊ 10
9ನೇ ರೇಸ್: ಡ್ಯಾಶ್ 8, ಫೈಟಾನ್ 6, ಫೋರ್ಟಾಬಿನೊ ಬೇ 7

**ಉತ್ತಮ ಬೆಟ್: ಟರ್ನ್ ಅಂಡ್ ಬರ್ನ್**

| 1ನೇ ಜಾಕ್‌ಪಾಟ್‌ಗೆ | 2ನೇ ಜಾಕ್‌ಪಾಟ್‌ಗೆ | 1ನೇ ಟ್ರಿಬಲ್ | 2ನೇ ಟ್ರಿಬಲ್ | 3ನೇ ಟ್ರಿಬಲ್ |
|---|---|---|---|---|
| 2,3,4,5,6 | 4,5,6,7,8 | 3,4,5 | 6,7,8 | 7,8,9 |

## ಬಿಎಂಟಿಸಿಗೆ ಎಂಟಿಸಿಎಲ್ ಅಧಿಕಾರಿಗಳ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ 'ಸಾರಿಗೆ ಸಂಸ್ಥೆ ಎಂಟಿಸಿ (ಚೆನ್ನೈ) ಲಿಮಿಟೆಡ್' ಅಧಿಕಾರಿಗಳು ಬಿಎಂಟಿಸಿಗೆ ಅಧ್ಯಯನ ಭೇಟಿ ನೀಡಿದರು.

ಬಿಎಂಟಿಸಿಯಲ್ಲಿ ಅಳವಡಿಸಿ ಕೊಂಡಿರುವ ಮಾದರಿ ಉಪಕ್ರಮಗಳು, ಸಂಸ್ಥೆಯ ಇತಿಹಾಸ, ಶಕ್ತಿ ಯೋಜನೆಯ ಅನುಷ್ಠಾನ, ಪ್ರಯಾಣಿಕರ ಪಾಸ್ ವ್ಯವಸ್ಥೆ, ಆರ್ಥಿಕ ಕಾರ್ಯಕ್ಷಮತೆ, ಸಂಚಾರ ಆದಾಯ, ಸಂಸ್ಥೆಯ ಬಸ್ ವೇಳಾಪಟ್ಟಿ, ಕಾರ್ಯಾಚರಣೆಗಳ ವೆಚ್ಚ, ಜಿಸಿಸಿ ಮಾದರಿಯಲ್ಲಿ ಎಲೆಕ್ಟ್ರಿಕ್ ಬಸ್ಸುಗಳ ಹಸಿರು ತಂತ್ರಜ್ಞಾನದ ಕಾರ್ಯಾಚರಣೆ ಬಗ್ಗೆ ಮಾಹಿತಿ ಪಡೆದರು.

ಎಂಟಿಸಿ (ಚೆನ್ನೈ) ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಆಲ್ಬಿ ಜಾನ್ ವರ್ಗೀಸ್, ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಗುಣಸೇಖರನ್ ಮತ್ತು ಅಧಿಕಾರಿಗಳಿಗೆ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ಅವರು ಪ್ರಾತ್ಯಕ್ಷಿಕೆ ಮೂಲಕ ವಿವರ ನೀಡಿದರು.

ಅಧ್ಯಯನ ತಂಡದ ಅಧಿಕಾರಿಗಳು ಸಂಸ್ಥೆಯ ಮಾಹಿತಿ ಮತ್ತು ತಂತ್ರಜ್ಞಾನ ಶಾಖೆಯ ನಿಯಂತ್ರಣ ಕೊಠಡಿಗೆ ಭೇಟಿ ನೀಡಿದರು.

ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ (ಆಚರಣೆ) ಜಿ.ಟಿ. ಪ್ರಭಾಕರ ರೆಡ್ಡಿ, ಮುಖ್ಯ ತಾಂತ್ರಿಕ ಎಂಜಿನಿಯರ್ ಎ.ಎನ್. ಗಜೇಂದ್ರ ಕುಮಾರ್, ಮುಖ್ಯ ಗಣಕ ವ್ಯವಸ್ಥಾಪಕ ಕೆ.ಜಿ.ಸದಾನಂದ ಉಪಸ್ಥಿತರಿದ್ದರು.

## ತಪಾಸಣೆ ಹೆಸರಿನಲ್ಲಿ ಕಿರುಕುಳ ಬೇಡ; ಒತ್ತಾಯ

ಬೆಂಗಳೂರು: 'ಅಬಕಾರಿ ಇಲಾಖೆಯ ಅಧಿಕಾರಿಗಳು ಪಬ್, ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ನೋಟಿಸ್ ನೀಡಿ, ತಪಾಸಣೆ ಹೆಸರಿನಲ್ಲಿ ಕಿರುಕುಳ ನೀಡುವುದನ್ನು ತಡೆಯಬೇಕು' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಎಚ್.ಎಸ್. ಸುಬ್ರಮಣ್ಯ ಹೊಳ್ಳ ಒತ್ತಾಯಿಸಿದ್ದಾರೆ.

ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರಿಗೆ ಪತ್ರ ಬರೆದಿರುವ ಅವರು, 'ಅಬಕಾರಿ ತೆರಿಗೆ ಮೂಲಕ ನಾವು ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ಪಾವತಿಸುತ್ತಿದ್ದೇವೆ. ಇದರ ಜೊತೆಗೆ ವಾರ್ಷಿಕವಾಗಿ ಸನ್ನದುದಾರರು ₹9 ಲಕ್ಷದಿಂದ ₹10 ಲಕ್ಷ ಪರವಾನಗಿ ಶುಲ್ಕ ಪಾವತಿಸುತ್ತಿದ್ದೇವೆ. ಶೇಕಡಾ 18ರಷ್ಟು ಜಿಎಸ್‌ಟಿ ಭರಿಸುತ್ತಿದ್ದೇವೆ. ಇದಲ್ಲದೆ ಬಹಳಷ್ಟು ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದ್ದೇವೆ. ಆದರೂ ಸಹ ನಮ್ಮ ಉದ್ಯಮಕ್ಕೆ ಹಲವು ಅಡಚಣೆಗಳು ಆಗುತ್ತಿವೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಆನ್‌ಲೈನ್ ಮೂಲಕ ಪರವಾನಗಿ ಶುಲ್ಕ ಪಾವತಿ ಹಾಗೂ ಪರವಾನಗಿ ಪಡೆಯುವುದು ಸಮರ್ಪಕವಾಗಿ ಸಾಧ್ಯವಾಗುತ್ತಿಲ್ಲ. ಸಿಎಲ್-7ನಿಂದ ಸಿಎಲ್-6ಕ್ಕೆ ಬದಲಾಯಿಸುವಾಗ ಹೆಚ್ಚುವರಿ ಶುಲ್ಕ ಪಾವತಿಸಿದರೂ ಪರವಾನಗಿ ಸಿಗುತ್ತಿಲ್ಲ. ಎಲ್ಲ ಸನ್ನದುದಾರರ ಅಳಿವು, ಉಳಿವು ಹಾಗೂ ಬೆಳವಣಿಗೆಗೆ ಅಬಕಾರಿ ಇಲಾಖೆಯ ಸಹಕಾರ ಅಗತ್ಯ. ಇದರ ಜೊತೆಗೆ ಬೆಂಗಳೂರಿನಂತಹ ಮೆಟ್ರೊ ಮಹಾನಗರದಲ್ಲಿ ತಡರಾತ್ರಿ 2 ಗಂಟೆಯವರೆಗೆ ಪಬ್, ಬಾರ್ ಮತ್ತು ರೆಸ್ಟೋರೆಂಟ್ ತೆರೆಯಲು ಅವಕಾಶ ನೀಡಬೇಕು' ಎಂದು ಆಗ್ರಹಿಸಿದ್ದಾರೆ.



ಕೇಂದ್ರ ಸರ್ಕಾರದ ವಿರುದ್ಧ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಆರೋಪ

# ‘ನ್ಯಾಯಮೂರ್ತಿಗಳ ಹಿಂದೆ ಗೂಢಚಾರಿಗಳು’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ನ್ಯಾಯಮೂರ್ತಿಗಳ ಹಿಂದೆ ಕೇಂದ್ರ ಸರ್ಕಾರವು ಗೂಢಚಾರಿಗಳನ್ನು ಕಳುಹಿಸುತ್ತಿತ್ತು. ಸಣ್ಣ ತಪ್ಪು ಕಂಡರೂ, ನ್ಯಾಯಮೂರ್ತಿಗಳನ್ನು ಬೆದರಿಸಿ ಅವರನ್ನು ತಮಗೆ ಬೇಕಾದಂತೆ ಬಳಸಿಕೊಂಡಿತು’ ಎಂದು ಹಿರಿಯ ವಕೀಲ ಪ್ರಶಾಂತ್ ಭೂಷಣ್ ಆರೋಪಿಸಿದರು.

‘ಫೋರಂ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯುನಲ್ ಅಮಿಟಿ–ಎಫ್‌ಡಿಸಿಎ’ ಕರ್ನಾಟಕ ಘಟಕವು ನಗರದಲ್ಲಿ ಆಯೋಜಿಸಿದ್ದ ‘ಲೋಕಸಭಾ ಚುನಾವಣೆಯ ನಂತರ ಮುಂದೇನು?’ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ನ್ಯಾಯಮೂರ್ತಿಗಳನ್ನೇ ಬೆದರಿಸುವ ತಂತ್ರವನ್ನು ಕೇಂದ್ರ ಸರ್ಕಾರ ಅನುಸರಿಸಿದ ಕಾರಣ, ಕೊಲಿಜಿಯಂ ವ್ಯವಸ್ಥೆ ಅಡಿ ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ನ್ಯಾಯಾಂಗವು ತುಸುಮಟ್ಟಿಗೆ ರಾಜಿಯಾಗುತ್ತಿತ್ತು. ಆದರೆ ಈಗ ಬಿಜೆಪಿಗೆ ಸ್ಪಷ್ಟಬಹುಮತ ದೊರೆಯದೇ ಇರುವುದು ಮತ್ತು ವಿಪಕ್ಷಗಳ ಒಕ್ಕೂಟವೂ ಪ್ರಬಲವಾಗಿರುವುದರಿಂದ ಪರಿಸ್ಥಿತಿ ಬದಲಾಗುತ್ತಿದೆ. ನ್ಯಾಯಾಂಗವು ತನ್ನ ನಿಲುವಿಗೆ ಗಟ್ಟಿಯಾಗಿ ನಿಲ್ಲಲು ಆರಂಭಿಸಿದೆ’ ಎಂದರು.

‘ಬಿಜೆಪಿ ನೇತೃತ್ವದ ಸರ್ಕಾರವು ತನ್ನ ಹತ್ತು ವರ್ಷಗಳ ಆಡಳಿತದಲ್ಲಿ ಎಲ್ಲಾ ಸಾಂವಿಧಾನಿಕ ಸಂಸ್ಥೆಗಳನ್ನೂ ದುರ್ಬಲಗೊಳಿಸಿದೆ. ಅವನ್ನು ಬಲಪಡಿಸುವ ಕೆಲಸ ಮಾಡಬೇಕಿದೆ. ಇನ್ನು ಅಧಿಕಾರ ವಿಕೇಂದ್ರೀಕರಣಕ್ಕೆ ಮುಂದಾಗಬೇಕು. ಪಂಚಾಯತಿಗೆ ಹೆಚ್ಚಿನ ಅಧಿಕಾರ ವಿರಬೇಕು. ರಾಜ್ಯದಲ್ಲಿ ಪ್ರಾದೇಶಿಕ ಪಕ್ಷಗಳು ಬಲವಾಗಬೇಕು’ ಎಂದರು.

ವಿಚಾರ ಸಂಕಿರಣದಲ್ಲಿ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಮಾತನಾಡಿದರು. ಎಫ್‌ಡಿಸಿಎ ಕರ್ನಾಟಕ ಘಟಕದ ಪ್ರಧಾನ ಕಾರ್ಯದರ್ಶಿ ಎಂ.ಎಫ್.ಪಾಶಾ (ಎಡದಿಂದ), ಜಮಾತ್–ಇ–ಇಸ್ಲಾಮಿ ಹಿಂದ್‌ನ ಕಾರ್ಯದರ್ಶಿ ಡಾ.ಮೊಹಮ್ಮದ್ ತಾಹಾ ಮತೀನ್ ಮತ್ತು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

## ‘ಆರ್ಥಿಕ, ಸಾಮಾಜಿಕ ಪ್ರಜಾಪ್ರಭುತ್ವ ಬೇಕಿದೆ’

‘ಈವರೆಗಿನ 17 ಲೋಕಸಭಾ ಚುನಾವಣೆಗಳನ್ನು ಧಾರ್ಮಿಕ ಮತ್ತು ಭಾವನಾತ್ಮಕ ವಿಷಯಗಳ ಮೂಲಕವೇ ಎದುರಿಸಲಾಗಿದೆ. ಈ ಬಾರಿಯ 18ನೇ ಲೋಕಸಭಾ ಚುನಾವಣೆಯಲ್ಲಿ ಮಾತ್ರ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳೂ ಮತದಾನವನ್ನು ತುಸು ಪ್ರಭಾವಿಸಿದವು’ ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್ ಅವರು ಹೇಳಿದರು.

‘ನಮ್ಮಲ್ಲಿ ಈಗ ರಾಜಕೀಯ ಪ್ರಜಾಪ್ರಭುತ್ವ ಮಾತ್ರವೇ ಇದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಆರ್ಥಿಕ, ಸಾಮಾಜಿಕ ಪ್ರಜಾಪ್ರಭುತ್ವವನ್ನಾಗಿಸುವ ಕೆಲಸ ಆಗಬೇಕಿದೆ. ಕೃಷಿ ಬಿಕ್ಕಟ್ಟು, ಕೈಗಾರಿಕಾ ಬಿಕ್ಕಟ್ಟು, ನಿರುದ್ಯೋಗ ಸಮಸ್ಯೆ, ದಲಿತರ ಮೇಲಿನ ದೌರ್ಜನ್ಯ ಮೊದಲಾದ ವಿಷಯಗಳನ್ನು ಚುನಾವಣಾ ರಾಜಕಾರಣದ ಜತೆ ಸಂಯೋಜಿಸಬೇಕು’ ಎಂದರು.

‘ವಿರೋಧ ಪಕ್ಷಗಳ ಒಕ್ಕೂಟವು ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಇದರಿಂದ ಮತದಾರರ ನಂಬಿಕೆ ಗಳಿಸಲು ಸಾಧ್ಯವಾಗುತ್ತದೆ. ಇದರಿಂದ ಗೆಲುವಿನ ಸಾಧ್ಯತೆ ಹೆಚ್ಚಾಗುತ್ತದೆ’ ಎಂದರು.

**ಚುನಾವಣೆಯಲ್ಲಿ ಬಿಜೆಪಿಯ ಹಿನ್ನಡೆಯನ್ನು ಜನಸಾಮಾನ್ಯನ ಗೆಲುವು ಎಂದೇ ಗುರುತಿಸಬೇಕು. ಈ ಗೆಲುವಿನಿಂದ ನಾವು ಹಿಂದೆ ಸರಿಯಬಾರದು**

**ತಾರಾ ರಾವ್**
ಎದ್ದೇಳು ಕರ್ನಾಟಕ ಕೇಂದ್ರ ಸಮಿತಿ ಸದಸ್ಯೆ

**ಉತ್ತರ ಪ್ರದೇಶದಲ್ಲಿ ಬಿಜೆಪಿಯ ಹಿನ್ನಡೆಯನ್ನು ಸಂಭ್ರಮಿಸಿ, ತೆಲಂಗಾಣ, ಆಂಧ್ರ ಪ್ರದೇಶ, ಕೇರಳದಲ್ಲಿ ಬಿಜೆಪಿ ಗಟ್ಟಿ ಆಗುತ್ತಿರುವುದನ್ನು ಮರೆಯುತ್ತಿದ್ದೇವೆ**

**ಡಾ.ಮೊಹಮ್ಮದ್ ತಾಹಾ ಮತೀನ್**
ಕಾರ್ಯದರ್ಶಿ, ಜಮಾತ್–ಇ–ಇಸ್ಲಾಮಿ ಹಿಂದ್

ತಮಟಕಲ್ಲು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕರಡಿ ಮೃತಪಟ್ಟಿರುವುದು

## ವಾಹನ ಡಿಕ್ಕಿ ಕರಡಿ ಸಾವು

**ಚಿತ್ರದುರ್ಗ:** ಅಪರಿಚಿತ ವಾಹನ ಡಿಕ್ಕಿ ಹೊಡೆದು ನಗರದ ಹೊರವಲಯದ ತಮಟಕಲ್ಲು ಬಳಿಯ ರಾಷ್ಟ್ರೀಯ ಹೆದ್ದಾರಿ– 4ರಲ್ಲಿ ಕರಡಿಯೊಂದು ಶನಿವಾರ ಮೃತಪಟ್ಟಿದೆ.

ಜೋಗಿಮಟ್ಟಿ ವನ್ಯಧಾಮ, ನಗರದ ಹೊರವಲಯದ ಗುಡ್ಡಗಳಲ್ಲಿ ಕರಡಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಶನಿವಾರ ನಸುಕಿನಲ್ಲಿ ವಾಹನ ಡಿಕ್ಕಿ ಹೊಡೆದಿರುವ ಸಾಧ್ಯತೆ ಇದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಡಿಕ್ಕಿಯ ನಂತರ ವಾಹನ ಹರಿದಿರುವುದರಿಂದ ಕರಡಿಯ ದೇಹ ಅಪ್ಪಚ್ಚಿಯಾಗಿದೆ. ಸ್ಥಳೀಯ ಪೊಲೀಸರು ಹಾಗೂ ಅರಣ್ಯಾಧಿಕಾರಿಗಳು ಮೃತದೇಹ ತೆರವುಗೊಳಿಸಿದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

## ಪಕ್ಷದ ಬ್ಲಾಕ್ ಸಮಿತಿ ಶೀಘ್ರ ಪುನರ್ ರಚನೆ: ಡಿಕೆಶಿ

ಬೆಂಗಳೂರು: ‘ಪಕ್ಷದ ಬ್ಲಾಕ್ ಸಮಿತಿಯಲ್ಲಿ ಸಕ್ರಿಯವಾಗಿ ಕೆಲಸ ಮಾಡದವರನ್ನು ಬದಲಿಸಲು ನಿರ್ಧರಿಸಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಜಿಲ್ಲಾ ಮತ್ತು ಬ್ಲಾಕ್ ಘಟಕಗಳ ಅಧ್ಯಕ್ಷರ ಜೊತೆ ಶನಿವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬ್ಲಾಕ್ ಮಟ್ಟದಲ್ಲಿ ಪಕ್ಷದ ಸಮಿತಿಗಳನ್ನು ಪುನರ್ ರಚನೆ ಮಾಡಬೇಕಿದೆ. ಹಾಲಿ ಅಧ್ಯಕ್ಷರು ಹಲವು ವರ್ಷಗಳಿಂದ ಪಕ್ಷಕ್ಕೆ ದುಡಿದಿದ್ದಾರೆ. ಅವರಿಗೆ ಸೂಕ್ತ ಸ್ಥಾನಮಾನ ನೀಡಬೇಕಿದೆ. ಕೆಲವರಿಗೆ ಬಡ್ತಿ ನೀಡಬೇಕು. ಇನ್ನೂ ಕೆಲವರಿಗೆ ಜವಾಬ್ದಾರಿ ನೀಡಬೇಕಿದೆ’ ಎಂದರು.

‘ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗೆ ನ್ಯಾಯಾಲಯ ಯಾವಾಗ ಬೇಕಾದರೂ ಸೂಚನೆ ನೀಡಬಹುದು. ಆ ಚುನಾವಣೆಗಳಿಗೆ ತಯಾರಿ ಮಾಡಿಕೊಳ್ಳಬೇಕಿದೆ. ಪಕ್ಷದ ಸಮಿತಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಬೇಕಿದೆ. ಈ ಎಲ್ಲ ವಿಚಾರಗಳನ್ನು ಚರ್ಚಿಸಿ, ಮಾರ್ಗದರ್ಶನ ನೀಡಲು ಜಿಲ್ಲಾ ಮತ್ತು ಬ್ಲಾಕ್ ಮಟ್ಟದ ಅಧ್ಯಕ್ಷರ ಸಭೆ ನಡೆಸಲಾಗಿದೆ’ ಎಂದರು.

‘ಇತ್ತೀಚೆಗೆ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲೂ ಈ ವಿಚಾರ ಹೇಳಿದ್ದೇನೆ. ಶಾಸಕರು ತಮ್ಮ ಮನೆಯಲ್ಲಿ ಕಾರ್ಯಕರ್ತರನ್ನು ಭೇಟಿ ಮಾಡಬಹುದು. ಆದರೆ, ಪಕ್ಷದ ಸಭೆಗಳು ಪಕ್ಷದ ಕಚೇರಿಯಲ್ಲೇ ನಡೆಯಬೇಕು. ಈ ಕಾರಣಕ್ಕೆ ತಾಲ್ಲೂಕು ಮಟ್ಟದಲ್ಲಿ ಕಾಂಗ್ರೆಸ್ ಕಚೇರಿ ಕಡ್ಡಾಯವಾಗಿ ಇರಬೇಕು ಎಂದು ಸೂಚನೆ ನೀಡಲಾಗಿದೆ. ಅಧಿವೇಶನದ ಬಳಿಕ ತಲಾ ಇಬ್ಬರು ಸಚಿವರು ಪಕ್ಷದ ಕಚೇರಿಯಲ್ಲಿ ಕಾರ್ಯಕರ್ತರನ್ನು ಭೇಟಿ ಮಾಡಲಿದ್ದಾರೆ’ ಎಂದರು.

## ‘ಸೇವೆ ಬದುಕಿನ ಅವಿಭಾಜ್ಯ ಅಂಗ’

ಬೆಂಗಳೂರು: ‘ಸೇವೆ ಬದುಕಿನ ಅವಿಭಾಜ್ಯ ಅಂಗ. ಸಮಾಜದ ಉನ್ನತಿಯೇ ನಮ್ಮ ಬದುಕಿನ ಗುರಿಯಾಗಬೇಕು’ ಎಂದು ಸಂಸದ ಡಾ. ಸಿ.ಎನ್. ಮಂಜುನಾಥ್ ತಿಳಿಸಿದರು.

ನಗರದ ಕೆಂಗೇರಿಯ ಬೆಂಗಳೂರು ಹಾಸ್ಪಿಟಲ್ಸ್‌ನ ಮೊದಲ ವಾರ್ಷಿಕೋತ್ಸವದ ಅಂಗವಾಗಿ ನಡೆದ ವೈದ್ಯರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ವೈದ್ಯರಿಗೆ ಸಮಾಜದಲ್ಲಿ ಬಹಳ ಉನ್ನತ ಸ್ಥಾನವಿದೆ. ಅದಕ್ಕೆ ಕುಂದುಂಟಾಗದಂತೆ ನಾವು ಸೇವೆ ಸಲ್ಲಿಸಬೇಕು. ಬಡವರ, ಮಧ್ಯಮ ವರ್ಗದವರ ಕಣ್ಣೀರು ಒರೆಸುವ ಕೆಲಸವನ್ನು ಮಾಡಬೇಕು’ ಎಂದು ಸಲಹೆ ನೀಡಿದರು.

ಆಸ್ಪತ್ರೆಯ ಅಧ್ಯಕ್ಷ ಡಾ. ಕೃಷ್ಣಪ್ರಸಾದ್ ಸುರಪಾನೇನಿ, ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಲಹರಿ ಸುರಪಾನೇನಿ, ವೈದ್ಯಕೀಯ ನಿರ್ದೇಶಕ ಡಾ. ಅಭಿಷೇಕ್ ಮನ್ನೆಮ್, ಸಿಟಿ ಇನ್‌ಸ್ಟಿಟ್ಯೂಟ್ ಉಪಾಧ್ಯಕ್ಷ ಚಂದ್ರಶೇಖರ್ ಉಪಸ್ಥಿತರಿದ್ದರು.

‘ತಾಯಿ ಹೆಸರಿನಲ್ಲಿ ಒಂದು ಗಿಡ’ (‘ಏಕ್ ಪೇಡ್ ಮಾ ಕೆ ನಾಮ್’) ಘೋಷವಾಕ್ಯದೊಂದಿಗೆ ಕಾರಹಳ್ಳಿಯಲ್ಲಿ ಸಸಿನೆಡುವ ಕಾರ್ಯಕ್ರಮ ನಡೆಯಿತು

## ತಾಯಿ ಹೆಸರಲ್ಲಿ ಗಿಡ ನೆಟ್ಟ ಬಿಎಸ್‌ಎಫ್

ಪ್ರಜಾವಾಣಿ ವಾರ್ತೆ

**ಯಲಹಂಕ:** ‘ತಾಯಿ ಹೆಸರಿನಲ್ಲಿ ಒಂದು ಗಿಡ’ (‘ಏಕ್ ಪೇಡ್ ಮಾ ಕೆ ನಾಮ್’) ಘೋಷವಾಕ್ಯದೊಂದಿಗೆ ಇಲ್ಲಿನ ಗಡಿಭದ್ರತಾ ಪಡೆ (ಎಸ್‌ಟಿಸಿ) ಬಿಎಸ್‌ಎಫ್ ತರಬೇತಿ ಕೇಂದ್ರ ವತಿಯಿಂದ ಕಾರಹಳ್ಳಿಯಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಜೀವನ್ ಮುಕ್ತಿ ಫೌಂಡೇಶನ್ ಹಾಗೂ ಎಚ್‌ಎಸ್‌ಆರ್ ನಾಗರಿಕರ ವೇದಿಕೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಎಸ್‌ಟಿಸಿ, ಬಿಎಸ್‌ಎಫ್ ಬೆಂಗಳೂರು ಕೇಂದ್ರದ ಐಜಿ ಸುಧೀಂದ್ರಕುಮಾರ್ ಸಿಂಗ್ ಮಾತನಾಡಿ, ‘ಮುಂದಿನ ದಿನಗಳಲ್ಲಿ ಬೆಂಗಳೂರಿನಲ್ಲಿರುವ ಎಲ್ಲ ಬಿಎಸ್‌ಎಫ್ ಕೇಂದ್ರಗಳ ಆವರಣದಲ್ಲಿ 21 ಸಾವಿರಕ್ಕೂ ಅಧಿಕ ಗಿಡಗಳನ್ನು ನೆಡುವ ಗುರಿ ಇದೆ’ ಎಂದು ತಿಳಿಸಿದರು. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಪ್ರಧಾನ ವ್ಯವಸ್ಥಾಪಕ ಬಿ.ಎನ್.ಎಸ್. ರತ್ನಾಕರ್ ಮಾತನಾಡಿ, ‘ಫಲಕೊಡುವ ಸಸಿಗಳನ್ನು ನೆಡಲಾಗುತ್ತಿದೆ. ನೆಟ್ಟರೆ ಸಾಲದು, ಪೋಷಣೆ ಮಾಡುವ ಜವಾಬ್ದಾರಿಯೂ ಇರಬೇಕು’ ಎಂದು ಹೇಳಿದರು.

‘ಗಿಡ ನೆಡುವ ಅಭಿಯಾನದಡಿಯಲ್ಲಿ 3 ವರ್ಷಗಳಿಂದ ಮುಂಬೈ, ಹುಬ್ಬಳ್ಳಿ, ತುಮಕೂರು, ಶಿವಮೊಗ್ಗ ಮತ್ತಿತರ ಕಡೆಗಳಲ್ಲಿ 3.20 ಲಕ್ಷ ಗಿಡಗಳನ್ನು ನೆಡಲಾಗಿದೆ. ಇಂದು ಬಿಎಸ್‌ಎಫ್ ಕೇಂದ್ರದ ಆವರಣದಲ್ಲಿ 38 ವಿವಿಧ ತಳಿಯ 400ಕ್ಕೂ ಹೆಚ್ಚು ಹಲಸಿನ ಗಿಡಗಳನ್ನು ನೆಡಲಾಗಿದೆ’ ಎಂದು ಮಾಹಿತಿ ನೀಡಿದರು.

ಹೊ. ಶ್ರೀನಿವಾಸಯ್ಯ ಜನ್ಮ ಶತಮಾನೋತ್ಸವದಲ್ಲಿ ಎಚ್‌.ಕೆ. ಪಾಟೀಲ ಕಳವಳ

# ‘ಗಾಂಧಿ ತತ್ವಗಳ ಗಂಭೀರತೆ ಕುಸಿತ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಮಾಜದಲ್ಲಿ ಮಹಾತ್ಮ ಗಾಂಧೀಜಿ ತತ್ವ ಸಿದ್ಧಾಂತಗಳು, ವಿಚಾರಧಾರೆಗಳ ಬಗೆಗಿನ ಗಂಭೀರತೆ ಕುಸಿಯುತ್ತಿದೆ’ ಎಂದು ಕಾನೂನು ಸಂಸದೀಯ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಎಚ್‌.ಕೆ. ಪಾಟೀಲ ಅವರು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಇಲಾಖೆ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಡಾ.ಹೊ. ಶ್ರೀನಿವಾಸಯ್ಯ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಶನಿವಾರ ನಡೆದ ‘ಡಾ.ಹೊ. ಶ್ರೀನಿವಾಸಯ್ಯ ಜನ್ಮ ಶತಮಾನೋತ್ಸವ ಆಚರಣೆ’ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ಹೊ. ಶ್ರೀನಿವಾಸಯ್ಯ ಅವರು ಗಾಂಧೀಜಿ ಅವರನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡು ಬಹಳಷ್ಟು ಮಂದಿಗೆ ತಿಳಿಸಿದ್ದಾರೆ. ಶ್ರೀನಿವಾಸಯ್ಯ ಅವರು ರಾಜ್ಯದ ವಿವಿಧ ಶಾಲಾ–ಕಾಲೇಜುಗಳಲ್ಲಿ ಗಾಂಧೀಜಿ ಅವರ ಕುರಿತಾಗಿ ಎರಡು ಸಾವಿರ ಉಪನ್ಯಾಸಗಳನ್ನು ನೀಡಿದ್ದಾರೆ. ಶಿಸ್ತು, ವಿನಯ, ದಿಟ್ಟತನ, ಗಟ್ಟಿತನವನ್ನು ಒಬ್ಬ ವ್ಯಕ್ತಿಯಲ್ಲಿ ಕಾಣಬೇಕಾದರೆ, ಅದು ಹೊ. ಶ್ರೀನಿವಾಸಯ್ಯ ಅವರಲ್ಲಿ ಮಾತ್ರ ಕಂಡುಕೊಳ್ಳಬಹುದಾಗಿತ್ತು’ ಎಂದು ಸ್ಮರಿಸಿದರು.

ಡಾ.ಹೊ. ಶ್ರೀನಿವಾಸಯ್ಯ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ವೂಡೇ ಪಿ. ಕೃಷ್ಣ, ಎಚ್‌.ಕೆ. ಪಾಟೀಲ, ರಾಮಚಂದ್ರ ರಾಹಿ, ಎಸ್‌.ಜಿ. ಸಿದ್ದರಾಮಯ್ಯ, ಡಿ.ಆರ್. ಪಾಟೀಲ, ಶಶಿಕೃಷ್ಣ ಅವರು ಹೊ. ಶ್ರೀನಿವಾಸಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ರಾಮಚಂದ್ರ ರಾಹಿ, ‘ಶ್ರೀನಿವಾಸಯ್ಯ ಅವರು ಒಬ್ಬ ಮಾನವತಾವಾದಿ ಆಗಿದ್ದರು. ಸದ್ಯದ ರಾಜಕೀಯ ವ್ಯವಸ್ಥೆ ಮತದಾರರನ್ನು ಗುಲಾಮರು, ಭಿಕ್ಷುಕರನ್ನಾಗಿ ಮಾಡಿದೆ. ಆದ್ದರಿಂದ, ಮತದಾರರು ಸಂವಿಧಾನ ನೀಡಿದ ಹಕ್ಕುಗಳಿಗಾಗಿ ಹೋರಾಟ ಮಾಡಬೇಕಾಗಿದೆ. ವಿಶ್ವಕ್ಕೆ ಗಾಂಧಿ ಅವರ ಸಂದೇಶ ನೀಡುವಲ್ಲಿ ವಿಫಲರಾಗಿದ್ದೇವೆ. ಜಗತ್ತು ಹಿಂಸೆ ಕಡೆಗೆ ಸಾಗುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

**ದೇಶದ ಪ್ರಧಾನಮಂತ್ರಿ ಯಾವ ಗುಣಮಟ್ಟದ ನೀರು ಕುಡಿಯುತ್ತಾರೋ, ಅದೇ ಗುಣಮಟ್ಟದ ನೀರು ಹಳ್ಳಿಯ ಕಟ್ಟಕಡೆಯ ವ್ಯಕ್ತಿಯು ಕುಡಿಯುವಂತಾಗಬೇಕು ಎಂಬ ಕಾರಣಕ್ಕೆ ಪ್ರತಿಯೊಂದು ಹಳ್ಳಿಯಲ್ಲೂ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸಿದ್ದೇವೆ**

**ಎಚ್‌.ಕೆ. ಪಾಟೀಲ**
ಕಾನೂನು ಸಂಸದೀಯ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ಉಪಾಧ್ಯಕ್ಷ ಎಸ್‌.ಜಿ. ಸಿದ್ಧರಾಮಯ್ಯ, ನಿರ್ದೇಶಕ ಜಿ.ಬಿ. ಶಿವರಾಜು, ಕೆ.ಎಚ್‌. ಪಾಟೀಲ ಪ್ರತಿಷ್ಠಾನದ ಅಧ್ಯಕ್ಷ ಡಿ.ಆರ್. ಪಾಟೀಲ, ಎಸ್‌ಜೆಆರ್‌ಸಿ ಕಾಲೇಜಿನ ಪ್ರಾಂಶುಪಾಲರಾದ ಪ್ರೇಮ ಸಿದ್ಧರಾಜು, ಡಾ. ಹೊ. ಶ್ರೀನಿವಾಸಯ್ಯ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷೆ ಶಶಿಕೃಷ್ಣ ಅವರು ಭಾಗವಹಿಸಿದ್ದರು.

## ಬಾಗಲೂರು ಗ್ರಾ.ಪಂಚಾಯಿತಿ ಅಧ್ಯಕ್ಷರಾಗಿ ಕೆಂಪೇಗೌಡ ಆಯ್ಕೆ

ಪ್ರಜಾವಾಣಿ ವಾರ್ತೆ

**ಯಲಹಂಕ:** ಬಾಗಲೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಎ. ಕೆಂಪೇಗೌಡ ಹಾಗೂ ಉಪಾಧ್ಯಕ್ಷರಾಗಿ ರಫಿಯಾ ಸುಲ್ತಾನ್ ದಸ್ತಗೀರ್ ಆಯ್ಕೆಯಾಗಿದ್ದಾರೆ.

ಒಟ್ಟು 26 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಕೆಂಪೇಗೌಡ 18 ಮತಗಳನ್ನು ಪಡೆದರು. ಪ್ರತಿಸ್ಪರ್ಧಿ ಬಿ.ಜಿ. ನಟರಾಜ್ ನಾಲ್ಕು ಮತಗಳನ್ನು ಪಡೆದರು. ನಾಲ್ವರು ಸದಸ್ಯರು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿಲ್ಲ.

ಉಪಾಧ್ಯಕ್ಷರ ಚುನಾವಣೆಯಲ್ಲಿ ರಫಿಯಾ ಸುಲ್ತಾನ್ ದಸ್ತಗೀರ್ 19 ಹಾಗೂ ಪರ್ವಿನ್ ತಾಜ್ ಬಾಬಾಜಾನ್ ಎರಡು ಮತ ಪಡೆದರು. ಒಂದು ಮತ ತಿರಸ್ಕೃತವಾಯಿತು.

# ವಿನೋದ್ ದೋಂಡಾಳೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ವಿನೋದ್

**ಬೆಂಗಳೂರು:** ಕನ್ನಡ ಧಾರಾವಾಹಿ ಹಾಗೂ ಸಿನಿಮಾ ನಿರ್ದೇಶಕ ವಿನೋದ್ ದೋಂಡಾಳೆ (49) ಶನಿವಾರ ಬೆಳಿಗ್ಗೆ ತಮ್ಮ ನಿವಾಸದಲ್ಲಿ ದೊಂಡಾಲೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅವರಿಗೆ ಪತ್ನಿ ಮತ್ತು ಮೂವರು ಮಕ್ಕಳಿದ್ದಾರೆ. ನಾಗರಭಾವಿ ಮಾರುತಿನಗರದಲ್ಲಿ ವಿನೋದ್ ಅವರ ಮನೆಯಿದ್ದು, ಮನೆಯಲ್ಲಿ ಮರಣಪತ್ರ ದೊರಕಿದೆ. ‘ನನ್ನ ಆತ್ಮಹತ್ಯೆಗೆ ಯಾರೂ ಕಾರಣರಲ್ಲ. ನಾನೇ ಕಾರಣ’ ಎಂದು ಅದರಲ್ಲಿ ಬರೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆತ್ಮಹತ್ಯೆಗೆ ಸಾಲದ ಹೊರೆ ಕಾರಣವಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

‘ಸಿನಿಮಾ ಮಾಡಿ ಕೈಸುಟ್ಟುಕೊಂಡಿದ್ದರು. ಅದನ್ನು ಮನಸ್ಸಿಗೆ ಹಚ್ಚಿಕೊಂಡುಬಿಟ್ಟಿದ್ದರು. ಅದಕ್ಕಿಂತ ಹೆಚ್ಚು ಹೇಳಿಕೊಳ್ಳುತ್ತಿರಲಿಲ್ಲ. ಶುಕ್ರವಾರವಷ್ಟೇ ಸಿನಿಮಾ ತಂಡದ ಜೊತೆ ಸಭೆ ನಡೆಸಿದ್ದರು. ಬಂಡವಾಳ ಹೂಡುವವರು ಒಬ್ಬರು ಸಿಕ್ಕಿದ್ದಾರೆ, ಸಿನಿಮಾ ಶುರು ಮಾಡುತ್ತೇನೆ ಎಂದಿದ್ದರು’ ಎಂದು ವಿನೋದ್ ಅವರ ಪತ್ನಿ ಗೀತ ಮಾಧ್ಯಮಗಳಿಗೆ ಹೇಳಿದ್ದಾರೆ.

**ಅಂದಾಜು ₹2 ಕೋಟಿಯಿಂದ ₹3 ಕೋಟಿ ಸಾಲ?:** ‘ಅಶೋಕ ಬ್ಲೇಡ್’ ಚಿತ್ರಕ್ಕೆ ವಿನೋದ್ ಸೇರಿ ಇಬ್ಬರು ನಿರ್ಮಾಪಕರಿದ್ದು, ವೃದ್ಧಿ ಕ್ರಿಯೇಷನ್ ಬ್ಯಾನರ್ ಅಡಿ ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದರು. ಈ ಚಿತ್ರಕ್ಕಾಗಿ ವಿನೋದ್ ಮನೆಯ ಮೇಲೆ ₹2 ಕೋಟಿಯಿಂದ ₹3 ಕೋಟಿ ಸಾಲ ಮಾಡಿಕೊಂಡಿದ್ದರು ಎನ್ನಲಾಗಿದೆ. ಈ ಸಂಬಂಧ ಅಸಹಜಸಾವು ಪ್ರಕರಣ ದಾಖಲಿಸಿಕೊಂಡಿರುವ ಚಂದ್ರಲೇಔಟ್ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

**ಕಿರುತೆರೆಯಿಂದ ವೃತ್ತಿ ಜೀವನ:** ಪಿ.ಶೇಷಾದ್ರಿ ಅವರ ಜೊತೆ ವೃತ್ತಿ ಆರಂಭಿಸಿದ್ದ ವಿನೋದ್ ದೋಂಡಾಳೆ, ಶೇಷಾದ್ರಿ ಹಾಗೂ ಟಿ.ಎನ್. ಸೀತಾರಾಮ್ ಅವರ ಧಾರಾವಾಹಿಗಳಲ್ಲಿ ಸಹ ನಿರ್ದೇಶಕನಾಗಿ, ಸಂಚಿಕೆ ನಿರ್ದೇಶಕರಾಗಿದ್ದರು. ವರ್ಧನ್ ಮತ್ತು ದೀಪಕ್ ನಾಯ್ಡು ಎಂಬವರ ಜೊತೆಗೂಡಿ ಪ್ರೊಡಕ್ಷನ್ ಹೌಸ್ ಆರಂಭಿಸಿದ್ದ ಅವರು ‘ಕಿನ್ನರಿ’, ‘ಯಶೋಧೆ’, ‘ಮಿಥುನರಾಶಿ’ ಹೀಗೆ ಹಲವು ಧಾರಾವಾಹಿಗಳನ್ನು ನಿರ್ಮಾಣ ಮಾಡಿದ್ದಾರೆ. 2020ರಲ್ಲೇ ಸಿನಿಮಾ ನಿರ್ಮಾಣ ಕ್ಷೇತ್ರಕ್ಕೆ ಇಳಿಯಲು ನಿರ್ಧರಿಸಿದ್ದ ವಿನೋದ್, ಟಿ.ಕೆ. ದಯಾನಂದ್ ಬರೆದ ‘ಅಶೋಕ ಬ್ಲೇಡ್’ ನಿರ್ದೇಶನಕ್ಕೆ ಕೈಹಾಕಿದ್ದರು. ವೃದ್ಧಿ ಕ್ರಿಯೇಷನ್ಸ್ ಹಾಗೂ ಸತೀಶ್ ಪಿಕ್ಚರ್ ಹೌಸ್ ಜಂಟಿಯಾಗಿ ಈ ಸಿನಿಮಾ ನಿರ್ಮಾಣ ಕೈಗೆತ್ತಿಕೊಂಡಿತ್ತು. ಸಿನಿಮಾ ಜೊತೆಗೆ ವಿನೋದ್ ‘ಕರಿಮಣಿ’ ನಿರ್ಮಾಣ ಹಾಗೂ ‘ಗಂಗೆ ಗೌರಿ’ ಧಾರಾವಾಹಿಯನ್ನು ನಿರ್ದೇಶಿಸಿ ನಿರ್ಮಾಣ ಮಾಡುತ್ತಿದ್ದಾರೆ.

### 2022ರಲ್ಲಿ ಸೆಟ್ಟೇರಿದ್ದ ಸಿನಿಮಾ

2022ರ ಮೇ ತಿಂಗಳಲ್ಲಿ ‘ಅಶೋಕ ಬ್ಲೇಡ್’ ಸಿನಿಮಾ ಸೆಟ್ಟೇರಿತ್ತು. 70ರ ದಶಕದ ಕಥೆ ಹೊತ್ತಿದ್ದ ಈ ಸಿನಿಮಾ ದೊಡ್ಡ ಬಜೆಟ್‌ನಲ್ಲಿ ನಿರ್ಮಾಣವಾಗಲಿದೆ ಎಂದು ಚಿತ್ರತಂಡ ತಿಳಿಸಿತ್ತು. ಸಿನಿಮಾ ಬಗ್ಗೆ ‘ಪ್ರಜಾವಾಣಿ’ ಜೊತೆ ಮಾತನಾಡಿದ ಚಿತ್ರದ ನಟ ಸತೀಶ್ ನೀನಾಸಂ ‘ಚಿತ್ರದ ಶೇ 90ರಷ್ಟು ಚಿತ್ರೀಕರಣ ಪೂರ್ಣಗೊಂಡಿತ್ತು. ಮುಂದಿನ ವಾರವೇ ಕೊನೆಯ ಹಂತದ ಶೂಟಿಂಗ್ ನಡೆಯಬೇಕಿತ್ತು. ಅಷ್ಟರಲ್ಲೇ ಹೀಗಾಗಿದೆ. ವಿನೋದ್ ಅವರು ಏಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಗೊತ್ತಿಲ್ಲ. ಚಿತ್ರಕ್ಕೆ ನಾನು ಇಲ್ಲಿಯವರೆಗೂ ಒಂದು ರೂಪಾಯಿ ತೆಗೆದುಕೊಂಡಿಲ್ಲ. ಸಾಮಾನ್ಯ ಬಜೆಟ್‌ನಲ್ಲಿ ಸಿನಿಮಾ ಚಿತ್ರೀಕರಣ ನಡೆದಿತ್ತು. ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿತ್ತು. ವ್ಯವಹಾರದ ಮಾತುಕಥೆಗಳೂ ನಡೆದಿತ್ತು’ ಎಂದರು.

ಸಾಮಾಜಿಕ ಚಿಂತಕ ಅಲ್ಲಮಪ್ರಭು ಬೆಟ್ಟದೂರು ಅಭಿಮತ

# ‘ಮಠಾಧೀಶರಿಗೆ ವಿವಾಹ ನಿಷೇಧ ನಿಸರ್ಗಕ್ಕೆ ವಿರುದ್ಧ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಮಠಗಳಲ್ಲಿ ಮಕ್ಕಳು ಬೀಡು ಹೂಡಬಹುದು, ಸಮಾಜದ ಸಂಪತ್ತು ಓರ್ವ ವ್ಯಕ್ತಿಯ ಪಾಲಾಗಬಹುದು ಎಂಬ ಕಾರಣಕ್ಕೆ ಮಠಾಧೀಶರಿಗೆ ವಿವಾಹ ನಿಷೇಧ ಮಾಡಲಾಗಿದೆ. ಆದರೆ, ಇದು ನಿಸರ್ಗ ತತ್ವಕ್ಕೆ ವಿರುದ್ಧವಾಗಿದೆ’ ಎಂದು ಸಾಮಾಜಿಕ ಚಿಂತಕ ಅಲ್ಲಮಪ್ರಭು ಬೆಟ್ಟದೂರು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡ ‘ಮನೆಯಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ಮನದಾಳದ ಮಾತುಗಳನ್ನು ಹಂಚಿಕೊಂಡರು. ‘ಬಸವಣ್ಣ ಅವರ ಕಾಲದಲ್ಲಿ ಅವಿವಾಹಿತರು ಮಠಾಧೀಶರಾಗಿರಲಿಲ್ಲ. ವಿವಾಹಿತರೇ ಮಠಾಧೀಶರಾಗಿದ್ದರು. ಬಸವಣ್ಣ ಅವರು ತಮ್ಮ ವಚನದಲ್ಲಿ ‘ಇಂದ್ರಿಯನಿಗ್ರಹವ ಮಾಡಿದಡೆ ಹೊಂದುವವು ದೋಷಂಗಳು, ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು...’ ಎಂದು ಹೇಳಿದ್ದಾರೆ. ಅಂಬಿಗರ ಚೌಡಯ್ಯನ ವಚನದಲ್ಲಿ ಮಠಮಾನ್ಯಗಳ ಬಗ್ಗೆ ಕಟುವಾದ ಟೀಕೆಯಿದೆ. ಮಠಮಾನ್ಯಗಳು ನಮ್ಮ ಸಂಸ್ಕೃತಿಗೆ ಸಂಬಂಧಿಸಿವೆ. ಆದ್ದರಿಂದ ಇವುಗಳನ್ನು ಕಡೆಗಣಿಸಲು ಸಾಧ್ಯವಿಲ್ಲ. ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿರಕ್ತ ಮಠಗಳು ಹೆಚ್ಚಿದ್ದು, ಸಾಂಸಾರಿಕ ಮಠಗಳ ಸಂಖ್ಯೆ ಕಡಿಮೆಯಿದೆ. ಸಮಾಜದ ಸಂಪತ್ತಾದ ಮಠಗಳು ವ್ಯಕ್ತಿಗೆ ಸೇರಿಹೋಗುತ್ತದೆ ಎಂಬ ಕಾರಣಕ್ಕೆ ಸ್ವಾಮಿಗಳು, ಜಂಗಮರಿಗೆ ವಿವಾಹದಿಂದ ವಂಚಿತರನ್ನಾಗಿ ಮಾಡಲಾಗಿದೆ. ಇದು ಸರಿಯಲ್ಲ’ ಎಂದರು.

‘ಮಠಮಾನ್ಯಗಳು ಸಾಮಾಜಿಕ ಬದುಕಿನಲ್ಲಿ ಏನು ನಡೆಯುತ್ತಿದೆ? ಯಾವುದು ನಮ್ಮ ಸಂಸ್ಕೃತಿಗೆ ವಿರುದ್ಧವಾದದ್ದು ಎಂಬುದನ್ನು ತಿಳಿದುಕೊಳ್ಳಬೇಕು. ಆಗ ಸಮಾಜಮುಖಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ’ ಎಂದರು.

‘ಶಿಕ್ಷಣ ವ್ಯವಸ್ಥೆಯಲ್ಲಿಯೂ ಹಲವು ದೋಷಗಳಿವೆ. ಯುಜಿಸಿ ಪ್ರಾಧ್ಯಾಪಕರಿಗೆ ಲಕ್ಷಾಂತರ ರೂಪಾಯಿ ನೀಡಲಾಗುತ್ತಿದೆ. ಗೌರವ ಪ್ರಾಧ್ಯಾಪಕರು, ಅತಿಥಿ ಉಪನ್ಯಾಸಕರೆಂದು ಕರೆಸಿಕೊಂಡು, ಪಾಠ ಮಾಡುವವರಿಗೆ ಸೂಕ್ತ ವೇತನವಿಲ್ಲ. ಜೀವನ ನಿರ್ವಹಣೆಯೇ ಕಷ್ಟವಾಗಿರುವಾಗ ಅವರು, ವಿದ್ಯಾರ್ಥಿಗಳಿಗೆ ಹೇಗೆ ಪಾಠ ಮಾಡುತ್ತಾರೆ? ಈ ಬಗ್ಗೆ ಹೋರಾಟಗಳು ನಡೆಸಿದ ಬಳಿಕ ವೇತನದಲ್ಲಿ ಸ್ವಲ್ಪ ಏರಿಕೆಕಂಡಿತು. ಯಾವುದೇ ಪಕ್ಷ ಅಧಿಕಾರದಲ್ಲಿ ಇದ್ದರೂ ನಮ್ಮದೇ ಸರ್ಕಾರ ಅಂದುಕೊಳ್ಳಬೇಕು. ಕವಿಗಳು, ಬರಹಗಾರರು ವಿರೋಧ ಪಕ್ಷದ ರೀತಿ ಇರಬೇಕು’ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣೀದೇವಿ ಮಾಲಗತ್ತಿ ಅವರು ಪ್ರಾಸ್ತಾವಿಕ ಮಾತನಾಡಿದರು.

‘ಮನೆಯಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ಅಲ್ಲಮಪ್ರಭು ಬೆಟ್ಟದೂರು ಅವರನ್ನು ಧರಣೀದೇವಿ ಮಾಲಗತ್ತಿ ಗೌರವಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕಿ ಬನಶಂಕರಿ ಅಂಗಡಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ


ಪ್ರಜಾವಾಣಿ

## ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**EDUCATIONAL**

**Admission**

**JOIN/ COMPLETE** 10th 12th Diploma., B.Com. BBA. B.Ed. BCA. D.Pharma. AMIIE. B.Tech. MBA. LLB. 9341273990.

**Tuitions**

**ONLINE TUTION** class for Mathematics class6th to 10th (State, CBSE, ICSE). Contact: 8660320590

**PERSONAL**

**Change of Name**

**CHANGE OF NAME**
I, **Azam**, R/at # 07, 2nd Floor, 11th Cross, Munishwara Nagar Shampur Main Road, R.T. Nagar, Bengaluru-560032, declare that in my LIC policy no. 364175165 my names mentioned as **AZAM SHARIEFF** my correct name is **AZAM**, vide affidavit dated 19-07-2024 sworn before notary Sivakumara M.N., Bengaluru. Henceforth I shall be called as **AZAM** only

**I, SANJANA** S.M. W/o K.H. Dhiraj residing at No.1145, 13th Main Road 2nd Stage West of Chord Road Mahalakshmipuram Bengaluru-560086 Have changed my name to SANJANA K.D. vide affidavit dated 29-06-2024 sworn before Notary H.S. Sakalesh Aradhya Bengaluru.

**I, BHARGAVI** have changed to New name BHARGAVI YELLISHETI, W/o. Narasimha Rao, Residing at A207, United Elysium-2 Opp to Bharath Petroleum, Channasandra, Kadugodi post, Bangalore- 560067 vide affidavit dated 19-07-2024 before notary Veena J., Bangalore.

MORE Classifieds Ads on Subsequent Pages

**CHANGE OF NAME**
I, **KIRTHANA D**, Residing at No. 22, Konanakunte, Chunchaghatta Main Road, SBM Colony, 1st Main Road, Near Raj Nandini Hospital, Bangalore-560062, have changed my name to **KIRTHANA GAUTAM RATHOD** vide affidavit dated 20-07-2024 sworn before notary HR Karunakara, Bangalore. Henceforth I shall be called as **KIRTHANA GAUTAM RATHOD** only

**JOB OPPORTUNITIES**

**Accounts & Finance**

**REQUIRE** Junior Accountant/ Payroll Executive for a payroll Management firm in CV Raman Nagar. (0)9740183657

**Engg/ Production Technical**

**WANTED LEADING** Constn. Co. wants Experienced Civil Engineers 5 years and above for immediate appointment for projects in and around Bangalore. Contact:- 080- 42212228/ 9845047577. Email: jayemengineering@gmail.com

**General**

**EDUCATIONAL INSTITUTION** at Kanakapura Road Requires OFFICE ASSISTANT with Computer Knowledge. Contact Immediately:- 9845810358

**Hospital & Medical Jobs**

**ANM** required urgently. Min. SSLC Passed, Trained as ANM in Karnataka Govt. or Govt. registered Institution, experienced and registered in Karnataka Nursing Council. Female preferred. Salary 23500/-. Age: 35 years for General category and 40 years for SC/ST. As per Govt. of Karnataka conditions. Apply with testimonials on or before 7th August 2024 to The Secretary, Lions Primary Health Centre, Sirur Park Road, Seshadripuram, Bangalore 560 020.

**Part-Time Jobs**

**RETIRED/ VRS** Persons, Home Maker & Others Age Above 45 Years, Earn 50K To 60K, Here No Retirement: 6362220162/ 9886641282

**Teachers/ Professors**

**HOLY ANGEL'S** High School Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers to handle Nursery, English & Computer Science for Primary & Mathematics for High-School. Only English Medium Candidates need to apply

**URGENTLY REQUIRED:** Experienced TEACHERS for High school-English, Primary-Hindi and P.T Teacher (Male/Female) for MOTHER MARY ENGLISH SCHOOL, Thippasandra, Bangalore. Contact: 080-25281661, 8762038545

**DON BOSCO COLLEGE**
KR Puram, Bengaluru - 560036
Affiliated to Bengaluru North University
Applications Invited for Associate/ Assistant Professors
- Commerce
- Business Administration
- Computer Application
- Mathematics & Statistics
- English
- Social Work (HRM)

Candidates with Ph.D/ NET Qualification preferred
Job Placement Officer (MBA with experience)
Computer lab assistant (PG / Diploma in hardware)
Apply within 5 days from the date of this publication.
Send your resumes to
principal@dbcblr.edu.in
+91 73491 62186
www.dbcblr.edu.in

**WANTED SCIENCE** and Social Subject Teachers for CBSE Syllabus with relevant experience for Vidya Samrat International School, Mail CV to: vidyasamratschool@gmail.com Contact: 6366104518, 9945551423.

**WANTED TEACHERS** to teach HIGH SCHOOL MATHEMATICS, SCIENCE, SOCIAL Near Coles Park, Frazer Town. 9353111888

**Wanted**

**WANTED** Instructors for *Automobile *Mechanical *Fashion Design. Qualification: Diploma/ BE. In relevant field with minimum 2 years of Industry Experience, Teaching experience preferred. Apply to the Director, St Aloysius I.T.I, Mangaluru- 575003. Email: saitcprincipal@gmail.com. Contact No: 9480906732

**Walk-in**

**WANTED SALES EXECUTIVES** with Own Vehicle for a Hose Mfg Unit Located in Peenya. WALK-IN-INTERVIEW. Attractive Salary. 9000887700, 8885044451

DH DECCAN HERALD Classifieds More value, more impact
ಪ್ರಜಾವಾಣಿ
NAME CHANGE
@50/-* PER WORDS
Book your Name change Ad in DH All Karnataka + Prajavani Bengaluru City All Days
*Conditions apply
www.dhclassifieds.com BOOK NOW
For more details contact:
+91 7795158424 | +91 9900428036
+91 9731810277 | +91 9901641752
+91 9845114560 | 080- 45557163/164

ರಸ್ತೆಯ ಪ್ರತಿ 100 ಮೀಟರ್‌ಗೆ ಜಾಹೀರಾತು • ಮಾರ್ಗಸೂಚಿ ದರದಂತೆ ಶುಲ್ಕ ನಿಗದಿ

# ಬಿಬಿಎಂಪಿ: ಹೊಸ ಜಾಹೀರಾತು ನೀತಿ ಪ್ರಕಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯ ಸಾರ್ವಜನಿಕ ಸ್ಥಳ, ರಸ್ತೆಗಳಲ್ಲಿ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುವ ಹೊಸ ಜಾಹೀರಾತು ನೀತಿಯ ಕರಡು ಅಧಿಸೂಚನೆಯನ್ನು ಸರ್ಕಾರ ಶನಿವಾರ ಪ್ರಕಟಿಸಿದೆ. ಆಕ್ಷೇಪಣೆ ಸಲ್ಲಿಸಲು 30 ದಿನ ಕಾಲಾವಕಾಶ ನೀಡಲಾಗಿದೆ.

ರಸ್ತೆಗೆ ಅಗಲದ ವಿಸ್ತೀರ್ಣಕ್ಕೆ ಅನುಗುಣವಾಗಿ ಪ್ರತಿ 100 ಮೀಟರ್‌ಗೆ ಎಷ್ಟು ಅಳತೆಯ ಜಾಹೀರಾತುಗಳನ್ನು ಪ್ರದರ್ಶಿಸಬಹುದು. ಈ ಜಾಹೀರಾತುಗಳ ಉದ್ದ 40 ಅಡಿ ಮೀರುವಂತಿಲ್ಲ. ಆಯಾ ಪ್ರದೇಶದಲ್ಲಿ ಮಾರ್ಗಸೂಚಿ ದರಕ್ಕೆ ಅನುಗುಣವಾಗಿ ಜಾಹೀರಾತು ಶುಲ್ಕವನ್ನು ನಿಗದಿಪಡಿಸಲಾಗಿದೆ.

ರಸ್ತೆ ಅಗಲ 60 ಅಡಿಯಿಂದ 80 ಅಡಿ ಇದ್ದರೆ ಪ್ರತಿ 100 ಮೀಟರ್ ಉದ್ದ ರಸ್ತೆಯ ಎರಡೂ ಬದಿ ಸೇರಿ 800 ಚದರಡಿ, ರಸ್ತೆ 80 ಅಡಿಯಿಂದ 100 ಅಡಿ ಇದ್ದರೆ ಎರಡೂ ಬದಿ 1000 ಚದರ ಅಡಿ, ರಸ್ತೆ 100 ಅಡಿಯಿಂದ 200 ಅಡಿ ಇದ್ದರೆ 1,100 ಚದರಡಿ, ರಸ್ತೆ ಅಗಲ 200 ಅಡಿಗಿಂತ ಹೆಚ್ಚಿದ್ದರೆ 1,200 ಚದರಡಿ ಜಾಹೀರಾತು ಪ್ರದರ್ಶಿಸಬಹುದು.

ವೃತ್ತಗಳಲ್ಲಿ ಪ್ರತಿ ಒಂದು ಲಕ್ಷ ಚದರ ಮೀಟರ್ ಪ್ರದೇಶಕ್ಕೆ 300 ಚದರಡಿ ಜಾಹೀರಾತು ಪ್ರದರ್ಶಿಸಬಹುದು. ಉದ್ದ 60 ಅಡಿ ಮೀರುವಂತಿಲ್ಲ.

60 ಅಡಿಗಿಂತ ಕಡಿಮೆಯಿರುವ ರಸ್ತೆ ಇರುವ ವಾಣಿಜ್ಯ ಅಥವಾ ಕೈಗಾರಿಕಾ ಪ್ರದೇಶಗಳಲ್ಲಿ ಪ್ರತಿ ಲಕ್ಷ ಚದರಡಿ ವರ್ತುಲ ಪ್ರದೇಶಕ್ಕೆ 300 ಚದರ ಅಡಿ ಜಾಹೀರಾತು ಪ್ರದರ್ಶಿಸಬಹುದು. ಉದ್ದ 30 ಅಡಿ ಮೀರುವಂತಿಲ್ಲ.

**ಟೆಂಡರ್ ಮೂಲಕ ಹರಾಜು:** ರಸ್ತೆಗಳು, ವೃತ್ತಗಳು ಹಾಗೂ ಪ್ರದೇಶಗಳ ಮುಕ್ತ ಹರಾಜು ಅಥವಾ ಟೆಂಡರ್ ಅನ್ನು ಪ್ರತ್ಯೇಕ ಅಥವಾ ಲಾಟ್‌ಗಳಲ್ಲಿ ಒಟ್ಟುಗೂಡಿಸಿ ಪರವಾನಗಿ ನೀಡುವ ನಿರ್ಧಾರವನ್ನು ಬಿಬಿಎಂಪಿ ಮುಖ್ಯ ಆಯುಕ್ತರು ತೆಗೆದುಕೊಳ್ಳುತ್ತಾರೆ.

**ಖಾಸಗಿ ಪ್ರದೇಶಕ್ಕೂ ಅನುಮತಿ:** ಸರ್ಕಾರಿ ರಸ್ತೆ, ವೃತ್ತ, ಕಟ್ಟಡ, ನಿವೇಶನಗಳಲ್ಲದೆ ಖಾಸಗಿ ರಸ್ತೆ, ವಾಣಿಜ್ಯ ನಿವೇಶನ, ಕಟ್ಟಡಗಳಲ್ಲೂ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ. ಮೆಟ್ರೊ ಕಂಬಗಳು, ನಿಲ್ದಾಣಗಳು, ಮೂಲಸೌಕರ್ಯಗಳ ತಾಣಗಳಲ್ಲಿ ಯಾರೇ ಜಾಹೀರಾತು ಪ್ರದರ್ಶಿಸಬೇಕಾದರೂ ಬಿಬಿಎಂಪಿಯಿಂದಲೇ ಗುತ್ತಿಗೆ ಪಡೆಯಬೇಕು.

ವಸತಿ ಪ್ರದೇಶ, ಕಟ್ಟಡ ಎಂದು ಆಸ್ತಿ ತೆರಿಗೆ ಪಾವತಿಸುತ್ತಿರುವ ಸ್ಥಳಗಳಲ್ಲಿ ಜಾಹೀರಾತು ಪ್ರದರ್ಶಿಸಿದರೆ, ಆಸ್ತಿ ತೆರಿಗೆಯ ಶೇ 10ರಷ್ಟು ಮೊತ್ತವನ್ನು ದಂಡ ಹಾಕಲಾಗುತ್ತದೆ. ಅಲ್ಲದೆ ಯಾವುದೇ ಸಂದರ್ಭದಲ್ಲೂ ಬಿಬಿಎಂಪಿ ಅದನ್ನು ತೆರವುಗೊಳಿಸಬಹುದು. ಬಿ-ನೋಂದಣಿ ಆಸ್ತಿಯಲ್ಲಿ ಜಾಹೀರಾತು ಪ್ರದರ್ಶಿಸಿದರೆ ಆಸ್ತಿ ತೆರಿಗೆ ಶೇ 100ರಷ್ಟು ದಂಡವನ್ನು ಆಸ್ತಿ ಮಾಲೀಕರು ಪಾವತಿಸಬೇಕಾಗುತ್ತದೆ. ಆಸ್ತಿ ಯಾವುದೇ ರೀತಿಯ ಖಾತೆಯನ್ನು ಹೊಂದಿಲ್ಲದಿದ್ದರೆ, ಆಸ್ತಿ ತೆರಿಗೆಯ ಎರಡು ಪಟ್ಟು ಮೊತ್ತವನ್ನು ದಂಡವನ್ನು ಮಾಲೀಕರು ಪಾವತಿಸಬೇಕು.

ಬಿಬಿಎಂಪಿ ಶುಲ್ಕ ಪಡೆದು ನೀಡುವ ಪರವಾನಗಿಯು ಜಾಹೀರಾತು ಪ್ರದರ್ಶನಕ್ಕೆ ಮಾತ್ರವಾಗಿದೆ. ಜಾಹೀರಾತುದಾರರು ಪ್ರದೇಶದ ಮಾಲೀಕರಿಂದ ಪ್ರತ್ಯೇಕವಾಗಿ ಅನುಮತಿ ಪಡೆದುಕೊಂಡು, ಅದಕ್ಕೆ ಒಪ್ಪಂದ ಮಾಡಿಕೊಂಡಿರಬೇಕು. ಇಂತಹ ಒಪ್ಪಂದ ಇಲ್ಲದಿದ್ದರೆ ಪರವಾನಗಿ ನೀಡಲಾಗುವುದಿಲ್ಲ.

**ಪರವಾನಗಿ ಅಗತ್ಯ:** ಬಿಬಿಎಂಪಿಯಲ್ಲಿ ನೋಂದಾಯಿತವಾಗಿ, ಪರವಾನಗಿ ಹೊಂದಿರುವ ಜಾಹೀರಾತುದಾರರು ಮಾತ್ರ ಜಾಹೀರಾತು ಪ್ರದರ್ಶನದ ಹರಾಜು ಅಥವಾ ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಮುಖ್ಯ ಆಯುಕ್ತರು ಕಾಲಕಾಲಕ್ಕೆ ನಿರ್ಧರಿಸುವಷ್ಟು ಪರವಾನಗಿ ಶುಲ್ಕ, ನೋಂದಣಿ ಶುಲ್ಕ ಮತ್ತು ಭದ್ರತಾ ಠೇವಣಿಯನ್ನು ಜಾಹೀರಾತುದಾರರು ಪಾವತಿಸಬೇಕು.

ಪರವಾನಗಿ ಜಾಹೀರಾತುದಾರರಾಗಿ ನೋಂದಣಿ ಯಾಗಲು ಅರ್ಜಿ ಸಲ್ಲಿಸುವಾಗ ₹5 ಲಕ್ಷ ಶುಲ್ಕವನ್ನು ಪಾವತಿಸಬೇಕು. ಅರ್ಹರಿಗೆ ಮೂರು ವರ್ಷ ಪರವಾನಗಿ ನೀಡಲಾಗುತ್ತದೆ.

ಜಾಹೀರಾತುದಾರರು ನಿಯಮಗಳನ್ನು ಉಲ್ಲಂಘಿಸಿದರೆ ಏಳು ದಿನಗಳಲ್ಲಿ ಮುಖ್ಯ ಆಯುಕ್ತರು ಅಂತಹ ಜಾಹೀರಾತು ತೆರವಿಗೆ ಆದೇಶ ಮಾಡುತ್ತಾರೆ. ಶುಲ್ಕ ಪಾವತಿ ವಿಳಂಬ ಮಾಡಿದರೆ, ವರ್ಷಕ್ಕೆ ಶೇ 18ರಷ್ಟು ಬಡ್ಡಿ ಹಾಕಲಾಗುತ್ತದೆ. ಬಡ್ಡಿ, ದಂಡಗಳನ್ನು ಪಾವತಿಸಲು ವಿಫಲವಾದರೆ ಶೋ-ಕಾಸ್ ನೋಟಿಸ್ ನೀಡಿ ಏಳು ದಿನಗಳಲ್ಲಿ ಉತ್ತರ ಬಾರದಿದ್ದರೆ ಮುಖ್ಯ ಆಯುಕ್ತರು 20 ದಿನಗಳೊಳಗೆ ಆದೇಶ ನೀಡಬೇಕು. ಅವುಗಳನ್ನು ತೆರವುಗೊಳಿಸಬೇಕು, ಆ ವೆಚ್ಚವನ್ನು ಜಾಹೀರಾತುದಾರರಿಂದ ಅಥವಾ ಭೂಮಿಯ ಮಾಲೀಕರಿಂದ ವಸೂಲಿ ಮಾಡಬಹುದು.

## ಎಲ್ಲೆಲ್ಲಿ ಎಷ್ಟು ದರ?

ಕರ್ನಾಟಕ ನೋಂದಣಿ ಕಾಯ್ದೆ 1957ರ ಸೆಕ್ಷನ್ 45ಬಿ ಅಡಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆ ನಿಗದಿಪಡಿಸಿರುವ ಮಾರ್ಗಸೂಚಿ ದರದಂತೆ ಆಯಾ ರಸ್ತೆ, ಪ್ರದೇಶ, ವೃತ್ತಗಳಿಗೆ ಜಾಹೀರಾತು ಪ್ರದರ್ಶನಕ್ಕೆ ಪ್ರತಿ ತಿಂಗಳಿಗೆ ಶುಲ್ಕ ನಿಗದಿ ಮಾಡಲಾಗಿದೆ.

| ಮಾರ್ಗಸೂಚಿ ದರ (ಪ್ರತಿ ಚದರಡಿ) | ಜಾಹೀರಾತು ಶುಲ್ಕ (ಪ್ರತಿ ಚದರಡಿಗೆ/ ಪ್ರತಿ ತಿಂಗಳಿಗೆ) |
|---|---|
| ₹3,000ಕ್ಕಿಂತ ಕಡಿಮೆ | ₹40 |
| ₹3,000ದಿಂದ ₹5,000 | ₹50 |
| ₹5,000ದಿಂದ ₹10,000 | ₹60 |
| ₹10,000ದಿಂದ ₹20,000 | ₹70 |
| ₹20,000ದಿಂದ ₹50,000 | ₹80 |
| ₹50,000ದಿಂದ ₹1 ಲಕ್ಷ | ₹90 |
| ₹1 ಲಕ್ಷದಿಂದ ₹2 ಲಕ್ಷ | ₹100 |
| ₹2 ಲಕ್ಷಕ್ಕೆ ಹೆಚ್ಚು | ₹110 |

## ವಾಹನಗಳ ಜಾಹೀರಾತಿಗೆ ಶುಲ್ಕ

ಬಿಎಂಟಿಸಿ ಬಸ್‌ಗಳು, ಸರ್ಕಾರಿ, ಖಾಸಗಿ ಸಂಸ್ಥೆಗಳೂ ಸೇರಿದಂತೆ ಯಾವುದೇ ವಾಹನಗಳಲ್ಲಿ 'ಸಂಚಾರಿ ಜಾಹೀರಾತು'ಗಳನ್ನು ಪ್ರದರ್ಶಿಸಲು ಬಿಬಿಎಂಪಿಯಿಂದ ಪೂರ್ವಾನುಮತಿ ಪಡೆದುಕೊಳ್ಳಬೇಕು. ಪ್ರದರ್ಶನದ ಅವಧಿ, ಉದ್ದೇಶ, ವಾಹನ ಸಂಖ್ಯೆ, ವಾಹನಗಳ ಪಟ್ಟಿಯನ್ನು ನೀಡಿ ಪಾಲಿಕೆಯಿಂದ ನಿರಾಕ್ಷೇಪಣಾ ಪತ್ರ ಪಡೆದುಕೊಳ್ಳಬೇಕು. ಜಾಹೀರಾತಿಗೆ ಅನುಗುಣವಾಗಿ ತೆರಿಗೆ ಲೆಕ್ಕಹಾಕಿ, ಮೊತ್ತವನ್ನು [illegible] ಬಿಬಿಎಂಪಿ ತಿಳಿಸುತ್ತದೆ.

## ನಿಯಂತ್ರಣ ಸಮಿತಿ ರಚನೆಗೆ ಕ್ರಮ

ಸಾರ್ವಜನಿಕ ಸುರಕ್ಷತೆಗೆ ಬಾಧಕವಾಗುವ ಅನಧಿಕೃತ ಜಾಹೀರಾತು ತೆಗೆದುಹಾಕಲು, ಜಾಹೀರಾತು ನಿಯಂತ್ರಣ ಸಮಿತಿಯನ್ನು ರಚಿಸಲಾಗುತ್ತದೆ. ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷರಾಗಲಿದ್ದು, ನಗರ ಪೊಲೀಸ್ ಕಮಿಷನರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ, ಬಿಬಿಎಂಪಿ ತೆರಿಗೆ ಮತ್ತು ಹಣಕಾಸು ಸಮಿತಿ ಅಧ್ಯಕ್ಷ, ಜಾಹೀರಾತು ಜಂಟಿ/ ಉಪ ಆಯುಕ್ತ, ಎಸ್ಟೇಟ್ ವಿಶೇಷ ಆಯುಕ್ತ, ಜಾಹೀರಾತು ಸಂಘದಿಂದ ಉದ್ಯಮದ ಪ್ರತಿನಿಧಿ, ಬಿಬಿಎಂಪಿ ರಸ್ತೆ ಮೂಲಸೌಕರ್ಯ ಮುಖ್ಯ ಎಂಜಿನಿಯರ್ ಸದಸ್ಯರಾಗಿರುತ್ತಾರೆ. ಜಾಹೀರಾತುಗಳ ವಿಶೇಷ ಆಯುಕ್ತರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

## ಎಲ್ಲೆಲ್ಲಿ ಅವಕಾಶ ಇಲ್ಲ?

ಕುಮಾರಕೃಪಾ ರಸ್ತೆ, ವಿಂಡ್ಸರ್ ಮ್ಯಾನರ್ ಜಂಕ್ಷನ್‌ನಿಂದ ಶಿವಾನಂದ ವೃತ್ತ, ರಾಜಭವನ ರಸ್ತೆ, ಹೈಗ್ರೌಂಡ್ಸ್‌ನಿಂದ ಮಿನ್ಸ್ಕ್ ಸ್ಕ್ವೇರ್, ಸ್ಯಾಂಕಿ ರಸ್ತೆ, ಹೈಗ್ರೌಂಡ್ಸ್‌ನಿಂದ ವಿಂಡ್ಸರ್ ಹಿಲ್ಡ್ ಸಿಗ್ನಲ್, ಅಂಬೇಡ್ಕರ್ ವೀಧಿ, ಕೆ.ಆರ್. ವೃತ್ತದಿಂದ ಇನ್‌ಫೆಂಟ್ರಿ ಜಂಕ್ಷನ್, ಪೋಸ್ಟ್ ಆಫೀಸ್ ರಸ್ತೆ, ಕೆ.ಆರ್. ವೃತ್ತದಿಂದ ಎಸ್‌ಬಿಐ ವೃತ್ತ (ಕೆ.ಜಿ ರಸ್ತೆ), ಚಾಲುಕ್ಯ ವೃತ್ತ, ಮಹಾರಾಣಿ ಕಾಲೇಜ್ ರಸ್ತೆ, ಶೇಷಾದ್ರಿ ರಸ್ತೆ, ಕೆ.ಆರ್. ವೃತ್ತ, ಕಬ್ಬನ್ ಪಾರ್ಕ್ ಹಾಗೂ ಲಾಲ್‌ಬಾಗ್ ಆವರಣ, ನೃಪತುಂಗ ರಸ್ತೆ, ಕೆ.ಆರ್. ವೃತ್ತದಿಂದ ಪೊಲೀಸ್ ಕಾರ್ನರ್ ಜಂಕ್ಷನ್, ಪ್ಯಾಲೇಸ್ ರಸ್ತೆ, ಎಸ್‌ಬಿಐ ವೃತ್ತದಿಂದ ಚಾಲುಕ್ಯ ವೃತ್ತದವರೆಗಿನ ರಸ್ತೆಗಳಲ್ಲಿ ಯಾವುದೇ ವಿಧವಾದ ಜಾಹೀರಾತನ್ನು ಪ್ರದರ್ಶಿಸಲು ಅನುಮತಿ ಇರುವುದಿಲ್ಲ.

ಈಗಾಗಲೇ ಅಸ್ತಿತ್ವದಲ್ಲಿರುವ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಯೋಜನೆಯಡಿಯ ಪಾದಚಾರಿ ಮೇಲ್ಸೇತುವೆ, ಬಸ್ ತಂಗುದಾಣಗಳು, ಇ-ಶೌಚಾಲಯಗಳಲ್ಲಿನ ಜಾಹೀರಾತು ಪ್ರದರ್ಶನಕ್ಕೆ ವಿನಾಯಿತಿ ಇದೆ. ಅಗತ್ಯವೆಂದು ಕಂಡುಬಂದರೆ ಬಿಬಿಎಂಪಿ ಮುಖ್ಯ ಆಯುಕ್ತರು, ಹೆಚ್ಚುವರಿ ಪ್ರದೇಶಗಳನ್ನು ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಇಲ್ಲದಂತೆ ಆದೇಶಿಸಬಹುದು. ನಗರದ ಯಾವುದೇ ಪ್ರದೇಶದಲ್ಲಿ ವೈಯಕ್ತಿಕ ಜಾಹೀರಾತುಗಳನ್ನು ಹಾಕಲು ಮುಖ್ಯ ಆಯುಕ್ತರ ಪೂರ್ವ ಲಿಖಿತ ಅನುಮತಿ ಪಡೆದುಕೊಳ್ಳಬೇಕು. ದೇವಾಲಯ, ಮಸೀದಿ, ಗುರುದ್ವಾರ, ಚರ್ಚ್ ಮತ್ತು ಇತರ ಧಾರ್ಮಿಕ ಸ್ಥಳಗಳಿಂದ ನೂರು ಮೀಟರ್ ಒಳಗೆ, ಮೇಲ್ಸೇತುವೆ, ಎಲಿವೇಟೆಡ್ ಕಾರಿಡಾರ್, ಸಂವಹನ ಗೋಪುರ, ವಿಶ್ವ ಪಾರಂಪರಿಕ ತಾಣ, ರಾಷ್ಟ್ರೀಯ ಉದ್ಯಾನಗಳು, ಅರಣ್ಯ, ಜಲಮೂಲ, ಪ್ರಾದೇಶಿಕ ಪರಿಸರ ವ್ಯವಸ್ಥೆಗಳ ಅವಶೇಷಗಳ ಪ್ರದೇಶ, ಸ್ಮಾರಕ, ವಿದ್ಯುತ್ ಕಂಬಗಳಲ್ಲಿ ಜಾಹೀರಾತು ಪ್ರದರ್ಶನವನ್ನು ನಿಷೇಧಿಸಲಾಗಿದೆ.

ವಾಹನ ಚಾಲಕರ ಏಕಾಗ್ರತೆಗೆ ಭಂಗವನ್ನು ಉಂಟು ಮಾಡುವ ಜಾಹೀರಾತು, ಸಂಚಾರ ಸಿಗ್ನಲ್ ದೀಪಗಳ ಬಣ್ಣ, ನಗರದ ವಿರೂಪಕ್ಕೆ ಕಾರಣವಾಗಬಹುದಾದ ಭಿತ್ತಿಪತ್ರ, ಗೀಚುಬರಹ, ಮರದ ಮೇಲೆ ಅಂಟಿಸಲಾದ, ಮೊಳೆ ಹೊಡೆದ, ಕಟ್ಟಿದ, ಲಗತ್ತಿಸಿದ, ಜೋಡಿಸಿದ ಜಾಹೀರಾತನ್ನು ನಿಷೇಧಿಸಲಾಗಿದೆ. ನಿಯಾನ್- ಚಿಹ್ನೆಗಳನ್ನು ನಿಷೇಧಿಸಲಾಗಿದೆ. ಎಲ್‌ಇಡಿ ಪ್ರದರ್ಶನ ಅಥವಾ ಡಿಜಿಟಲ್ ವಿಡಿಯೊ ಜಾಹೀರಾತುಗಳಿಗೆ ಅನುಮತಿ ಇಲ್ಲ. 10 ಸೆಕೆಂಡುಗಳಿಗೆ ಚಿತ್ರ ಬದಲಿಸಲು ಮಾತ್ರ ಅನುಮತಿ ಇದೆ.

## ಮೆಟ್ರೊ ಜಾಹೀರಾತು ಸಮಾನ ಹಂಚಿಕೆ

ಬಿಬಿಎಂಪಿಯ ರಸ್ತೆಗಳಲ್ಲಿ 'ನಮ್ಮ ಮೆಟ್ರೊ' (ಬಿಎಂಆರ್‌ಸಿಎಲ್) ಸ್ವತ್ತುಗಳಿಂದ ಬರುವ ಜಾಹೀರಾತು ಆದಾಯವನ್ನು ಬಿಬಿಎಂಪಿ ಮತ್ತು ಬಿಎಂಆರ್‌ಸಿಎಲ್ ಸಮಾನವಾಗಿ ಹಂಚಿಕೊಳ್ಳಬೇಕು.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಹಾಗೂ ಇತರೆ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಘಟಕಗಳ ಸ್ವತ್ತುಗಳೊಳಗೆ ಜಾಹೀರಾತು ನಿಯೋಜನೆ, ಹರಾಜುಗಳನ್ನು ಆಯಾ ಏಜೆನ್ಸಿಗಳು ಸ್ವಂತ ನಿಯಮಗಳು, ಕಾರ್ಯವಿಧಾನಗಳ ಪ್ರಕಾರ ನಿರ್ಧರಿಸಬಹುದು. ಆದಾಯವನ್ನು ಆ ಏಜೆನ್ಸಿಗಳೇ ಸಂಪೂರ್ಣವಾಗಿ ಉಳಿಸಿಕೊಳ್ಳಬಹುದು. ಆದರೆ, ಈ ಏಜೆನ್ಸಿಗಳು ಅನುಮೋದಿಸಿರುವ ಜಾಹೀರಾತುಗಳು ಸಾರ್ವಜನಿಕ ಬೀದಿ ಅಥವಾ ರಸ್ತೆಗಳಲ್ಲಿ ಗೋಚರಿಸಿದರೆ, ಬಿಬಿಎಂಪಿಯಿಂದಲೇ ಟೆಂಡರ್/ ಹರಾಜು ನಿರ್ವಹಿಸಬೇಕು. ಜಾಹೀರಾತು ಶುಲ್ಕವನ್ನು ಬಿಬಿಎಂಪಿಗೇ ಪಾವತಿಸಬೇಕು. ಏಜೆನ್ಸಿಗಳು ಜಾಹೀರಾತು ಕಂಪನಿಗಳಿಂದ ನೆಲಬಾಡಿಗೆ ಸಂಗ್ರಹಿಸಬಹುದು.

ಕಾರವಾರದಿಂದ 50 ನಾಟಿಕಲ್ ಮೈಲು ದೂರದಲ್ಲಿ ಮಾರ್ಸ್ಕ್ ಫ್ರಾಂಕ್‌ಫರ್ಟ್ ಸರಕು ಸಾಗಣೆ ಹಡಗಿನಲ್ಲಿ ಕಾಣಿಸಿಕೊಂಡ ಬೆಂಕಿ ನಂದಿಸಲು ಭಾರತೀಯ ಕರಾವಳಿ ಪಡೆಯ ಹಡಗು ಕಾರ್ಯಾಚರಣೆ ನಡೆಸಿತು ಚಿತ್ರ ಕೃಪೆ: ಎಕ್ಸ್

# ಬೆಂಕಿ ಅವಘಡ: ಹಡಗು ರಕ್ಷಣೆ

ಪ್ರಜಾವಾಣಿ ವಾರ್ತೆ

**ಕಾರವಾರ:** ಇಲ್ಲಿಗೆ ಅರಬ್ಬಿ ಸಮುದ್ರದ 50 ನಾಟಿಕಲ್ ಮೈಲಿ ದೂರದಲ್ಲಿ ಶುಕ್ರವಾರ ಬೆಂಕಿ ಅವಘಡಕ್ಕೆ ತುತ್ತಾಗಿದ್ದ ಮಲೇಶಿಯಾದ ಮಾರ್ಸ್ಕ್ ಫ್ರಾಂಕ್‌ಫರ್ಟ್ ಸರಕು ಸಾಗಣೆ ಹಡಗನ್ನು ಭಾರತೀಯ ಕರಾವಳಿ ಕಾವಲು ಪಡೆ ರಕ್ಷಿಸಿದೆ.

ಗುಜರಾತ್‌ನ ಮುಂದ್ರಾ ಬಂದರಿನಿಂದ ಶ್ರೀಲಂಕಾದ ಕೊಲಂಬೊಗೆ ಪ್ರಯಾಣಿಸುತ್ತಿದ್ದ ಹಡಗಿನಲ್ಲಿ 1,154 ಕಂಟೈನರ್‌ನಲ್ಲಿ ಬೆಂಜೀನ್ ಮತ್ತು ಸೋಡಿಯಂ ಸೈನೇಟ್‌ನಂತಹ ಅಪಾಯಕಾರಿ ಸರಕುಗಳಿದ್ದವು ಎಂದು ತಟರಕ್ಷಕ ಪಡೆ ತಿಳಿಸಿದೆ.

'ಶುಕ್ರವಾರ ಮಧ್ಯಾಹ್ನ 2.10ರ ಸುಮಾರಿಗೆ ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡ ಬಗ್ಗೆ ಮಾಹಿತಿ ಬಂತು.

ಕಾರ್ಯಾಚರಣೆಗೆ ಮೊದಲು 'ಸಚೇತ್' ಹಡಗು ಬಳಸಲಾಯಿತು. ನಂತರ 'ಸುಜೀತ್' ಮತ್ತು 'ಸಾಮ್ರಾಟ್' ಹಡಗು ಬಳಸಿ ಕಾರ್ಯಾರಣೆ ಮುಂದುವರಿಸಿದೆವು' ಎಂದು ತಟರಕ್ಷಕ ಪಡೆಯು 'ಎಕ್ಸ್'ನಲ್ಲಿ ಹಂಚಿಕೊಂಡ ಪೋಸ್ಟ್‌ನಲ್ಲಿ ತಿಳಿಸಿದೆ.

# ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು:** ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇಕಡ 97ಕ್ಕಿಂತ ಹೆಚ್ಚು, ಪಿಯುಸಿ ಪರೀಕ್ಷೆಯಲ್ಲಿ ಶೇಕಡ 95ಕ್ಕಿಂತ ಹೆಚ್ಚು ಅಂಕಗಳಿಸಿದ ದಿಗಂಬರ ಜೈನ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಕೈಬರಹದ ಅರ್ಜಿಯನ್ನು ಆಗಸ್ಟ್ 10ರೊಳಗೆ ಸಲ್ಲಿಸಬೇಕು ಎಂದು ಟ್ರಸ್ಟ್‌ನ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ವಿಳಾಸ:** ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್, 369, 42ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು-560070.


## ತೋಟಗಾರಿಕೆ ಇಲಾಖೆ

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್) ರಾಮನಗರ.
ದೂರವಾಣಿ: 080-2991 1618 ಇ-ಮೇಲ್: ddhramanagara@gmail.com

ಸಂಖ್ಯೆ : ಹಿ.ಸ.ತೋ.ನಿ./ರಾ.ವ./ರಾ/ತಾಸ/17/2022-23 ದಿನಾಂಕ : 19-07-2024

**ಆಸಕ್ತಿ ಅಭಿವ್ಯಕ್ತ ಪಡಿಸುವಿಕೆ ಪ್ರಕಟಣೆ**

ರಾಮನಗರ ಜಿಲ್ಲಾ ಪಂಚಾಯತ್, ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ 2020-21 ನೇ ಸಾಲಿನ ಅನಿರ್ಬಂಧಿತ ಅನುದಾನದಡಿ ವಂದಾರಗುಪ್ಪೆ ತೋಟಗಾರಿಕೆ ಕ್ಷೇತ್ರದಲ್ಲಿ 46 ಅಡಿ X 28 ಅಡಿ ಅಳತೆಯ ಕಟ್ಟಡವನ್ನು ನಿರ್ಮಿಸಲಾಗಿದೆ. ಸದರಿ ಕಟ್ಟಡದಲ್ಲಿ Cold Pressed Coconut Oil Extraction Unit ಮತ್ತು ತೆಂಗು ಉತ್ಪನ್ನಗಳ ಸಂಸ್ಕರಣೆ ಹಾಗೂ ಮಾರಾಟ ಮಳಿಗೆಯನ್ನು ಸ್ಥಾಪಿಸಲಾಗಿದೆ. ಸದರಿ ಘಟಕದಲ್ಲಿ ತೆಂಗಿನ ಎಣ್ಣೆ, ಅರಳೆಣ್ಣೆ, ಹುಚ್ಚೆಳ್ಳೆಣ್ಣೆ, ಸೂರ್ಯಕಾಂತಿ ಎಣ್ಣೆ ಹಾಗೂ ಕಡಲೆಕಾಯಿ ಎಣ್ಣೆಗಳನ್ನು ಹೊರ ತೆಗೆಯಲು ವಿವಿಧ ರೀತಿಯ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ಸದರಿ ಕಟ್ಟಡವನ್ನು ಬಾಡಿಗೆ / ಗುತ್ತಿಗೆ ಆಧಾರದ ಮೇಲೆ ನೀಡಲು ಉದ್ದೇಶಿಸಲಾಗಿದೆ. ಸದರಿ ಘಟಕವನ್ನು ಮುನ್ನಡೆಸಿಕೊಂಡು ಹೋಗಲು ಅನುಭವವುಳ್ಳ ಆಸಕ್ತ ಅರ್ಹ ವ್ಯಕ್ತಿ / ಸ್ವ ಸಹಾಯ ಗುಂಪುಗಳು / ಇತರೆ ಸಂಘ ಸಂಸ್ಥೆಗಳ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಘಟಕವನ್ನು ನಡೆಸುವ ಸಲುವಾಗಿ ಆಸಕ್ತ ಅರ್ಹ ವ್ಯಕ್ತಿ / ಸ್ವ ಸಹಾಯ ಗುಂಪುಗಳು / ಇತರೆ ಸಂಘ ಸಂಸ್ಥೆಗಳಿಂದ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರತಿ ಮಾಹೆಯ ಮಾಸಿಕ ಬಾಡಿಗೆ ರೂ. 7,525/- ಗಳನ್ನು ನಿಗಧಿಪಡಿಸಲಾಗಿದೆ. ಗುತ್ತಿಗೆ ಆಧಾರದ ಮೇಲೆ 2 ವರ್ಷಗಳ ಅವಧಿಗೆ ಗುತ್ತಿಗೆ ಮೊತ್ತ ರೂ. 1,80,600/- ಗಳನ್ನು ನಿಗಧಿಪಡಿಸಲಾಗಿದೆ. ಆಸಕ್ತ ಅರ್ಹ ವ್ಯಕ್ತಿ / ಸ್ವ ಸಹಾಯ ಗುಂಪುಗಳು / ಇತರೆ ಸಂಘ ಸಂಸ್ಥೆಗಳು ದಿನಾಂಕ : 03-08-2024 ರ ಸಂಜೆ 5.00 ಘಂಟೆಯೊಳಗೆ ಅರ್ಜಿ ಮುಖೇನ ಸೂಕ್ತ ದಾಖಲಾತಿಗಳೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ರಾಮನಗರ ರವರಿಗೆ ಸಲ್ಲಿಸುವುದು. ಸ್ವೀಕೃತವಾದ ಅರ್ಜಿಗಳನ್ನು ದಿನಾಂಕ : 05-08-2024 ರಂದು ಬೆಳಿಗ್ಗೆ 11.00 ಘಂಟೆಗೆ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್) ರಾಮನಗರ ಇಲ್ಲಿ ಮೌಲ್ಯಮಾಪನ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಶ್ರೀ. ಡಾ॥ ಜೈನಾಗ್ ಕೆ., ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ರಾಮನಗರ (99163 23802) ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ತೋಟಗಾರಿಕೆ ಉಪನಿರ್ದೇಶಕರು,
(ಜಿಲ್ಲಾ ಪಂಚಾಯತ್) ರಾಮನಗರ ಜಿಲ್ಲೆ.

ಡಿಐಪಿಆರ್/ರಾಮನಗರ/176/ಮಣಿಪಾಲ್/2024-25

ಕಾರ್ಗಿಲ್ ಹುತಾತ್ಮ ಯೋಧರ ಸ್ಮರಣೆಗಾಗಿ ವಿಧಾನ ಸೌಧದ ಆವರಣದಲ್ಲಿ ಸಲೀಂ ಅಹ್ಮದ್ ಅವರು ಸಸಿ ನೆಟ್ಟರು

# 'ಕಾರ್ಗಿಲ್ ಹುತಾತ್ಮರ ತ್ಯಾಗ ಅವಿಸ್ಮರಣೀಯ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕಾರ್ಗಿಲ್ ಯುದ್ಧ ಪ್ರತಿಯೊಬ್ಬ ಭಾರತೀಯನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ದೇಶ ರಕ್ಷಣೆಗಾಗಿ ಮಡಿದ ವೀರ ಸೈನಿಕರ ತ್ಯಾಗ, ಬಲಿದಾನ, ಸಾಹಸ ಅವಿಸ್ಮರಣೀಯ' ಎಂದು ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದರು.

ಕಾರ್ಗಿಲ್ ವಿಜಯೋತ್ಸವದ 25ನೇ ವರ್ಷಾಚರಣೆಯ ಅಂಗವಾಗಿ ಸೇನಾಧಿಕಾರಿಗಳಿಗೆ ಶ್ರದ್ಧಾಂಜಲಿ ಕಳಸ ಹಸ್ತಾಂತರಿಸಿ ಮಾತನಾಡಿದ ಅವರು, 'ಹುತಾತ್ಮರಾಗಿರುವ ಯೋಧರು ನಮಗೆ ಪ್ರೇರಣೆ. ನಮ್ಮ ತ್ರಿವರ್ಣ ಧ್ವಜದ ಗೌರವ ಮತ್ತು ಘನತೆಯನ್ನು ಎತ್ತಿ ಹಿಡಿಯಲು ತಮ್ಮ ಬದುಕನ್ನೇ ತ್ಯಾಗ ಮಾಡಿದ ಪ್ರತಿಯೊಬ್ಬ ಯೋಧರ ಶೌರ್ಯವನ್ನು ಇಡೀ ದೇಶ ಸದಾ ಸ್ಮರಿಸುತ್ತದೆ' ಎಂದರು.

'ಹುತಾತ್ಮ ಯೋಧರ ಕುಟುಂಬಕ್ಕೆ ಕೇಂದ್ರ ಸರ್ಕಾರ ಆದ್ಯತೆ ನೀಡಿ, ಎಲ್ಲ ನೆರವು ನೀಡಬೇಕು' ಎಂದೂ ಅವರು ಒತ್ತಾಯಿಸಿದರು.

ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಕರ್ನಲ್ ಪಿ.ವಿ. ಹರಿ, ಕ್ಯಾಪ್ಟನ್ ಭಂಡಾರಿ, ಎನ್.ಕೆ. ಮಣಿಕಂಠನ್, ಬಿ.ಪಿ. ಶಿವಕುಮಾರ್, ಆರ್. ವಾಸುದೇವನ್, ವಿಧಾನ ಪರಿಷತ್ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮಿ, ಸೇನೆಯ ಉನ್ನತ ಅಧಿಕಾರಿಗಳು, ನಿವೃತ್ತ ಸೇನಾಧಿಕಾರಿಗಳು ಇದ್ದರು.

ನಗರದಲ್ಲಿ ನಡೆದ ರಾಮಕೃಷ್ಣ ಸಂಗೀತ ಸೌರಭದಲ್ಲಿ ಡಾ.ದತ್ತಾತ್ರೇಯ ಎಲ್. ವೇಲಣಕರ್ ಅವರು ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ತಬಲಾದಲ್ಲಿ ಯೋಗೀಶ್ ಭಟ್, ಹಾರ್ಮೋನಿಯಂನಲ್ಲಿ ಸತ್ಯಜಿತ್ ಸಂಜು ಸಮರ್ಥ್ ಸಾಥ್ ನೀಡಿದರು

# 'ರಾಮಕೃಷ್ಣ ಸಂಗೀತ ಸೌರಭ'ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಸವನಗುಡಿ ರಾಮಕೃಷ್ಣ ಮಠದ ವತಿಯಿಂದ ಆಯೋಜಿಸಿರುವ ಮೂರು ದಿನಗಳ 'ರಾಮಕೃಷ್ಣ ಸಂಗೀತ ಸೌರಭ' ಸಂಗೀತೋತ್ಸವಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಆಶ್ರಮದ ಆವರಣದಲ್ಲಿರುವ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ. ದತ್ತಾತ್ರೇಯ ಎಲ್. ವೇಲಣಕರ್ ಅವರು ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ನಡೆಸಿಕೊಟ್ಟರು. ಯಮನ್ ರಾಗದಲ್ಲಿ ಕಛೇರಿ ಪ್ರಾರಂಭಿಸಿ, ಬಳಿಕ ದರ್ಬಾರಿ ಕಾನಡ ರಾಗ ಪ್ರಸ್ತುತಪಡಿಸಿದರು. ಅವರಿಗೆ ತಬಲಾದಲ್ಲಿ ಯೋಗೀಶ್ ಭಟ್ ಹಾಗೂ ಹಾರ್ಮೋನಿಯಂನಲ್ಲಿ ಸತ್ಯಜಿತ್ ಸಂಜು ಸಮರ್ಥ ಸಾಥ್ ನೀಡಿದರು.

ಶನಿವಾರ ವಿದ್ವಾನ್ ಅಮಿತ್ ನಾಡಿಗ್ ಮತ್ತು ವಿದ್ವಾನ್ ಷಡಜ್ ಗೋಡ್ಖಿಂಡಿ ಅವರು ಹಿಂದೂಸ್ತಾನಿ- ಕರ್ನಾಟಕ ಕೊಳಲು ಜುಗಲಬಂದಿ ಕಾರ್ಯಕ್ರಮ ಪ್ರಸ್ತುತಪಡಿಸಲಿದ್ದಾರೆ. ಅವರಿಗೆ ಮೃದಂಗದಲ್ಲಿ ವಿದ್ವಾನ್ ಅರ್ಜುನ್ ಕುಮಾರ್ ಹಾಗೂ ತಬಲಾದಲ್ಲಿ ವಿದ್ವಾನ್ ರೂಪಕ್ ಕಲ್ಲೂರ್ಕರ್ ಸಾಥ್ ನೀಡಲಿದ್ದಾರೆ.

# ನಾಳೆಯಿಂದ ಸಂಸತ್ತಿನ ಮಳೆಗಾಲದ ಅಧಿವೇಶನ

**ನವದೆಹಲಿ (ಪಿಟಿಐ):** ಸಂಸತ್ತಿನ ಮಳೆಗಾಲದ ಅಧಿವೇಶನ ಸೋಮವಾರ (ಜುಲೈ 22) ಆರಂಭಗೊಳ್ಳಲಿದೆ. ಮಂಗಳವಾರದಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮ್ ಅವರು ಬಜೆಟ್ ಮಂಡಿಸಲಿದ್ದಾರೆ. ಇದೇ ವೇಳೆ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ರೈಲ್ವೆ ಸುರಕ್ಷತೆಯ ವಿಷಯಗಳ ಸಂಬಂಧ ಕೇಂದ್ರ ಸರ್ಕಾರವನ್ನು ಕಟ್ಟಿ ಹಾಕಲು ವಿರೋಧ ಪಕ್ಷಗಳು ನಿಶ್ಚಯಿಸಿವೆ.

ಸಚಿವೆ ನಿರ್ಮಲಾ ಸೀತಾರಾಮ್ ಅವರು ಸೋಮವಾರ ಆರ್ಥಿಕ ಸಮೀಕ್ಷೆಯನ್ನು ಸಂಸತ್ತಿನಲ್ಲಿ ಮಂಡಿಸಲಿದ್ದಾರೆ. ಈ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ಒಟ್ಟು 6 ಮಸೂದೆಗಳನ್ನು ಮಂಡಿಸಬಹುದು ಎಂದು ನಿರೀಕ್ಷಿಸಲಾಗಿದೆ. ಜುಲೈ 22ರಂದು ಆರಂಭವಾಗುವ ಮಳೆಗಾಲದ ಅಧಿವೇಶನವು ಆಗಸ್ಟ್ 12ರವರೆಗೆ ನಡೆಯಲಿದೆ.

ವಿರೋಧ ಪಕ್ಷಗಳು ಯಾವ ವಿಷಯಗಳ ಕುರಿತು ಚರ್ಚೆ ನಡೆಸಲು ಬಯಸುತ್ತಿದೆ ಎಂಬುದನ್ನು ತಿಳಿಯಲು ಆಯಾ ಪಕ್ಷಗಳ ಸದನ ನಾಯಕರೊಂದಿದೆ ಸಂಸತ್ತು ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಸಭೆ ನಡೆಸಿದ್ದಾರೆ. ಸಂಸತ್ತಿನ ಅಜೆಂಡಾ ನಿರ್ಧರಿಸಲು ವಿವಿಧ ಪಕ್ಷಗಳ 14 ಸಂಸದರನ್ನು ಒಳಗೊಂಡ ಸಮಿತಿ ಯೊಂದನ್ನು ಸ್ಪೀಕರ್ ಓಂ ಬಿರ್ಲಾ ರಚಿಸಿದ್ದಾರೆ.

# ಪತ್ನಿಗೆ ಗುಂಡಿಕ್ಕಿ ಕೊಂದ ಪತಿ

ಪ್ರಜಾವಾಣಿ ವಾರ್ತೆ

ಶಿಲ್ಪ

ಬೋಪಣ್ಣ

**ವಿರಾಜಪೇಟೆ:** ಇಲ್ಲಿಗೆ ಸಮೀಪದ ಬೇಟೋಳಿ ಗ್ರಾಮದ ಗ್ರಾಮಪಂಚಾಯಿತಿ ಮಾಜಿ ಸದಸ್ಯೆ ಶಿಲ್ಪ(36) ಅವರನ್ನು ಶನಿವಾರ ಆಕೆಯ ಪತಿ, ಕಾಫಿ ಬೆಳೆಗಾರ ಎನ್. ಬೋಪಣ್ಣ ಗುಂಡಿಕ್ಕಿ ಕೊಂದು ಬಳಿಕ ಪೊಲೀಸರಿಗೆ ಶರಣಾಗಿದ್ದಾನೆ.

ನಗರ ಠಾಣೆಗೆ ಬಂದ ಆರೋಪಿಯನ್ನು ಬಂಧಿಸಿದ ಪೊಲೀಸರು ಬಂದೂಕು ಜಪ್ತಿ ಮಾಡಿದ್ದಾರೆ. ದಂಪತಿಗೆ ಇಬ್ಬರು ಪುತ್ರಿಯರಿದ್ದು, ವಿದ್ಯಾಭ್ಯಾಸ ಮಾಡುತ್ತಿದ್ದಾರೆ.


ಸುಧಾ ಮಯೂರ ಓದಿರಿ



**IN THE COURT OF THE HON'BLE SENIOR CIVIL JUDGE AT MALUR**

**EX.No. 5/2021**

**Decree Holders: Sri. Anjinappa,** Dead by LRs & others. -V/S-

**Judgment debtors: K.T. Venkatesh,** Dead by LRs & others

**Summons to Judgment Debtors**

**JDR No. 2: Smt. Meenakshi,** W/o Late K.T. Venkatesh, Aged about 65 years. **3. Sri. K.V. Vasu,** S/o Late K.T. Venkatesh, Aged about 45 years. **4. Sri. K.V. Venugopal,** S/o Late K.T. Venkatesh, Aged about 43 years, **5. Sri. K.V. Praveen,** S/o Late K.T. Venkatesh, Aged about 36 years. All are R/o: Door No. 131, T.Ramaiah Garden, SOS Post, Bannerghatta Road, Bangalore - 83. Also R/o: 9th Cross, 3rd Main, Old No.193, 4-1, New Door No.24:1, Wilson Garden, Bangalore 27.

Whereas the DHR / plaintiff has instituted the above case against you for the relief of Specific Performance of Contract in OS No.29/1993 and suit was decreed on 30.09.2004 in respect of the below mentioned properties:-

1) **Sy.No.60:** measuring 2 acre 13 gutnas, bounded on:- **East by:** Landed properties of Gopalappa and Muniyappa, **West by:** Sy.No.61 belongs to Ramaiah, **North by :** Shambukere, **South by :** Suggandahalli Limits. Situated at: Shamasetty Halli Village, Masthi Hobli, Malur Taluk.

2) **Sy.No.55:** measuring 1 acre, bounded on:- **East by:** Shamasettyhalli Gadi limits, **West by:** Thimmarayappa's Wet land, now Mariyappa's Land, **North by :** Remaining land in Sy.No.55 and Kodihalla, **South by :** Suggandahalli Limits and S.M. Venkataronappa now his sons. Situated at Chowra Mangala Village, Masthi Hobli, Malur Taluk.

3) Land measuring 1 acre 30 guntas of land and adjoining and attached area of Shamashettyhalli Tank, Chowramangala Village, Masthi Hobli, Malur Taluk, which has been confirmed by the Special Deputy Commissioner Kolar in favour of deceased K.T. Venkatesh JDR No.1 bounded on: **East by:** Shambu Kere, **West by:** Remaining Land, **North by:** Tank bed, **South by :** Sy.No.60.

Thereby you are hereby cause notice to appear in this court in persons or by a pleader on **23/8/2024** at about 11.00 A.M to answer the same, failing which the suit will be disposed off exparte.

Given under my hand and seal of this court on this 19th day of July 2024.

By the order of the Court, Chief Ministrial Officer, Senior Civil Judge Court, Malur.

**R.V. Narayana Kumar,** Advocate, Annereddy Building, Opp. Kamadhenu Paradise, Malur 563130, Kolar District. Karnataka



**NOTICE INVITING APPLICATION FOR ALLOTMENT OF REGIMENTAL SHOP (FOOT WEAR SHOP) AT CMP CENTRE AND SCHOOL, BANGALORE**

1. Commandant, CMP Centre and School, Hosur Road, Bangalore - 560025 invites applications for allotment of Regimental Shop (Foot Wear Shop) on rental and rebate basis at this establishment as per following PRIORITY:-
   (a) War Widows / Widows of defence personnel killed while on duty.
   (b) Disabled Soldier
   (c) Ex-servicemen
   (d) Spouses / Widows of Ex-servicemen.
2. Details of Shops available for rent purpose is given out in Application form which may be obtained by paying application fee of Rs 100/- (Non-refundable ) on any working day:-
   (a) Issue of Application form: 22 Jul 2024 to 05 Aug 2024 (From 0900h to 1400h)
   (b) Date of receipt of filled application form : 05 Aug 2024 (upto 1100h) at Control Room of CMP Centre and School.
   (c) DD for Rs 500/- (Rupees five hundred only) in favour of Regimental Fund Acct, CMP Centre and School (Account No 0435101014834, IFSC – CNRB0000435) payable at Canara Bank, Neelasandra, Bangalore.
   (d) Documents to be attached with the application are explained in the application itself.
3. Applications are available at PRI Branch of CMP Centre and School.



## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಪ್ರಾಂಶುಪಾಲರ ಕಾರ್ಯಾಲಯ, ಜಿಲ್ಲಾ ತರಬೇತಿ ಕೇಂದ್ರ, ಕೋಲಾರ, (ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ ಹಿಂಭಾಗ, ಬಂಗಾರಪೇಟೆ ರಸ್ತೆ, ಕೋಲಾರ)

**ಇ-ಟೆಂಡರ್/ ಟೆಂಡರ್ ಪ್ರಕಟಣೆ**

(1) ಕೋಲಾರ ಜಿಲ್ಲಾ ತರಬೇತಿ ಕೇಂದ್ರ ಇಲ್ಲಿ 2024-25ನೇ ಸಾಲಿನಲ್ಲಿ ನಡೆಯುವ ಆರೋಗ್ಯ ಇಲಾಖೆಯ ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ತರಬೇತಿಗಳಿಗೆ ಭಾಗವಹಿಸುವ ಶಿಭಿರಾರ್ಥಿಗಳಿಗೆ ಊಟೋಪಚಾರ ಸೌಲಭ್ಯವನ್ನು ಒದಗಿಸಲು ಅರ್ಹ ಬಿಡ್‌ದಾರರಿಂದ ಟೆಂಡರ್ ಸಂಖ್ಯೆ: DTC/KLR/FOOD TENDER/01/2024-25, **ದಿನಾಂಕ: 22.07.2024 ರಂತೆ KPPP Portal ಮೂಲಕ ಬಿಡ್‌ಗಳನ್ನು ಆಹ್ವಾನಿಸಲಾಗಿದ್ದು,** ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದಾಗಿದೆ. (2) ಕೋಲಾರ ಜಿಲ್ಲಾ ತರಬೇತಿ ಕೇಂದ್ರ ಇಲ್ಲಿ 2024-25ನೇ ಸಾಲಿನಲ್ಲಿ ತರಬೇತಿ ಕಾರ್ಯಕ್ರಮಗಳಿಗೆ ಭಾಗವಹಿಸುವ ಶಿಭಿರಾರ್ಥಿಗಳಿಗೆ ಲೇಖನ/ಲೇಖನೇತರ ಸಾಮಾಗ್ರಿಗಳನ್ನು ಹಾಗೂ ಜೆರಾಕ್ಸ್ / ಇತರೆ ಮುದ್ರಿತ ಸಾಮಾಗ್ರಿಗಳನ್ನು ಒದಗಿಸಲು ಅರ್ಹ/ಆಸಕ್ತ ಗುತ್ತಿಗೆದಾರರಿಂದ ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಟೆಂಡರ್ ನಮೂನೆಯನ್ನು **ದಿನಾಂಕ: 22.07.2024 ರಿಂದ 08.08.2024 ರ ಸಂಜೆ 5:00 ಗಂಟೆಯವರಗೆ** ಕಛೇರಿ ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 08.08.2024 ರಂದು ಸಂಜೆ 5:30 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗೆ ಈ ತರಬೇತಿ ಕೇಂದ್ರದ ಕಛೇರಿ ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

**ಸಹಿ/- ಪ್ರಾಂಶುಪಾಲರು, ಜಿಲ್ಲಾ ತರಬೇತಿ ಕೇಂದ್ರ, ಕೋಲಾರ**

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:115/ಕೆಎಸ್‌ಎಂಸಿಎ/2024-25



## ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ

ಜಿಲ್ಲಾ ಪಂಚಾಯತ್ ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಛೇರಿ, ನಂ. 207,
ಜಿಲ್ಲಾಡಳಿತ ಭವನ, ಬೀರಸಂದ್ರ, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ,
ದೂರವಾಣಿ : 080-2978 7452, ಇ-ಮೇಲ್ : rchobangalorerural@gmail.com

ಸಂಖ್ಯೆ : N.H.M./R.C.H./BR/14/2024-25 ದಿನಾಂಕ : 19-07-2024

**ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)**

ದ್ವಿ ಲಕೋಟೆ ಪದ್ದತಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆರೋಗ್ಯ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದ 15ನೇ ಹಣಕಾಸು ಆಯೋಗದ ಅನುದಾನದಡಿ ಜಿಲ್ಲೆಯಲ್ಲಿ ಗರ್ಭಿಣಿ ಮಹಿಳೆಯರಿಗೆ **FT4, TSH & Vitamin 12 Services** ಗಳನ್ನು ಮಾಡಲು ದ್ವಿ-ಲಕೋಟೆ ಪದ್ದತಿಯಲ್ಲಿ ಕೆಳಕಂಡಂತೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತರು ವೆಬ್‌ಸೈಟ್ : **https://kppp.karnataka.gov.in** ರ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಬಹುದು.

ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ಈ ಕೆಳಕಂಡಂತಿದೆ

1) ಟೆಂಡರ್ ಪ್ರಕಟಣೆ ಸಂಖ್ಯೆ : DHFWS/2024-25/SE0908, 2) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ : 20-07-2024, 3) ಟೆಂಡರ್ ಫಾರಂಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ : 03-08-2024, 4) ಟೆಂಡರ್‌ನ ಅಂದಾಜು ಮೊತ್ತ : ರೂ. 15.73 ಲಕ್ಷ, 5) ಇ.ಎಂ.ಡಿ. ಮೊತ್ತ : ರೂ. 39,325/-, 6) ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ (ತಾಂತ್ರಿಕ ಬಿಡ್) : 05-08-2024, 7) ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ (ಆರ್ಥಿಕ ಬಿಡ್) : ಯಶಸ್ವಿ ಟೆಂಡರ್‌ದಾರರುಗಳಿಗೆ ತಿಳಿಸಲಾಗುವುದು, 8) ಟೆಂಡರ್ ತೆರೆಯುವ ಸ್ಥಳ (Online Bid Opening) : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, # 207, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು.

ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/998/2024-25



(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)

## ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಛೇರಿ

(ಜಿಲ್ಲಾ ಅಂಧತ್ವ ನಿವಾರಣಾಧಿಕಾರಿಗಳ ಕಛೇರಿ, ಜಿಲ್ಲಾ ಮಾನಸಿಕ ಆರೋಗ್ಯಾಧಿಕಾರಿಗಳ ಕಛೇರಿ)
ಜಿ.ಬಿ.3, ನೆಲ ಮಹಡಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ಜಿಲ್ಲೆ.
**Mail ID: dlocbpur@gmail.com, Phone: 08156-277035/9740320812**

ಸಂಖ್ಯೆ: ಡಿ.ಎಲ್.ಓ/ಎನ್.ಪಿ.ಸಿ.ಬಿ/ಕನ್ನಡಕ/ಟೆಂಡರ್/11/2024-25 ದಿನಾಂಕ: 15.07.2024

**ಇ-ಟೆಂಡರ್ ಅಧಿಸೂಚನೆ**

2023-24 ನೇ ಸಾಲಿನ ಆಶಾಕಿರಣ ಕಾರ್ಯಕ್ರಮದ ಅಡಿಯಲ್ಲಿ 19-39 ರ ವಯಸ್ಸಿನವರಲ್ಲಿ ದೃಷ್ಠಿದೋಷವಿರುವವರಿಗೆ ಕನ್ನಡಕಗಳನ್ನು ಖರೀದಿಸಲು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಧಿಕೃತ ಕಂಪನಿ ಮತ್ತು ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ವೇಳಾಪಟ್ಟಿ ಕೆಳಕಂಡಂತಿದೆ. (1) ಟೆಂಡರ್‌ಗಳ ಪ್ರಾರಂಭದ ದಿನಾಂಕ: **15.07.2024** (2) ಪ್ರೀ ಬಿಡ್ ಸಭೆ ದಿನಾಂಕ: **19.07.2024 ಬೆಳಿಗ್ಗೆ 12.30 ಗಂಟೆಗೆ.** (3) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ **05.08.2024 ಸಂ.4:00** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **06.08.2024 ಸಂ.4:01 ಗಂಟೆಗೆ.** (5) ಸಾಧ್ಯವಾದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: **12.08.2024 ಬೆಳಿಗ್ಗೆ 11:30 ಗಂಟೆಗೆ.** (6) ಕಾರ್ಯಕ್ರಮಗಳು: (a) **ಆಶಾಕಿರಣ ಕಾರ್ಯಕ್ರಮದ ಅಡಿಯಲ್ಲಿ 19-39 ರ ವಯಸ್ಸಿನವರಲ್ಲಿ ದೃಷ್ಠಿದೋಷವಿರುವವರಿಗೆ ಕನ್ನಡಕಗಳ ಖರೀದಿಗಾಗಿ.** ಟೆಂಡರ್ ಮೊತ್ತ: **ರೂ. 94,61000/-.** ಇ.ಎಂ.ಡಿ (Variable): **ರೂ. 1,89,220/-.** ಹೆಚ್ಚಿನ ವಿವರಗಳನ್ನು **http://https://kppp.karnataka.gov.in/#/potal/portal-home** ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳು,
(ಅಂಧತ್ವ & ಮಾನಸಿಕ ಕಾರ್ಯಕ್ರಮಾಧಿಕಾರಿಗಳು), ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 99/ಕೆ.ಎಸ್.ಎಂ.ಸಿ.ಎ/2024-25

ಕೆಪಿಸಿಎಲ್ 55ನೇ ಸಂಸ್ಥಾಪನಾ ದಿನಾಚರಣೆ

‘ಮಳೆ ಕೊರತೆ ಉಂಟಾಗಿದ್ದರಿಂದ ಜಲ ವಿದ್ಯುತ್ ಉತ್ಪಾದನೆಯಲ್ಲಿ ಸಮಸ್ಯೆಯಾಗಿತ್ತು. ಈ ಕೊರತೆಯನ್ನು ಉಷ್ಣ ವಿದ್ಯುತ್ ಸ್ಥಾವರಗಳು ನೀಗಿಸಿದವು’

## ‘ದಾಖಲೆಯ ವಿದ್ಯುತ್ ಉತ್ಪಾದನೆ’

**ಬೆಂಗಳೂರು:** ರಾಜ್ಯದ ಉಷ್ಣ ವಿದ್ಯುತ್ ಸ್ಥಾವರಗಳು ಈ ವರ್ಷ ದಾಖಲೆಯ ವಿದ್ಯುತ್ ಉತ್ಪಾದನೆ ಮಾಡಿದ್ದರಿಂದ ರಾಜ್ಯದಲ್ಲಿ ವಿದ್ಯುತ್ ಕೊರತೆ ಆಗದಂತೆ ನೋಡಿಕೊಳ್ಳಲು ಸಾಧ್ಯವಾಯಿತು ಎಂದು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ತಿಳಿಸಿದರು.

ಗೌರವ್ ಗುಪ್ತ

ಕೆಪಿಸಿಎಲ್‌ನ 55ನೇ ಸಂಸ್ಥಾಪನಾ ದಿನಾಚರಣೆಯನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಹಳೆಯ ಘಟಕಗಳಲ್ಲೂ ಹೆಚ್ಚು ಉತ್ಪಾದನೆ ಮಾಡುವ ಮೂಲಕ ರಾಜ್ಯದ ಉಷ್ಣ ವಿದ್ಯುತ್ ಸ್ಥಾವರಗಳು ದೇಶದಲ್ಲೇ ಮೆಚ್ಚುಗೆ ಗಳಿಸಿದವು ಎಂದು ವಿವರಿಸಿದರು.

ಇದೀಗ, ಬಿಡದಿಯಲ್ಲಿ ತ್ಯಾಜ್ಯದಿಂದ ವಿದ್ಯುತ್... ಹೀಗೆ ನಾನಾ ಹೊಸ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಸಂಬಂಧ ಏಳೆಂಟು ಖಾಸಗಿ ಕಂಪನಿಗಳ ಜತೆ ಮಾತುಕತೆ ನಡೆಸಲಾಗಿತ್ತಾದರೂ ಯೋಜನೆ ಜಾರಿಗೊಳಿಸಲು ಅವರಿಂದ ಸಾಧ್ಯವಾಗಲಿಲ್ಲ. ಕೆಪಿಸಿಎಲ್ ಈ ಕಾರ್ಯದಲ್ಲಿ ಯಶಸ್ವಿಯಾಗಿದೆ. ಬಿಡದಿಯಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕದಲ್ಲಿ ಉತ್ಪಾದನೆ ಪ್ರಾಯೋಗಿಕವಾಗಿ ಆರಂಭವಾಗಿದೆ ಎಂದು ತಿಳಿಸಿದರು.

‘ರಾಜ್ಯದಲ್ಲಿ 32 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಇದನ್ನು ಮುಂದಿನ ಏಳು ವರ್ಷಗಳಲ್ಲಿ 60 ಸಾವಿರ ಮೆಗಾವಾಟ್‌ಗೆ ಹೆಚ್ಚಿಸುವ ಬಗ್ಗೆ ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಘೋಷಿಸಿದ್ದಾರೆ. ಅದಕ್ಕೆ ಪೂರಕವಾಗಿ ಜಲ, ಉಷ್ಣ, ಪವನ, ಸೌರ ವಿದ್ಯುತ್ ಸೇರಿದಂತೆ ವಿವಿಧ ಮೂಲಗಳಿಂದ ಹೆಚ್ಚಿನ ವಿದ್ಯುತ್ ಉತ್ಪಾದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ಮುಂಗಾರು ಮಳೆಯ ಬೆನ್ನಲ್ಲಿಯೇ ಜ್ವರ ಸಂಬಂಧಿ ಪ್ರಕರಣಗಳ ಸಂಖ್ಯೆ ಏರಿಕೆ

# ಡೆಂಗಿ ಜತೆ ಸೋಂಕು ರೋಗ ಹೆಚ್ಚಳ

• ವರುಣ ಹೆಗಡೆ

**ಬೆಂಗಳೂರು:** ರಾಜ್ಯದಲ್ಲಿ ಈ ವರ್ಷ ಡೆಂಗಿ ಪ್ರಕರಣಗಳು ಹೆಚ್ಚುತ್ತಿರುವುದರ ಜತೆಯಲ್ಲೇ ವಿವಿಧ ಸೋಂಕು ರೋಗಗಳೂ ಜನರನ್ನು ಕಾಡುತ್ತಿವೆ. ಮುಂಗಾರು ಮಳೆ ಆರಂಭವಾದ ಬಳಿಕ ವೈರಾಣು ಜ್ವರ ಸೇರಿದಂತೆ ಸೋಂಕು ರೋಗಗಳಿಂದ ಬಳಲುತ್ತಿರುವವರ ಸಂಖ್ಯೆಯೂ ಏರುಗತಿಯಲ್ಲಿದೆ.

ಬಿಸಿಲು–ಮಳೆಯ ವಾತಾವರಣದಿಂದ ಹೆಚ್ಚಿನವರು ಶೀತ–ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆಗೆ ಒಳಗಾಗಿ, ಆಸ್ಪತ್ರೆಗಳಿಗೆ ಬರುತ್ತಿದ್ದಾರೆ. ರೋಗದ ಲಕ್ಷಣಗಳನ್ನು ಆಧರಿಸಿ ಆಸ್ಪತ್ರೆಗಳಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಕಳೆದ ಒಂದು ತಿಂಗಳಿಂದ ಡೆಂಗಿ ಜತೆಗೆ ಪ್ರಾಣಿಗಳ ಮೂಲಕ ಹರಡುವ ಬ್ಯಾಕ್ಟೀರಿಯಾ ಸೋಂಕು (ಲೆಪ್ಟೊಸ್ಪಿರೋಸಿಸ್) ಹಾಗೂ ಅತಿಸಾರ ಪ್ರಕರಣಗಳು ಏರುಗತಿಯಲ್ಲಿವೆ. ಇನ್ನೊಂದೆಡೆ ಮಲೇರಿಯಾ ಸೇರಿ ವಿವಿಧ ರೋಗಗಳ ಶಂಕೆ ಕಾರಣ ಪರೀಕ್ಷೆಗೆ ಒಳಪಡುವವರು ಹೆಚ್ಚಾಗಿದ್ದಾರೆ. ಇದರಿಂದಾಗಿ ಆಸ್ಪತ್ರೆಗಳಲ್ಲಿಯೂ ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿದೆ.

ರಾಜ್ಯದಲ್ಲಿ ಸದ್ಯ ಮಲೇರಿಯಾ ನಿಯಂತ್ರಣದಲ್ಲಿದೆ. ಆದರೆ, ಜ್ವರಪೀಡಿತರಲ್ಲಿ ಈ ರೋಗ ಇರಬಹುದೆಂದು ಶಂಕಿಸಲಾಗಿದೆ. ಜೂನ್ ತಿಂಗಳಲ್ಲಿಯೇ ಮಲೇರಿಯಾ ಪತ್ತೆಗಾಗಿ 12.04 ಲಕ್ಷ ಮಂದಿಗೆ ಪರೀಕ್ಷೆ ನಡೆಸಲಾಗಿದೆ. ಈ ವರ್ಷ ಒಟ್ಟು 57.51 ಲಕ್ಷ ಮಂದಿ ಪರೀಕ್ಷೆಗೆ ಒಳಪಟ್ಟಿದ್ದಾರೆ.

### ನಾಯಿ, ಹಾವು ಕಡಿತ

ರಾಜ್ಯದಲ್ಲಿ ನಾಯಿ ಹಾಗೂ ಹಾವು ಕಡಿತ ಸಂಬಂಧ ಆಸ್ಪತ್ರೆಗಳಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಿದೆ. ಈ ವರ್ಷ 1.81 ಲಕ್ಷ ಮಂದಿ ನಾಯಿ ಕಡಿತಕ್ಕೆ ಒಳಗಾಗಿದ್ದು, ಒಬ್ಬರು ಮೃತಪಟ್ಟಿದ್ದಾರೆ. ಕಳೆದ ವರ್ಷ 2.32 ಲಕ್ಷ ಮಂದಿ ನಾಯಿ ಕಡಿತಕ್ಕೆ ಒಳಗಾಗಿದ್ದರು. ನಾಲ್ವರು ಮೃತಪಟ್ಟಿದ್ದರು.

ಹಾವು ಕಡಿತ ಪ್ರಕರಣಗಳು ಈ ವರ್ಷ ಹೆಚ್ಚಿದ್ದು, ಈಗಾಗಲೇ 5,918 ಮಂದಿ ಹಾವು ಕಡಿತದಿಂದ ಬಳಲಿದ್ದಾರೆ. 39 ಮಂದಿ ಮೃತಪಟ್ಟಿದ್ದಾರೆ. ಕಳೆದ ವರ್ಷ 6,595 ಮಂದಿ ಹಾವು ಕಡಿತಕ್ಕೆ ಒಳಗಾಗಿ, 19 ಮಂದಿ ಸಾವಿಗೀಡಾಗಿದ್ದರು.

**ಜ್ವರ ಪೀಡಿತರಿಗೆ ರೋಗ ಪತ್ತೆಗೆ ಪರೀಕ್ಷೆ ನಡೆಸಲಾಗುತ್ತಿದೆ. ವೈರಾಣು ಜ್ವರ ಸೇರಿ ವಿವಿಧ ಅನಾರೋಗ್ಯ ಸಮಸ್ಯೆ ಸಂಬಂಧ ಆಸ್ಪತ್ರೆಗಳಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಳವಾಗಿದೆ**

**ಡಿ. ರಂದೀಪ್,** ಆರೋಗ್ಯ ಇಲಾಖೆ ಆಯುಕ್ತ

2018ರಲ್ಲಿ ರಾಜ್ಯದಲ್ಲಿ 5,289 ಮಲೇರಿಯಾ ಪ್ರಕರಣಗಳು ವರದಿಯಾಗಿದ್ದವು. ಕಳೆದ ವರ್ಷ 249 ಮಂದಿಯಲ್ಲಿ ಈ ರೋಗ ದೃಢಪಟ್ಟಿತ್ತು.

**ಲಕ್ಷದತ್ತ ಅತಿಸಾರ:** ಕಲುಷಿತ ನೀರು ಮತ್ತು ಆಹಾರ ಸೇವನೆಯಿಂದ ರಾಜ್ಯದಲ್ಲಿ ಅತಿಸಾರ (ಡಯೇರಿಯಾ) ಪ್ರಕರಣಗಳು ಮಾರ್ಚ್ ತಿಂಗಳಿಂದ ಏರಿಕೆಯ ಹಾದಿಯಲ್ಲಿವೆ. ಕಳೆದೊಂದು ತಿಂಗಳಿಂದ ಪ್ರತಿವಾರ ಸರಾಸರಿ ಐದು ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ. ಇದರಿಂದ ಒಟ್ಟು ಪ್ರಕರಣಗಳ ಸಂಖ್ಯೆ ಲಕ್ಷದ ಗಡಿಗೆ ದಾಟಿದೆ. ಲೆಪ್ಟೊಸ್ಪಿರೋಸಿಸ್ ಸೋಂಕು ರೋಗವೂ ಜೂನ್ ತಿಂಗಳಲ್ಲಿ ಹೆಚ್ಚಳವಾಗಿದ್ದು, ಕೊನೆಯ ವಾರದಲ್ಲಿ 78 ಮಂದಿಯಲ್ಲಿ ಈ ರೋಗ ದೃಢಪಟ್ಟಿದೆ. ಈವರೆಗೆ 5 ಸಾವಿರಕ್ಕೂ ಅಧಿಕ ಮಂದಿಗೆ ಈ ರೋಗ ಪತ್ತೆ ಸಂಬಂಧ ಪರೀಕ್ಷೆ ನಡೆಸಲಾಗಿದೆ.

ಈ ವರ್ಷದ ಆರಂಭದಲ್ಲಿ ಹೆಚ್ಚಿನ ಜನರು ಸಾರಿ (ತೀವ್ರ ಉಸಿರಾಟದ ಸಮಸ್ಯೆ) ಸಮಸ್ಯೆಗೆ ಒಳಗಾಗಿದ್ದರು. ಜನವರಿ ತಿಂಗಳಲ್ಲಿ ಪ್ರತಿ ವಾರ ದೃಢಪಡುತ್ತಿದ್ದ ಪ್ರಕರಣಗಳ ಸಂಖ್ಯೆ 500ರ ಆಸುಪಾಸಿನಲ್ಲಿತ್ತು. ಈಗ ಆ ಸಂಖ್ಯೆ ನೂರರ ಗಡಿಯೊಳಗಿದೆ. ಮಾರ್ಚ್ ಬಳಿಕ ಏರಿಕೆ ಪಡೆದಿದ್ದ ಶೀತ ಜ್ವರ ಮಾದರಿ ಅನಾರೋಗ್ಯ ಸಮಸ್ಯೆ (ಐಎಲ್ಐ), ಮೇ ಬಳಿಕ ಇಳಿಕೆ ಕಂಡಿದೆ. ಈ ಸಮಸ್ಯೆ ಪತ್ತೆ ಸಂಬಂಧ ಈವರೆಗೆ 4 ಸಾವಿರಕ್ಕೂ ಅಧಿಕ ಮಂದಿಗೆ ಪರೀಕ್ಷೆ ಮಾಡಲಾಗಿದೆ.

**ಸೋಂಕು ರೋಗಗಳ ವಿವರ**

| ರೋಗಗಳು | ದೃಢ ಪ್ರಕರಣ |
|---|---|
| ಸಾರಿ (ತೀವ್ರ ಉಸಿರಾಟದ ಸಮಸ್ಯೆ) | 4,926 |
| ಐಎಲ್ಐ (ಶೀತ ಜ್ವರ ಮಾದರಿ ಅನಾರೋಗ್ಯ) | 694 |
| ಅತಿಸಾರ (ಡಯೇರಿಯಾ) | 98,916 |
| ಬ್ಯಾಕ್ಟೀರಿಯಾ ಸೋಂಕು (ಲೆಪ್ಟೊಸ್ಪಿರೋಸಿಸ್) | 704 |
| ಮಂಗನ ಕಾಯಿಲೆ (ಕೆಎಫ್‌ಡಿ) | 355 |
| ಮಲೇರಿಯಾ | 142 |
| ಡಿಫ್ತೀರಿಯಾ (ಗಂಟಲಮಾರಿ) | 89 |
| ದಡಾರ | 598 |

## ‘ಡಿಸಿಎಂ ಹುದ್ದೆ ಬಗ್ಗೆ ಸ್ಟಾಲಿನ್ ನಿರ್ಧರಿಸುತ್ತಾರೆ’

**ಚೆನ್ನೈ (ಪಿಟಿಐ):** ಉಪಮುಖ್ಯಮಂತ್ರಿ ಆಗುವ ಸಾಧ್ಯತೆಯ ವರದಿಗಳನ್ನುತಳ್ಳಿ ಹಾಕಿದ ಸಚಿವ ಉದಯನಿಧಿ ಸ್ಟಾಲಿನ್ ಅವರು, ‘ಮುಖ್ಯಮಂತ್ರಿ ಸ್ಟಾಲಿನ್ ಅವರೇ ಈ ವಿಷಯವನ್ನು ನಿರ್ಧರಿಸಬೇಕು’ ಎಂದು ಹೇಳಿದರು.

ಉದಯನಿಧಿ

ಚೆನ್ನೈನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನನ್ನನ್ನು ರಾಜ್ಯದ ಉಪ ಮುಖ್ಯಮಂತ್ರಿ ಮಾಡಲಾಗುತ್ತದೆ ಎಂಬ ಊಹಾಪೋಹಗಳ ಕುರಿತು ಪ್ರಶ್ನಿಸುವ ಮಾಧ್ಯಮದವರಿಗೆ ನಾನು ಹೇಳುವುದೆಂದರೆ, ರಾಜ್ಯದ ಎಲ್ಲಾ ಸಚಿವರು, ಪಕ್ಷದ ಪದಾಧಿಕಾರಿಗಳು ಮತ್ತು ಯುವ ಘಟಕದ ಪದಾಧಿಕಾರಿಗಳು ಮುಖ್ಯಮಂತ್ರಿಗಳ ಉಪನಾಯಕರಾಗಿ ಕೆಲಸ ಮಾಡುತ್ತಿದ್ದಾರೆ’ ಎಂದು ಅವರು ತಿಳಿಸಿದರು.

ಇದಕ್ಕೂ ಮುನ್ನ ಡಿಎಂಕೆ ಯುವ ಘಟಕದ 45ನೇ ಸಂಸ್ಥಾಪನಾ ದಿನದಂದು ಮಾತನಾಡಿದ ಅವರು ‘ಯುವ ಘಟಕದ ಕಾರ್ಯದರ್ಶಿ ಹುದ್ದೆಯು ತಮ್ಮ ಹೃದಯಕ್ಕೆ ಹತ್ತಿರವಾದ ಕೆಲಸ’ ಎಂದರು. ಸದ್ಯ ಉದಯನಿಧಿ ಅವರು ಯುವಜನ ಕಲ್ಯಾಣ ಮತ್ತು ಕ್ರೀಡಾ ಅಭಿವೃದ್ಧಿ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಭೋವಿ ಗುರುಪೀಠದ ಶ್ರೀಗಳ ದೀಕ್ಷಾ ರಜತ ಮಹೋತ್ಸವ

# ಗುಲಾಮಗಿರಿ ಮನಃಸ್ಥಿತಿ ಜೀವಂತ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

**ಚಿತ್ರದುರ್ಗ:** ‘ಶತಮಾನಗಳಿಂದಲೂ ದಾಸ್ಯ, ಗುಲಾಮಗಿರಿ ವ್ಯವಸ್ಥೆ ಇದ್ದ ಕಾರಣ ಅದರಿಂದ ಇಂದಿಗೂ ಹೊರಬರಲು ಸಾಧ್ಯವಾಗಿಲ್ಲ. ಗುಲಾಮಗಿರಿ ಮನಃಸ್ಥಿತಿ ಈಗಲೂ ಜೀವಂತವಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಚಿತ್ರದುರ್ಗದಲ್ಲಿ ನಡೆದ ದೀಕ್ಷಾ ರಜತ ಮಹೋತ್ಸವದಲ್ಲಿ ಭೋವಿ ಗುರುಪೀಠದ ಪೀಠಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೂವಿನ ಪಕಳೆಗಳನ್ನು ಸುರಿಸಿದರು. ಸಚಿವರಾದ ಸತೀಶ್ ಜಾರಕಿಹೊಳಿ, ಶಿವರಾಜ ತಂಗಡಗಿ ಹಾಗೂ ಡಿ.ಸುಧಾಕರ್ ಉಪಸ್ಥಿತರಿದ್ದರು

ನಗರದ ಹೊರವಲಯದ ಭೋವಿ ಗುರುಪೀಠದ ಆವರಣದಲ್ಲಿ ಶನಿವಾರ ನಡೆದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ದೀಕ್ಷಾ ರಜತ ಮಹೋತ್ಸವದಲ್ಲಿ ಅವರು ಮಾತನಾಡಿದರು.

‘ಮೇಲ್ಜಾತಿಯವರು ಎಷ್ಟೇ ಬಡವರಾಗಿದ್ದರೂ ಅವರು ಸಿಕ್ಕಾಗ ಬುದ್ಧಿ, ಸ್ವಾಮಿ ಎಂದು ಮಾತನಾಡಿಸುತ್ತಾರೆ. ಆದರೆ ಕೆಳಜಾತಿಯವರು ಶ್ರೀಮಂತರಾಗಿದ್ದರೂ ಅವರನ್ನು ಕಂಡಾಗ ಏಕ ವಚನದಲ್ಲಿ ಮಾತನಾಡುತ್ತಾರೆ. ಇದೇ ಗುಲಾಮಗಿರಿ ಮನಃಸ್ಥಿತಿ’ ಎಂದರು.

‘ಗುಲಾಮಗಿರಿ ಮನಃಸ್ಥಿತಿಯಿಂದ ಹೊರಬಂದು ಸ್ವಾಭಿಮಾನದಿಂದ ಬದುಕುವ ವಾತಾವರಣ ನಿರ್ಮಾಣವಾಗಬೇಕು. ಶಿಕ್ಷಣ, ಸಂಘಟನೆ ಹಾಗೂ ಹೋರಾಟದ ಮೂಲಕ ಸಮ ಸಮಾಜ ನಿರ್ಮಾಣ ಮಾಡಬೇಕು’ ಎಂದರು.

‘ಭೋವಿ ಅಭಿವೃದ್ಧಿ ನಿಗಮದ ಸೌಲಭ್ಯಗಳು ಅನ್ಯರ ಪಾಲಾಗುವುದನ್ನು ತಪ್ಪಿಸಲು ನಿಗಮವನ್ನು ಭೋವಿ–ವಡ್ಡರ ಅಭಿವೃದ್ಧಿ ನಿಗಮವೆಂದು ಮರು ನಾಮಕರಣ ಮಾಡಬೇಕು. ಪ್ರತಿ ವರ್ಷ ನಿಗಮಕ್ಕೆ ₹500 ಕೋಟಿ ಅನುದಾನ ನೀಡಬೇಕು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಒತ್ತಾಯಿಸಿದರು.

‘ವಿಧಾನ ಪರಿಷತ್‌ಗೆ ಭೋವಿ ಸಮಾಜದ ಮುಖಂಡರೊಬ್ಬರನ್ನು ನಾಮ ನಿರ್ದೇಶನ ಮಾಡಬೇಕು. ಗಣಿ ಗುತ್ತಿಗೆ, ಕ್ರಷರ್ ಸ್ಥಾಪನೆಯಲ್ಲಿ ಭೋವಿ ಸಮಾಜದ ಸದಸ್ಯರಿಗೆ ಮೀಸಲಾತಿ ನೀಡಬೇಕು’ ಎಂದು ಆಗ್ರಹಿಸಿದರು.

ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯವರ ಮೇಲೆ ವಿವಿಧ ಹೂಗಳ ಪಕಳೆಯನ್ನು ಸುರಿಸುವ ಮೂಲಕ ಅಭಿನಂದಿಸಲಾಯಿತು. ಭೋವಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು, ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ಇದಕ್ಕೂ ಮೊದಲು ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ ಅವರು ಸ್ವಾಮೀಜಿಯನ್ನು ಅಭಿನಂದಿಸಿದರು.

# ‘ಗ್ಯಾರಂಟಿ’ಗಳಿಗೆ ಪರಿಶಿಷ್ಟರ ಹಣ: ವಿರೋಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕಲ್ಯಾಣಕ್ಕೆ ಮೀಸಲಿಟ್ಟ ಅನುದಾನವನ್ನು ‘ಗ್ಯಾರಂಟಿ’ ಯೋಜನೆಗಳಿಗೆ ಬಳಸುವುದನ್ನು ವಿರೋಧಿಸಿ ರಾಜ್ಯ ಸರ್ಕಾರದ ವಿರುದ್ಧ ಹೋರಾಟ ನಡೆಸಲು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ನಿರ್ಧರಿಸಿದೆ.

‘ಪರಿಶಿಷ್ಟ ಜಾತಿ ವಿಶೇಷ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಯೋಜನೆಗಳಡಿ (ಟಿಎಸ್‌ಪಿ) ಮೀಸಲಿಟ್ಟ ಹಣದಲ್ಲಿ ಗ್ಯಾರಂಟಿಗೆ 2023–24ನೇ ಸಾಲಿನಲ್ಲಿ ₹11,000 ಕೋಟಿ ಬಳಸಿದೆ. 2024–25ನೇ ಸಾಲಿನಲ್ಲಿ ₹14,000 ಕೋಟಿ ಬಳಸುತ್ತಿದೆ. ಈ ಯೋಜನೆಗಳನ್ನು ನಾವೇ ಮಾಡಿದ್ದು ಎಂದು ಹೇಳಿಕೊಳ್ಳುತ್ತಿರುವ ಸರ್ಕಾರ ಪರಿಶಿಷ್ಟರಿಗೆ ದ್ರೋಹ ಬಗೆಯುತ್ತಿದೆ’ ಎಂದು ಒಕ್ಕೂಟದ ಮಾವಳ್ಳಿ ಶಂಕರ್, ಇಂದೂಧರ ಹೊನ್ನಾಪುರ ಸುದ್ದಿಗೋಷ್ಠಿಯಲ್ಲಿ ಶನಿವಾರ ಅಸಮಾಧಾನ ವ್ಯಕ್ತಪಡಿಸಿದರು.

‘ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ಹೊರಟಿದ್ದ ಆರ್‌ಎಸ್‌ಎಸ್–ಬಿಜೆಪಿಯನ್ನು ಸೋಲಿಸಬೇಕು ಎಂಬ ಕಾರಣಕ್ಕೆ ನಾವು ಸಮಾವೇಶ ಮಾಡಿ ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿದ್ದೆವು. ಪರಿಶಿಷ್ಟರ ಬೇಡಿಕೆಗಳನ್ನು ಈಡೇರಿಸುವ ಭರವಸೆಗಳನ್ನು ಆಗ ಕಾಂಗ್ರೆಸ್ ನೀಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಹಿಡಿದು ಎಲ್ಲ ಸಚಿವರು, ಶಾಸಕರು ಹೇಳಿದಂತೆ ನಡೆದುಕೊಂಡಿಲ್ಲ. ಪರಿಶಿಷ್ಟರ ಬೆನ್ನಿಗೆ ಚೂರಿ ಹಾಕಲು ಹೊರಟಿದ್ದಾರೆ’ ಎಂದು ಟೀಕಿಸಿದರು.

ಎಸ್‌ಸಿ/ಎಸ್‌ಟಿ ಬ್ಯಾಕ್‌ಲಾಗ್ ಉದ್ಯೋಗಗಳನ್ನು ಭರ್ತಿ ಮಾಡಿ ಎಂದು ಹೈಕೋರ್ಟ್ ಸೂಚನೆ ನೀಡಿದ್ದರೂ ಸರ್ಕಾರ ಕ್ರಮ ಕೈಗೊಂಡಿಲ್ಲ. ಗ್ಯಾರಂಟಿಗೆ ಬಳಸಿದ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ಹಿಂತಿರುಗಿಸಬೇಕು. ಕಾಯ್ದೆಯ ‘7ಡಿ’ ಸೆಕ್ಷನ್ ರದ್ದು ಮಾಡಿದಂತೆ ‘7ಸಿ’ ಸೆಕ್ಷನ್ ಅನ್ನೂ ರದ್ದು ಮಾಡಬೇಕು. ಈ ಅನುದಾನವನ್ನು ಎಸ್‌ಸಿ, ಎಸ್‌ಟಿ ಸಮುದಾಯಗಳ ಅಭಿವೃದ್ಧಿಗೆ ಬಿಟ್ಟು ಬೇರೆ ಯಾವುದಕ್ಕೂ ಬಳಸದಂತೆ ಕ್ರಮ ಕೈಗೊಳ್ಳಬೇಕು. ಕಾವಲು ಸಮಿತಿ ರಚಿಸಬೇಕು ಎಂದರು.

ಹೊರಗುತ್ತಿಗೆ ನೇಮಕಾತಿಯಲ್ಲಿ ಕಡ್ಡಾಯವಾಗಿ ರೋಸ್ಟರ್ ಪದ್ಧತಿಗೆ ಅನುಗುಣ ಮೀಸಲಾತಿ ನೀಡಬೇಕು. ಈ ಸಮುದಾಯಗಳ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಪ್ರೋತ್ಸಾಹಧನಕ್ಕೆ ವಿಧಿಸಿರುವ ಆದಾಯ ಮತ್ತು ಅಂಕಗಳ ಮಿತಿಯನ್ನು ರದ್ದು ಮಾಡಬೇಕು. ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡಲು ಇಚ್ಛಿಸುವ ದಲಿತ ವಿದ್ಯಾರ್ಥಿಗಳ ಪೂರ್ಣ ವೆಚ್ಚ ಭರಿಸಬೇಕು. ವಸತಿ ಶಾಲೆಗಳ ಪ್ರವೇಶಕ್ಕೆ ನಿಗದಿಪಡಿಸಿರುವ ಪ್ರವೇಶ ಪರೀಕ್ಷೆಗಳನ್ನು ರದ್ದು ಮಾಡಿ ಸಾಮಾಜಿಕ, ಆರ್ಥಿಕ ಮಾನದಂಡದ ಮೇಲೆ ಪ್ರವೇಶ ನೀಡಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ, ಸಮಾಜ ಕಲ್ಯಾಣ ಸಚಿವರ ನಿವಾಸಕ್ಕೆ ತೆರಳಿ ಮನವಿ ಸಲ್ಲಿಸಲಾಗುವುದು. ಎಸ್‌ಸಿ–ಎಸ್‌ಟಿ ಸಮುದಾಯಗಳ ಸಚಿವರಿಗೆ ಮನವಿ ನೀಡಲಾಗುವುದು. ಅದಕ್ಕೆ ಸ್ಪಂದಿಸದೇ ಇದ್ದರೆ ಚಳವಳಿ ರೂಪಿಸಲಾಗುವುದು. ಆಗಸ್ಟ್‌ನಲ್ಲಿ ಮೊದಲ ಹಂತದ ಹೋರಾಟ ನಡೆಸಲಾಗುವುದು ಎಂದು ಮುಖಂಡರಾದ ವಿ. ನಾಗರಾಜ್, ಎನ್. ವೆಂಕಟೇಶ್, ಮರಿಯಪ್ಪ ಹಳ್ಳಿ ಎಚ್ಚರಿಸಿದರು.

### ಸಚಿವ ಮಹದೇವಪ್ಪ ರಾಜೀನಾಮೆಗೆ ಡಿಎಸ್‌ಎಸ್ ಆಗ್ರಹ

ರಾಜ್ಯ ಸರ್ಕಾರ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಪ್ರೋತ್ಸಾಹ ಧನ ಸ್ಥಗಿತಗೊಳಿಸಿರುವುದನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ಖಂಡಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಸಂಚಾಲಕ ಆರ್. ಮೋಹನ್‌ರಾಜ್, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಎಚ್.ಸಿ. ಮಹದೇವಪ್ಪ ಅವರು ಪರಿಶಿಷ್ಟ ಜಾತಿ ಮತ್ತು ಪಂಗಡ ವಿದ್ಯಾರ್ಥಿಗಳ ಹಿತ ಕಾಪಾಡುವಲ್ಲಿ ವಿಫಲರಾಗಿದ್ದಾರೆ. ಪಿಎಚ್.ಡಿ ಹಾಗೂ ಉನ್ನತ ವ್ಯಾಸಂಗ ಮಾಡಲು ವಿದೇಶಕ್ಕೆ ತೆರಳುವ ವಿದ್ಯಾರ್ಥಿಗಳ ಸಹಾಯಧನಕ್ಕೂ ಕತ್ತರಿ ಹಾಕಲಾಗಿದೆ. ಆದ್ದರಿಂದ, ಮಹದೇವಪ್ಪ ಅವರು ಕೂಡಲೇ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು’ ಎಂದು ಆಗ್ರಹಿಸಿದರು.

## ‘ಬುಡಕಟ್ಟು ಜನಸಂಖ್ಯೆಯ ಪ್ರಮಾಣ ಇಳಿಕೆ’

**ರಾಂಚಿ (ಪಿಟಿಐ):** ಜಾರ್ಖಂಡ್‌ನಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಬುಡಕಟ್ಟು ಜನರ ಭೂಮಿ ಮತ್ತು ಹಕ್ಕುಗಳ ರಕ್ಷಣೆಗಾಗಿ ಜನಸಂಖ್ಯೆಯ ಕುರಿತು ಶ್ವೇತಪತ್ರ ಹೊರಡಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಭರವಸೆ ನೀಡಿದ್ದಾರೆ.

ಜಾರ್ಖಂಡ್‌ನ ಪ್ರಭಾತ್ ತಾರಾ ಮೈದಾನದಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅಮಿತ್ ಶಾ ಅವರು, ‘ತೀವ್ರವಾದ ಒಳನುಸುಳುವಿಕೆಯಿಂದ ಜಾರ್ಖಂಡ್‌ನಲ್ಲಿ ಬುಡಕಟ್ಟು ಜನಸಂಖ್ಯೆಯ ಪ್ರಮಾಣ ಇಳಿಕೆಯಾಗುತ್ತಿದೆ’ ಎಂದರು.

‘ಲೋಕಸಭೆ ಚುನಾವಣೆಯಲ್ಲಿ 81 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಯು 52 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಆದ್ದರಿಂದ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಗೆ ಗೆಲುವಾಗಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಮತಬ್ಯಾಂಕ್ ಮತ್ತು ಓಲೈಕೆ ನೀತಿಯ ಮೂಲಕ ಬುಡಕಟ್ಟು ಸಮುದಾಯದ ಮುಖ್ಯಮಂತ್ರಿಯವರು ಲವ್ ಜಿಹಾದ್ ಮತ್ತು ಲ್ಯಾಂಡ್ ಜಿಹಾದ್‌ಗಳಲ್ಲಿ ಭಾಗಿಯಾಗಿದ್ದಾರೆ. ಇದು ಜನಸಂಖ್ಯಾ ಸ್ವರೂಪದ ಬದಲಾವಣೆಗೆ ಕಾರಣವಾಗುತ್ತಿದೆ’ ಎಂದರು.

**ಇಂಡಿಯಾ ಮೈತ್ರಿಕೂಟ ಲೋಕಸಭೆ ಚುನಾವಣೆಯಲ್ಲಿ ಸೋತರೂ ಅಹಂಕಾರದ ವರ್ತನೆ ತೋರಿಸುತ್ತಿದೆ. ₹12 ಲಕ್ಷ ಕೋಟಿ ಹಗರಣ, ಓಲೈಕೆ, ಕುಟುಂಬ ರಾಜಕಾರಣ, ರಾಷ್ಟ್ರೀಯ ಭದ್ರತೆಯ ವಿಚಾರದಲ್ಲಿ ರಾಜಿ ಮಾಡಿಕೊಳ್ಳುತ್ತಿದೆ**

**ಅಮಿತ್ ಶಾ,** ಗೃಹ ಸಚಿವ

‘ಸಾವಿರಾರು ಜನ ಜಾರ್ಖಂಡ್ ಒಳಗೆ ನುಸುಳುತ್ತಿದ್ದಾರೆ, ಬುಡಕಟ್ಟು ಜನಾಂಗದ ಯುವತಿಯರನ್ನು ವಿವಾಹವಾಗುತ್ತಿದ್ದಾರೆ, ಪ್ರಮಾಣಪತ್ರಗಳನ್ನು ಪಡೆಯುತ್ತಿದ್ದಾರೆ ಮತ್ತು ಭೂಮಿಯನ್ನು ಖರೀದಿಸುತ್ತಿದ್ದಾರೆ. ಇದರಿಂದಾಗಿ ಸ್ಥಳೀಯ ಜನರಿಗೆ ಉದ್ಯೋಗಾವಕಾಶಗಳು ಕೈತಪ್ಪುತ್ತಿದೆ. ಸೊರೇನ್ ಅವರ ಯೋಜನೆಗಳಿಂದ ಅವರ ಕುಟುಂಬಕ್ಕೆ ಮಾತ್ರ ಲಾಭವಾಗುತ್ತಿದೆ’ ಎಂದು ಟೀಕಿಸಿದರು.

## ನಗರದಲ್ಲಿ ಇಂದು

**ಗುರುಪೂರ್ಣಿಮೆ ಮಹೋತ್ಸವ ಆಚರಣೆ:** ಆಯೋಜನೆ ಮತ್ತು ಸ್ಥಳ: ದತ್ತಗುರು ಸದಾನಂದ ಮಹಾರಾಜರ ಆಶ್ರಮ, ಆಧ್ಯಾತ್ಮಿಕ ಮತ್ತು ಧ್ಯಾನ ಕೇಂದ್ರ, ಚಕ್ರವರ್ತಿ ಲೇಔಟ್, ಬೆಳಿಗ್ಗೆ 7ರಿಂದ

**ದೇವಿ ಮುತ್ತು ಮಾರಿಯಮ್ಮ ಅವರ 43ನೇ ವರ್ಷದ ಹೂವಿನ ಕರಗ ಮಹೋತ್ಸವ:** ಅಮ್ಮನವರಿಗೆ ಮಹಾಭಿಷೇಕ, ಅನ್ನಪೂರ್ಣೇಶ್ವರಿ ಅಲಂಕಾರ, ವಸಂತೋತ್ಸವ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಅನ್ನ ಸಂತರ್ಪಣೆ, ಆಯೋಜನೆ ಮತ್ತು ಸ್ಥಳ: ದೇವಿ ಮುತ್ತು ಮಾರಿಯಮ್ಮ ದೇವಾಲಯ, ನಂ. 4, 1ನೇ ಬೀದಿ, ಕೃಷ್ಣಾನಂದನಗರ, ನಂದಿನಿ ಲೇಔಟ್, ಬೆಳಿಗ್ಗೆ 9ರಿಂದ

**ವಾರ್ಷಿಕ ದತ್ತಿನಿಧಿ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು:** ಕಲ್ಯಾಣ ರಾವ್ ದೇಶಪಾಂಡೆ, ನವರತ್ನಾ ಎಸ್. ವಟಿ, ಅಶ್ರಿತಾ ಎಸ್., ಉದ್ಘಾಟನೆ: ಕಬ್ಬಿನಾಲೆ ವಸಂತ ಭಾರದ್ವಾಜ್, ಉಪಸ್ಥಿತಿ: ಕೆ. ಮುದ್ದುಕೃಷ್ಣ, ಕಮಲಮ್ಮ ವಿಠ್ಠಲರಾವ್, ಬಿ.ಆರ್. ವೆಂಕಟೇಶ್ವರುಲು ನಾಯ್ಕ, ಆಯೋಜನೆ: ವಾಗ್ದೇವಿ ಗಮಕಕಲಾ ಪ್ರತಿಷ್ಠಾನ, ಸ್ಥಳ: ಕುಮಾರವ್ಯಾಸ ಮಂಟಪ, 57ನೇ ಬಿ ಕ್ರಾಸ್ ರಸ್ತೆ, 4ನೇ ಬ್ಲಾಕ್ ರಾಜಾಜಿನಗರ, ಬೆಳಿಗ್ಗೆ 9.30


ಹಂ.ಪ. ನಾಗರಾಜಯ್ಯ

**ಕಂಬತ್ತಹಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿ ಪ್ರದಾನ:** ಹಂ.ಪ. ನಾಗರಾಜಯ್ಯ, ಪ್ರಶಸ್ತಿ ಪುರಸ್ಕೃತರು: ಎಂ.ಎ. ಜಯಚಂದ್ರ, ಉಪಸ್ಥಿತಿ: ಕೆ.ಜೆ. ಪಾರ್ಶ್ವನಾಥ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

**ಜಯ ಚಾಮರಾಜ ಒಡೆಯರ್ ಎ ಲೈಫ್ ಆಫ್ ಪರ್ಪಸ್ ಆ್ಯಂಡ್ ಪ್ಯಾಶನ್ ‘ಮಹಾರಾಜ ಆಫ್ ಮೈಸೂರು’ ಪ್ರದರ್ಶನ:** ಪ್ರಸ್ತುತಿ: ಮಾಯಾ ಫಿಲ್ಮ್ಸ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10ರಿಂದ

**ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಪುನಶ್ಚೇತನ ಕಾರ್ಯಕ್ರಮ:** ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಅತಿಥಿಗಳು: ಶ್ರೇಯಸ್ ಹೊಸೂರು, ಡಿ. ಜವಹರ್, ಆಯೋಜನೆ ಮತ್ತು ಸ್ಥಳ: ಜಿಜೆಬಿಸಿ ಸಭಾಂಗಣ, ಸುವರ್ಣ ಮಹೋತ್ಸವ ಕಟ್ಟಡ, ಪಿಇಎಸ್ ವಿಶ್ವವಿದ್ಯಾಲಯ, 100 ಅಡಿ ರಸ್ತೆ, ಬನಶಂಕರಿ 3ನೇ ಹಂತ, ಬೆಳಿಗ್ಗೆ 10.30

**ಶಿವಶರಣ ಹಡಪದ ಅಪ್ಪಣ್ಣ ಜಯಂತಿ: ಉದ್ಘಾಟನೆ:** ಸಿದ್ದರಾಮಯ್ಯ, ಸಾನ್ನಿಧ್ಯ: ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಶೋಭಾ ಕರಂದ್ಲಾಜೆ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

**ಬಾಸ್ ಸಮ್ಮಿಟ್–2024 ಉದ್ಘಾಟನೆ: ಹರಿಶೇಖರನ್, ಲಲಿತ್ ವರ್ಮಾ, ಆಯೋಜನೆ:** ಬೆಂಗಳೂರು ಒಲಂಪಿಕ್ ಸೊಸೈಟಿ, ಸ್ಥಳ: ಸೇಂಟ್ ಜಾನ್ಸ್ ಸಭಾಂಗಣ, ಸೇಂಟ್ ಜಾನ್ಸ್ ಆಸ್ಪತ್ರೆ ಆವರಣ, ಕೋರಮಂಗಲ, ಬೆಳಿಗ್ಗೆ 11

**ಸಂಸ್ಥಾಪಕರ ದಿನಾಚರಣೆ:** ಅತಿಥಿಗಳು: ಎಸ್. ಜಿ. ಸಿದ್ಧರಾಮಯ್ಯ, ಜಯಕರ ಎಸ್.ಎಂ., ಸಿ.ಎಸ್. ಶೇಖ್ ಲತೀಫ್, ರಾಧಾಕೃಷ್ಣ, ಆಯೋಜನೆ: ಡಾ. ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ಸ್ಥಳ: ಡಾ.ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ಜೆ.ಸಿ. ನಗರ, ಬೆಳಿಗ್ಗೆ 11

**‘ವ್ಯಾಸಜ್ಯೋತಿ’ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು:** ಅನಂತನಾರಾಯಣ ವಾದ್ಯಾರ್, ಅತಿಥಿ: ಎಂ. ನರಸಿಂಹನ್, ‘ಗುರುವಿನ ಮಹತ್ವ’ ಕುರಿತು ಉಪನ್ಯಾಸ: ಪಿ.ಎಸ್. ಗೀತಾ, ಆಯೋಜನೆ: ಭಾರತೀಯ ವಿದ್ಯಾಭವನ, ಜ್ಯೋತಿ ಚಾರಿಟಬಲ್ ಟ್ರಸ್ಟ್, ಸ್ಥಳ: ಕೆಆರ್‌ಜಿ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11.30



**ಸಂಗೀತ ಕಛೇರಿ:** ಗಾಯನ: ಟಿ.ಎನ್. ಅಶೋಕ್, ಪಿಟೀಲು: ವೆಂಕಟೇಶ್ ಜೋಸ್ಯರ್, ಮೃದಂಗ: ಬಿ.ಆರ್. ಶ್ರೀನಿವಾಸ್, ಖಂಜಿರ: ಬಿ.ಜೆ. ಕಿರಣ್‌ಕುಮಾರ್, ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, 19ನೇ ಬಿ ಮೇನ್, 1ನೇ ಕೆ ಬ್ಲಾಕ್, ರಾಜಾಜಿನಗರ, ಸಂಜೆ 5

**ಭರತನಾಟ್ಯ ರಂಗಪ್ರವೇಶ:** ಪ್ರಸ್ತುತಿ: ನಯನ ಶಿವಣ್ಣ, ಅತಿಥಿಗಳು: ಮಂಜುಳಾ ಪರಮೇಶ್, ಪುಲಿಕೇಶಿ ಕಸ್ತೂರಿ, ಶ್ರೀನಿಧಿ ಕೆ. ಪಾರ್ಥಸಾರಥಿ, ಎಂ.ಆರ್. ಕಮಲ, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ತೆಲುಗು ವಿಜ್ಞಾನ ಸಮಿತಿ, ಚೌಡಯ್ಯ ಸ್ಮಾರಕ ಭವನದ ಹಿಂಭಾಗ, ಗಾಯತ್ರಿದೇವಿ ಬಡಾವಣೆ, ವೈಯಾಲಿಕಾವಲ್, ಮಲ್ಲೇಶ್ವರ, ಸಂಜೆ 5

**ರಾಮಕೃಷ್ಣ ಸಂಗೀತ ಸೌರಭ:** ಗಾಯನ: ಸ್ಫೂರ್ತಿ ರಾವ್ ಮತ್ತು ತಂಡ, ಆಯೋಜನೆ: ರಾಮಕೃಷ್ಣ ಮಠ, ದೊಡ್ಡ ಬಸವಣ್ಣ ದೇವಸ್ಥಾನ ಬಸವನಗುಡಿ, ಸಂಜೆ 5.15

**ಗುರು ವಂದನೆ:** ನೃತ್ಯ ಪ್ರದರ್ಶನ: ರಕ್ಷಾ ಕಾರ್ತಿಕ್ ಮತ್ತು ತಂಡ, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್, ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರ 4ನೇ ಬ್ಲಾಕ್, ಸಂಜೆ 6

**‘ಬೇಗ್ ಬಾರೋ ಅಳಿಯ’ ನಾಟಕ ಪ್ರದರ್ಶನ: ರಚನೆ:** ಎಂ.ಎಸ್. ನರಸಿಂಹಮೂರ್ತಿ, ನಿರ್ದೇಶನ: ಹನು ರಾಮಸಂಜೀವ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್. ಆರ್. ಕಾಲೊನಿ, ಸಂಜೆ 7.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ. nagaradalli_indu@prajavani.co.in

## ಆ.7–8ಕ್ಕೆ ಭರತನಾಟ್ಯ ಸ್ಪರ್ಧೆ

**ಬೆಂಗಳೂರು:** ನಟಿ ಭಾವನಾ ರಾಮಣ್ಣ ನೇತೃತ್ವದ ಹೂವು ಫೌಂಡೇಶನ್ ಫಾರ್ ಆರ್ಟ್ಸ್ ಸಂಸ್ಥೆಯು ಆ.7 ಮತ್ತು 8ರಂದು ರಾಜ್ಯ ಮಟ್ಟದ ಭರತನಾಟ್ಯ ಸ್ಪರ್ಧೆ ಹಮ್ಮಿಕೊಂಡಿದೆ.

‘ವರ್ಣ ಸ್ಪರ್ಧೆ’ ಶೀರ್ಷಿಕೆಯಡಿ ನಡೆಯುವ ಈ ಸ್ಪರ್ಧೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗವಿದೆ. ವರ್ಣ ನೃತ್ಯವನ್ನು ಮಾತ್ರ ಈ ಸ್ಪರ್ಧೆಗೆ ಪರಿಗಣಿಸಲಾಗುತ್ತದೆ. ಪ್ರಥಮ ಬಹುಮಾನ ₹1 ಲಕ್ಷ, ದ್ವಿತೀಯ ಬಹುಮಾನ ₹50 ಸಾವಿರ ಹಾಗೂ ತೃತೀಯ ಬಹುಮಾನ ₹30 ಸಾವಿರ ನಗದು ಒಳಗೊಂಡಿದೆ. ಇದೇ 25 ರೊಳಗೆ hoovufoundation.com ಮೂಲಕ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

**ವಿವರಕ್ಕೆ:** 9901305155 ಅಥವಾ 7483490143

‘ಕಾವ್ಯ ಸಂಸ್ಕೃತಿ ಯಾನ’ದಲ್ಲಿ ಬರಗೂರು ರಾಮಚಂದ್ರಪ್ಪ ಅಭಿಮತ

# ‘ಮೌನಕ್ಕೆ ಕಾವ್ಯ ಧ್ವನಿಯಾಗಬೇಕು’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಮಾಜದಲ್ಲಿ ಅನೇಕ ವಿಷಯಗಳಿಗೆ ಮೌನ ಆವರಿಸಿಕೊಂಡಿದೆ. ಆ ಮೌನಕ್ಕೆ ಕಾವ್ಯದ ಮೂಲಕ ಧ್ವನಿಯಾಗಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ ಅವರು ಕಾವ್ಯ ದೀವಟಿಗೆ ಬೆಳಗುವುದರ ಮೂಲಕ ಕಾವ್ಯ ಸಂಸ್ಕೃತಿ ಯಾನ ಉದ್ಘಾಟಿಸಿದರು. (ಎಡದಿಂದ) ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌. ಮುಕುಂದರಾಜ್, ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, ಧರಣೀದೇವಿ ಮಾಲಗತ್ತಿ ಮತ್ತು ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ರಂಗಮಂಡಲ, ರಂಗವಾಹಿನಿ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡ ‘ಕಾವ್ಯ ಸಂಸ್ಕೃತಿ ಯಾನ’ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಕಾವ್ಯ ಜನಸಾಮಾನ್ಯರ ಧ್ವನಿಯಾಗಬೇಕು. ಹಿಂದೆ ಜನಪದ ಕಾವ್ಯಗಳಲ್ಲಿ ಜನಸಾಮಾನ್ಯರು ತಮಗೆ ಅನಿಸಿದ್ದನ್ನು ಅಭಿವ್ಯಕ್ತಿಗೊಳಿಸಿದ್ದರು. ಶಿಕ್ಷಣ ಎಲ್ಲೆಡೆ ವ್ಯಾಪಿಸಿಕೊಂಡಾಗ ಹಲವು ವಿಷಯಗಳನ್ನು ಹೇಳಲು ಪ್ರಾರಂಭ ಮಾಡಿದರು. ಕೆಲವು ವಿಷಯಗಳಿಗೆ ಮಾತಾದರೆ, ಅನೇಕ ವಿಷಯಗಳಿಗೆ ಮೌನವಾದರು. ಎಲ್ಲೆಲ್ಲಿ ಮೌನವಿದೆಯೋ ಅದಕ್ಕೆ ಮಾತು ನೀಡುವ ಕೆಲಸವಾಗಬೇಕು. ನಮ್ಮ ಕಣ್ಣುಗಳಿಗೆ ಕಾಣದ, ಕಿವಿಗಳಿಗೆ ಕೇಳಿಸದ ವಾತಾವರಣವನ್ನು ಅಧಿಕಾರಶಾಹಿಗಳು ಸೃಷ್ಟಿಸುತ್ತಿವೆ. ಭ್ರಮೆಗಳನ್ನು ಬಿತ್ತಲಾಗುತ್ತಿದೆ. ಆದ್ದರಿಂದ ಕವಿಗಳು ಕಾಲಕ್ಕೆ ಧ್ವನಿಯಾಗಬೇಕು’ ಎಂದು ಅವರು ಹೇಳಿದರು.

‘ಕನ್ನಡ ಸಾಹಿತ್ಯವು ಸಾಮಾಜಿಕ ಜವಾಬ್ದಾರಿಯನ್ನು ನಿಭಾಯಿಸುತ್ತಲೇ ಬಂದಿದೆ. ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ಹಲವರು ಕಾವ್ಯದ ಮೂಲಕ ಸಾಮಾಜಿಕ ಹೊಣೆಗಾರಿಕೆ ತೋರಿಸುತ್ತಾ ಬಂದಿದ್ದಾರೆ. ಇದರಿಂದಾಗಿಯೇ ಕುಮಾರವ್ಯಾಸ ಸೇರಿ ಹಲವರು ಇವತ್ತಿಗೂ ಪ್ರಸ್ತುತವಾಗುತ್ತಾರೆ. ಕಾಲ ಬದಲಾದಂತೆ ಸವಾಲುಗಳು, ತಲ್ಲಣಗಳು ಬೇರೆ ಬೇರೆಯಾಗಿರುತ್ತದೆ. ಇದಕ್ಕೆ ಲೇಖಕರು ಪ್ರತಿಕ್ರಿಯಿಸುತ್ತಾ ಬಂದಿದ್ದಾರೆ. ರಾಜಧಾನಿಯಲ್ಲಿ ಇರುವವರು ಮಾತ್ರ ಲೇಖಕರಲ್ಲ, ಹಳ್ಳಿಗಳಲ್ಲಿಯೂ ಬೇರೆ ಬೇರೆ ಮಾಧ್ಯಮಗಳಲ್ಲಿ ಲೇಖಕರು ಬರೆಯುತ್ತಿದ್ದಾರೆ’ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣೀದೇವಿ ಮಾಲಗತ್ತಿ, ‘ಕವಿತೆ ಅಂತರಾಳಕ್ಕೆ ತಾಕಬೇಕು. ಈ ಸಂದರ್ಭದಲ್ಲಿ ಸಮಾನತೆ, ಸೌಹಾರ್ದ ಸಾರುವ ಕವಿತೆಗಳು ಅಗತ್ಯ’ ಎಂದು ತಿಳಿಸಿದರು.

ರಂಗಕರ್ಮಿ ಡಿ.ಬಿ. ಮಲ್ಲಿಕಾರ್ಜುನ ಸ್ವಾಮಿ ಮಹಾಮನೆ, ‘ಬದಲಾದ ಸಂದರ್ಭದಲ್ಲಿ ರೈತರು ಸಮಸ್ಯೆ ಎದುರಿಸುತ್ತಿದ್ದು, ಹಳ್ಳಿಗಳು ನಾಶವಾಗುತ್ತಿವೆ. ಈ ವೇಳೆ ಏನನ್ನು ಬರೆಯಬೇಕು? ಏಕೆ ಬರೆಯಬೇಕು? ಯಾರಿಗಾಗಿ ಬರೆಯಬೇಕು ಎಂಬ ಪ್ರಶ್ನೆಗಳು ಕಾಡುತ್ತಿವೆ. ಈ ತಲ್ಲಣದ ಸ್ಥಿತಿಯಲ್ಲಿ ಕಾವ್ಯದ ವಸ್ತು ಏನಾಗಬೇಕು ಎಂಬ ಪ್ರಶ್ನೆಯೂ ಇದೆ. ಕವಿಗಳ ಮೇಲೆ ದೊಡ್ಡ ಜವಾಬ್ದಾರಿಯಿದೆ’ ಎಂದು ಹೇಳಿದರು.

ಬಿ.ಎಂ.ಹನೀಫ್, ಎಂ.ಎಸ್. ಮೂರ್ತಿ, ಸುಬ್ಬು ಹೊಲೆಯಾರ್, ಟಿ.ಎಸ್. ವಿವೇಕಾನಂದ, ಎಸ್. ರಂಗಸ್ವಾಮಿ, ಜಯಲಕ್ಷ್ಮಿ ಪಾಟೀಲ, ದೋಚಿ ಗೌಡ ಕವಿತೆ ವಾಚಿಸಿದರು.

# ಸೇವಾ ಶುಲ್ಕ ಪಾವತಿಗೆ ಶಿಕ್ಷಣ ಸಂಸ್ಥೆಗಳಿಗೆ ಬಿಬಿಎಂಪಿ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳು ಜುಲೈ 31ರ ಒಳಗೆ ಶೇ 25ರಷ್ಟು ಸೇವಾಶುಲ್ಕ ಪಾವತಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ‘ಒಂದು ಬಾರಿ ಪರಿಹಾರ ಯೋಜನೆ’ಯ ಕುರಿತ ಸಭೆಯಲ್ಲಿ ಬಿಬಿಎಂಪಿ ವ್ಯಾಪ್ತಿಯ ಶೈಕ್ಷಣಿಕ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು

ಬಾಕಿ ಆಸ್ತಿ ತೆರಿಗೆದಾರರಿಗೆ ಅನುಕೂಲ ಮಾಡಿಕೊಡುವ ‘ಒಂದು ಬಾರಿ ಪರಿಹಾರ ಯೋಜನೆ’ (ಒಟಿಎಸ್) ಕುರಿತು ವೈದ್ಯಕೀಯ ಕಾಲೇಜು, ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ವಿವಿಧ ಶೈಕ್ಷಣಿಕ ಸಂಸ್ಥೆಗಳ ಜೊತೆಗೆ ಶನಿವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ನಗರದಲ್ಲಿ ಈ ಯೋಜನೆಯನ್ನು ಕಾಯ್ದೆ ಅನುಸಾರ ಜಾರಿ ಮಾಡಲಾಗಿದೆ. ಬಾಕಿ ಇರುವ ಆಸ್ತಿ ತೆರಿಗೆಯ ಮೇಲೆ ವಿಧಿಸುವ ಬಡ್ಡಿ ಸಂಪೂರ್ಣ ಮನ್ನಾ ಹಾಗೂ ದಂಡವನ್ನು ಅರ್ಧಕ್ಕೆ ಇಳಿಸಲಾಗಿದೆ. ಶೈಕ್ಷಣಿಕ ಸಂಸ್ಥೆಗಳು ಇದರ ಸದುಪಯೋಗವನ್ನು ಪಡೆದುಕೊಂಡು ಬಾಕಿ ಸೇವಾ ಶುಲ್ಕವನ್ನು ಪಾವತಿಸಬೇಕು. ಆನ್‌ಲೈನ್, ಆಫ್‌ಲೈನ್ ಮೂಲಕ ಶುಲ್ಕ ಪಾವತಿಸಬಹುದು ಎಂದು ವಿವರಿಸಿದರು.

ಒಂದೊಂದು ಶಿಕ್ಷಣ ಸಂಸ್ಥೆಯಲ್ಲಿ ಒಂದೊಂದು ರೀತಿಯ ಸಮಸ್ಯೆಯಿದೆ. ಅದನ್ನು ಪರಿಶೀಲಿಸಿದಾಗ ಆಸ್ತಿ ತೆರಿಗೆ ತಂತ್ರಾಂಶದಲ್ಲಿ ಬದಲಾವಣೆ ಮಾಡಿಕೊಂಡು ಆನ್‌ಲೈನ್‌ನಲ್ಲಿ ಪಾವತಿಸಲು ಸಮಸ್ಯೆಯಾಗಿರುವುದು ಕಂಡು ಬಂದಿದೆ. ಆನ್‌ಲೈನ್ ಮೂಲಕ ಪಾವತಿಸಲು ಸಾಧ್ಯವಾಗದವರು ಬ್ಯಾಂಕರ್ಸ್ ಚೆಕ್, ಪೇ ಆರ್ಡರ್, ಡಿಮಾಂಡ್ ಡ್ರಾಫ್ಟ್ ಮೂಲಕ ಪಾವತಿಸಲು ಅವಕಾಶ ನೀಡಲಾಗುವುದು. ಆಯಾ ವಲಯ ಜಂಟಿ ಆಯುಕ್ತರಿಗೆ ನಿಮ್ಮ ಸಂಸ್ಥೆಗಳ ಬಾಕಿ ಸೇವಾ ಶುಲ್ಕವನ್ನು ಡಿಮಾಂಡ್ ಡ್ರಾಫ್ಟ್‌ಗಳಲ್ಲಿ ಸಲ್ಲಿಸಬಹುದು ಎಂದು ಸಲಹೆ ನೀಡಿದರು.

ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಮಾತನಾಡಿ, ‘ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾದರಿ ಕಾರ್ಯವಿಧಾನವನ್ನು ನೀಡಲಾಗುವುದು. ಈಗಾಗಲೇ ಆಸ್ತಿ ತೆರಿಗೆ ಜಾಲದಲ್ಲಿರುವ ಶಿಕ್ಷಣ ಸಂಸ್ಥೆಗಳು ಸ್ವಯಂ ಘೋಷಣಾ ಪದ್ಧತಿ (ಎಸ್.ಎ.ಎಸ್) ಅಡಿಯಲ್ಲಿ ಅರ್ಜಿ ಸಂಖ್ಯೆ ಹೊಂದಿರುವ ಪ್ರಕರಣಗಳಲ್ಲಿ ಶೇ 25 ರಷ್ಟು ಸೇವಾ ಶುಲ್ಕ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ’ ಎಂದರು.

**ಮುಖ್ಯಾಂಶಗಳು**

- 2021-22ನೇ ಸಾಲಿನ ಖಾಸಗಿ ಶೈಕ್ಷಣಿಕ ಸಂಸ್ಥೆಗಳಿಗೆ ವಿನಾಯಿತಿ ಇಲ್ಲ
- ಅರ್ಹ ಸಂಸ್ಥೆಗಳು ಜುಲೈ 31 ದಾಟಿದರೆ ಪೂರ್ಣ ಆಸ್ತಿ ತೆರಿಗೆ ಪಾವತಿಸಬೇಕು

# ಒಂದು ತಿಂಗಳೊಳಗೆ 40 ಸಾವು

## ಮುಂಗಾರು ಮಳೆಗೆ ಹಿಮಾಚಲ ಪ್ರದೇಶ ತತ್ತರ: ₹329 ಕೋಟಿಗಳಷ್ಟು ನಷ್ಟ

ಶಿಮ್ಲಾ/ನಹಾನ್ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಮುಂಗಾರು ಆರಂಭವಾಗಿ ಕೇವಲ ಒಂದು ತಿಂಗಳೊಳಗೆ ಸುಮಾರು 40 ಜನರು ಮೃತಪಟ್ಟಿದ್ದಾರೆ. ಮಳೆ ಅವಘಡದಿಂದ ರಾಜ್ಯವು ₹329 ಕೋಟಿಗಳಷ್ಟು ನಷ್ಟ ಅನುಭವಿಸಿದೆ ಎಂದು ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ ವರದಿ ಮಾಡಿದೆ.

ಶುಕ್ರವಾರ ತಡರಾತ್ರಿ ಸಿರ್‌ಮೌರ್ ಜಿಲ್ಲೆಯ ರೈತುವಾ ಗ್ರಾಮದಲ್ಲಿ ಭಾರಿ ಮಳೆಯಿಂದಾಗಿ ಒಬ್ಬ ವ್ಯಕ್ತಿ ಕೊಚ್ಚಿಕೊಂಡು ಹೋಗಿದ್ದಾರೆ.

ಘಟನೆಯ ಕುರಿತು ತಿಳಿಯುತ್ತಿದ್ದಂತೆ ಪುರುವಾಲಾ ಪೊಲೀಸ್ ಠಾಣೆಯ ತಂಡವು ಸ್ಥಳೀಯ ನಿವಾಸಿಗಳ ಸಹಾಯ ಪಡೆದು ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿತು ಎಂದು ಪೌಂಟಾ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ (ಎಸ್‌ಡಿಎಂ) ಗುಂಜೀತ್ ಚೀಮಾ ಅವರು ತಿಳಿಸಿದ್ದಾರೆ. ಕೊಚ್ಚಿಹೋದ ವ್ಯಕ್ತಿ ದಂಡಾ ಅಂಜ್ ಗ್ರಾಮದ ನಿವಾಸಿ ಅಮನ್ ಸಿಂಗ್ (48) ಎಂದು ಗುರುತಿಸಲಾಗಿದ್ದು, ಶನಿವಾರ ಬೆಳಿಗ್ಗೆ ಟೋನ್ಸ್ ನದಿಯಲ್ಲಿ ಮೃತದೇಹ ಪತ್ತೆಯಾಗಿದೆ.

### ಪ್ರವಾಹದಿಂದ ಸಿಲುಕಿಕೊಂಡಿದ್ದ 100 ಜನರ ರಕ್ಷಣೆ

ಬಹರೈಚ್ (ಪಿಟಿಐ): ಉತ್ತರ ಪ್ರದೇಶದ ಘಾಘ್ರಾ ನದಿಯಲ್ಲಿ ಪ್ರವಾಹ ಉಂಟಾದ ಕಾರಣ ನೇಪಾಳಕ್ಕೆ ಹೆಚ್ಚುವರಿ ನೀರು ಹರಿಸಲಾಯಿತು. ಇದರಿಂದಾಗಿ ನೇಪಾಳದ 100ಕ್ಕೂ ಹೆಚ್ಚು ಗ್ರಾಮಸ್ಥರು ಪ್ರವಾಹದಿಂದಾಗಿ ಸಿಲುಕಿಕೊಂಡಿದ್ದರು. ಈ ಸಂತ್ರಸ್ತರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಭಾರತ-ನೇಪಾಳ ಗಡಿಗೆ ಸಮೀಪವಿರುವ ಚಹಲ್ವಾ ಗ್ರಾಮದ 115 ನಿವಾಸಿಗಳು ಶುಕ್ರವಾರ, ನೀರಿನ ಮಟ್ಟ ಕಡಿಮೆ ಇದ್ದ ಕಾರಣ ನದಿ (ಘಾಘ್ರಾ ನದಿಯ ಮತ್ತೊಂದು ಭಾಗ) ದಾಟಿ ಹೊಲಗಳಿಗೆ ಹೋಗಿದ್ದರು. ಸಂಜೆ 6 ಗಂಟೆ ಸುಮಾರಿಗೆ ಉತ್ತರಪ್ರದೇಶದಿಂದ ಅಧಿಕ ಪ್ರಮಾಣದ ನೀರು ಬಿಟ್ಟಿದ್ದರಿಂದ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದ್ದು, ಗ್ರಾಮಸ್ಥರು ಪರದಾಡುವಂತಾಯಿತು ಎಂದು ಶನಿವಾರ ಉತ್ತರ ಪ್ರದೇಶದ ಪರಿಹಾರ ಆಯುಕ್ತರ ಕಚೇರಿಯು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ನದಿ ಉಕ್ಕಿ ಹರಿಯುತ್ತಿದ್ದಂತೆ 63 ಜನರು ದೋಣಿಗಳ ಮೂಲಕ ಸುರಕ್ಷಿತವಾಗಿ ಬಂದಿದ್ದು, ಉಳಿದ ಗ್ರಾಮಸ್ಥರು ಹೊಲಗಳಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಅದು ಹೇಳಿದೆ.

ಸಶಸ್ತ್ರ ಸೀಮಾ ಬಲ್ (ಎಸ್‌ಎಸ್‌ಬಿ), ಪ್ರಾಂತೀಯ ಸಶಸ್ತ್ರ ಪೊಲೀಸ್ (ಪಿಎಸಿ) ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಸಹಾಯದಿಂದ ರಕ್ಷಣಾ ಕಾರ್ಯಾಚರಣೆ ನಡೆದಿದ್ದು, ಗ್ರಾಮಸ್ಥರನ್ನು ಸುರಕ್ಷಿತ ಸ್ಥಳಗಳಿಗೆ ಕರೆತರಲಾಯಿತು ಎಂದು ಹೇಳಿಕೆ ತಿಳಿಸಿದೆ.

ಗ್ರಾಮಸ್ಥರಿಗೆ ಆಹಾರ ವಿತರಿಸಲಾಗಿದ್ದು, ಆರೋಗ್ಯ ತಪಾಸಣೆಗಾಗಿ ವೈದ್ಯಕೀಯ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೆಚ್ಚುವರಿ ಜಿಲ್ಲಾಧಿಕಾರಿ, ತಹಶೀಲ್ದಾರ್ ಮತ್ತು ಪೊಲೀಸರು ಮತ್ತು ನೀರಾವರಿ ಸೇರಿದಂತೆ ಇತರ ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಪರಿಸ್ಥಿತಿ ಸಹಜ-ವಾಗುವವರೆಗೆ ಸ್ಥಳದಲ್ಲೇ ಇರುವಂತೆ ತಿಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರವಾಹದಲ್ಲಿ ಸಿಂಗ್ ಅವರೊಂದಿಗೆ ಅವರ ಮಗಳು ಸಿಲುಕಿದ್ದಳು. ಆದರೆ ಸಿಂಗ್ ಮಗಳನ್ನು ರಕ್ಷಿಸಿ, ತಾವು ಪ್ರವಾಹದಲ್ಲಿ ಸಿಲುಕಿ ಪ್ರಾಣ ಕಳೆದುಕೊಂಡಿದ್ದಾರೆ.

ಸ್ಥಳೀಯ ಹವಾಮಾನ ಕಚೇರಿ ಶನಿವಾರ ಸಿರ್‌ಮೌರ್ ಮತ್ತು ಶಿಮ್ಲಾ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಮುಂದಿನ 24 ಗಂಟೆಗಳಲ್ಲಿ ಪ್ರವಾಹದ ಎಚ್ಚರಿಕೆ ನೀಡಿದ್ದು, ರಾಜ್ಯದ ಹಲವು ಪ್ರದೇಶಗಳಿಗೆ 'ಆರೆಂಜ್' ಅಲರ್ಟ್ ಘೋಷಿಸಿದೆ. ಅಲ್ಲದೆ, ಜುಲೈ 21, 22, 24 ಮತ್ತು 25 ರಂದು ರಾಜ್ಯದ ಪ್ರತ್ಯೇಕ ಪ್ರದೇಶಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, 'ಯೆಲ್ಲೋ' ಅಲರ್ಟ್ ಘೋಷಿಸಿದೆ.

**ಸೊಬಗು...** ಛತ್ತೀಸಗಢದ ಬಸ್ತರ್ ಜಿಲ್ಲೆಯ ತೀರಥ್‌ಗಡ ಜಲಪಾತವು ಮೈದುಂಬಿ ಧುಮ್ಮಿಕ್ಕುತ್ತಿದ್ದು, ಇದರ ಸೊಬಗನ್ನು ಕಣ್ತುಂಬಿಕೊಳ್ಳಲು ಬಂದಿದ್ದ ಪ್ರವಾಸಿಗರು ಶನಿವಾರ ಫೋಟೊಗೆ ಪೋಸ್ ನೀಡಿದ ಪರಿ –ಪಿಟಿಐ ಚಿತ್ರ

### 'ಕೇಜ್ರಿವಾಲ್ ಬೇಕೆಂದೇ ಕಡಿಮೆ ಆಹಾರ ಸೇವಿಸ್ತಿದಾರೆ'

ನವದೆಹಲಿ (ಪಿಟಿಐ): ತಿಹಾರ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಬೇಕೆಂದೇ ವೈದ್ಯರ ಸಲಹೆಯಂತೆ ಔಷಧ ಮತ್ತು ಆಹಾರ ಸೇವಿಸುತ್ತಿಲ್ಲ ಎಂದು ಅಲ್ಲಿಯ ಲೆಫ್ಟಿನಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಆರೋಪಿಸಿದ್ದಾರೆ ಎಂದು ರಾಜನಿವಾಸದ ಪ್ರಕಟಣೆಯಲ್ಲಿ ಹೇಳಲಾಗಿದೆ.

ಕೇಜ್ರಿವಾಲ್ ಅವರ ಆರೋಗ್ಯಕ್ಕೆ ಸಂಬಂಧಿಸಿದಂತೆ ಜೈಲು ಅಧೀಕ್ಷಕರು ನೀಡಿರುವ ವರದಿ ಆಧರಿಸಿ ದೆಹಲಿಯ ಮುಖ್ಯ ಕಾರ್ಯದರ್ಶಿ ನರೇಶ್ ಕುಮಾರ್ ಅವರಿಗೆ ಸಕ್ಸೇನಾ ಅವರು ಪತ್ರ ಬರೆದಿದ್ದಾರೆ. ಕೇಜ್ರಿವಾಲ್‌ಗೆ ಮನೆಯಲ್ಲಿ ತಯಾರಾದ ಆಹಾರವನ್ನು ಒದಗಿಸಲಾಗುತ್ತಿದೆ. ಆದರೂ ಬೇಕೆಂದೇ ಕಡಿಮೆ ಕ್ಯಾಲೊರಿ ಆಹಾರ ಸೇವಿಸುತ್ತಿದ್ದಾರೆ ಎಂದು ಪತ್ರದಲ್ಲಿ ಹೇಳಿದ್ದಾರೆ.

ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರು ಈ ಆರೋಪವನ್ನು ನಿರಾಕರಿಸಿದ್ದಾರೆ.

### 'ಬಿಹಾರ ಏಕೆ ಹಿಂದುಳಿದಿದೆ..?'

ನವದೆಹಲಿ (ಪಿಟಿಐ): 'ರಾಜ್ಯದಲ್ಲಿ ಹೆಚ್ಚುತ್ತಿರುವ ಅಪರಾಧ ಪ್ರಕರಣಗಳು, ಸೇತುವೆಗಳ ಕುಸಿತ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಬಿಹಾರ ಸರ್ಕಾರವು ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಕೇಂದ್ರ ಸಚಿವ ಹಾಗೂ ಲೋಕಜನಶಕ್ತಿ ಪಕ್ಷದ (ರಾಮ್ ವಿಲಾಸ್ ಪಾಸ್ವಾನ್) ಮುಖಂಡ ಚಿರಾಗ್ ಪಾಸ್ವಾನ್ ಒತ್ತಾಯಿಸಿದ್ದಾರೆ. ರಾಜ್ಯದ ಅಭಿವೃದ್ಧಿಯತ್ತ ಸಾಗಲು ದೂರದೃಷ್ಟಿಯ ಅಗತ್ಯವಿದೆ ಎಂದು ಈ ವೇಳೆ ಪ್ರತಿಪಾದಿಸಿದ್ದಾರೆ.

ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವ ಮುನ್ನ ಜೆಡಿ(ಯು) ಪಕ್ಷದ ಅಧ್ಯಕ್ಷ ಹಾಗೂ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಕಟು ಟೀಕಾಕಾರರಾಗಿದ್ದ ಚಿರಾಗ್, 'ಮುಂದಿನ ವಿಧಾನಸಭಾ ಚುನಾವಣೆಯನ್ನು ಎನ್‌ಡಿಎ ಮೈತ್ರಿಕೂಟವು ನಿತೀಶ್ ಕುಮಾರ್ ನೇತೃತ್ವದಲ್ಲಿ ಎದುರಿಸಲಿದೆ. ಆದರೂ, ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ಹಿನ್ನಡೆಯುಂಟಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

# ಯುಪಿಎಸ್‌ಸಿ ಅಧ್ಯಕ್ಷ ಸೋನಿ ರಾಜೀನಾಮೆ

ಒಂದನೇ ಪುಟದಿಂದ...

ಪ್ರಸಿದ್ಧ ಶಿಕ್ಷಣ ತಜ್ಞರಾದ ಮನೋಜ್ (59) ಅವರು 2017ರ ಜೂನ್ 28ರಂದು ಆಯೋಗದ ಸದಸ್ಯರಾಗಿ ಅಧಿಕಾರ ವಹಿಸಿಕೊಂಡಿದ್ದರು. ಅವರು 2023ರ ಮೇ 16ರಂದು ಆಯೋಗದ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು, ಅವರ ಅಧಿಕಾರಾವಧಿ 2029ರ ಮೇ 15ಕ್ಕೆ ಕೊನೆಗೊಳ್ಳಲಿದೆ.

ಮನೋಜ್ ಅವರು ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಹೆಚ್ಚಿನ ಸಮಯ ವಿನಿಯೋಗಿಸಲು ಬಯಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಯುಪಿಎಸ್‌ಸಿಗೆ ನೇಮಕಗೊಳ್ಳುವ ಮುನ್ನ ಅವರು ಗುಜರಾತ್‌ನ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯ, ಬರೋಡಾದ ಮಹಾರಾಜ ಸಯಾಜೀರಾವ್ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಯಾಗಿ ಸೇವೆ ಸಲ್ಲಿಸಿದ್ದರು. ಯುಪಿಎಸ್‌ಸಿ ಅಧ್ಯಕ್ಷರ ನೇತೃತ್ವದಲ್ಲಿ ಗರಿಷ್ಠ 10 ಸದಸ್ಯರನ್ನು ಹೊಂದಬಹುದಾಗಿದ್ದು, ಪ್ರಸ್ತುತ ಏಳು ಸದಸ್ಯರು ಮಾತ್ರ ಇದ್ದಾರೆ.

ನಾಗರಿಕ ಸೇವಾ ಪರೀಕ್ಷೆಯಲ್ಲಿ ದಾಖಲೆಗಳನ್ನು ತಿರುಚಿ, ವಂಚಿಸಿದ ಆರೋಪದ ಮೇಲೆ ಪೂಜಾ ಖೇಡ್ಕರ್ ವಿರುದ್ಧ ಯುಪಿಎಸ್‌ಸಿ ಶುಕ್ರವಾರ ಕ್ರಿಮಿನಲ್ ಪ್ರಕರಣ ದಾಖಲಿಸಿತ್ತು. ಅಲ್ಲದೆ ಅವರನ್ನು ಡಿಬಾರ್ ಮಾಡುವ ಸಂಬಂಧ ನೋಟಿಸ್ ನೀಡಿದೆ. ಹೀಗಾಗಿ ಮನೋಜ್ ಅವರ ರಾಜೀನಾಮೆ ವಿಷಯವೂ ಮಹತ್ವ ಪಡೆದುಕೊಂಡಿದೆ.

ಖೇಡ್ಕರ್ ಪ್ರಕರಣದ ಬೆನ್ನಲ್ಲೇ ಸಾಮಾಜಿಕ ಮಾಧ್ಯಮಗಳಲ್ಲಿ ಕೆಲ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ವಿರುದ್ಧವೂ ಆರೋಪಗಳು ಕೇಳಿ ಬಂದಿವೆ. ನಕಲಿ ಪ್ರಮಾಣ ಪತ್ರಗಳ ಮೂಲಕ ಇತರ ಹಿಂದುಳಿದ ವರ್ಗ (ಒಬಿಸಿ) ಮತ್ತು ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಸಂಬಂಧಿಸಿದ ಪ್ರಯೋಜನಗಳನ್ನು ಪಡೆದುಕೊಂಡಿದ್ದಾರೆ ಎಂಬ ಆರೋಪಗಳು ವ್ಯಕ್ತವಾಗಿವೆ.

### 'ವಿವಾದದಿಂದ ಹೊರದೂಡಿರುವಂತಿದೆ'

ನವದೆಹಲಿ: ವೈಯಕ್ತಿಕ ಕಾರಣಗಳನ್ನು ನೀಡಿ ಯುಪಿಎಸ್‌ಸಿ ಅಧ್ಯಕ್ಷ ಮನೋಜ್ ಸೋನಿ ಅವರು ರಾಜೀನಾಮೆ ನೀಡಿರುವುದನ್ನು ಗಮನಿಸಿದರೆ, ಇತ್ತೀಚಿನ ವಿವಾದಗಳ ಹಿನ್ನೆಲೆಯಲ್ಲಿ ಅವರನ್ನು ಹೊರದೂಡಿರುವಂತಿದೆ ಎಂದು ಕಾಂಗ್ರೆಸ್ ಶನಿವಾರ ಆರೋಪಿಸಿದೆ.



ಮಲ್ಲಿಕಾರ್ಜುನ ಖರ್ಗೆ

ಭಾರತದ ಸಾಂವಿಧಾನಿಕ ಸಂಸ್ಥೆಗಳನ್ನು ಸಾಂಸ್ಥಿಕವಾಗಿ ಸ್ವಾಧೀನಪಡಿಸಿಕೊಳ್ಳಲು ವ್ಯವಸ್ಥಿತವಾಗಿ ತೊಡಗಿಕೊಂಡಿರುವ ಬಿಜೆಪಿ– ಆರ್‌ಎಸ್‌ಎಸ್, ಆ ಸಂಸ್ಥೆಗಳ ಖ್ಯಾತಿ, ಸಮಗ್ರತೆ ಮತ್ತು ಸ್ವಾಯತ್ತತೆಗೆ ಹಾನಿ ಮಾಡುತ್ತಿವೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದೂರಿದ್ದಾರೆ.

'ಯುಪಿಎಸ್‌ಸಿಯನ್ನು ಸುತ್ತಿಕೊಂಡಿರುವ ಬಹು ಹಗರಣಗಳು ರಾಷ್ಟ್ರೀಯ ಕಳವಳಕ್ಕೆ ಕಾರಣವಾಗಿವೆ. ಇದರಿಂದ ಪ್ರಧಾನಿ ಮೋದಿ ಮತ್ತು ಅವರ ಸಿಬ್ಬಂದಿ, ಸಾರ್ವಜನಿಕ ಮತ್ತು ಪಿಂಚಣಿ ಸಚಿವರು ಪರಿಶುದ್ಧರಾಗಿ ಬರಬೇಕು. ಜಾತಿ ಮತ್ತು ವೈದ್ಯಕೀಯ ಪ್ರಮಾಣಪತ್ರಗಳನ್ನು ನಕಲಿ ಮಾಡಿರುವ ಹಲವು ಅನರ್ಹ ವ್ಯಕ್ತಿಗಳು ಇಡೀ ವ್ಯವಸ್ಥೆಯನ್ನೇ ವಂಚಿಸಿದ್ದಾರೆ' ಎಂದು ಖರ್ಗೆ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.



## ಪೇಟ ಧರಿಸಿದ್ದಕ್ಕೆ ಕುಪಿತರಾದ ಬಲಾಢ್ಯ ಸಮುದಾಯದ ಜನ

# ಗುಜರಾತ್: ದಲಿತ ವ್ಯಕ್ತಿಗೆ ಥಳಿತ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸಾಂಪ್ರದಾಯಿಕ ಪೇಟ (ಸಫಾ) ಮತ್ತು ತಂಪು ಕನ್ನಡಕ ತೊಟ್ಟು ತೆಗೆಸಿಕೊಂಡಿದ್ದ ಚಿತ್ರವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಅಪ್‌ಲೋಡ್ ಮಾಡಿದ್ದ ಕಾರಣಕ್ಕೆ 24 ವರ್ಷ ವಯಸ್ಸಿನ ದಲಿತ ವ್ಯಕ್ತಿ ಮೇಲೆ ಹಲ್ಲೆ ನಡೆಸಲಾಗಿದೆ. ಗುಜರಾತ್‌ನ ಸಬರ್‌ಕಾಂತ ಜಿಲ್ಲೆಯ ಗ್ರಾಮವೊಂದರಲ್ಲಿ ಇದೇ 17ರಂದು ಇದು ನಡೆದಿದೆ.

ಥಳಿತಕ್ಕೊಳಗಾದ ವ್ಯಕ್ತಿ ಅಜಯ್ ಪಾರ್ಮಾರ್ ಆಟೊರಿಕ್ಷಾ ಚಾಲಕ. ಹಲ್ಲೆ ಕುರಿತು ಜುಲೈ 18ರಂದು ದೂರು ನೀಡಿರುವ ಅವರು, 'ಮನೆಗೆ ಮರಳುತ್ತಿದ್ದ ವೇಳೆ ದರ್ಬಾರ್ ಸಮುದಾಯದ (ಕ್ಷತ್ರಿಯ) ಇಬ್ಬರು ತಮ್ಮನ್ನು ತಡೆದು ಮನಬಂದಂತೆ ಥಳಿಸಿದರು. ದರ್ಬಾರ್ ಸಮುದಾಯದ ಮಂದಿ ಮಾತ್ರ ಸಫಾ ಮತ್ತು ತಂಪು ಕನ್ನಡಕ ಧರಿಸಲು ಯೋಗ್ಯರು. ಹೀಗಾಗಿ ಇನ್‌ಸ್ಟಾಗ್ರಾಮ್‌ನಲ್ಲಿ ಅಪ್‌ಲೋಡ್ ಮಾಡಿರುವ ಚಿತ್ರವನ್ನು ತೆಗೆಯಬೇಕು ಎಂದು ತಾಕೀತು ಮಾಡಿದರು' ಎಂದಿದ್ದಾರೆ.

ಅಜಯ್ ಪಾರ್ಮಾರ್ ಇನ್‌ಸ್ಟಾಗ್ರಾಂ ಪೋಸ್ಟ್

'ಅವರಿಂದ ತಪ್ಪಿಸಿಕೊಂಡು ಮನೆಗೆ ಮರಳುತ್ತಿದ್ದ ವೇಳೆ ಸ್ನೇಹಿತನೊಬ್ಬ ಸಿಕ್ಕು, ಸುಮಾರು 25 ಮಂದಿ ನಿನ್ನನ್ನು ಥಳಿಸಲು ನಿನ್ನ ಮನೆ ಬಳಿ ಕಾಯುತ್ತಿದ್ದಾರೆ ಎಂದು ತಿಳಿಸಿದ. ಬಳಿಕ ನನ್ನ ತಂದೆ ಮತ್ತು ಸಹೋದರನಿಗೆ ಕರೆ ಮಾಡಿ ಸಹಾಯ ಪಡೆದುಕೊಂಡೆ' ಎಂದು ಸಂತ್ರಸ್ತ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ನನ್ನ ತಂದೆಯನ್ನೂ ಅವರು ಥಳಿಸಿದ್ದಾರೆ. ನನ್ನ ತಂದೆ ಪೊಲೀಸರಿಗೆ ಕರೆ ಮಾಡಿದ್ದರು. ಅವರು ಒಂದು ಗಂಟೆ ತಡವಾಗಿ ಬಂದರು. ಅಲ್ಲಿಯವರೆಗೆ ನಾವು ಪ್ರಾಣಕ್ಕೆ ಹೆದರಿ ನಿಂತಲ್ಲಿಯೇ ನಿಂತಿದ್ದೆವು' ಎಂದೂ ಹೇಳಿದ್ದಾರೆ.

ಈ ಪ್ರಕರಣದ ತನಿಖೆ ನಡೆಸಲಾಗುತ್ತಿದೆ. ಎಫ್‌ಐಆರ್‌ನಲ್ಲಿ ನಾಲ್ವರ ಹೆಸರನ್ನು ಉಲ್ಲೇಖಿಸಲಾಗಿದೆ. ಆರೋಪಿಗಳು ಗ್ರಾಮದಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಫಾ, ಪಾಯಿಂಟೆಡ್ ಬೂಟು, ಇತರ ಸಾಂಪ್ರದಾಯಿಕ ಉಡುಗೆಗಳನ್ನು ತೊಟ್ಟಿದ್ದಕ್ಕಾಗಿ ಮೇಲ್ವರ್ಗದ ಜನರು ದಲಿತರನ್ನು ಥಳಿಸಿದ ಘಟನೆಗಳು ಈ ಹಿಂದೆಯೂ ಸಾಕಷ್ಟು ಬಾರಿ ನಡೆದಿವೆ.

# 'ಮಾಲೀಕರ ಹೆಸರು ಕಡ್ಡಾಯ ಮಾಡಿ'

ಭೋಪಾಲ್ (ಪಿಟಿಐ): ಮಳಿಗೆಗಳ ಮಾಲೀಕರು ತಮ್ಮ ಹೆಸರನ್ನು ಮಳಿಗೆಗಳ ಮುಂದೆ ಪ್ರದರ್ಶಿಸುವುದನ್ನು ಕಡ್ಡಾಯ ಮಾಡಬೇಕು ಎಂದು ಮಧ್ಯಪ್ರದೇಶ ಬಿಜೆಪಿ ಶಾಸಕ ರಮೇಶ್ ಮೆಂದೋಲಾ ಅವರು ಶನಿವಾರ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಉತ್ತರ ಪ್ರದೇಶ ಸರ್ಕಾರವು 'ಕಾಂವಡ್ ಯಾತ್ರೆ ಮಾರ್ಗ'ದಲ್ಲಿನ ಮಳಿಗೆಗಳ ಮಾಲೀಕರು ತಮ್ಮ ಹೆಸರನ್ನು ಮಳಿಗೆಗಳ ಮುಂದೆ ಪ್ರದರ್ಶಿಸಬೇಕು ಎಂದು ಆದೇಶಿಸಿದ್ದು ವಿವಾದದ ಸ್ವರೂಪ ಪಡೆದಿದೆ. ಈ ನಡುವೆಯೇ ಮೆಂದೋಲಾ ಅವರು ಈ ಕೋರಿಕೆ ಸಲ್ಲಿಸಿದ್ದಾರೆ.

'ವ್ಯಕ್ತಿಯ ಹೆಸರು ಅವರ ಗುರುತು. ಅವರ ಹೆಸರಿನ ಬಗ್ಗೆ ಹೆಮ್ಮೆ ಇರಬೇಕು. ಅವರ ಹೆಸರನ್ನು ಕೇಳುವುದು ಗ್ರಾಹಕರ ಹಕ್ಕು. ರಾಜ್ಯದಲ್ಲಿ ಈ ಸಂಬಂಧ ಕಾನೂನು ಜಾರಿ ಮಾಡಲು ಸರ್ಕಾರಕ್ಕೆ ಮನವಿ ಮಾಡಿದ್ದೇನೆ' ಎಂದು ಹೇಳಿದ್ದಾರೆ.

ಕಾಂವಡ್ ಯಾತ್ರೆ ಮಾರ್ಗದಲ್ಲಿರುವ ಹಣ್ಣಿನ ಅಂಗಡಿ ಮಾಲೀಕರು ತಮ್ಮ ಹೆಸರನ್ನು ಮಳಿಗೆ ಮುಂದೆ ಹಾಕಬೇಕು ಎಂಬ ಸರ್ಕಾರದ ಆದೇಶದಲ್ಲಿ ತಪ್ಪೇನೂ ಇಲ್ಲ. ಇದರಿಂದ ಗ್ರಾಹಕರು ತಮ್ಮ ಇಷ್ಟದ ಅಂಗಡಿಯನ್ನು ಸುಲಭವಾಗಿ ಹುಡುಕಬಹುದು
**ಜಿತನ್ ರಾಮ್ ಮಾಂಝಿ,** ಕೇಂದ್ರ ಸಚಿವ

ತಿಂಡಿ–ತಿನಿಸುಗಳ ಮಳಿಗೆಗಳ ಮುಂದೆ ಮಾಲೀಕರು ತಮ್ಮ ಹೆಸರನ್ನು ಬರೆಯಬೇಕು ಎಂದು ಉತ್ತರ ಪ್ರದೇಶ ಸರ್ಕಾರ ಆದೇಶಿಸಿದೆ. ಇದು ವಿಕಸಿತ ಭಾರತಕ್ಕೆ ಮಾರ್ಗವೇ? ಹಗೆತನದ ಅಜೆಂಡಾ ದೇಶವನ್ನು ಒಡೆಯುತ್ತದಷ್ಟೆ
**ಕಪಿಲ್ ಸಿಬಲ್,** ರಾಜ್ಯಸಭಾ ಸದಸ್ಯ

ಪ್ರತಿಯೊಂದು ಮಳಿಗೆಯಲ್ಲಿ 'ಮಾನವೀಯತೆ' ಎಂಬ ನಾಮಫಲಕ ಕಡ್ಡಾಯವಾಗಿ ಇರಲಿ
**ಸೋನು ಸೂದ್,** ನಟ

ಹಲಾಲ್ ಜಾಗದಲ್ಲಿಯೂ 'ಮಾನವೀಯತೆ' ಎಂಬ ಫಲಕ ಇರಲಿ
**ಕಂಗನಾ ರನೌತ್,** ಸಂಸದೆ– ನಟಿ

### ಶಾಖಾಘಾತಕ್ಕೆ ಬಿಎಸ್‌ಎಫ್ ಇಬ್ಬರು ಸಿಬ್ಬಂದಿ ಬಲಿ

ಅಹಮದಾಬಾದ್ (ಪಿಟಿಐ): ಪಾಕಿಸ್ತಾನದ ಗಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಬಿಎಸ್‌ಎಫ್ ಅಧಿಕಾರಿ ಹಾಗೂ ಒಬ್ಬ ಯೋಧ ಕರ್ತವ್ಯದ ವೇಳೆಯಲ್ಲಿಯೇ ಶಾಖಾಘಾತದಿಂದಾಗಿ ಸಾವಿಗೀಡಾಗಿದ್ದಾರೆ.

59ನೇ ಬೆಟಾಲಿಯನ್‌ನ ಸಹಾಯಕ ಕಮಾಂಡೆಂಟ್ ವಿಶ್ವ ದೇವ್ ಹಾಗೂ ಹೆಡ್ ಕಾನ್‌ಸ್ಟೆಬಲ್ ದಯಾಳ್ ರಾಮ್ ತಮ್ಮ ತಂಡದೊಂದಿಗೆ ಶುಕ್ರವಾರ ಪಾಕಿಸ್ತಾನದ ಗಡಿಯ 'ಹರಾಮಿ ನಾಲಾ' ಎಂಬ ಕ್ಲಿಷ್ಟಕರ ಭೂಪ್ರದೇಶದಲ್ಲಿ ಗಸ್ತು ತಿರುಗಲು ತೆರಳಿದ್ದರು. ಆ ವೇಳೆ ಬಿಸಿಲಿನ ತಾಪ ತಾಳಲಾರದೆ ಕುಸಿದುಬಿದ್ದಿದ್ದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಮೃತಪಟ್ಟರು.

## ನೀಟ್: ರಾಜ್‌ಕೋಟ್‌ನ 148 ಅಭ್ಯರ್ಥಿಗಳಿಗೆ 650ಕ್ಕಿಂತ ಹೆಚ್ಚು ಅಂಕಗಳು

# ಗಮನ ಸೆಳೆದ ರಾಜ್‌ಕೋಟ್, ಸಿಕರ್

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಈ ವರ್ಷದ 'ನೀಟ್– ಯುಜಿ'ಯ ಕೇಂದ್ರ ಮತ್ತು ನಗರವಾರು ಫಲಿತಾಂಶಗಳನ್ನು ಶನಿವಾರ ಪ್ರಕಟ ಮಾಡಿದ್ದು, ಅಭ್ಯರ್ಥಿಗಳ ಗುರುತನ್ನು ಮರೆಮಾಚಿದೆ.

ಗುಜರಾತ್‌ನ ರಾಜ್‌ಕೋಟ್‌ನ ಆರ್.ಕೆ. ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಕಾಲೇಜಿನ ಕೇಂದ್ರದಲ್ಲಿ ಪರೀಕ್ಷೆ ಬರೆದವರಲ್ಲಿ 240ಕ್ಕೂ ಹೆಚ್ಚು ಅಭ್ಯರ್ಥಿಗಳು 600ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಈ ಪೈಕಿ 148 ಅಭ್ಯರ್ಥಿಗಳು 650ರಿಂದ 700ರ ನಡುವೆ ಅಂಕಗಳನ್ನು ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ಈ ಕೇಂದ್ರದ ಒಬ್ಬರು ಪೂರ್ಣ 720 ಅಂಕಗಳನ್ನು ಪಡೆದಿದ್ದರೆ, 11 ಮಂದಿ 700ಕ್ಕೂ ಹೆಚ್ಚಿನ ಅಂಕಗಳನ್ನು ಪಡೆದಿದ್ದಾರೆ.

ರಾಜಸ್ಥಾನದ ಸಿಕರ್‌ನ ಕೇಂದ್ರವೊಂದರ 150ಕ್ಕೂ ಹೆಚ್ಚು ಅಭ್ಯರ್ಥಿಗಳು ಹಾಗೂ ಮತ್ತೊಂದು ಕೇಂದ್ರದ 83 ಅಭ್ಯರ್ಥಿಗಳು 600ಕ್ಕಿಂತ ಹೆಚ್ಚು ಮತ್ತು 700ಕ್ಕಿಂತ ಕಡಿಮೆ ಅಂಕಗಳನ್ನು ಪಡೆದು ಗಮನಸೆಳೆದಿದ್ದಾರೆ.

ತಮಿಳುನಾಡಿನ ನುಮಕ್ಕಲ್‌ನಲ್ಲಿ ಇರುವ ಪೊವೈ ಎಂಜಿನಿಯರಿಂಗ್ ಕಾಲೇಜಿನ ಕೇಂದ್ರದಲ್ಲಿ ಪರೀಕ್ಷೆ ಬರೆದ 1,017 ಅಭ್ಯರ್ಥಿಗಳ ಪೈಕಿ ಇಬ್ಬರು 700 ಅಂಕಗಳನ್ನು ದಾಟಿದ್ದರೆ, 52 ಅಭ್ಯರ್ಥಿಗಳು 650ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ.

**ಹರಿಯಾಣ ಕೇಂದ್ರದ ಏಳು-ಬೀಳು:** ಹರಿಯಾಣದ ಬಹದ್ದೂರ್‌ಗಢದಲ್ಲಿರುವ ಹರದಯಾಳ್ ಪಬ್ಲಿಕ್ ಸ್ಕೂಲ್ ಪರೀಕ್ಷಾ ಕೇಂದ್ರದಲ್ಲಿ 720ಕ್ಕೆ ಪೂರ್ಣ 720 ಅಂಕಗಳನ್ನು ಪಡೆದಿದ್ದ ಆರು ಅಭ್ಯರ್ಥಿಗಳ ಪೈಕಿ ಯಾರೊಬ್ಬರಿಗೂ ಪೂರ್ಣ ಅಂಕಗಳು ಬಂದಿಲ್ಲ. ಈ ಕೇಂದ್ರದಲ್ಲಿ 494 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ ಒಬ್ಬರು ಗರಿಷ್ಠ ಅಂದರೆ 682 ಅಂಕಗಳನ್ನು ಪಡೆದಿದ್ದು, ಅವರೇ ಕೇಂದ್ರದ 'ಟಾಪರ್' ಆಗಿದ್ದಾರೆ. ಅಲ್ಲದೆ ಇತರ 13 ಅಭ್ಯರ್ಥಿಗಳು 600ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ ಎಂಬುದು ಕೇಂದ್ರವಾರು ಫಲಿತಾಂಶದಿಂದ ಗೊತ್ತಾಗಿದೆ.

ಜೂನ್ 4ರಂದು ಪ್ರಕಟಿಸಲಾಗಿದ್ದ ಫಲಿತಾಂಶದಲ್ಲಿ ಈ ಕೇಂದ್ರದ ಆರು ಅಭ್ಯರ್ಥಿಗಳು ಪೂರ್ಣ ಅಂಕಗಳನ್ನು ಪಡೆದಿದ್ದರು. ಅಲ್ಲದೆ ಇತರ ಇಬ್ಬರು ಅಭ್ಯರ್ಥಿಗಳು ಕ್ರಮವಾಗಿ 718 ಮತ್ತು 719 ಅಂಕಗಳನ್ನು ಗಳಿಸಿದ್ದರು. ಒಂದೇ ಕೇಂದ್ರದ ಇಷ್ಟು ಅಭ್ಯರ್ಥಿಗಳು ಗರಿಷ್ಠ ಅಂಕಗಳನ್ನು ಪಡೆದಿದ್ದು, ಅನುಮಾನಕ್ಕೆ ಕಾರಣವಾಗಿತ್ತು.

ಫಲಿತಾಂಶ ಪ್ರಶ್ನಿಸಿ ಕೆಲ ಅಭ್ಯರ್ಥಿಗಳು ಸುಪ್ರೀಂ ಕೋರ್ಟ್ ಮೊರೆಹೋದರು. ಆಗ ಕೇಂದ್ರ ಶಿಕ್ಷಣ ಸಚಿವಾಲಯವು ಈ ವಿದ್ಯಾರ್ಥಿಗಳಿಗೆ ನೀಡಿದ್ದ ಕೃಪಾಂಕಗಳನ್ನು ರದ್ದುಗೊಳಿಸಿ, ಒಟ್ಟು 1,563 ಅಭ್ಯರ್ಥಿಗಳಿಗೆ ಜೂನ್ 23ರಂದು ಮರು ಪರೀಕ್ಷೆ ನಡೆಸಿತ್ತು. ಈ ಪೈಕಿ ಸುಮಾರು 813 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರ ಫಲಿತಾಂಶವನ್ನು ಜೂನ್ 30ರಂದು ಪ್ರಕಟಿಸಲಾಗಿತ್ತು. ಪರೀಕ್ಷೆಗೆ ಹಾಜರಾಗದ ಅಭ್ಯರ್ಥಿಗಳಿಗೆ ಕೃಪಾಂಕ ಬಿಟ್ಟು, ಅವರು ಪಡೆದಿದ್ದ ನೈಜ ಅಂಕಗಳನ್ನೇ ಅಂತಿಮಗೊಳಿಸಲಾಗಿತ್ತು.

**ಹಜಾರಿಬಾಗ್, ಗೋಧ್ರಾ ಕೇಂದ್ರಗಳ ಫಲಿತಾಂಶ:** ಜಾರ್ಖಂಡ್‌ನ ಹಜಾರಿಬಾಗ್‌ನ ಓಯಸಿಸ್ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲರನ್ನು ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಬಂಧಿಸಲಾಗಿದೆ. ಈ ಕೇಂದ್ರದಲ್ಲಿ ಯಾರೊಬ್ಬರೂ 700ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿಲ್ಲ. ಇಲ್ಲಿನ ಏಳು ಅಭ್ಯರ್ಥಿಗಳು 650ಕ್ಕಿಂತ ಹೆಚ್ಚು, 23 ಅಭ್ಯರ್ಥಿಗಳು 600ಕ್ಕಿಂತ ಹೆಚ್ಚು ಹಾಗೂ 46 ಅಭ್ಯರ್ಥಿಗಳು 550ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ.

### ಮೂವರನ್ನು ಬಂಧಿಸಿದ ಸಿಬಿಐ

'ನೀಟ್– ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಮತ್ತೊಬ್ಬ ಪ್ರಮುಖ ಆರೋಪಿ ಹಾಗೂ ಹಣಕ್ಕಾಗಿ ಪ್ರಶ್ನೆಗಳನ್ನು ಪರಿಹರಿಸಿದ್ದ ಇಬ್ಬರು ಎಂಬಿಬಿಎಸ್ ವಿದ್ಯಾರ್ಥಿಗಳನ್ನು ಸಿಬಿಐ ಶನಿವಾರ ಬಂಧಿಸಿದೆ.

ಎನ್‌ಐಟಿ ಜಮ್‌ಷೆಡ್‌ಪುರದ ಬಿ.ಟೆಕ್ ಪದವೀಧರ ಶಶಿಕಾಂತ್ ಪಾಸ್ವಾನ್ ಅಲಿಯಾಸ್ ಶಶಿ ಅಲಿಯಾಸ್ ಪಸು ಪ್ರಮುಖ ಆರೋಪಿಗಳಲ್ಲಿ ಒಬ್ಬ ಎನ್ನಲಾಗಿದೆ. ರಾಜಸ್ಥಾನದ ಭರತ್‌ಪುರದ ವೈದ್ಯಕೀಯ ಕಾಲೇಜಿನ 2ನೇ ವರ್ಷದ ವಿದ್ಯಾರ್ಥಿ ಕುಮಾರ ಮಂಗಳಂ ಬಿಷ್ಣೋಯ್ ಮತ್ತು 1ನೇ ವರ್ಷದ ದೀಪೇಂದರ್ ಶರ್ಮಾ ಬಂಧಿತ ಆರೋಪಿಗಳಾಗಿದ್ದಾರೆ.

ಈ ಮೂಲಕ ಪರೀಕ್ಷಾ ಅಕ್ರಮ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಬಿಐ ಬಂಧಿಸಿರುವವರ ಸಂಖ್ಯೆ 21ಕ್ಕೆ ಏರಿದೆ.

### ಐವರು ನಕ್ಸಲರ ಶರಣಾಗತಿ

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಶನಿವಾರ ಐವರು ನಕ್ಸಲರು ಪೊಲೀಸರು ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ಎದುರು ಶರಣಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಎಲ್ಲ ನಕ್ಸಲರು ರಾಜ್ಯ ಸರ್ಕಾರದ ಶರಣಾಗತಿ ಮತ್ತು ಪುನರ್ವಸತಿ ಯೋಜನೆಯಡಿಯಲ್ಲಿ ಪ್ರಯೋಜನಗಳನ್ನು ಪಡೆಯಲಿದ್ದಾರೆ ಎಂದು ಹೇಳಿದರು.

ಶರಣಾದ ನಕ್ಸಲರು, ನಕ್ಸಲ್ ಸಂಘಟನೆಗಳು ಕರೆ ನೀಡುವ ಬಂದ್‌ಗಳ ಸಮಯದಲ್ಲಿ ಪೋಸ್ಟರ್ ಮತ್ತು ಬ್ಯಾನರ್‌ಗಳನ್ನು ಹಾಕುವುದು, ಮರಗಳನ್ನು ಕತ್ತರಿಸುವ ಮೂಲಕ ರಸ್ತೆ ಬಂದ್ ಮಾಡುವುದು ಸೇರಿದಂತೆ ಇತರ ಕೆಲಸಗಳನ್ನು ಮಾಡುತ್ತಿದ್ದರು ಎಂದರು.

# 'ಕಿರಿಯ ವಕೀಲರಿಗೆ ₹5000 ಸಂಬಳ ಸರಿಯಲ್ಲ'

ಮಧುರೆ (ತಮಿಳುನಾಡು): ಹಿರಿಯ ವಕೀಲರು ತಮ್ಮ ಅಧೀನ ಕಿರಿಯ ವಕೀಲರಿಗೆ ತಿಂಗಳಿಗೆ ₹5,000 ಸಂಬಳ ನೀಡುವ ಪ್ರವೃತ್ತಿಯು, ಅವರು ವೃತ್ತಿಯನ್ನೇ ತೊರೆದು ಹೋಗುವಂತೆ ಒತ್ತಾಯಿಸಬಹುದು ಎಂದು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ಕಳವಳ ವ್ಯಕ್ತಪಡಿಸಿದ್ದಾರೆ.

ಡಿ.ವೈ ಚಂದ್ರಚೂಡ್

ಮದ್ರಾಸ್ ಹೈಕೋರ್ಟ್‌ನ ಮಧುರೆ ಪೀಠದ ಸ್ಥಾಪನೆಯ 20ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿದ ಚಂದ್ರಚೂಡ್ ಅವರು, ಹೊಸದಾಗಿ ಬರುವ ಕಿರಿಯ ವಕೀಲರಿಗೆ ಕಡಿಮೆ ಸಂಬಳವನ್ನು ನೀಡುವ ಕುರಿತ ಸಮಸ್ಯೆಯನ್ನು ಪ್ರಸ್ತಾಪಿಸಿ, 'ಅವರು (ಕಿರಿಯ ವಕೀಲರು) ಕಲಿಯಲು, ಅನುಭವ ಹೆಚ್ಚಿಸಿಕೊಳ್ಳಲು ಮತ್ತು ಮಾನ್ಯತೆಯನ್ನು ಪಡೆಯಲು ಬರುತ್ತಾರೆ. ನೀವು ನಿಮ್ಮ ಅಧಿಕಾರ ಚಲಾಯಿಸುವ ಮನೋಭಾವವನ್ನು ಬಿಟ್ಟು ಅವರಿಗೆ ಮಾರ್ಗದರ್ಶನ ನೀಡಿ. ಕಿರಿಯರಿಂದಲೂ ಕಲಿಯುವುದು ಬಹಳಷ್ಟಿದೆ' ಎಂದು ಹಿರಿಯ ವಕೀಲರಿಗೆ ತಿಳಿಹೇಳಿದರು.

'ಕಿರಿಯ ವಕೀಲರು ಸಮಕಾಲೀನ ವಾಸ್ತವಗಳ ಬಗ್ಗೆ ಹೆಚ್ಚು ಜ್ಞಾನ ಹೊಂದಿದ್ದಾರೆ. ಅವರ ಕಠಿಣ ಪರಿಶ್ರಮಕ್ಕೆ ಅನುಗುಣವಾಗಿ ಗೌರವಾನ್ವಿತ ಮೊತ್ತವನ್ನು ನೀಡಿ. ಸಾಕಷ್ಟು ಸಂಬಳವಿಲ್ಲದೇ ಕೆಲಸ ಮಾಡುವುದು ಸರಿಯಲ್ಲ. ಇದು ಜನರು ಕಡಿಮೆ ಹಣಕ್ಕಾಗಿ ಕಡಿಮೆ ನಿದ್ರೆ ಮತ್ತು ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುವ ನಿರೀಕ್ಷೆಯಾಗಿದೆ. ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯಿಂದ ಸಮರ್ಥ ವಕೀಲರನ್ನು ಬೆಳೆಸಿಕೊಳ್ಳಿರಿ' ಎಂದರು.

ಈ ವೇಳೆ ಮದ್ರಾಸ್ ಹೈಕೋರ್ಟ್‌ನಲ್ಲಿ ಈ ವರ್ಷ ಸ್ಥಾಪಿಸಲಾದ 'ವಿಕೋಪ ದತ್ತಾಂಶ ನಿರ್ವಹಣಾ ಕೇಂದ್ರ'ದಲ್ಲಿ ದೆಹಲಿ ಹೈಕೋರ್ಟ್‌ನ ಡೇಟಾ ಮತ್ತು ಸಾಫ್ಟ್‌ವೇರ್ ಬ್ಯಾಕ್‌ಅಪ್ ಅನ್ನು ಇರಿಸಿರುವುದನ್ನು ಶ್ಲಾಘಿಸಿದರು.

### ಕೇರಳದ ಬಾಲಕನಲ್ಲಿ ನಿಫಾ ಸೋಂಕು ದೃಢ

ಮಲಪ್ಪುರಂ (ಕೇರಳ), (ಪಿಟಿಐ): ಮಲಪ್ಪುರಂ ಜಿಲ್ಲೆಯ 14 ವರ್ಷದ ಬಾಲಕನೊಬ್ಬನಿಗೆ ನಿಫಾ ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ಕೇರಳದ ಆರೋಗ್ಯ ಸಚಿವರಾದ ವೀಣಾ ಜಾರ್ಜ್ ಅವರು ಶನಿವಾರ ಇಲ್ಲಿ ತಿಳಿಸಿದರು.

ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಾಲಕನಲ್ಲಿ ನಿಫಾ ಸೋಂಕಿರುವುದನ್ನು ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಯು (ಎನ್‌ಐವಿ) ದೃಢಪಡಿಸಿದೆ ಎಂದು ಮಾಧ್ಯಮದವರಿಗೆ ಹೇಳಿದರು.

'ಸೋಂಕಿತನನ್ನು ಕೋಯಿಕ್ಕೋಡ್‌ನ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಸ್ಥಳಾಂತರಿಸಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈತನ ಸಂಪರ್ಕಕ್ಕೆ ಬಂದಿದ್ದವರ ಪತ್ತೆ ನಡೆದಿದೆ. ನಿಕಟ ಸಂಪರ್ಕದಲ್ಲಿದ್ದವರು ಈಗಾಗಲೇ ಪ್ರತ್ಯೇಕ ವಾಸದಲ್ಲಿದ್ದಾರೆ. ಇವರೆಲ್ಲರ ಮಾದರಿಗಳನ್ನು ಪರೀಕ್ಷೆಗೆ ಕಳಿಸಲಾಗಿದೆ' ಎಂದು ಮಾಹಿತಿ ನೀಡಿದರು.

## 'ಸೈನ್ಸ್ ಅಡ್ವಾನ್ಸಸ್' ನಿಯತಕಾಲಿಕದ ವರದಿ ಸ್ವೀಕಾರಾರ್ಹವಲ್ಲ– ಸಚಿವಾಲಯ

# ಕೋವಿಡ್ ಸಾವು: ವರದಿ ಅಲ್ಲಗಳೆದ ಕೇಂದ್ರ

ನವದೆಹಲಿ (ಪಿಟಿಐ): ಭಾರತದಲ್ಲಿ ಕೋವಿಡ್ ಅವಧಿಯ 2020ನೇ ಸಾಲಿನ ಜೀವಿತಾವಧಿ ಕುರಿತು 'ಸೈನ್ಸ್ ಅಡ್ವಾನ್ಸಸ್' ನಿಯತಕಾಲಿಕದಲ್ಲಿ ಪ್ರಕಟವಾದ ವರದಿಯು 'ಅಸ್ವೀಕಾರಾರ್ಹ ಮತ್ತು ಅಸಮರ್ಥನೀಯ' ಎಂದು ಕೇಂದ್ರ ಗೃಹ ಸಚಿವಾಲಯವು ಅಲ್ಲಗಳೆದಿದೆ.

ನಿಯತಕಾಲಿಕದ ವರದಿಯ ಅಂಶಗಳು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಮುನ್ನೆಲೆಗೆ ಬಂದ ಹಿಂದೆಯೇ ಶನಿವಾರ ಸಚಿವಾಲಯವು ಈ ಪ್ರತಿಕ್ರಿಯೆ ನೀಡಿದೆ.

ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ–5 (ಎನ್‌ಎಫ್‌ಎಚ್‌ಎಸ್ –5) ವಿಶ್ಲೇಷಿಸುವಾಗ ಸಾಮಾನ್ಯ ಕ್ರಮವನ್ನೇ ಅನುಸರಿಸಲಾಗಿದೆ ಎಂದು ಲೇಖಕರು ಹೇಳಿಕೊಂಡಿದ್ದರೂ, 'ವಿಶ್ಲೇಷಣಾ ಕ್ರಮದಲ್ಲಿಯೇ ಗಂಭೀರವಾದ ಲೋಪಗಳಿವೆ' ಎಂದು ಸಚಿವಾಲಯ ದೂರಿದೆ.

**ಸಚಿವಾಲಯವು ಪಟ್ಟಿ ಮಾಡಿರುವ ಅಂಶಗಳು ಹೀಗಿವೆ:**

- 'ಮುಖ್ಯವಾದ ಲೋಪವೆಂದರೆ ಲೇಖಕರು, ಎನ್‌ಎಫ್‌ಎಚ್‌ಎಸ್ ಸಮೀಕ್ಷೆಯ ಉಪವಿಭಾಗದಲ್ಲಿರುವ ಜನವರಿ–ಏಪ್ರಿಲ್ 2021ರ ಕುಟುಂಬಗಳ ಮಾಹಿತಿ ಜೊತೆಗೆ, ಈ ಕುಟುಂಬಗಳಲ್ಲಿ 2020 ಮತ್ತು 2019ರಲ್ಲಿ ಸಂಭವಿಸಿದ ಸಾವಿನ ಪ್ರಕರಣಗಳ ವಿವರ ಹೋಲಿಕೆ ಮಾಡುತ್ತಾರೆ. ಮತ್ತು ಈ ಹೋಲಿಕೆ ಫಲಿತಾಂಶವನ್ನು ಇಡೀ ದೇಶಕ್ಕೆ ಅನ್ವಯ ಮಾಡುತ್ತಾರೆ
- 14 ರಾಜ್ಯಗಳ ಕುಟುಂಬಗಳ ಶೇ 23ರಷ್ಟು ಮಾಹಿತಿಯನ್ನಷ್ಟೇ ಈ ವಿಶ್ಲೇಷಣೆಗೆ ಬಳಸಿದೆ. ಇದು, ದೇಶದ ಒಟ್ಟು ಸ್ಥಿತಿಯ ಪ್ರಾತಿನಿಧಿಕವಲ್ಲ
- ಕೋವಿಡ್ ಪರಿಣಾಮ ಉತ್ತುಂಗದಲ್ಲಿದ್ದಾಗಿನ ಮಾಹಿತಿ ಆಯ್ಕೆ ಮಾಡಿ ವಿಶ್ಲೇಷಿಸಲಾಗಿದೆ. ಇದು, ತಾರತಮ್ಯದ ಕ್ರಮ

ಎಸ್‌ಆರ್‌ಎಸ್‌ನ ಮಾಹಿತಿಯು 36 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿನ 8,842 ಮಾದರಿ ಘಟಕಗಳ ವ್ಯಾಪ್ತಿಗೆ ಒಳಪಡುವ 24 ಲಕ್ಷ ಕುಟುಂಬಗಳ 84 ಲಕ್ಷ ಜನಸಂಖ್ಯೆಯ ವಿವರಗಳನ್ನಷ್ಟೇ ಒಳಗೊಂಡಿತ್ತು ಎಂದು ಸಚಿವಾಲಯವು ವಿವರಿಸಿದೆ.

### ಮರಣ ನೋಂದಣಿ ಲೋಪದ ಆರೋಪ: ಸತ್ಯಕ್ಕೆ ದೂರ

ಭಾರತದಂತಹ ಮಧ್ಯಮ ಆದಾಯದ ದೇಶಗಳಲ್ಲಿ ಮರಣ ನೋಂದಣಿ ವ್ಯವಸ್ಥೆಯು ದುರ್ಬಲವಾಗಿದೆ ಎಂದೂ ವಿಶ್ಲೇಷಣೆಯಲ್ಲಿ ಹೇಳಲಾಗಿದೆ. ಇದು ಸತ್ಯಕ್ಕೆ ದೂರವಾದುದು. ಭಾರತದಲ್ಲಿ ನಾಗರಿಕ ನೋಂದಣಿ ವ್ಯವಸ್ಥೆಯು (ಸಿಆರ್‌ಎಸ್) ಹೆಚ್ಚು ದೃಢವಾದುದು ಹಾಗೂ ಸಾವಿನ ಶೇ 99ರಷ್ಟು ಮಾಹಿತಿ ಒಳಗೊಂಡಿದೆ ಎಂದು ಕೇಂದ್ರ ಪ್ರತಿಪಾದಿಸಿದೆ. ನೋಂದಣಿ ಪ್ರಮಾಣ 2015ರಲ್ಲಿ ಶೇ 75ರಷ್ಟಿದ್ದರೆ, 2020ರಲ್ಲಿ ಶೇ 99ರಷ್ಟಿತ್ತು ಎಂದು ಗೃಹ ಸಚಿವಾಲಯ ಹೇಳಿದೆ.

ಈ ಸಿಆರ್‌ಎಸ್ ಮಾಹಿತಿಯ ಪ್ರಕಾರ, ಮರಣ ನೋಂದಣಿ ಸಂಖ್ಯೆಯು 2019ರ ಸಾಲಿಗೆ ಹೋಲಿಸಿದರೆ 2020ರಲ್ಲಿ 4.74 ಲಕ್ಷ ಏರಿದೆ. ಹಾಗೆಯೇ ಈ ಸಂಖ್ಯೆಯು 2018ರಲ್ಲಿ 4.86 ಲಕ್ಷವಿದ್ದರೆ, 2019ರಲ್ಲಿ 6.90 ಲಕ್ಷಕ್ಕೆ ಏರಿತ್ತು ಎಂದೂ ತಿಳಿಸಿದೆ.

ಹಾಗೆಯೇ, ಸಿಆರ್‌ಎಸ್‌ನಲ್ಲಿ ದಾಖಲಾದ ಸಾವಿನ ಎಲ್ಲ ಹೆಚ್ಚುವರಿ ಪ್ರಕರಣಗಳಿಗೂ ಕೋವಿಡ್ ಪರಿಸ್ಥಿತಿಯೇ ಕಾರಣ ಎಂದೂ ಹೇಳಲಾಗದು. ಮರಣ ಸಂಖ್ಯೆ ಏರಿಕೆಗೆ ಸಿಆರ್‌ಎಸ್‌ನಲ್ಲಿ ನೋಂದಣಿ ಪ್ರಮಾಣ ಏರಿಕೆಯೂ (2029ರಲ್ಲಿ ಶೇ 92ರಷ್ಟಿತ್ತು) ಕಾರಣ ಎಂದು ಪ್ರತಿಕ್ರಿಯಿಸಿದೆ.

ಈ ಹಿನ್ನೆಲೆಯಲ್ಲಿ 'ಸೈನ್ಸ್ ಅಡ್ವಾನ್ಸಸ್' ನಿಯತಕಾಲಿಕದ ವರದಿಯಲ್ಲಿ ಉಲ್ಲೇಖಿಸಿರುವಂತೆ 2020ರಲ್ಲಿ 11.9 ಲಕ್ಷ ಸಾವುಗಳು ಸಂಭವಿಸಿವೆ ಎಂಬ ಮಾಹಿತಿಯು ತಪ್ಪು ಮಾಹಿತಿ ನೀಡುವ ಅಂದಾಜು ಆಗಿದೆ' ಎಂದು ಸಚಿವಾಲಯವು ಹೇಳಿಕೆಯಲ್ಲಿ ಪ್ರತಿಪಾದಿಸಿದೆ.


ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section, CESC, Mysuru-570017.
Telephone No: 9448994705
Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177

ಚಾವಿಸನಿನಿ/ಪ್ರವ್ಯ/ಉ.ಪ್ರವ್ಯ(ಖ)/ಸ.ಪ್ರವ್ಯ(ಖ)–1/2024–25/7744–47 ದಿನಾಂಕ: 18.07.2024

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಪೂರ್ಣಗುತ್ತಿಗೆ ಆಧಾರದ ಮೇಲೆ "ಯೂನಿಟ್ ದರ ಗುತ್ತಿಗೆ ಅಡಿಯಲ್ಲಿ ಕೈಗೊಳ್ಳಲು ಈ ಕೆಳಕಂಡ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

| ಕ್ರ.ಸಂ | ವಿವರಗಳು | ವಿಚಾರಣೆ ಸಂಖ್ಯೆ/ದಿನಾಂಕ |
|---|---|---|
| I. | ಚಾವಿಸನಿನಿಯ 18 ವಿಭಾಗಗಳಲ್ಲಿ ಪರಿವರ್ತಕ ಕೇಂದ್ರಗಳು, 11ಕೆ.ವಿ ಮಾರ್ಗಗಳು, ಎಲ್.ಟಿ ಮಾರ್ಗಗಳು ಮತ್ತು ಅಪಾಯಕರ ಸ್ಥಿತಿಯಲ್ಲಿರುವ ವಿದ್ಯುತ್ ಜಾಲದ ನಿರ್ವಹಣಾ ಕಾಮಗಾರಿ. | |
| 1 | ಎನ್.ಆರ್ ಮೊಹಲ್ಲಾ | ಸಿ2–5816/15–07–2024 |
| 2 | ವಿ.ವಿ ಮೊಹಲ್ಲಾ | ಸಿ2–5817/15–07–2024 |
| 3 | ನಂಜನಗೂಡು | ಸಿ2–5818/15–07–2024 |
| 4 | ಹುಣಸೂರು | ಸಿ2–5819/15–07–2024 |
| 5 | ಕೆ.ಆರ್. ನಗರ | ಸಿ2–5820/15–07–2024 |
| 6 | ಚಾಮರಾಜನಗರ | ಸಿ2–5821/15–07–2024 |
| 7 | ಕೊಳ್ಳೇಗಾಲ | ಸಿ2–5822/15–07–2024 |
| 8 | ಮಡಿಕೇರಿ | ಸಿ2–5823/15–07–2024 |
| 9 | ಮಂಡ್ಯ | ಸಿ2–5824/15–07–2024 |
| 10 | ಮದ್ದೂರು | ಸಿ2–5825/15–07–2024 |
| 11 | ಪಾಂಡವಪುರ | ಸಿ2–5826/15–07–2024 |
| 12 | ನಾಗಮಂಗಲ | ಸಿ2–5827/15–07–2024 |
| 13 | ಕೆ.ಆರ್. ಪೇಟೆ | ಸಿ2–5828/15–07–2024 |
| 14 | ಹಾಸನ | ಸಿ2–5829/15–07–2024 |
| 15 | ಸಕಲೇಶಪುರ | ಸಿ2–5830/15–07–2024 |
| 16 | ಚನ್ನರಾಯಪಟ್ಟಣ | ಸಿ2–5831/15–07–2024 |
| 17 | ಹೊಳೆನರಸೀಪುರ | ಸಿ2–5832/15–07–2024 |
| 18 | ಅರಸೀಕೆರೆ | ಸಿ2–5833/15–07–2024 |
| II. | ಮೈಸೂರು ನಗರ ವ್ಯಾಪ್ತಿಯಲ್ಲಿ ಭೂಗತ "ಕಾಂಪ್ಯಾಕ್ಟ್ ಸಬ್‌ಸ್ಟೇಷನ್" ನಿರ್ಮಿಸುವ ಕಾಮಗಾರಿ | ಸಿ2–5834/15–07–2024 |
| III. | ಚಾವಿಸನಿನಿಯಲ್ಲಿ ಭೂಗತ ಕೇಬಲ್ ಮತ್ತು ಆರ್.ಎಂ.ಯು ಗಳ ನಿರ್ವಹಣಾ ಕಾಮಗಾರಿ. | ಸಿ2–5835/15–07–2024 |

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 22–07–2024ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

**ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912**

ಸಹಿ/– ಪ್ರಧಾನ ವ್ಯವಸ್ಥಾಪಕರು (ಖರೀದಿ), ಚಾ.ವಿ.ಸ.ನಿ.ನಿ., ಮೈಸೂರು

DIPR/DDMYS-179/KSMCA-196/2024-25

# ಬಾಳು ಬೆಳಗಿದ ಸೋಲಾರ್ ಪಾರ್ಕ್

₹1,200 ಕೋಟಿ ಸಿಎಸ್‌ಆರ್ ನಿಧಿ ಸಂಗ್ರಹ | 2,050 ಮೆಗಾ ವಾಟ್ ವಿದ್ಯುತ್ ಉತ್ಪಾದನೆ | 13 ಸಾವಿರ ಎಕರೆ ಪ್ರದೇಶ | 5 ಹಳ್ಳಿಗಳಲ್ಲಿ ಯೋಜನೆ ಜಾರಿ | 50 ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಆರಂಭ



ಪ್ರಜಾವಾಣಿ ಚಿತ್ರ: ಕೆ.ಆರ್.ಜಯಸಿಂಹ

ಪ್ರಜಾವಾಣಿ ನೋಡಿಯೊ — ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

• ಕೆ.ಜೆ. ಮರಿಯಪ್ಪ

**ತುಮಕೂರು:** 'ನಮ್ಮದು ಒಂದು ಸಣ್ಣ ಶೆಡ್‌ನಲ್ಲಿ ಮನೆ ಇತ್ತು. ಯಾವಾಗ ಬೇಕಾದರೂ ಬಿದ್ದು ಹೋಗುವ ಪರಿಸ್ಥಿತಿ. 70 ಎಕರೆ ಜಮೀನು ಇದ್ದರೂ ಏನೂ ಮಾಡಲಾಗದ ಕೊರಗು. ಆಸ್ತಿವಂತರಾದರೂ ಜೇಬು ಖಾಲಿ. ಆದರೆ ಈಗ ನೋಡಿ, ಇಷ್ಟು ದೊಡ್ಡದಾದ ಮನೆ ಕಟ್ಟಿಸಿದ್ದೇನೆ. ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದೇನೆ, ಮದುವೆ ಮಾಡಿದ್ದೇನೆ. ಐದು ವರ್ಷಗಳಲ್ಲಿ ಎಷ್ಟೊಂದು ಸಾಧನೆ. ಕುಟುಂಬ–ಜೀವನದಲ್ಲಿ ಏನೆಲ್ಲ ಬದಲಾವಣೆಯಾಗಿದೆ....'

'ನಮ್ಮೂರಿನಲ್ಲಿ ಸರಿಯಾದ ರಸ್ತೆಯೂ ಇರಲಿಲ್ಲ. ಗುಂಡಿ ಬಿದ್ದ, ಕಲ್ಲು ತುಂಬಿದ ರಸ್ತೆಯಲ್ಲಿ ಓಡಾಡಬೇಕಿತ್ತು. ಹೊರಗಡೆ ಹೋಗಬೇಕಿದ್ದರೆ ಯಾರನ್ನಾದರೂ ಆಶ್ರಯಿಸಬೇಕಿತ್ತು, ಇಲ್ಲವೆ ಬೆಳಗ್ಗೆ, ಸಂಜೆ ಬರುತ್ತಿದ್ದ ಬಸ್‌ಗಾಗಿ ಕಾದು ಕುಳಿತುಕೊಳ್ಳಬೇಕಿತ್ತು. ಗ್ರಾಮದ ಒಬ್ಬಿಬ್ಬರ ಬಳಿ ಬೈಕ್ ಇತ್ತು. ಈಗ ಬಳಸಮುದ್ರ ಗ್ರಾಮವೊಂದರಲ್ಲೇ 100ಕ್ಕೂ ಹೆಚ್ಚು ಬೈಕ್‌ಗಳಿವೆ. ಗರಿಗರಿ ಬಟ್ಟೆ ತೊಟ್ಟು, ಸ್ಕೂಟರ್ ಮೇಲ್ ಜಮ್ ಅಂಥ ಓಡಾಡುತ್ತಿದ್ದಾರೆ.....'

'ಪೆಟ್ಟಿಗೆ ಅಂಗಡಿಯಲ್ಲಿ ವ್ಯಾಪಾರ ಇರಲಿಲ್ಲ, ಟೀ, ಕಾಫಿ ಕುಡಿಯಲು ಯಾರೂ ಬರುತ್ತಿರಲಿಲ್ಲ. ಈಗ ಜನ ಸಂದಣಿ ಹೆಚ್ಚಾಗಿದೆ, ಅಂಗಡಿ ಬಳಿಗೆ ಬಂದು ವ್ಯಾಪಾರ ಮಾಡುತ್ತಿದ್ದಾರೆ. ಅಂಗಡಿ, ಹೋಟೆಲ್ ಸಂಖ್ಯೆ ಹೆಚ್ಚಾಗಿವೆ. ಪೆಟ್ರೋಲ್ ಬಂಕ್ ಬಂದಿವೆ, ಮನೆ ಮುಂದೆ ಹೊಸ ಕಾರುಗಳು ನಿಂತಿವೆ. ಸೋಫಾ ಸೆಟ್, ದೊಡ್ಡ ಪರದೆಯ ಟಿ.ವಿ, ಮಿಕ್ಸಿ, ವಾಷಿಂಗ್ ಮಿಷನ್ ಹಳ್ಳಿ ಮನೆ ಸೇರಿವೆ....'

–ಹೀಗೆ ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡಿರುವ, ಸದಾ ಬರ, ಸುಡು ಬಿಸಿಲನ್ನೇ ಹಾಸಿಹೊದ್ದು ಮಲಗಿರುವ ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಹಳ್ಳಿಯ ಜನರು ತಮ್ಮದೇ ರೀತಿಯಲ್ಲಿ ಹೊಸದೊಂದು ಕಥೆಯನ್ನು ಬಿಚ್ಚಿಡುತ್ತಾ ಹೋಗುತ್ತಾರೆ. ಇದೇನು ಇದ್ದಕ್ಕಿದ್ದಂತೆ ನಡೆದ ಜಾದೂ ಅಲ್ಲ. ಯಾವುದೇ ಸಿನಿಮಾದ ಕಾಲ್ಪನಿಕ ದೃಶ್ಯವೂ ಅಲ್ಲ. ರೈತರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿ ಬದಲಾವಣೆಗೆ ಕಾರಣವಾಗಿದ್ದು ಸೌರ ವಿದ್ಯುತ್ ಉತ್ಪಾದನಾ ಯೋಜನೆ.

ಪಾವಗಡ ತಾಲ್ಲೂಕಿನ ಆಂಧ್ರದ ಗಡಿ ಭಾಗವಾದ ಬಳಸಮುದ್ರ, ಕ್ಯಾತಗಾನಚೆರ್ಲು, ರಾಯಚೆರ್ಲು, ತಿರುಮಣಿ, ವಳ್ಳೂರು ಗ್ರಾಮದ ಸುತ್ತಮುತ್ತ ಸೋಲಾರ್ ಪಾರ್ಕ್ ನಿರ್ಮಾಣವಾದ ನಂತರ ಅಲ್ಲಿನ ಜನರ ಆರ್ಥಿಕ ಪರಿಸ್ಥಿತಿ ಸಾಕಷ್ಟು ಸುಧಾರಿಸಿದೆ. ಜೀವನಕ್ಕೆ ಒಂದು ನೆಲೆ ಕಂಡುಕೊಳ್ಳುವತ್ತ ರೈತರು ಸಾಗಿದ್ದಾರೆ. ಬರಡು ನೆಲ, ಉಪಯೋಗಕ್ಕೆ ಬಾರದ ಭೂಮಿಯೇ ಈಗ 'ಫಸಲು' ಕೊಡುವ ತಾಣವಾಗಿದೆ.

ಯೋಜನೆ ಬಂದ ನಂತರ ಜನರ ಜೀವನಮಟ್ಟ ಸಾಕಷ್ಟು ಸುಧಾರಿಸಿದೆ. ಮೊದಲ ಆದ್ಯತೆಯಾಗಿ ಹೊಸದಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಮಕ್ಕಳ ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದಾರೆ. ಊರಿನಲ್ಲಿದ್ದ ಶಾಲೆಯಲ್ಲಿ ನಾಲ್ಕು ಅಕ್ಷರ ಕಲಿತ ನಂತರ ದುಡಿಯಲು ಕಳುಹಿಸುತ್ತಿದ್ದವರು ಈಗ, ಉನ್ನತ ಶಿಕ್ಷಣ ಕೊಡಿಸುವತ್ತ ಗಮನ ಹರಿಸಿದ್ದಾರೆ. ತುಮಕೂರು, ಬೆಂಗಳೂರಿನಂತಹ ನಗರಗಳಲ್ಲಿ ಮಕ್ಕಳು ಕಲಿಯುತ್ತಿದ್ದಾರೆ. ಓಡಾಡಲು ಬೈಕ್ ಖರೀದಿಸಿದ್ದಾರೆ. ಯೋಜನೆಗೆ ಹೆಚ್ಚಿನ ಪ್ರಮಾಣದಲ್ಲಿ ಜಮೀನು ನೀಡಿ, ಸಾಕಷ್ಟು ಆದಾಯ ಬರುವಂತಹ ಸ್ಥಿತಿವಂತರು ಕಾರು ಖರೀದಿಸಿದ್ದಾರೆ. ಮುಂದಿನ ದಿನಗಳಲ್ಲಿ ನಗರಗಳಲ್ಲಿ ನಿವೇಶನ ಕೊಳ್ಳುವ ಲೆಕ್ಕಾಚಾರ ನಡೆಸಿದ್ದಾರೆ. ಒಟ್ಟಾರೆಯಾಗಿ ಐದು ಹಳ್ಳಿಗಳ ಜನರ ಜೀವನಮಟ್ಟ ಸುಧಾರಿಸುವಂತಾಗಿದೆ.

ಈ ಭಾಗದಲ್ಲಿ ಕಡಲೆ ಕಾಯಿ ಬಿಟ್ಟರೆ ಬೇರೆ ಯಾವ ಬೆಳೆಯೂ ಬೆಳೆಯುವುದಿಲ್ಲ. ಇದೊಂದೇ ಜೀವನಕ್ಕೆ ಆಧಾರ. ಮಳೆಯ ಕಣ್ಣಾಮುಚ್ಚಾಲೆಯಿಂದ ಬೆಳೆ ಮನೆ ಸೇರಿದ್ದು ಅಪರೂಪ. ಕೆಲವೊಮ್ಮೆ ಬಿತ್ತನೆ ಮಾಡಿದ ಕೂಲಿಯೂ ಹುಟ್ಟುವುದಿಲ್ಲ. ಬೆಳೆದ ಅಲ್ಪಸ್ವಲ್ಪ ಶೇಂಗಾ ಮಾರಾಟ ಮಾಡಿ ವರ್ಷಪೂರ್ತಿ ಜೀವನ ನಡೆಸಬೇಕು. ಬೆಳೆ ಕೈಕೊಟ್ಟರೆ ಆ ವರ್ಷ ಕೂಲಿ ಹುಡುಕಿಕೊಂಡು ಹೋಗುವುದು ಬಿಟ್ಟರೆ ಬೇರೆ ದಾರಿ ಇಲ್ಲ. ಉಪ ಕಸುಬಾಗಿ ಕುರಿ, ಮೇಕೆ ಸಾಕಾಣಿಕೆ ಮಾಡುತ್ತಾರೆ. ಇದರಲ್ಲಿ ಬರುವ ಹಣದಲ್ಲೇ ಸಂಸಾರ ಸಾಗಬೇಕು. ಮಕ್ಕಳ ಶಿಕ್ಷಣ, ಮದುವೆ ಮಾಡಲು ಸಾಲಕ್ಕೆ ಕೈಯೊಡ್ಡುವ ಪರಿಸ್ಥಿತಿ. ಆ ಸಾಲ ತೀರಿಸಲು, ಜೀವನ ನಿರ್ವಹಣೆಗಾಗಿ ಕೂಲಿ ಅರಸಿ ವಲಸೆ ಹೋಗುವುದು ಬಿಟ್ಟರೆ ಬೇರೆ ದಾರಿ ಇರಲಿಲ್ಲ.

ಸೋಲಾರ್ ಪಾರ್ಕ್ ನಿರ್ಮಾಣವಾಗಿರುವ ನಾಗಲಮಡಿಕೆ ಹೋಬಳಿಯ ಪ್ರದೇಶ ಒಂದು ರೀತಿಯಲ್ಲಿ ಬಟಾಬಯಲಿನಂತಿದೆ. ಸುತ್ತಮುತ್ತ ಮರ ಗಿಡಗಳಿಲ್ಲದ ಬೆಟ್ಟಗುಡ್ಡ ಪ್ರದೇಶ. ನಾಲ್ಕು ಗಿಡ ಕಾಣಿಸಿದರೆ ಮರಳುಗಾಡಿನಲ್ಲಿ ಜೀವಜಲ ಕಂಡಂತಹ ಅನುಭವ. ಇಂತಹ ಬರದ ನಾಡಿನಲ್ಲಿ ದುಡಿಯುವ ಕೈಗಳಿಗೆ ಕೆಲಸವೂ ಇಲ್ಲ. ಬದುಕು ದುರ್ಬರ. 'ಏನೂ ಇಲ್ಲದ ಜಾಗದಲ್ಲಿ ನಮ್ಮನ್ನು ಏಕೆ ಹುಟ್ಟಿಸಿದೆ?' ಎಂದು ಹಲವರು ದೇವರಿಗೆ ಶಾಪ ಹಾಕುವುದೂ ಉಂಟು.

ಪಾವಗಡ ತಾಲ್ಲೂಕು ಶಾಶ್ವತ ಬರಪೀಡಿತ ಪ್ರದೇಶ. ಜಮೀನಿನಲ್ಲಿ ದುಡಿಮೆಯೂ ಇಲ್ಲದೆ ತುತ್ತಿನ ಚೀಲ ತುಂಬಿಸಲು ನಗರ, ಪಟ್ಟಣ ಪ್ರದೇಶದತ್ತ ವಲಸೆ ಹೋಗುವುದು ಸಾಮಾನ್ಯ. ತಾಲ್ಲೂಕಿನ ಬಹುಪಾಲು ಜನರು ಬೆಂಗಳೂರು, ಮುಂಬೈ, ಮತ್ತಿತರ ನಗರಗಳಿಗೆ ಉದ್ಯೋಗ ಹುಡುಕಿಕೊಂಡು ಹೋಗಿದ್ದಾರೆ. ಈಗಲೂ ಹೋಗುತ್ತಿದ್ದಾರೆ. ಕೃಷಿಗೆ ಪರ್ಯಾಯವಾಗಿ ಕೈಗಾರಿಕೆಗಳು ಬರದಿದ್ದರೆ ಪಾವಗಡ ಭಾಗದ ಜನರ ವಲಸೆ ಮತ್ತಷ್ಟು ಹೆಚ್ಚಲಿದೆ ಎಂಬುದು ಜನರ ಅಭಿಪ್ರಾಯವಾಗಿದೆ.

'ಸಾವಿರಾರು ಎಕರೆ ಪ್ರದೇಶದಲ್ಲಿ ಕೃಷಿ ಕೈಬಿಟ್ಟು, ಉದ್ಯಮ ಸ್ಥಾಪಿಸಿದರೆ ಆಹಾರ ಉತ್ಪಾದನೆ ತಗ್ಗಲಿದೆ. ಇದು ಆಹಾರ ಸಮತೋಲನದ ಮೇಲೆ ಪರಿಣಾಮ ಬೀರಲಿದೆ' ಎಂದು ಕೆಲವರು ವಾದಿಸುತ್ತಿದ್ದರು. 'ಬೆಳೆಯನ್ನೇ ಬೆಳೆಯಲಾಗದೆ, ಬೀಳುಬಿಟ್ಟಿರುವ ಭೂಮಿಯಲ್ಲಿ ಸೋಲಾರ್ ಪಾರ್ಕ್‌ನಂತಹ ಉದ್ಯಮ ಆರಂಭವಾದರೆ ಯಾವ ಸಮಸ್ಯೆ ಆಗುತ್ತದೆ' ಎಂದು ನೊಂದ ಜನರು ಪ್ರಶ್ನಿಸುತ್ತಾರೆ.

**ರೈತರ ಹೋರಾಟದ ಫಲ:** ಸೋಲಾರ್ ಪಾರ್ಕ್ ಸುಮ್ಮನೆ ರೈತರ ಹೊಲಕ್ಕೆ ಬರಲಿಲ್ಲ. ಈ ಪಾರ್ಕ್ ನಿರ್ಮಾಣವಾಗಲು ರೈತರ ಹೋರಾಟದ ಫಲವೂ ಇದೆ. ತಿರುಮಣಿ ಗ್ರಾಮದ ಸಮೀಪ ವ್ಯಕ್ತಿಯೊಬ್ಬರು ಖಾಸಗಿ ಸೋಲಾರ್ ಪಾರ್ಕ್ ನಿರ್ಮಿಸಿ ವಿದ್ಯುತ್ ಉತ್ಪಾದನೆಗೆ ಕೈ ಹಾಕಿದ್ದರು. ಜಮೀನು ಬಾಡಿಗೆಗೆ ಪಡೆದುಕೊಂಡು ರೈತರಿಗೆ ಹಣ ನೀಡಲು ಆರಂಭಿಸಿದರು. ಇದನ್ನು ಕಂಡ ಅಕ್ಕಪಕ್ಕದ ಗ್ರಾಮಗಳ ರೈತರಲ್ಲೂ ಆಸೆ ಚಿಗುರೊಡೆಯಿತು. ಖಾಸಗಿ ಸಂಸ್ಥೆಗಳ ಜತೆ ನಡೆಸಿದ ಮಾತುಕತೆ ಅಷ್ಟೊಂದು ಯಶಸ್ಸು ಕಾಣಲಿಲ್ಲ.

ಬಳಸಮುದ್ರ ಗ್ರಾಮದ ಗೋವಿಂದಪ್ಪ ಮತ್ತಿತರರು ಸೇರಿಕೊಂಡು ಈ ವಿಚಾರವನ್ನು ಬೆಂಗಳೂರಿನಲ್ಲಿ ಇದ್ದ ಸಾಂಬಸದಾಶಿವರೆಡ್ಡಿ, ವೆಂಕಟರೆಡ್ಡಿ ಮೊದಲಾದ ಸ್ನೇಹಿತರ ಗಮನಕ್ಕೆ ತಂದರು. ಅದೇ ಸಮಯಕ್ಕೆ ರಾಜ್ಯ ಸರ್ಕಾರ ಸೋಲಾರ್ ಪಾರ್ಕ್ ನಿರ್ಮಾಣ ಮಾಡುವ ಪ್ರಯತ್ನದಲ್ಲಿತ್ತು. ರೈತರು ಉತ್ಪಾದಿಸಿ ವಿದ್ಯುತ್ ನೀಡಿದರೆ ಖರೀದಿಸುವುದಾಗಿ ಸರ್ಕಾರದ ಕಡೆಯಿಂದ ಭರವಸೆ ಸಿಕ್ಕಿತು. ಸೂರ್ಯನ ಶಕ್ತಿ ಬಳಸಿ ಒಂದು ಮೆಗಾ ವಾಟ್ ವಿದ್ಯುತ್ ಉತ್ಪಾದನೆಗೆ 5 ಎಕರೆ ಜಾಗ ಬೇಕು. ಪ್ಯಾನಲ್ ಬೋರ್ಡ್ ಅಳವಡಿ, ಇತರೆ ಮೂಲ ಸೌಲಭ್ಯ ಕಲ್ಪಿಸಲು ಸುಮಾರು ₹3.50 ಕೋಟಿ ಬಂಡವಾಳ (ಈಗ ಈ ವೆಚ್ಚ ಕಡಿಮೆಯಾಗಿದೆ) ಬೇಕಿತ್ತು. 'ಅಷ್ಟೊಂದು ದೊಡ್ಡ ಮಟ್ಟದಲ್ಲಿ ಬಂಡವಾಳ ತೊಡಗಿಸಲು ಸಾಧ್ಯವಿಲ್ಲ. ಜೀವನ ನಡೆಸುವುದೇ ಕಷ್ಟಕರವಾಗಿರುವಾಗ ಬಂಡವಾಳ ಎಲ್ಲಿಂದ ತರುವುದು' ಎಂಬುದು ರೈತರ ಪ್ರಶ್ನೆಯಾಗಿತ್ತು. ಕೊನೆಗೆ ರೈತರ ಜತೆಗೆ ಚರ್ಚಿಸಿದ ಕೆಲವು ಮುಖಂಡರು ಜಮೀನನ್ನು ಬಾಡಿಗೆ ನೀಡುವ ಬಗ್ಗೆ ಒಮ್ಮತಕ್ಕೆ ಬಂದು, ಈ ವಿಚಾರವನ್ನು ಅಂದಿನ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಗಮನಕ್ಕೆ ತಂದರು.

ರೈತರು ಹಾಗೂ ಸಚಿವರ ನಡುವೆ ಮಾತುಕತೆ ನಡೆದು ಜಮೀನನ್ನು ಬಾಡಿಗೆಗೆ ಪಡೆದುಕೊಂಡು ಸೋಲಾರ್ ಘಟಕ ನಿರ್ಮಿಸಿ ವಿದ್ಯುತ್ ಉತ್ಪಾದಿಸುವ ಯೋಜನೆ ರೂಪುಗೊಂಡಿತು. ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮದ (ಕೆಎಸ್‌ಪಿಡಿಸಿ) ಮೂಲಕ ಈ ಯೋಜನೆ ಸಾಕಾರಗೊಂಡಿದ್ದು, ರೈತರ ಮುಖದಲ್ಲಿ ನಗು ತರಿಸಿದೆ.

## ಬಾಡಿಗೆ ನಿಗದಿ

ಭೂಮಿ ಕೊಟ್ಟಿರುವ ರೈತರ ಜತೆಗೆ ಕೆಎಸ್‌ಪಿಡಿಸಿ ಮೂಲಕ ಒಪ್ಪಂದ ಮಾಡಿಕೊಂಡಿದ್ದು, ವರ್ಷಕ್ಕೆ ಒಮ್ಮೆ ಬಾಡಿಗೆ ಹಣ ನೀಡಲಾಗುತ್ತಿದೆ. ಆರಂಭದ ಮೊದಲ ವರ್ಷ ಎಕರೆಗೆ ಒಂದು ವರ್ಷಕ್ಕೆ ₹21 ಸಾವಿರ ಬಾಡಿಗೆ ನಿಗದಿಪಡಿಸಲಾಯಿತು. ಪ್ರತಿ ಎರಡು ವರ್ಷಕ್ಕೆ ಒಮ್ಮೆ ಶೇ 5ರಷ್ಟು ಬಾಡಿಗೆ ಹೆಚ್ಚಿಸುವ ಬಗ್ಗೆ ಕರಾರು ಮಾಡಿಕೊಳ್ಳಲಾಗಿದೆ. 2016ರಲ್ಲಿ ಆರಂಭವಾದ ಯೋಜನೆಯ ಮೊದಲ ಹಂತ 2018 ಹಾಗೂ ಕೊನೆಯ ಹಂತ 2019ಕ್ಕೆ ಪೂರ್ಣಗೊಂಡಿದೆ.

ರೈತರಿಂದ ಪಡೆದುಕೊಂಡ ಜಮೀನನ್ನು ವಿದ್ಯುತ್ ಉತ್ಪಾದಿಸುವ ಖಾಸಗಿ ಕಂಪನಿಗಳಿಗೆ ಕೆಎಸ್‌ಪಿಡಿಸಿ ಮೂಲಕ ನೀಡಲಾಗಿದೆ. ಈ ಕಂಪನಿಗಳು ಪ್ರತಿ ವರ್ಷವೂ ಬಾಡಿಗೆ ಹಣವನ್ನು ಕೆಎಸ್‌ಪಿಡಿಸಿಗೆ ನೀಡುತ್ತವೆ. ಅಲ್ಲಿಂದ ಪ್ರತಿ ವರ್ಷವೂ ರೈತರ ಖಾತೆಗೆ ಹಣ ಜಮೆ ಮಾಡಲಾಗುತ್ತಿದೆ.

**ರೈತರ ಕೈಗೆ ಸೋಲಾರ್:** ರೈತರ ಜತೆಗೆ 28 ವರ್ಷಗಳ ವರೆಗೆ ಜಮೀನು ಗುತ್ತಿಗೆಯ ಒಪ್ಪಂದ ಮಾಡಿಕೊಳ್ಳಲಾಗಿದೆ. ಒಪ್ಪಂದದ ಅವಧಿ ಮುಗಿದ ನಂತರ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕಗಳನ್ನು ರೈತರಿಗೆ ಬಿಟ್ಟುಕೊಡಲಾಗುತ್ತದೆ. ನಂತರದ ದಿನಗಳಲ್ಲಿ ವಿದ್ಯುತ್ ಉತ್ಪಾದಿಸಿ ಮಾರಾಟ ಮಾಡಬಹುದು. ಇಲ್ಲವೆ ಬೇರೊಂದು ಕಂಪನಿಗೆ ಮರು ಗುತ್ತಿಗೆ ನೀಡಬಹುದಾಗಿದೆ. ಆದರೆ 28 ವರ್ಷ ಮುಗಿಯುವುದರ ಒಳಗೆ ಸೋಲಾರ್ ಪ್ಯಾನಲ್‌ಗಳ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯ ಕಡಿಮೆಯಾಗಿರುತ್ತದೆ. ಅಂತಹ ಸಮಯದಲ್ಲಿ ಪ್ಯಾನಲ್‌ಗಳನ್ನು ಬದಲಿಸಬೇಕಾಗುತ್ತೆ. ಆಗ ರೈತರು ಬಂಡವಾಳ ತೊಡಗಿಸಬೇಕಾಗುತ್ತದೆ. ಇಲ್ಲವೆ ಬೇರೆ ಕಂಪನಿಗಳಿಗೆ ಗುತ್ತಿಗೆ ನೀಡುವ ಅನಿವಾರ್ಯತೆ ಎದುರಾಗಲಿದೆ.

ವರ್ಷಗಳು ಕಳೆದಂತೆ ಸೋಲಾರ್ ಪ್ಯಾನಲ್ ಅಳವಡಿಸಿರುವ ಭೂ ಪ್ರದೇಶ ಫಲವತ್ತತೆ ಕಳೆದುಕೊಳ್ಳುತ್ತದೆ. ಮುಂದಿನ ದಿನಗಳಲ್ಲಿ ಕೃಷಿ ಮಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಬಹುದು. ಸೋಲಾರ್ ಪ್ಯಾನಲ್ ಅಳವಡಿಸಲು ಗುಂಡಿ ತೋಡಿ, ಕಾಂಕ್ರೀಟ್ ತುಂಬಲಾಗಿದೆ. ಕಾಂಕ್ರೀಟ್ ತೆರವು ಮಾಡಲು ಇಡೀ ಭೂಮಿಯನ್ನು ಅಗೆಯಬೇಕಾಗುತ್ತದೆ. ಆಗಲೂ ದೊಡ್ಡ ಮಟ್ಟದ ವೆಚ್ಚ ಬರುತ್ತದೆ. ಇದು ಕಷ್ಟಕರ ಕೆಲಸ. ಹಾಗಾಗಿ ಮುಂದಿನ ದಿನಗಳಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆಗೆ ಬಳಕೆ ಮಾಡುವುದು ಬಿಟ್ಟರೆ ಬೇರೆ ದಾರಿ ಕಾಣುತ್ತಿಲ್ಲ ಎಂಬುದು ತಿರುಮಣಿ ಗ್ರಾಮದ ರೈತ ಆಂಜನೇಯ ಅವರ ಅಭಿಪ್ರಾಯವಾಗಿದೆ.

ಯೋಜನೆ ಜಾರಿಗೆ ಮುನ್ನ ಪರಿಸರ ಪ್ರಭಾವದ ಮೌಲ್ಯಮಾಪನ (ಇಐಎ) ಮಾಡಬೇಕಿತ್ತು. ನೈಸರ್ಗಿಕ ನಾಲೆ ಬದಲಾವಣೆ ಆಗಿರುವುದರಿಂದ ಅಂತರ್ಜಲದ ಮಟ್ಟ ಕುಸಿದಿದೆ. ಸೋಲಾರ್ ಪಾರ್ಕ್‌ನ ಖಾಲಿ ಜಾಗದಲ್ಲಿ ಮಿಯೋವಾಕಿ ಅರಣ್ಯ ಅಭಿವೃದ್ಧಿಪಡಿಸಬೇಕು. ಉಪಯೋಗಿಸಿದ ನಂತರ ಪ್ಯಾನಲ್‌ಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ಹವಾಮಾನ ಬದಲಾವಣೆಯ ಅಧ್ಯಯನ ಮಾಡಬೇಕು ಎಂದು ಪರಿಸರ ತಜ್ಞ ಪರಮೇಶ್ ಸೇವಾಲಾಲ್‌ಪುರ ಹೇಳುತ್ತಾರೆ.

**ಬರಡು ಭೂಮಿಯೂ ದುಬಾರಿ:** ಶೇಂಗಾ ಬೆಳೆಯಲೂ ಸಾಧ್ಯವಾಗದ ಜಮೀನನ್ನು ಎಕರೆಗೆ ₹25 ಸಾವಿರ ಕೊಟ್ಟು ಯಾರೂ ಕೊಂಡುಕೊಳ್ಳಲು ಮುಂದೆ ಬರುತ್ತಿರಲಿಲ್ಲ. ಸೋಲಾರ್ ಘಟಕ ಆರಂಭವಾದ ನಂತರ ಭೂಮಿ ಬೆಲೆ ಗಗನಮುಖಿಯಾಗಿದೆ. ಈ ಐದು ಹಳ್ಳಿಗಳ ಸುತ್ತಮುತ್ತ ಎಕರೆ ಬೆಲೆ ₹8 ಲಕ್ಷದಿಂದ ₹10 ಲಕ್ಷದ ವರೆಗೂ ಏರಿಕೆಯಾಗಿದೆ. ರಸ್ತೆಗೆ ಹೊಂದಿಕೊಂಡಿರುವ ಜಮೀನು ಎಕರೆಗೆ ₹15 ಲಕ್ಷದ ವರೆಗೂ ಮಾರಾಟವಾಗುತ್ತಿದೆ ಎಂದು ತಿರುಮಣಿ ಗ್ರಾಮದ ರೈತ ರಾಮಲಿಂಗಪ್ಪ ಹೇಳುತ್ತಾರೆ.

**ಉದ್ಯೋಗ ಲಭ್ಯ:** ವಿವಿಧ ಸೋಲಾರ್ ಘಟಕಗಳಲ್ಲಿ 2,180 ಮಂದಿಗೆ ಉದ್ಯೋಗ ಲಭ್ಯವಾಗಿದೆ. ಅದರಲ್ಲಿ ಶೇ 90ರಷ್ಟು ಮಂದಿ ಸ್ಥಳೀಯರಿಗೆ ಅವಕಾಶ ಸಿಕ್ಕಿದೆ. ಪರಿಣಿತ ತಾಂತ್ರಿಕ ಸಿಬ್ಬಂದಿಯನ್ನು ಮಾತ್ರ ಹೊರಗಡೆಯಿಂದ ನೇಮಕ ಮಾಡಿಕೊಳ್ಳಲಾಗಿದೆ.

## ಅಭಿವೃದ್ಧಿಗೆ ಹಣ

ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯಿಂದ (ಸಿಎಸ್‌ಆರ್) ಹಣ ಸಂಗ್ರಹಿಸಿ ಸ್ಥಳೀಯವಾಗಿ ಮೂಲಸೌಕರ್ಯ ಕಲ್ಪಿಸಲು ಬಳಕೆ ಮಾಡಿಕೊಳ್ಳಲಾಗಿದೆ. ಒಂದು ಮೆ.ವಾಗೆ ₹5 ಲಕ್ಷದಂತೆ ಸಿಎಸ್‌ಆರ್ ನಿಧಿಯನ್ನು ಒಂದು ಬಾರಿಗೆ ಮಾತ್ರ ಪಡೆದುಕೊಂಡಿದ್ದು, ಈವರೆಗೆ ಸುಮಾರು ₹1,200 ಕೋಟಿ ಸಂಗ್ರಹವಾಗಿದೆ. ಕೆಎಸ್‌ಪಿಡಿಸಿ ಈ ಹಣ ಸಂಗ್ರಹಿಸಿದ್ದು, ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಂಡಿದೆ. ಜಿಲ್ಲಾಧಿಕಾರಿ ನೇತೃತ್ವದ ಸಮಿತಿ ಅನುಮೋದನೆ ನೀಡಿದ ನಂತರ ಕೆಎಸ್‌ಪಿಡಿಸಿ ಮೂಲಕ ಕಾಮಗಾರಿಗಳನ್ನು ಆರಂಭಿಸಲಾಗುತ್ತದೆ.

ಇದೇ ಹಣ ಬಳಸಿಕೊಂಡು ಐದು ಹಳ್ಳಿಗಳ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿಪಡಿಸಲಾಗಿದೆ (ಶೇ 80ರಷ್ಟು ಸ್ಥಳೀಯ, ಶೇ 20ರಷ್ಟು ಗ್ರಾಮದಿಂದ ಹೊರಗೆ). ಶಾಲಾ ಕಟ್ಟಡ, ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ, ಆಸ್ಪತ್ರೆಗೆ ಮೂಲ ಸೌಲಭ್ಯ ಒದಗಿಸಲು, ಕೆರೆಗಳ ಅಭಿವೃದ್ಧಿ, ಅರಣ್ಯೀಕರಣದಂತಹ ಕೆಲಸಗಳಿಗೆ ವಿನಿಯೋಗಿಸಲಾಗುತ್ತಿದೆ ಎಂದು ಕೆಎಸ್‌ಪಿಡಿಸಿ ಸ್ಥಳೀಯ ಘಟಕದ ಕಾರ್ಯನಿರ್ವಾಹಕ ಎಂಜಿನಿಯರ್ ಆರ್.ಮಹೇಶ್ ಹೇಳುತ್ತಾರೆ.

ಎಲ್ಲಾ ಯೋಜನೆಗಳು ಪೂರ್ಣಗೊಂಡರೆ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆಗೆ ಪರಿಹಾರ ಸಿಗಲಿದ್ದು, ಹೆಚ್ಚುವರಿ ವಿದ್ಯುತ್ ಮಾರಾಟ ಮಾಡಿ ರಾಜ್ಯದ ಬೊಕ್ಕಸ ತುಂಬಿಸಬಹುದು. ಯೋಜನೆ ವಿಸ್ತರಣೆಯಿಂದ ಬಡ ಭೂಮಾಲೀಕರ ಜೇಬು ತುಂಬುತ್ತಿದೆ.

ಪರಿಕಲ್ಪನೆ: **ಯತೀಶ್ ಕುಮಾರ್ ಜಿ.ಡಿ**

## ದೇಶದ ಅತಿದೊಡ್ಡ ಸೋಲಾರ್ ಪಾರ್ಕ್

ಪಾವಗಡ ತಾಲ್ಲೂಕಿನ ತಿರುಮಣಿ ಸುತ್ತಮುತ್ತಲಿನ ಐದು ಗ್ರಾಮಗಳ ಬಳಿ ಸುಮಾರು 13 ಸಾವಿರ ಎಕರೆ ಪ್ರದೇಶದಲ್ಲಿ ತಲೆ ಎತ್ತಿರುವ ಸೋಲಾರ್ ಪಾರ್ಕ್ ದೇಶದ 'ಅತಿದೊಡ್ಡ ಸೌರ ವಿದ್ಯುತ್ ಉತ್ಪಾದನಾ ಘಟಕ' ಎಂಬ ಹಿರಿಮೆಗೆ ಪಾತ್ರವಾಗಿದೆ. ಎರಡನೇ ಹಂತದ ಯೋಜನೆ ಪೂರ್ಣಗೊಂಡರೆ ಜಗತ್ತಿನಲ್ಲೇ ಅತಿ ದೊಡ್ಡ ಘಟಕವಾಗಿ ಹೊರ ಹೊಮ್ಮಲಿದೆ.

ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮ (ಕೆಎಸ್‌ಪಿಡಿಸಿ) ಯೋಜನೆಯ ರೂವಾರಿ. 2019ಕ್ಕೆ ಮೊದಲ ಹಂತದ ಯೋಜನೆ ಪೂರ್ಣಗೊಂಡಿದ್ದು, ಪ್ರಸ್ತುತ 2,050 ಮೆಗಾ ವಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ. 50 ಬ್ಲಾಕ್‌ಗಳಲ್ಲಿ ಉತ್ಪಾದನೆ ಆರಂಭವಾಗಿದ್ದು, ಪ್ರತಿ ಬ್ಲಾಕ್‌ನಲ್ಲಿ 40 ಮೆಗಾ ವಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಎರಡನೇ ಹಂತದಲ್ಲಿ ರಾಪ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು 2,500 ಮೆಗಾ ವಾಟ್ ವಿದ್ಯುತ್ ಉತ್ಪಾದನೆಗೆ ಕಾರ್ಯಯೋಜನೆ ಸಿದ್ಧವಾಗಿದ್ದು, ಭೂಮಿಯನ್ನು ಗುರುತಿಸಿ, ರೈತರ ಜತೆಗೆ ಒಪ್ಪಂದ ಮಾಡಿಕೊಳ್ಳುವ ಕೆಲಸ ನಡೆದಿದೆ.

ಮೊದಲ ಹಂತದಲ್ಲಿ ಉಳಿದಿರುವ 1,200 ಎಕರೆ ಪ್ರದೇಶದಲ್ಲಿ 300 ಮೆಗಾ ವಾಟ್, ತಿರುಮಣಿ ಗ್ರಾ.ಪಂ ವ್ಯಾಪ್ತಿಯಲ್ಲಿ 500 ಮೆಗಾ ವಾಟ್ ವಿದ್ಯುತ್ ಉತ್ಪಾದನೆಯನ್ನು ಮೂರನೇ ಹಂತದ ಯೋಜನೆಯಾಗಿ ಜಾರಿ ಮಾಡಲು ಉದ್ದೇಶಿಸಲಾಗಿದೆ. ಎಲ್ಲಾ ಯೋಜನೆಗಳು ಪೂರ್ಣಗೊಂಡರೆ ಸುಮಾರು ಆರು ಸಾವಿರ ಮೆಗಾ ವಾಟ್ ವರೆಗೂ ವಿದ್ಯುತ್ ಉತ್ಪಾದನೆ ಸಾಧ್ಯವಾಗಲಿದೆ. ಈಗ ಉತ್ಪಾದನೆ ಆಗುತ್ತಿರುವ 2,050 ಮೆಗಾ ವಾಟ್ ಪೈಕಿ 1,850 ಮೆಗಾ ವಾಟ್ ಅನ್ನು ರಾಜ್ಯದ ವಿವಿಧ ವಿತರಣಾ ಕಂಪನಿಗಳು ಖರೀದಿಸುತ್ತಿದ್ದು, ಉಳಿದ 200 ಮೆಗಾ ವಾಟ್ ವಿದ್ಯುತ್ ಅನ್ನು ಉತ್ತರಪ್ರದೇಶ ಸರ್ಕಾರ ಖರೀದಿಸುತ್ತಿದೆ.

**ಶೇಂಗಾ ಬೆಳೆಯುವುದನ್ನೇ ನಿಲ್ಲಿಸಿದ್ದೆ. ಜಮೀನು ಪಾಳು ಬಿಟ್ಟಿದ್ದೆ. ಇನ್ನು ಮುಂದೆ ಕೃಷಿ ಸಾಧ್ಯವಿಲ್ಲ. ಮಾರಾಟ ಮಾಡಿ ಏನಾದರೂ ಮಾಡಬೇಕು ಎಂದು ಯೋಚಿಸಿದ್ದೆ. ಭೂಮಿ ಕೊಂಡುಕೊಳ್ಳಲೂ ಯಾರೂ ಮುಂದೆ ಬರುತ್ತಿರಲಿಲ್ಲ. ಒಳ್ಳೆ ಸಮಯದಲ್ಲಿ ಸೋಲಾರ್ ಪಾರ್ಕ್ ಬಂದು ನಮ್ಮ ಕೈ ಹಿಡಿಯಿತು**

**ಜಿ.ಎನ್.ಗೋವಿಂದಪ್ಪ,** ಬಳಸಮುದ್ರ ಗ್ರಾಮ

**ಸೋಲಾರ್ ಪಾರ್ಕ್‌ಗೆ 25 ಎಕರೆ ಜಮೀನು ಕೊಟ್ಟಿದ್ದೇನೆ. ಕೈ ತುಂಬ ಹಣ ಬರುತ್ತಿದೆ. ಇದರಿಂದ ಹೊಸದಾಗಿ ಮನೆ ಕಟ್ಟಿಸಲು ಸಾಧ್ಯವಾಯಿತು. ಮಕ್ಕಳ ಮದುವೆಗೂ ನೆರವಾಯಿತು. ನಮ್ಮ ಭಾಗದಲ್ಲಿ ಜಮೀನು ಕೊಂಡುಕೊಳ್ಳುವವರೇ ಇರಲಿಲ್ಲ. ಈಗ ಮಾರಾಟ ಮಾಡುವವರೇ ಇಲ್ಲ. ಭೂಮಿಗೆ ಬೇಡಿಕೆ ಹೆಚ್ಚಾಗಿದೆ**

**ಪಿ.ಕೃಷ್ಣಪ್ಪ,** ವೆಂಕಟಮ್ಮನಹಳ್ಳಿ

**ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಲು ನೆರವಾಯಿತು. ಸೋಲಾರ್ ಪಾರ್ಕ್ ತರಲು ಸಾಕಷ್ಟು ಪ್ರಯತ್ನ ಮಾಡಿದ್ದಕ್ಕೂ ಫಲ ಸಿಕ್ಕಿದೆ. ಈ ಭಾಗದ ಜನರ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಸುಧಾರಿಸಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ನೆರವಾಗಲಿದೆ**

**ಕೆ.ಎಂ.ಶ್ರೀನಿವಾಸುಲು,** ಕ್ಯಾತಗಾನಚೆರ್ಲು

## ಗುಂಡಣ್ಣ

## 25 ವರ್ಷಗಳ ಹಿಂದೆ

ಬುಧವಾರ, 21-07-1999

• **ಪಟೇಲ್ ಸಲಹೆ ತಿರಸ್ಕೃತ; ಇಬ್ಭಾಗ ಸನ್ನಿಹಿತ**

**ಪ್ರಜಾವಾಣಿ ವಾರ್ತೆ, ನವದೆಹಲಿ, ಜುಲೈ 20**– ಲೋಕಶಕ್ತಿ ಮತ್ತು ಸಮತಾ ಪಕ್ಷವು ಜನತಾದಳದ ಜತೆ ವಿಲೀನವಾಗುವ ನಿರ್ಧಾರಕ್ಕೆ ಇಂದು ನಡೆದ ಮಹತ್ವದ ಜನತಾದಳದ ರಾಜಕೀಯ ವ್ಯವಹಾರಗಳ ಸಮಿತಿ ಸಭೆಯು ಒಪ್ಪಿಗೆ ನೀಡಿತಾದರೂ, ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟಕ್ಕೆ (ಎನ್‌ಡಿಎ) ಸೇರುವುದನ್ನು ತಿರಸ್ಕರಿಸಿತು. ವಿಲೀನ ಬಳಿಕ ಬಿಜೆಪಿ ನೇತೃತ್ವದ ಎನ್‌ಡಿಎ ಜತೆ ಹೋಗುವುದಕ್ಕೆ ನಿರೀಕ್ಷೆಯಂತೆ ಮೂವರು ಪರವಾಗಿ, ಹನ್ನೊಂದು ಮಂದಿ ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಬಹುತೇಕವಾಗಿ ದಳವು ಇಬ್ಭಾಗವಾಗುವುದು ಖಚಿತವಾಗಿದೆ.

## 50 ವರ್ಷಗಳ ಹಿಂದೆ

ಭಾನುವಾರ, 21-07-1974

• **'ನಿರ್ಮಾಲ್ಯಂ', 'ಕಾಡು', 'ಅಬಚೂರಿನ ಪೋಸ್ಟಾಫೀಸು' ಚಿತ್ರಗಳಿಗೆ ರಾಷ್ಟ್ರ ಪ್ರಶಸ್ತಿ**

**ನವದೆಹಲಿ, ಜುಲೈ 20**– ನಿರ್ಮಾಲ್ಯಂ ಮಲೆಯಾಳಂ ಚಿತ್ರ 1973ರ ಅತ್ಉತ್ತಮ ಕಥಾ ಚಿತ್ರಕ್ಕಾಗಿ ರಾಷ್ಟ್ರ ಪ್ರಶಸ್ತಿ ಪಡೆದಿದೆ.

'ಕಾಡು' ಕನ್ನಡ ಚಿತ್ರ ರಾಷ್ಟ್ರ ಮಟ್ಟದ ಉತ್ತಮ ಕಥಾ ಚಿತ್ರಕ್ಕಾಗಿ ಎರಡನೇ ಬಹುಮಾನ ಗಳಿಸಿದೆ. ಎನ್.ಎಲ್.ಕಂಬೈನ್ಸ್ ನಿರ್ಮಾಣದ ಈ ಚಿತ್ರಕ್ಕೆ ಗಿರೀಶ್ ಕಾರ್ನಾಡ್ ನಿರ್ದೇಶಕರು. 'ಅಬಚೂರಿನ ಪೋಸ್ಟಾಫೀಸು' ಕನ್ನಡ ಚಿತ್ರಕ್ಕೆ ಪ್ರಾದೇಶಿಕ ಭಾಷೆಗಳಿಗೆ ನೀಡಲಾಗುವ ಪ್ರಶಸ್ತಿ ದೊರೆತಿದೆ. 'ದಿ ಫ್ಲೇಮ್ ಬರ್ನ್ಸ್ ಬ್ರೈಟ್' ಅತ್ಯುತ್ತಮ ಸಾಕ್ಷ್ಯಚಿತ್ರ ಬಹುಮಾನ ಪಡೆದಿದೆ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಜುಲೈ 21, 2024

**ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ:** ಆಷಾಢ ಶುಕ್ಲ ಪೂರ್ಣಿಮಾ ಗಂ. 15-47, **ನಕ್ಷತ್ರ:** ಉತ್ತರಾಷಾಢ ಗಂ. 24-14 **ಯೋಗ:** ವಿಷ್ಕಂಭ ಗಂ. 21-11
**ಕರಣ:** ಬವ ಗಂ. 15-47, ಕರ್ಕಾಟಕ ಮಾಸದ 05 ನೇ ದಿನ, ಮಳೆನಕ್ಷತ್ರ: ಪುಷ್ಯ 1.
**ರಾಹುಕಾಲ:** ಸಾಯಂಕಾಲ 04-30 – 06-00
**ಸೂರ್ಯೋದಯ:** 06-17 **ಸೂರ್ಯಾಸ್ತ:** 06-57
**ಮುಸ್ಲಿಂ ದಿನಾಂಕ:** 14 ಮೊಹರಮ್
**ದಿನ ವಿಶೇಷ:** ಗುರು ಪೂರ್ಣಿಮಾ, ವ್ಯಾಸ ಪೂಜೆ, ಆಷಾಢ ಪೂರ್ಣಿಮಾ **ಅದೃಷ್ಟ ಸಂಖ್ಯೆ:** 1, 4

**ಮೇಷ:** ಕೆಲಸದ ಸ್ಥಳದಲ್ಲಿ ವಾದ–ವಿವಾದಕ್ಕಿಳಿದರೆ, ನಿಮ್ಮ ಕಾರ್ಯ ಸಾಧನೆಗೆ ಅಡ್ಡಿಯಾಗುವುದು. ಸಂಘ ಸಂಸ್ಥೆಗಳಲ್ಲಿ ಜವಾಬ್ದಾರಿ ಹೊರುವ ಸಂದರ್ಭ ಬಂದಲ್ಲಿ, ಹಿಂದೆ ಸರಿಯುವುದು ಉತ್ತಮ.

**ವೃಷಭ:** ಆಸ್ತಿ ಖರೀದಿಯಲ್ಲಿ ಮೋಸವಾಗುವ ಸಾಧ್ಯತೆಗಳಿದೆ, ಎಚ್ಚರವಹಿಸಿ. ವಿದ್ಯಾರ್ಥಿಗಳಿಗೆ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಲು ಅವಕಾಶಗಳು ಸಿಗಲಿವೆ. ಹಿರಿಯರ ಆಶೀರ್ವಾದದಿಂದ ಕಾರ್ಯಗಳಲ್ಲಿ ಜಯ ಸಿಗಲಿದೆ.

**ಮಿಥುನ:** ಕೀಳರಿಮೆ, ಹಿಂಜರಿಕೆ ಸ್ವಭಾವ ಅಥವಾ ಅಹಂಕಾರದ ನಡವಳಿಕೆ ಬಿಟ್ಟು ಕಾರ್ಯೋನ್ಮುಖವಾದಲ್ಲಿ ಗೆಲುವು ನಿಮ್ಮದಾಗುತ್ತದೆ. ಭೋಗದ ವಸ್ತು ಖರೀದಿಯ ಅವಕಾಶ ನಿಮ್ಮದಾಗಲಿದೆ.

**ಕರ್ಕಾಟಕ:** ಎಲ್ಲ ಕೆಲಸಗಳಲ್ಲಿಯೂ ಯಶಸ್ಸು ಮತ್ತು ಲಾಭದಿಂದಾಗಿ ಮನಸ್ಸಿಗೆ ಸಂತೋಷವಾಗಲಿದೆ. ಧಾರ್ಮಿಕ ವಿಚಾರದಲ್ಲಿ ಆಸಕ್ತಿ ತೋರಿದಷ್ಟೂ ಸುಖ-ಶಾಂತಿ ಹೆಚ್ಚಲಿದೆ. ಕ್ರೀಡೆಯಲ್ಲಿ ಹೆಸರು ಮಾಡುವ ಅವಕಾಶವಿದೆ.

**ಸಿಂಹ:** ಆಸ್ತಿ ಕೊಳ್ಳುವುದರಲ್ಲಾಗಲೀ, ಮನೆ ಕಟ್ಟುವ ವಿಚಾರದಲ್ಲಾಗಲೀ ಅದೃಷ್ಟ ನಿಮ್ಮ ಪಾಲಿಗಿದೆ. ವಿದೇಶಿ ವಸ್ತುಗಳ ಖರೀದಿಗಾಗಿ ಅಧಿಕ ಧನ ವ್ಯಯ ಮಾಡುವಿರಿ. ಹಣದ ಬಗ್ಗೆ ಹೆಚ್ಚಿನ ಕಾಳಜಿವಹಿಸಿ.

**ಕನ್ಯಾ:** ಅಡುಗೆ ಮಾಡುವ ವಿಚಾರವಾಗಿ ಗೃಹಿಣಿಯರಿಗೆ ಪ್ರಶಂಸೆ ಸಿಗಲಿದೆ. ಮನೆಯಲ್ಲಿ ಪ್ರತಿನಿತ್ಯ ದುರ್ಗಾ ಸ್ತೋತ್ರ ಪಠಿಸಿದರೆ ಯಶಸ್ಸು ನಿಶ್ಚಿತವಾಗಿ ನಿಮ್ಮದಾಗುವುದು.

**ತುಲಾ:** ಶಿಕ್ಷಕರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶವಿದೆ. ಶತ್ರುಗಳ ಬಾಧೆ ದೂರಾಗಿ ನಿಮ್ಮ ಇತರ ಯೋಜನೆಗಳು ಈಡೇರಲಿವೆ. ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟ ಅಧಿಕಗೊಳ್ಳುವುದು.

**ವೃಶ್ಚಿಕ:** ಏಜೆನ್ಸಿಯಂತಹ ಉದ್ಯೋಗ ಆರಂಭಿಸಲು ಸೂಕ್ತ ಸ್ಥಳದ ಹುಡುಕಾಟ ಆರಂಭಿಸುವಿರಿ. ಶಿಲ್ಪಿಗಳಿಗೆ, ಸಮುದ್ರೋತ್ಪನ್ನಗಳ ಮಾರಾಟಗಾರರಿಗೆ ಲಾಭವಾಗಲಿದೆ. ಚಿನ್ನಾಭರಣ ಮಾರಾಟಗಾರರಿಗೆ ಆದಾಯ ಹೆಚ್ಚಲಿದೆ.

**ಧನು:** ಆಸ್ತಿ ವಿಷಯಗಳನ್ನು ತ್ವರಿತವಾಗಿ ಬಗೆ ಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ. ಉಪಹಾರ ಗೃಹಗಳಿಂದ ಲಾಭ ಪಡೆಯುವಿರಿ. ಗೆಳೆಯರೊಂದಿಗೆ ಪ್ರವಾಸ ಹೋಗಲು ದಿನ ನಿಶ್ಚಿತವಾಗುವುದು.

**ಮಕರ:** ಧಾರ್ಮಿಕವಾಗಿ ಏಕಾಗ್ರತೆ ಹಾಗೂ ಧ್ಯಾನಗಳಿಂದ ಮಾನಸಿಕವಾಗಿ ಸದೃಢರಾಗುವಿರಿ. ನಿಮ್ಮಲ್ಲಿರುವ ಪ್ರತಿಭೆಯನ್ನು ಇತರರು ಗಮನಿಸುವರು. ಸ್ನೇಹಿತರು ನಿಮ್ಮ ಯೋಜನೆಗಳನ್ನು ಬೆಂಬಲಿಸಲಿದ್ದಾರೆ.

**ಕುಂಭ:** ಗಣ್ಯ ವ್ಯಕ್ತಿಗಳ ಸಹಾಯದಿಂದ ಸಮಸ್ಯೆಗಳು ಪರಿಹಾರವಾಗಲಿವೆ. ಇನ್ನೊಬ್ಬರಿಗೆ ಗೌರವ ಕೊಟ್ಟು, ನೀವು ಗೌರವ ಸಂಪಾದಿಸಿಕೊಳ್ಳುವುದನ್ನು ರೂಢಿಸಿಕೊಳ್ಳಿ. ರಕ್ತದೊತ್ತಡ ನಿಯಂತ್ರಣಕ್ಕೆ ಬರಲಿದೆ.

**ಮೀನ:** ವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾಲುದಾರರೊಂದಿಗೆ ತುರ್ತಾಗಿ ಚರ್ಚಿಸಬೇಕಾದ ಅಗತ್ಯವಿದೆ. ಅವಿವಾಹಿತರು ಅಸ್ಪಷ್ಟ ನಿಲುವಿಂದ ಹೊರಬಂದಲ್ಲಿ ಕಂಕಣಬಲದ ಸಾಧ್ಯತೆ ಇದೆ.

## ಪದಬಂಧ 5748

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1. ಮಜದಲ್ಲಿರುವ ಕಾಮ! (4)
3. ನಕ್ಷತ್ರಗಳ ಗುಂಪು (4)
5. ಪ್ರಾಮಾಣಿಕತೆ ಹೀಗೆ ವ್ಯಕ್ತವಾಗಿದೆ (3)
6. ದಿಗಂತ ರೇಖೆಯಿದು (3)
8. ಅನುಕರಣೆಗೆ ಯೋಗ್ಯವಾದುದು (3)
9. ಹಿತ್ತಿಲಲ್ಲಿ ಕಾಣುವ ತೆಳುವಾದ ಸೀರೆ (3)
10. ಜಗಳಕ್ಕೊಂದು ಪರ್ಯಾಯ ಪದ (3)
12. ಬದಿಯಲ್ಲಿರುವ ಜೈನ ದೇವಾಲಯ (3)
14. ದೇವಾಲಯದ ಸಭಾಮಂಟಪ (4)
15. ಸರ ಧರಿಸಿಕೊಂಡೇ ಮಾಡಿದ ವ್ಯಾಯಾಮ (4)

**ಮೇಲಿಂದ ಕೆಳಕ್ಕೆ**
1. ಅಂತರಂಗದ ಪ್ರೇರಣೆ (4)
2. ಹೆತ್ತವಳು ಇಲ್ಲಿದ್ದಾಳೆ (3)
3. ಕತ್ತು ಚಾಚುತ್ತಾ ತೋರಿಸಿದ ಶಕ್ತಿ! (3)
4. ತರಾತುರಿಯಲ್ಲಿ ಖರೀದಿಸಿರುವ ಕಲಾಬತ್ತು (4)
7. ಜಲ ತರುವಾಗಿನ ಕ್ಲಿಷ್ಟತೆ (3)
8. ಮತ್ತು ಬರೆಸುವಂಥದ್ದು (3)
9. ಈ ಪರಿ ಕಾಣಿಸಿದ ವಸ್ತ್ರ! (4)
11. ಹತ್ತು ಎನ್ನುತ್ತಲೇ ಹೂಡಿರುವ ಸಂಚು! (4)
12. ನಂಟರ ಸಮೂಹ (3)
13. ತಾರೀಕು ಇಲ್ಲಿ ನಮೂದಾಗಿದೆ (3)



### 5747ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
2.ಗಜಗಮನ 4.ಅಗ್ರಜ
6.ಕನಕ 8.ಲತೆ
11.ಗರಡಿ 12.ಗೆಹ
14.ನಡುಕ1 6.ವಾಡಿಕೆ
17.ನಥಕಣಗು

**ಮೇಲಿಂದ ಕೆಳಕ್ಕೆ:**
1.ಮೃಗಜಲ 2.ಜಗ
3.ಪಾನಕ 5.ಅಧಿವೇಶನ
7.ಕರ್ಣಾಕರ್ಣಿಕೆ 9.ತೆಗಳು
10.ಮಂಡಿಗೆ 13.ಹವಾಗುಣ
15.ಕನಸು 18.ಕನ್ನ

## ಸುಡೊಕು 6133

| | | | | | | | | |
|---|---|---|---|---|---|---|---|---|
| 4 | | 6 | 9 | | 1 | | 3 | |
| | 9 | | | 8 | | | 7 | 4 |
| 8 | | | 4 | | 5 | 9 | | |
| 7 | | | | | | | | 8 |
| | 8 | | 1 | 6 | 2 | | 9 | |
| | | 9 | 7 | | | 2 | | |
| | | 8 | | 1 | | | | |
| 9 | | 4 | 8 | | 7 | | 2 | 5 |
| | 1 | | | 9 | | | 8 | 6 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 6132 ಸುಡೊಕು

| | | | | | | | | |
|---|---|---|---|---|---|---|---|---|
| 6 | 2 | 4 | 9 | 1 | 7 | 3 | 5 | 8 |
| 5 | 1 | 3 | 8 | 4 | 6 | 9 | 2 | 7 |
| 9 | 7 | 8 | 2 | 5 | 3 | 4 | 1 | 6 |
| 7 | 4 | 9 | 5 | 3 | 8 | 1 | 6 | 2 |
| 1 | 8 | 6 | 4 | 2 | 9 | 7 | 3 | 5 |
| 2 | 3 | 5 | 6 | 7 | 1 | 8 | 4 | 9 |
| 4 | 9 | 2 | 3 | 8 | 5 | 6 | 7 | 1 |
| 3 | 6 | 1 | 7 | 9 | 2 | 5 | 8 | 4 |
| 8 | 5 | 7 | 1 | 6 | 4 | 2 | 9 | 3 |

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಕಲೇಶಪುರದ ಶಿರಾಡಿಘಾಟ್‌ನಲ್ಲಿ ಕೆಂಪುಹೊಳೆಯು ಮೈದುಂಬಿ ಹರಿಯಿತು – ಪ್ರಜಾವಾಣಿ ಚಿತ್ರ/ಜಾನೇಕೆರೆ ಆರ್. ಪರಮೇಶ್(ಎಡಚಿತ್ರ) ಹಾವೇರಿ ಜಿಲ್ಲೆಯ ಶ್ಯಾಡಂಬಿ ಕುನ್ನೂರು ಮಾರ್ಗದಲ್ಲಿರುವ ಬೆಣ್ಣೆ ಹಳ್ಳ ತುಂಬಿ ಹರಿಯಿತು

# ಉಕ್ಕಿ ಹರಿದ ನದಿಗಳು, ಜಮೀನು ಜಲಾವೃತ

ಪ್ರಜಾವಾಣಿ ವಾರ್ತೆ

**ಹಾವೇರಿ:** ಧಾರಾಕಾರ ಮಳೆಯಿಂದಾಗಿ ಜಿಲ್ಲೆಯಲ್ಲಿ ವರದಾ, ಕುಮದ್ವತಿ, ಧರ್ಮಾ, ತುಂಗಭದ್ರಾ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ. ನದಿ ಪಾತ್ರದ ಜಮೀನಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ನುಗ್ಗಿದೆ. ನದಿಪಾತ್ರದ ಗ್ರಾಮಗಳು ಮುಳುಗಡೆ ಭೀತಿಯಲ್ಲಿವೆ.

ಜಿಲ್ಲೆಯ ದೊಡ್ಡ ನದಿ ವರದಾದಲ್ಲಿ ನೀರಿನ ಹರಿವು ಹೆಚ್ಚಿದೆ. ನಾಗನೂರು, ದೇವಗಿರಿ, ಕೂಡಲ, ಕಳಸೂರು, ಬೆಳವಗಿ ಹಾಗೂ ಸುತ್ತಮುತ್ತ ಜಮೀನುಗಳು ಜಲಾವೃತ್ತಗೊಂಡಿವೆ. ಅಡಿಕೆ, ಗೋವಿನ ಜೋಳ, ಸೋಯಾಬಿನ್ ಹಾಗೂ ಇತರೆ ಬೆಳೆಗಳು ನೀರಿನಲ್ಲಿ ಮುಳುಗಿವೆ.

ನಾಗನೂರು ಗ್ರಾಮದ ಮಸೀದಿವರೆಗೂ ನೀರು ಬಂದಿದ್ದು, ಈ ಭಾಗದಲ್ಲಿ ಬ್ಯಾರಿಕೇಡ್‌ಗಳನ್ನು ಇಟ್ಟು, ಜನರು ನದಿ ನೀರಿನಲ್ಲಿ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.

ಕುಮದ್ವತಿ ನದಿ ಹರಿವು ಹೆಚ್ಚಿದ್ದು, ರಟ್ಟೀಹಳ್ಳಿ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ಎಲಿವಾಳ, ಚಪ್ಪರದಹಳ್ಳಿ ಗ್ರಾಮಗಳ ನಡುವಿನ ಸೇತುವೆ ಮುಳಗಡೆಯಾಗಿ ಸಂಪರ್ಕ ಕಡಿತಗೊಂಡಿದೆ.

ರಾಣೆಬೆನ್ನೂರು ಹಾಗೂ ಕುಮಾರಪಟ್ಟಣ ಬಳಿ ತುಂಗಭದ್ರಾ ನದಿ ತುಂಬಿ ಹರಿಯುತ್ತಿದ್ದು, ಜಮೀನುಗಳಿಗೆ ನೀರು ನುಗ್ಗಿದೆ. ತಡಸ ಬಳಿಯ ಬೆಣ್ಣೆ ಹಳ್ಳ ಸಹ ತುಂಬಿ ಹರಿಯುತ್ತಿದೆ.

**ಆಲಮಟ್ಟಿಯಿಂದ ನೀರು ಹೊರಕ್ಕೆ (ಆಲಮಟ್ಟಿ ವರದಿ):** ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಎರಡು ದಿನಗಳಿಂದ ನಿರಂತರ ಸುರಿಯುತ್ತಿರುವ ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದಿಂದ ಶನಿವಾರ ಅಧಿಕ ಪ್ರಮಾಣದ ನೀರು ಹೊರಹರಿಸಲಾಗುತ್ತಿದೆ.

'ಆಲಮಟ್ಟಿ ವಿದ್ಯುತ್ ಉತ್ಪಾದನಾ ಕೇಂದ್ರದ ಮೂಲಕನೀರು ಹರಿಸುತ್ತಿದ್ದು, ಆರೂ ಘಟಕಗಳ ಮೂಲಕ 261 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ' ಎಂದು ಕೆಪಿಸಿಎಲ್ ಅಧಿಕಾರಿ ಚಂದ್ರಶೇಖರ ದೊರೆ ತಿಳಿಸಿದರು.

ನದಿಗೆ ನೀರು ಹರಿಸುತ್ತಿರುವ ಕಾರಣ ನದಿ ತೀಖದ ಗ್ರಾಮಗಳ ಜನರು ಮುನ್ನೆಚ್ಚರಿಕೆ ವಹಿಸಬೇಕು ಎಂದು ನಿಡಗುಂದಿ ತಹಶೀಲ್ದಾರ್ ಎ.ಡಿ. ಅಮರವಾಡಗಿ ಸೂಚಿಸಿದ್ದಾರೆ.

**ಕರಾವಳಿ: ತಗ್ಗಿದ ಮಳೆ (ಮಂಗಳೂರು ವರದಿ):** ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಳೆ ಕಡಿಮೆಯಾಗಿದೆ. ನದಿಗಳಲ್ಲಿ ನೀರಿನ ಮಟ್ಟವೂ ಕಡಿಮೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮಂಗಳೂರು-ಶೃಂಗೇರಿ ರಾಷ್ಟ್ರೀಯ ಹೆದ್ದಾರಿ ನೆಮ್ಮರ್ ಎಸ್ಟೇಟ್ ಸಾಲಮರ ಬಳಿ ಕಾಂಕ್ರಿಟ್ ತಡೆಗೋಡೆ ಕುಸಿದಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾಮಗಾರಿ ನಡೆಯುತ್ತಿದ್ದು, ಮಣ್ಣು ತೆಗೆದು ತಡೆಗೋಡೆ ಸರಿಪಡಿಸುವ ಕಾರ್ಯ ಆರಂಭಿಸಲಾಗಿದೆ. ರಸ್ತೆಯ ಒಂದು ಭಾಗದಲ್ಲಿ ಗೋಡೆ ಕುಸಿದಿದ್ದರಿಂದ ವಾಹನ ಸಂಚಾರಕ್ಕೆ ಅಡಚಣೆಯಾಗಿಲ್ಲ.

ಬಾಳೆಹೊನ್ನೂರು ಸಮೀಪದ ಮಾಗುಂಡಿ-ಮಹಲ್ ಗೋಡು-ಕಳಸ ನಡುವಿನ ರಸ್ತೆ ಮೇಲೆ ನೀರು ಹರಿದು ಶುಕ್ರವಾರ ಸಂಪರ್ಕ ಕಡಿತಗೊಂಡಿತ್ತು. ಶನಿವಾರ ಸಂಚಾರಕ್ಕೆ ಮುಕ್ತವಾಗಿದೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಶನಿವಾರ ಉತ್ತಮ ಮಳೆಯಾಗಿದೆ.

## ಸಿ.ಎಂ ಏಕೆ ಭೇಟಿ ನೀಡಿಲ್ಲ: ಎಚ್‌ಡಿಕೆ

**ಹುಬ್ಬಳ್ಳಿ:** 'ರಾಜ್ಯದ ಕರಾವಳಿ, ಚಿಕ್ಕಮಗಳೂರು, ಕೊಡಗಿನಲ್ಲಿ ಅಪಾರ ಮಳೆಯಾಗಿ ಸಾಕಷ್ಟು ಹಾನಿ ಆಗಿದೆ. ಏಳು ಮಂದಿ ಮೃತರಾದರೂ ಮುಖ್ಯಮಂತ್ರಿ ಮತ್ತು ಸಚಿವರು ಸ್ಥಳಕ್ಕೆ ಭೇಟಿ ನೀಡಿಲ್ಲ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಟೀಕಿಸಿದ್ದಾರೆ. 'ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ಹೇಳ ಬೇಕಿತ್ತು. ಎನ್‌ಡಿಆರ್‌ಎಫ್‌ನಡಿ ಕೇಂದ್ರ ಸರ್ಕಾರ ಮಳೆ ಹಾನಿ ಪರಿಹಾರ ನೀಡಲಿದೆ. ರಾಜ್ಯ ಸರ್ಕಾರ ಎಷ್ಟು ಕೊಡುತ್ತದೆಯೋ ನೋಡೋಣ' ಎಂದು ಪ್ರತಿಕ್ರಿಯಿಸಿದರು.

## ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್ * | 124.80 | 121.40 | 60,224 | 17,795 |
| ಹಾರಂಗಿ | 2,859 | 2,853.83 | 8,944 | 4,000 |
| ಕಬಿನಿ | 2,284.00 | 2,280.90 | 36,914 | 33,000 |
| ಹೇಮಾವತಿ | 2,922 | 2,918.80 | 40,267 | 12,079 |
| ಲಿಂಗನಮಕ್ಕಿ | 1,819 | 1,794.30 | 69,724 | - |
| ಸೂಪಾ (ಮೀ) | 564 | 542.20 | 41,278 | - |
| ಮಾಣಿ | 595 | 581.52 | 7,414 | - |
| ತುಂಗಭದ್ರಾ | 1,633 | 1,621.32 | 1,07,198 | 1,267 |
| ಮಲಪ್ರಭಾ | 2,079.5 | 2,060.80 | 15,090 | 194 |
| ಘಟಪ್ರಭಾ | 2175 | 2,151.16 | 25,697 | 1,630 |
| ಭದ್ರಾ | 186 | 162.3 | 46,876 | 186 |
| ಆಲಮಟ್ಟಿ (ಮೀ) | 519.6 | 517.98 | 65,480 | 1,00,000 |
| ನಾರಾಯಣಪುರ (ಮೀ) | 492.25 | 491.43 | 91,263 | 1.08,860 |

* ನೆಲಮಟ್ಟದಿಂದ

## ಮೈಸೂರು ಭಾಗ –ತಗ್ಗಿದ ಮಳೆ ಬಿರುಸು

**ಮೈಸೂರು:** ಮೈಸೂರು ಭಾಗದ ಜಿಲ್ಲೆಗಳಲ್ಲಿ ಶನಿವಾರ ಮಳೆ ಅಬ್ಬರ ಕಡಿಮೆಯಾಗಿತ್ತು. ಕೊಡಗು ಜಿಲ್ಲೆಯಲ್ಲಿ ಬಿರುಗಾಳಿಗೆ ವಿದ್ಯುತ್ ಕಂಬಗಳು ಬೀಳುತ್ತಿವೆ. 24 ಗಂಟೆಯಲ್ಲಿ ಜಿಲ್ಲೆಯಲ್ಲಿ 84 ವಿದ್ಯುತ್ ಕಂಬಗಳು ನೆಲಕಚ್ಚಿವೆ.

ಕೊಡಗುವಿನಲ್ಲಿ ಪ್ರವಾಹಪೀಡಿತ ಪ್ರದೇಶಗಳಾದ ಸಿದ್ದಾಪುರದ ಕರಡಿಗೋಡು ಹಾಗೂ ಕುಶಾಲನಗರದ ಬಡಾವಣೆಗಳಲ್ಲಿ ನೀರು ಕಡಿಮೆಯಾಗಿದೆ. 35 ಮಂದಿ ಕಾಳಜಿ ಕೇಂದ್ರಗಳಲ್ಲೇ ಆಶ್ರಯ ಪಡೆದಿದ್ದಾರೆ. ಪ್ರವಾಹಪೀಡಿತ ಪ್ರದೇಶಗಳಿಗೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಅವರು ಭೇಟಿ ನೀಡಿ, ಸಂತ್ರಸ್ತರ ಅಹವಾಲು ಆಲಿಸಿದರು.

ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ಸಂಕೇನಹಳ್ಳಿಯಲ್ಲಿ ಮನೆ, ಕೊಟ್ಟಿಗೆ ಕುಸಿದು ಮೂರು ಜಾನುವಾರುಗಳು ಮೃತಪಟ್ಟವು. ಬೇಲೂರಿನ ವಿಷ್ಣುಸಮುದ್ರ ಕೆರೆ ಹಾಗೂ ರಾಜಗೆರೆಯ ಕೆರೆ ಭರ್ತಿಯಾಗಿ ಕೋಡಿ ಬಿದ್ದಿದೆ.

## ನದಿಪಾತ್ರಗಳಲ್ಲಿ ಪ್ರವಾಹ ಭೀತಿ

ಒಂದನೇ ಪುಟದಿಂದ...

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಕಪ್ಪನಹಳ್ಳಿಯಲ್ಲಿ ಶುಕ್ರವಾರ ಮನೆಗೋಡೆ ಕುಸಿದು ನಾಲ್ವರು ಗಾಯಗೊಂಡರು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಂಗಳೂರು- ಶೃಂಗೇರಿ ಹೆದ್ದಾರಿಯಲ್ಲಿ ತಡೆಗೋಡೆ ಕುಸಿದು, ಸಂಚಾರ ಅಸ್ತವ್ಯಸ್ತವಾಗಿತ್ತು.

ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ ಎಲ್ಲ 26 ಗೇಟ್‌ಗಳನ್ನು ತೆರೆದು ಕೃಷ್ಣಾ ನದಿಗೆ ನೀರು ಬಿಡಲಾಗಿದ್ದು, ನದಿ ಪಾತ್ರಗಳಲ್ಲಿ ಪ್ರವಾಹ ಭೀತಿ ಎದುರಾಗಿದೆ.

519.6 ಮೀಟರ್ ಗರಿಷ್ಠ ಮಟ್ಟದ ಜಲಾಶಯದಲ್ಲಿ ಸದ್ಯ 518 ಮೀಟರ್ ನೀರಿದೆ.

ಮಹಾರಾಷ್ಟ್ರದಲ್ಲಿ ಧಾರಾಕಾರ ಮಳೆಯಾಗುತ್ತಿರುವ ಕಾರಣ ಜಿಲ್ಲೆಯ ಯಮಕನಮರಡಿ, ನಿಪ್ಪಾಣಿ, ಚಿಕ್ಕೋಡಿ, ಗೋಕಾಕ ಭಾಗದಲ್ಲಿ 10 ಸೇತುವೆಗಳು ಮುಳುಗಿವೆ. ಘಟಪ್ರಭಾ ನದಿ ಉಕ್ಕಿ ಹರಿಯುತ್ತಿದೆ.

ಹುಕ್ಕೇರಿ ತಾಲ್ಲೂಕಿನ ದಡ್ಡಿ, ಸಲಾಮವಾಡಿ, ಮೊದಗಾ, ಶೆಟ್ಟಿಹಳ್ಳಿ ಗ್ರಾಮ ಬಳಿ ಸೇತುವೆಗಳು ಮುಳುಗಿದ್ದು, ಸಂಚಾರ ಸ್ಥಗಿತವಾಗಿದೆ.

ನಿಪ್ಪಾಣಿ ತಾಲ್ಲೂಕಿನಲ್ಲಿ ಕಾರದಗಾ- ಭೋಜ, ಭೋಜವಾಡಿ- ಕುನ್ನೂರ, ಸಿದ್ನಾಳ- ಅಕ್ಕೋಳ, ಜತ್ರಾಟ- ಭೀವಶಿ ಸೇತುವೆಗಳು ಜಲಾವೃತಗೊಂಡಿವೆ.

ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಮಳೆಯಿಂದ ವೇದಗಂಗಾ- ದೂಧಗಂಗಾ ನದಿಗಳಿಗೆ ಅಪಾರ ಪ್ರಮಾಣದ ನೀರು ಹರಿದುಬರುತ್ತಿದೆ.

ಇನ್ನೊಂದೆಡೆ ಗೋಕಾಕ ಬಳಿಯ ಶಿಂಗಳಾಪುರ ಸೇತುವೆ, ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಸೇತುವೆ ಕೂಡಾ ಮುಳುಗಿದ್ದು, ಎರಡು ದಿನಗಳಿಂದ ಸಂಚಾರ ಬಂದ್ ಆಗಿವೆ.

ಕೊಡಗು ಜಿಲ್ಲೆಯಲ್ಲಿ ಶನಿವಾರ ಮಳೆ ತುಸು ವಿರಾಮ ನೀಡಿದ್ದರೂ, ಮಳೆಯ ಪರಿಣಾಮ ಮುಂದುವರಿದಿದೆ. ಮಳೆಯಿಂದಾಗಿ ಕೊಡಗು ಜಿಲ್ಲೆಯಲ್ಲಿ 13, ಹಾಸನ ಜಿಲ್ಲೆಯಲ್ಲಿ 135 ಮನೆಗಳಿಗೆ ಹಾನಿಯಾಗಿದೆ.

ಹಾಸನ ಜಿಲ್ಲೆಯ ಹೇಮಾವತಿ ಜಲಾಶಯಕ್ಕೆ ಒಳಹರಿವು 40 ಸಾವಿರ ಕ್ಯುಸೆಕ್‌ಗೆ ಏರಿದ್ದು, ಜಲಾಶಯದಿಂದ 12 ಸಾವಿರ ಕ್ಯುಸೆಕ್ ನೀರನ್ನು ನದಿ, ನಾಲೆಗಳಿಗೆ ಹರಿಸಲಾಗುತ್ತಿದೆ.

ಧಾರಾಕಾರ ಮಳೆ ಹಿಂದೆಯೇ, ಕರಾವಳಿ ಭಾಗದಲ್ಲಿ ಕಡಲ್ಕೊರೆತ ಹೆಚ್ಚಿದೆ. ಉಡುಪಿ ಜಿಲ್ಲೆ ಪಡುಬಿದ್ರಿಯ ನಡಿಪಟ್ಟದಲ್ಲಿ ಕಡಲ್ಕೊರೆತ ಮತ್ತಷ್ಟು ತೀವ್ರಗೊಂಡಿದ್ದು, ಅಪಾಯದ ಭೀತಿಯಲ್ಲಿದ್ದ ಮೀನುಗಾರಿಕಾ ಶೆಡ್‌ಗೆ ಭಾಗಶಃ ಹಾನಿಯಾಗಿದೆ.

**ಹೊಸಪೇಟೆ ವರದಿ:** ತುಂಗಭದ್ರಾ ಜಲಾಶಯಕ್ಕೆ ಪ್ರತಿದಿನ 10 ಟಿಎಂಸಿ ಅಡಿಯಷ್ಟು ನೀರು ಸೇರುತ್ತಿದ್ದು, 4–5 ದಿನಗಳಲ್ಲೇ ಜಲಾಶಯ ಭರ್ತಿಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಮಾಸ್ತಿಕಟ್ಟೆ: 16.7 ಸೆಂ.ಮೀ ಮಳೆ

**ಶಿವಮೊಗ್ಗ:** ಜಿಲ್ಲೆಯ ಹೊಸನಗರ ತಾಲ್ಲೂಕಿನ ಮಾಸ್ತಿಕಟ್ಟೆಯಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ 16.7 ಸೆಂ.ಮೀ ಮಳೆ ಸುರಿದಿದೆ.

ಅಲ್ಲದೆ, ಹುಲಿಕಲ್‌ನಲ್ಲಿ 14.9 ಸೆಂ.ಮೀ, ಸಾವೇಹಕ್ಲು ವಿನಲ್ಲಿ 14 ಸೆಂ.ಮೀ, ಚಕ್ರಾದಲ್ಲಿ 12.5 ಸೆಂ.ಮೀ, ಮಾಣಿಯಲ್ಲಿ 10.8 ಸೆಂ.ಮೀ, ಯಡೂರಿನಲ್ಲಿ 10.5 ಸೆಂ.ಮೀ ಮಳೆ ಸುರಿದಿರುವುದು ದಾಖಲಾಗಿದೆ.

## ಗುರುತತ್ತ್ವದ ಬೆಳಕಿನ ಪರ್ವ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಗುರುಪೂರ್ಣಿಮೆ

**ವ್ಯಕ್ತಿಯಾಗಲೀ** ಸಮಾಜವಾಗಲೀ ದಾರಿ ತಪ್ಪಿದೆ ಎಂದರೆ ಅದಕ್ಕೆ ಕಾರಣ ಸರಿಯಾದ ಶಿಕ್ಷಣದ ಕೊರತೆ. ಶಿಕ್ಷಣದ ಕೊರತೆಯಾಗಿದೆ ಎಂದರೆ ನಮಗೆ ಯೋಗ್ಯ ಗುರು ದೊರೆತಿಲ್ಲ ಎಂದೇ ಹೌದು. ಎಂದರೆ ಗುರುವಿಗೂ ಶಿಕ್ಷಣಕ್ಕೂ ವ್ಯಷ್ಟಿ-ಸಮಷ್ಟಿಗಳ ಏಳಿಗೆ-ನೆಮ್ಮದಿಗಳಿಗೂ ನೇರ ಸಂಬಂಧವಿದೆ ಎಂದಾಯಿತು. ನಮ್ಮ ಜೀವನದ ಬೆಳಕಾಗಿರುವ ಗುರುತತ್ತ್ವವನ್ನು ಸ್ಮರಿಸಿ, ಆರಾಧಿಸುವ ಪರ್ವದಿನವೇ 'ಗುರುಪೂರ್ಣಿಮೆ'.

ನಮ್ಮಲ್ಲಿ ಗುರುಪೂರ್ಣಿಮೆಯನ್ನೇ ವ್ಯಾಸ ಪೂಜೆಯನ್ನಾಗಿಯೂ, ವ್ಯಾಸಪೂಜೆಯನ್ನೇ ಗುರುಪೂರ್ಣಿಮೆಯನ್ನಾಗಿಯೂ ಆಚರಿಸಲಾಗುತ್ತದೆ; ಇದು ಔಚಿತ್ಯಪೂರ್ಣವಾಗಿಯೂ ಇದೆಯೆನ್ನಿ. ಇಡಿಯ ನಮ್ಮ ಸಂಸ್ಕೃತಿಗೆ ಗುರುಸ್ವರೂಪದಲ್ಲಿರುವವರು ವ್ಯಾಸಮಹರ್ಷಿಗಳು.

ಶಿಕ್ಷಣ ಎಂದರೆ ಏನು? ಅರಿವು ಎಂದು ತಾನೆ? ಹಾಗಾದರೆ ಅರಿವು ಎಂದರೆ ಏನು? ನಮ್ಮ ಜೀವನವನ್ನು ಯಾವ ಯಾವ ವಿವರಗಳು ಚೆನ್ನಾಗಿ ಮಾಡುತ್ತವೆಯೋ ಅವೆಲ್ಲವೂ ಅರಿವು ಎಂದೆನಿಸಿಕೊಳ್ಳುತ್ತದೆ. ಈ ಅರಿವಿನ ಮೂಲವೇ 'ವೇದ'. ಆದರೆ ಇದು ಅಗಾಧವಾಗಿರುವುದರಿಂದ ಇದನ್ನು ನಮಗೆ ಬೇಕಾದಷ್ಟು ಸಂಪಾದಿಸಿ, ಬಳಸಿಕೊಳ್ಳುವುದು ಸುಲಭವಲ್ಲ. ಹೀಗೆ ಅನಂತವೂ ಅಪರಿಮಿತವೂ ಆಗಿರುವ ಜ್ಞಾನರಾಶಿಯನ್ನು ಮಾನವನ ಒಳಿತಿಗಾಗಿ ವಿಭಾಗಿಸಿಕೊಟ್ಟವರು ವ್ಯಾಸಮಹರ್ಷಿಗಳು. ಅವರು ನಮ್ಮ ಜೀವನಕ್ಕೆ ಬೆಳಕಾಗಿ ಒದಗಿದವರು. ಹೀಗಾಗಿ ವ್ಯಾಸರು ನಮಗೆ ಗುರುಗಳು; ಮಾತ್ರವಲ್ಲ, ಅವರು ಎಲ್ಲ ಗುರುಗಳ ಪ್ರತಿನಿಧಿ. ಆದುದರಿಂದಲೇ ಅವರ ಸ್ಮರಣೆಯಲ್ಲಿ ವ್ಯಾಸಪೂಜೆಯನ್ನೂ ಗುರುಪೂರ್ಣಿಮೆಯನ್ನೂ ಆಚರಿಸುತ್ತೇವೆ.

ಇಂದಿನ ಶಿಕ್ಷಣಪದ್ಧತಿಯಲ್ಲಿ ಜೀವನದ ಗುರಿಯ ಕಡೆಗೆ ಬೆಳಕನ್ನು ಚೆಲ್ಲುವಂಥ ಮನೋಧರ್ಮವೇ ಮಾಯವಾಗಿದೆ. ಕೃತಕವಾದ ಆಸೆಗಳನ್ನು ಸೃಷ್ಟಿಸುವುದು, ಅವುಗಳನ್ನು ಪೂರೈಸಿಕೊಳ್ಳಲು ಜೀವನದುದ್ದಕ್ಕೂ ಮಾಡಬೇಕಾದ ತಂತ್ರಗಾರಿಕೆಯನ್ನು ಕಲಿಸುವುದು – ಇದೇ ಶಿಕ್ಷಣ ಎಂಬಂತಾಗಿದೆ. ಇಂಥ ಸಂದರ್ಭದಲ್ಲಿ ಗುರುಪೂರ್ಣಿಮೆಯ ದಿಟವಾದ ಅರ್ಥವನ್ನು ಕಂಡುಕೊಂಡರೆ ಆಗ ಅದು ನಮ್ಮ ಜೀವನಸಾಫಲ್ಯಕ್ಕೆ ಒದಗಬಹುದಾದ ದಾರಿಯನ್ನು ಕಾಣಿಸೀತು. ಈ ಹಿನ್ನೆಲೆಯಲ್ಲಿ ನಮ್ಮ ಹಬ್ಬ-ಹರಿದಿನಗಳ ನಿಜವಾದ ಮಾರ್ಗ-ಗುರಿಗಳನ್ನು ನಾವು ಸಾಕ್ಷಾತ್ಕರಿಸಿಕೊಳ್ಳಬೇಕಿದೆ.

ನಮ್ಮ ಪರಂಪರೆಯ ಪ್ರಕಾರ, ಮಾನವರೂಪದಲ್ಲಿರುವವರು, ನಮಗೆ ಅಕ್ಷರಗಳನ್ನು ಕಲಿಸಿದವರು ಮಾತ್ರವೇ ಗುರುಗಳು ಅಲ್ಲ; ಪ್ರಕೃತಿಯ ಒಂದೊಂದು ವಿವರವೂ ನಮ್ಮ ಪಾಲಿಗೆ ಒದಗುವ ಗುರುತತ್ತ್ವವೇ ಆಗಿರುತ್ತದೆ. ಮರ, ಗಿಡ, ಪ್ರಾಣಿ, ಪಕ್ಷಿ – ಎಲ್ಲವೂ ನಮಗೆ ಗುರುಗಳೇ. ಆದರೆ ಅವುಗಳಿಂದ ಅರಿವನ್ನು ಕಲಿಯುವ ಕುತೂಹಲ ನಮ್ಮದಾಗಬೇಕಷ್ಟೆ.

ಬುದ್ಧ ಭಗವಂತನು ತಾನು ಪಡೆದ ಅರಿವಿನ ಬೆಳಕನ್ನು ಲೋಕಕ್ಕೆ ಅರುಹಿದ ದಿನವೂ ಇದೇ ದಿನ ಎಂಬ ನಂಬಿಕೆಯೂ ನಮ್ಮಲ್ಲುಂಟು. ಸನ್ಯಾಸಿಗಳ ಚಾತುರ್ಮಾಸ್ಯವ್ರತ ಆರಂಭವಾಗುವುದು ಕೂಡ ವ್ಯಾಸಪೂಜೆಯಿಂದಲೇ.

## ಮೆಟ್ಟೂರು ಜಲಾಶಯ ಅರ್ಧ ಭರ್ತಿ

ಪ್ರಜಾವಾಣಿ ವಾರ್ತೆ

**ಚೆನ್ನೈ:** ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆ ಆಗುತ್ತಿರುವ ಕಾರಣ, ತಮಿಳುನಾಡಿನ ಮೆಟ್ಟೂರಿನ ಸ್ಟ್ಯಾನ್ಲಿ ಜಲಾಶಯವು ಅರ್ಧ ಭರ್ತಿಯಾಗಿದೆ.

ಬಿಳಿಗುಡ್ಲುಂವಿನಲ್ಲಿ ಒಳಹರಿವು ಶನಿವಾರ ಮಧ್ಯಾಹ್ನ 2.30ರ ವೇಳೆಗೆ 67 ಸಾವಿರ ಕ್ಯುಸೆಕ್‌ಗಳಷ್ಟಿತ್ತು. ಮಧ್ಯರಾತ್ರಿಯ ವೇಳೆಗೆ 75 ಸಾವಿರ ಕ್ಯುಸೆಕ್‌ಗೆ ಏರುವ ಸಾಧ್ಯತೆಯಿದೆ. ಧರ್ಮಪುರಿ ಜಿಲ್ಲೆಯಲ್ಲಿನ ಹೊಗೇನಕಲ್ ಜಲಪಾತ ಮೈದುಂಬಿ ಧುಮ್ಮಿಕ್ಕುತ್ತಿದೆ.

ಶನಿವಾರ ಮಧ್ಯಾಹ್ನ 2.30ಕ್ಕೆ ಮೆಟ್ಟೂರಿನ ಸ್ಟ್ಯಾನ್ಲಿ ಜಲಾಶಯದಲ್ಲಿ ನೀರಿನ ಮಟ್ಟ 61.130 ಅಡಿಗಳಷ್ಟಿದ್ದು, ಜಲಾಶಯದ ಗರಿಷ್ಠ ಮಟ್ಟ 120 ಅಡಿ. ಸದ್ಯ, 25.674 ಟಿಎಂಸಿ ಅಡಿ ನೀರಿನ ಸಂಗ್ರಹವಿದೆ. ಹೊರ ಹರಿವು 1 ಸಾವಿರ ಕ್ಯುಸೆಕ್ ಇದೆ.

ಕರ್ನಾಟಕದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ಸಾಕಷ್ಟು ನೀರು ಹೊರ ಬಿಡುತ್ತಿರುವ ಕಾರಣ ಮೆಟ್ಟೂರು ಜಲಾಶಯಕ್ಕೆ ಒಳಹರಿವು ಗಣನೀಯವಾಗಿ ಏರಿದೆ.

ಜಲಾಶಯದ ಮಟ್ಟ 90 ಅಡಿಗೆ ತಲುಪಿದ ನಂತರವೇ ಕೃಷಿಗೆ ನೀರು ಹರಿಸುವಂತೆ ನಾವು ಕೋರುತ್ತೇವೆ. ಜಲಾಶಯದಿಂದ ನೀರು ಬಿಡುವುದು ದೊಡ್ಡದಲ್ಲ. ಸಂರಕ್ಷಿಸುವುದು ಮುಖ್ಯ ಎಂದು ಕಾವೇರಿ ರೈತ ಸಂರಕ್ಷನಾ ಸಂಘದ ಕಾರ್ಯದರ್ಶಿ ಎಸ್.ಧನಪಾಲನ್ ಹೇಳಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ವಿಶೇಷ ವರ್ಗದ ಮಕ್ಕಳಿಗೆ ನಮ್ಮ ಕ್ರೈಸ್ ವಸತಿ ಶಾಲೆಗಳಲ್ಲಿ (ಇಂಗ್ಲಿಷ್ ಮಾಧ್ಯಮ)
ದಾಖಲಾತಿಗೆ ಇನ್ನೂ ಇದೆ ಕಾಲಾವಕಾಶ

| ವಿಶೇಷ ಪ್ರವರ್ಗಗಳಿಗೆ ಪ್ರವೇಶಾತಿಯಲ್ಲಿ 50% ಮೀಸಲು | | |
|---|---|---|
| 1. | ಸಫಾಯಿ ಕರ್ಮಚಾರಿ/ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್/ ಚಿಂದಿ ಆಯುವವರು/ ಸ್ಮಶಾನ ಕಾರ್ಮಿಕರ ಮಕ್ಕಳು | 10% |
| 2. | ಬಾಲ ಕಾರ್ಮಿಕರು/ಜೀತ ವಿಮುಕ್ತ ಕಾರ್ಮಿಕರ ಮಕ್ಕಳು/ ಗುರುತಿಸಿರುವ ಮಾಜಿ ದೇವದಾಸಿಯರ ಮಕ್ಕಳು | 10% |
| 3. | 25% ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು/ ಹೆಚ್.ಐ.ವಿ.ಗೆ ತುತ್ತಾದ ಪೋಷಕರ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳು. | 10% |
| 4. | ಗುರುತಿಸಿರುವ ಅಲೆಮಾರಿ/ಅರೆ ಅಲೆಮಾರಿ/ಸೂಕ್ಷ್ಮ-ಅತೀ ಸೂಕ್ಷ್ಮ ಸಮುದಾಯದ/ ಸೈನಿಕರು ಮತ್ತು ಮಾಜಿ ಸೈನಿಕರು/ ಸರ್ಕಾರಿ ಯೋಜನೆಗಳಿಂದ ಸ್ಥಳಾಂತರಗೊಂಡ ಪೋಷಕರ ಮಕ್ಕಳು. | 10% |
| 5. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಆಶ್ರಮ ವಸತಿ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾದ ಮಕ್ಕಳು. | 10% |
| | ಒಟ್ಟು | 50% |



ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು, ಕ್ರೈಸ್ ಶಾಲಾ ಮಕ್ಕಳ ಜೊತೆ ಇರುವುದು.

ಇಲ್ಲಿ ನಮೂದಿಸಲಾದ ವಿಶೇಷ ವರ್ಗಗಳಿಗೆ ಸೇರಿದ ಮಕ್ಕಳು https://cetonline.karnataka.gov.in/kreis24d/ ಲಿಂಕ್ ಮೂಲಕ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು ಅಥವಾ ಹತ್ತಿರದ ಕ್ರೈಸ್ ವಸತಿ ಶಾಲೆಗಳಿಗೆ ಭೇಟಿ ನೀಡಿ ಪ್ರಾಂಶುಪಾಲರನ್ನು ಕಾಣಬಹುದು. ಶಾಲೆಯ ಹೆಸರುಗಳು ಮತ್ತು ಅದರ ವಿಳಾಸವು www.kreis.kar.nic.in ಲಿಂಕ್ ನಲ್ಲಿದೆ.

ಶಾಲಾ ಪ್ರವೇಶಾತಿಗೆ ಕಡೆಯ ದಿನಾಂಕ :
31 ಜುಲೈ 2024 ಸಂಜೆ 6 ಗಂಟೆಯವರೆಗೆ

ಕಡೆಯ ಸಮಯದ ನಂತರ ವಿಶೇಷ ವರ್ಗದ ವಿನಂತಿಗಳನ್ನು ಸ್ವೀಕರಿಸಲಾಗುವುದಿಲ್ಲ.

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

@SWDGok @swd.gok ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9482300400

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



ಬೆಂಗಳೂರು
100ಕ್ಕೆ ₹570
12 ಕ್ಕೆ ₹75
ಮೈಸೂರು
100ಕ್ಕೆ ₹645

**ರಾಮನಗರ ರೇಷ್ಮೆಗೂಡು**

ಮಿಶ್ರತಳಿ (ಸಿ.ಬಿ) ₹235-468
ದ್ವಿತಳಿ (ಬಿ.ವಿ) ₹200-645

**ಎನ್.ಆರ್.ಪುರ ರಬ್ಬರ್**

ಆರ್‌ಎಸ್‌ಎಸ್‌-4 ₹207
ಆರ್‌ಎಸ್‌ಎಸ್‌-5 ₹202
ಗುಡ್ ಲಾಟ್ ₹189
(ಪ್ರತಿ ಕೆ.ಜಿಗೆ)

# ಮಳೆ: ಭತ್ತ ನಾಟಿ ಚುರುಕು

## ಮುಂಗಾರು: 704 ಲಕ್ಷ ಹೆಕ್ಟೇರ್‌ನಲ್ಲಿ ವಿವಿಧ ಬೆಳೆ ಬಿತ್ತನೆ ಪೂರ್ಣ

ನವದೆಹಲಿ (ಪಿಟಿಐ): ದೇಶದ ಹಲವು ಭಾಗಗಳಲ್ಲಿ ಉತ್ತಮವಾಗಿ ಮಳೆ ಸುರಿಯುತ್ತಿದ್ದು, ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ. ಮುಂಗಾರು ಹಂಗಾಮಿನಲ್ಲಿ 410 ಲಕ್ಷ ಹೆಕ್ಟೇರ್‌ನಲ್ಲಿ ಭತ್ತ ನಾಟಿ ಗುರಿ ಹೊಂದಲಾಗಿದೆ. ಇಲ್ಲಿಯವರೆಗೆ 166.06 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನಾಟಿ ಪೂರ್ಣಗೊಂಡಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.

ಭತ್ತವು ಮುಂಗಾರು ಋತುವಿನ ಪ್ರಮುಖ ಬೆಳೆಯಾಗಿದೆ. ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಪಂಜಾಬ್, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಒಟ್ಟು 155.65 ಲಕ್ಷ ಹೆಕ್ಟೇರ್‌ನಲ್ಲಿ ಭತ್ತ ನಾಟಿ ಮಾಡಲಾಗಿತ್ತು ಎಂದು ಹೇಳಿದೆ.

**ಆಹಾರೇತರ ಬೆಳೆ:** ಈ ಬಾರಿ ಆಹಾರೇತರ ಬೆಳೆಗಳ ಬಿತ್ತನೆ ಪ್ರದೇಶದಲ್ಲಿ ಏರಿಕೆಯಾಗಿದೆ. ಅತಿಹೆಚ್ಚು ಪ್ರದೇಶದಲ್ಲಿ ಎಣ್ಣೆಕಾಳುಗಳ ಬಿತ್ತನೆಯಾಗಿದೆ. ಕಳೆದ ವರ್ಷ ಇಲ್ಲಿಯವರೆಗೆ 150.91 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಎಣ್ಣೆಕಾಳುಗಳ ಬಿತ್ತನೆಯಾಗಿತ್ತು. ಈ ವರ್ಷ 163.11 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಈ ಪೈಕಿ ಸೋಯಾಬಿನ್ ಬಿತ್ತನೆ ಪ್ರದೇಶದಲ್ಲಿ ಏರಿಕೆಯಾಗಿದ್ದು, ಒಟ್ಟು 119.04 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ.

ಭಾರತವು ವಿಶ್ವದಲ್ಲಿಯೇ ಅತಿಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಉತ್ಪಾದಿಸುವ ರಾಷ್ಟ್ರಗಳ ಪೈಕಿ ಒಂದಾಗಿದೆ. ಜಾಗತಿಕ ಮಟ್ಟದಲ್ಲಿ ಶೇ 23ರಷ್ಟು ಉತ್ಪಾದನಾ ಪಾಲು ಹೊಂದಿದೆ. ಪ್ರಮುಖವಾಗಿ ಅಮೆರಿಕ, ಬಾಂಗ್ಲಾದೇಶ, ಚೀನಾ, ಶ್ರೀಲಂಕಾ ಹಾಗೂ ಯುಎಇಗೆ ಹತ್ತಿ ಉತ್ಪನ್ನಗಳನ್ನು ರಫ್ತು ಮಾಡುತ್ತದೆ. ಆದರೆ, ಈ ಬಾರಿ ಹತ್ತಿ ಬಿತ್ತನೆ ಇಳಿಕೆಯಾಗಿದೆ. ಹಿಂದಿನ ವರ್ಷ 105.66 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿತ್ತು. ಈ ಬಾರಿ 102.05 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಜುಲೈ 19ರ ವರೆಗೆ ದೇಶದಲ್ಲಿ ಮುಂಗಾರು ಹಂಗಾಮಿನಡಿ 704.04 ಲಕ್ಷ ಹೆಕ್ಟೇರ್‌ನಲ್ಲಿ ವಿವಿಧ ಬೆಳೆಗಳನ್ನು ಬಿತ್ತನೆ ಮಾಡಲಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 680.36 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಪೂರ್ಣಗೊಂಡಿತ್ತು.

**123.72** ಲಕ್ಷ ಹೆಕ್ಟೇರ್
ಏಕದಳ ಧಾನ್ಯಗಳು ಬಿತ್ತನೆಯಾಗಿರುವ ಪ್ರದೇಶ

**33.48** ಲಕ್ಷ ಹೆಕ್ಟೇರ್
ತೊಗರಿ ಬಿತ್ತನೆ ಪೂರ್ಣಗೊಂಡಿರುವ ಪ್ರದೇಶ

**102.05** ಲಕ್ಷ ಹೆಕ್ಟೇರ್
ಹತ್ತಿ ಬಿತ್ತನೆಯಾಗಿರುವ ಪ್ರದೇಶ

**119.04** ಲಕ್ಷ ಹೆಕ್ಟೇರ್
ಸೋಯಾಬಿನ್ ಬಿತ್ತನೆ ಪ್ರದೇಶ

**166.06** ಲಕ್ಷ ಹೆಕ್ಟೇರ್
ಭತ್ತ ನಾಟಿ ಪೂರ್ಣ

(ಜುಲೈ 19ರ ವರೆಗೆ)

### ಬೇಳೆಕಾಳು ಬಿತ್ತನೆ ಪ್ರದೇಶ ಏರಿಕೆ

ಈ ಬಾರಿ ಬೇಳೆಕಾಳುಗಳ ಬಿತ್ತನೆ ಪ್ರದೇಶದಲ್ಲಿ ಏರಿಕೆಯಾಗಿದೆ. ಕಳೆದ ಮುಂಗಾರಿನಲ್ಲಿ ಇಲ್ಲಿಯವರೆಗೆ 70.14 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೇಳೆಕಾಳು ಬಿತ್ತನೆಯಾಗಿತ್ತು.

ಈ ಬಾರಿ 85.79 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮುಗಿದಿದೆ. ಹಿಂದಿನ ವರ್ಷ 19.34 ಲಕ್ಷ ಹೆಕ್ಟೇರ್‌ನಲ್ಲಿ ತೊಗರಿ ಬಿತ್ತನೆಯಾಗಿತ್ತು. ಈ ವರ್ಷ ಇಲ್ಲಿಯತನಕ 33.48 ಲಕ್ಷ ಹೆಕ್ಟೇರ್ ಬಿತ್ತನೆ ಪೂರ್ಣಗೊಂಡಿದೆ ಎಂದು ಸಚಿವಾಲಯದ ಅಂಕಿಅಂಶ ವಿವರಿಸಿವೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ ಏಕದಳ ಧಾನ್ಯಗಳ ಬಿತ್ತನೆ ಪ್ರದೇಶದಲ್ಲಿ ಕಡಿಮೆಯಾಗಿದೆ. ಕಳೆದ ವರ್ಷ 134.91 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದ್ದರೆ, ಈ ಬಾರಿ 123.72 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ.

### ಅಧಿಕ ಇಳುವರಿ ನಿರೀಕ್ಷೆ

ಪ್ರತಿವರ್ಷ ಭಾರತವು ದೇಶೀಯ ಬೇಡಿಕೆಗೆ ಅನುಗುಣವಾಗಿ ವಿದೇಶಗಳಿಂದ ಖಾದ್ಯ ತೈಲ ಮತ್ತು ಬೇಳೆಕಾಳುಗಳನ್ನು ಆಮದು ಮಾಡಿಕೊಳ್ಳುತ್ತದೆ. ಇಂಡೊನೇಷ್ಯಾ ಹಾಗೂ ಮಲೇಷ್ಯಾದಿಂದ ತಾಳೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ಅರ್ಜೆಂಟೀನಾದಿಂದ ಸೋಯಾಬಿನ್, ರಷ್ಯಾ ಮತ್ತು ಉಕ್ರೇನ್‌ನಿಂದ ಸೂರ್ಯಕಾಂತಿ ಎಣ್ಣೆಯು ಪೂರೈಕೆಯಾಗುತ್ತದೆ. ಮಹಾರಾಷ್ಟ್ರ, ಕರ್ನಾಟಕ, ಮಧ್ಯಪ್ರದೇಶ, ಛತ್ತೀಸಗಢ ಮತ್ತು ಆಂಧ್ರಪ್ರದೇಶದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ತೊಗರಿ ಬೆಳೆಯಲಾಗುತ್ತದೆ. ಭಾರತವು ಆಮದು ಮಾಡಿಕೊಳ್ಳುವ ತೊಗರಿ ಬೇಳೆಯಲ್ಲಿ ಶೇ 50ರಷ್ಟು ಮೊಜಾಂಬಿಕ್‌ನಿಂದ ಬರುತ್ತದೆ.

'ಈ ಮುಂಗಾರಿನಲ್ಲಿ ದೇಶದ ವ್ಯಾಪ್ತಿ ಬೇಳೆಕಾಳು ಮತ್ತು ಎಣ್ಣೆಕಾಳುಗಳ ಬಿತ್ತನೆ ಪ್ರದೇಶದಲ್ಲಿ ಏರಿಕೆಯಾಗಿದೆ. ಕೊಯ್ಲಿನವರೆಗೂ ಇದೇ ಹವಾಮಾನ ಪರಿಸ್ಥಿತಿ ಮುಂದುವರಿದರೆ ಉತ್ತಮ ಇಳುವರಿ ಬರುವ ನಿರೀಕ್ಷೆಯಿದೆ' ಎಂದು ಕೃಷಿ ತಜ್ಞರು ಹೇಳಿದ್ದಾರೆ.

# ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ಶೇ 33ರಷ್ಟು ಲಾಭ

ಮುಂಬೈ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ದೇಶದ ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ33.17ರಷ್ಟು ಹೆಚ್ಚಳವಾಗಿದೆ.

ಈ ತ್ರೈಮಾಸಿಕದಲ್ಲಿ ₹16,474 ಕೋಟಿ ಲಾಭ ಗಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹12,370 ಕೋಟಿ ತೆರಿಗೆ ನಂತರದ ಲಾಭ ಗಳಿಸಲಾಗಿತ್ತು ಎಂದು ಬ್ಯಾಂಕ್ ತಿಳಿಸಿದೆ.

ಆದರೆ, 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹16,511 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಇಳಿಕೆಯಾಗಿದೆ.

ಕಳೆದ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹57,816 ಕೋಟಿ ವರಮಾನ ಗಳಿಸಿತ್ತು. ಈ ಬಾರಿ ₹83,701 ಕೋಟಿ ಗಳಿಸಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹2,860 ಕೋಟಿಯಿಂದ ₹2,602 ಕೋಟಿಗೆ ಇಳಿಕೆಯಾಗಿದೆ. 2023–24ನೇ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 1.24ರಷ್ಟಿತ್ತು. ಈ ತ್ರೈಮಾಸಿಕದಲ್ಲಿ ಶೇ 1.33ರಷ್ಟಕ್ಕೆ ಇಳಿದಿದೆ.

ಜೂನ್ ಅಂತ್ಯಕ್ಕೆ ಬ್ಯಾಂಕ್‌ನ ಸಮರ್ಪಕ ಬಂಡವಾಳ ಅನುಪಾತ (ಸಿಎಆರ್) ಶೇ 19.33ರಷ್ಟಿದೆ.

# ಕೋಟಕ್ ಬ್ಯಾಂಕ್‌ಗೆ ₹3,520 ಕೋಟಿ ಲಾಭ

ನವದೆಹಲಿ (ಪಿಟಿಐ): ಖಾಸಗಿ ಸ್ವಾಮ್ಯದ ಕೋಟಕ್ ಮಹೀಂದ್ರ ಬ್ಯಾಂಕ್, 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹3,520 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹3,452 ಕೋಟಿ ಲಾಭ ಗಳಿಸಿತ್ತು. ಈ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 2ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್, ಶನಿವಾರ ಷೇರುಪೇಟೆಗೆ ಮಾಹಿತಿ ನೀಡಿದೆ.

ಕಳೆದ ವರ್ಷದ ಇದೇ ತ್ರೈಮಾಸಿಕದಲ್ಲಿ ₹13,183 ಕೋಟಿ ವರಮಾನ ಗಳಿಸಲಾಗಿತ್ತು. ಈ ತ್ರೈಮಾಸಿಕದಲ್ಲಿ ₹15,675 ಕೋಟಿ ಗಳಿಸಲಾಗಿದೆ. ಬಡ್ಡಿ ವರಮಾನವು ₹12,746 ಕೋಟಿ ಆಗಿದೆ ಎಂದು ವಿವರಿಸಿದೆ.

ಬ್ಯಾಂಕ್‌ನ ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಶೇ 1.39ರಷ್ಟು ಸ್ಥಿರವಾಗಿದೆ. ಆದರೆ, ನಿವ್ವಳ ಎನ್‌ಪಿಎ ಶೇ 0.40ರಿಂದ ಶೇ 0.35ಕ್ಕೆ ಇಳಿಕೆಯಾಗಿದೆ.

**ಅಲ್ಪಸಂಖ್ಯಾತರ ನಿರ್ದೇಶನಾಲಯ**
ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಅಸಂನಿ/ಅ/ಐಎಎಸ್ ಟೆಂಡರ್/ಸಿಆರ್–01/2024–25 ದಿನಾಂಕ: 20–07–2024

**ಅಲ್ಪಾವಧಿ ಟೆಂಡರ್ ಪ್ರಕಟಣೆ**

2024–25ನೇ ಸಾಲಿಗೆ ಬೆಂಗಳೂರು ನಗರದಲ್ಲಿ ನಿರ್ಮಿಸಿರುವ ಹಜ್ ಭವನದಲ್ಲಿ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಗೆ 10 ತಿಂಗಳ ವಸತಿ ಸಹಿತ UPSC/IAS ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ತರಬೇತಿ ನೀಡಲು ಮಾನ್ಯತೆ ಪಡೆದ ಸಂಸ್ಥೆಗಳಿಂದ ಇ–ಪ್ರೊಕ್ಯುರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿದೆ.

| ಕ್ರ.ಸಂ. | ವಿವರಗಳು | ದಿನಾಂಕ/ಸಮಯ |
|---|---|---|
| 1. | ಟೆಂಡರ್ ಪ್ರಕಟಣೆಯ ದಿನಾಂಕ: | 20.07.2024. |
| 2. | ಟೆಂಡರ್ ಮೊತ್ತ: | ರೂ.200.00 ಲಕ್ಷಗಳು. |
| 3. | ಇಎಂಡಿ ಮೊತ್ತ | ರೂ. 3.00 ಲಕ್ಷಗಳು. |
| 4. | ಟೆಂಡರ್ ಕುರಿತು ಪೂರ್ವಭಾವಿ ಸಭೆ: | 30.07.2024 ಮಧ್ಯಾಹ್ನ 3:00 ಗಂಟೆಗೆ. |
| 5. | ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: | 10.08.2024 ಸಂಜೆ 5:30 ಗಂಟೆಯೊಳಗೆ. |
| 6. | ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: | 12.08.2024 ಬೆಳಿಗ್ಗೆ 11:30 ಗಂಟೆಗೆ. |
| 7. | ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: | 16.08.2024 ಬೆಳಿಗ್ಗೆ 11:30 ಗಂಟೆಗೆ. (Tentative) |
| 8. | ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ: | ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052. |
| 9. | ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ | 080–22535902/ 080–22535912. |

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಜಂಟಿ ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/1029/ಎಂಎಎ/2024–25

**ಅಲ್ಪಸಂಖ್ಯಾತರ ನಿರ್ದೇಶನಾಲಯ**
ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಅಸಂನಿ/ಅ/ಕೆಎಎಸ್ ಟೆಂಡರ್/ಸಿಆರ್–01/2024–25 ದಿನಾಂಕ: 20.07.2024

**ಅಲ್ಪಾವಧಿ ಟೆಂಡರ್ ಪ್ರಕಟಣೆ**

2024–25ನೇ ಸಾಲಿಗೆ ಬೆಂಗಳೂರು ನಗರದಲ್ಲಿ ನಿರ್ಮಿಸಿರುವ ಹಜ್ ಭವನದಲ್ಲಿ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಗೆ 10 ತಿಂಗಳ ವಸತಿ ಸಹಿತ KPSC/KAS ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ತರಬೇತಿ ನೀಡಲು ಮಾನ್ಯತೆ ಪಡೆದ ಸಂಸ್ಥೆಗಳಿಂದ ಇ–ಪ್ರೊಕ್ಯುರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿದೆ.

| ಕ್ರ.ಸಂ. | ವಿವರಗಳು | ದಿನಾಂಕ/ಸಮಯ |
|---|---|---|
| 1. | ಟೆಂಡರ್ ಪ್ರಕಟಣೆಯ ದಿನಾಂಕ: | 20.07.2024. |
| 2. | ಟೆಂಡರ್ ಮೊತ್ತ: | ರೂ.150.00 ಲಕ್ಷಗಳು. |
| 3. | ಇಎಂಡಿ ಮೊತ್ತ | ರೂ. 2.25 ಲಕ್ಷಗಳು. |
| 4. | ಟೆಂಡರ್ ಕುರಿತು ಪೂರ್ವಭಾವಿ ಸಭೆ: | 30.07.2024 ಬೆಳಿಗ್ಗೆ 11:30 ಗಂಟೆಗೆ. |
| 5. | ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: | 10.08.2024 ಸಂಜೆ 5:30 ಗಂಟೆಯೊಳಗೆ. |
| 6. | ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: | 12.08.2024 ಬೆಳಿಗ್ಗೆ 11:30 ಗಂಟೆಗೆ. |
| 7. | ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: | 16.08.2024 ಬೆಳಿಗ್ಗೆ 11:30 ಗಂಟೆಗೆ. |
| 8. | ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ: | ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052. |
| 9. | ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ | 080–22535902/ 080–22535912. |

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಜಂಟಿ ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/1028/ಎಂಎಎ/2024–25

## ಮೈಕ್ರೊಸಾಫ್ಟ್ ವಿಂಡೋಸ್ ತಾಂತ್ರಿಕ ಸಮಸ್ಯೆ ಶಮನ

# ಸಹಜ ಸ್ಥಿತಿಗೆ ವಿಮಾನ ಹಾರಾಟ

ಮುಂಬೈ/ ಚೆನ್ನೈ (ಪಿಟಿಐ): ಮೈಕ್ರೊಸಾಫ್ಟ್ ವಿಂಡೋಸ್‌ನಲ್ಲಿ ತಲೆದೋರಿದ್ದ ತಾಂತ್ರಿಕ ದೋಷವು ಪರಿಹಾರ ಕಂಡಿದ್ದು, ದೇಶದಲ್ಲಿ ವಿಮಾನಗಳ ಸಂಚಾರವು ಸಹಜ ಸ್ಥಿತಿಗೆ ಮರಳಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮ್ ಮೋಹನ್ ನಾಯ್ಡು ತಿಳಿಸಿದ್ದಾರೆ.

ಶನಿವಾರ ಬೆಳಗಿನ ಜಾವ 4 ಗಂಟೆಯಿಂದ ದೇಶದ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ವಿಮಾನಯಾನ ವ್ಯವಸ್ಥೆಯು ಎಂದಿನಂತೆ ಸಹಜ ಸ್ಥಿತಿಗೆ ಮರಳಿದೆ. ವಿಮಾನಗಳ ಕಾರ್ಯಾಚರಣೆಯು ಸುಗಮಗೊಂಡಿದೆ ಎಂದು ಸಚಿವರು ತಿಳಿಸಿದ್ದಾರೆ.

ಸೈಬರ್ ದಾಳಿ ತಡೆಯಲು ಕ್ರೌಡ್‌ಸ್ಟ್ರೈಕ್ ಕಂಪನಿಯು ಶುಕ್ರವಾರ ವಿಂಡೋಸ್‌ನಲ್ಲಿ ಫಾಲ್ಕನ್ ಸೆನ್ಸಾರ್ ತಂತ್ರಾಂಶವನ್ನು ಅಪ್‌ಡೇಟ್ ಮಾಡುವಾಗ ದೋಷ ಕಾಣಿಸಿಕೊಂಡಿತ್ತು. ಇದರಿಂದ ಮೈಕ್ರೊಸಾಫ್ಟ್ ಸೇವೆ ಸ್ಥಗಿತಗೊಂಡಿತ್ತು. ಜಾಗತಿಕ ಮಟ್ಟದಲ್ಲಿ ಬ್ಯಾಂಕ್‌ಗಳು, ಆಸ್ಪತ್ರೆಗಳು, ವಿಮಾನಗಳು, ಮಾಧ್ಯಮ ಸಂಸ್ಥೆಗಳ ಸೇವೆಯಲ್ಲಿ ವ್ಯತ್ಯಯವಾಗಿತ್ತು. ಸದ್ಯ ಈ ಕ್ಷೇತ್ರಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿವೆ.

ವಿಮಾನದ ಟಿಕೆಟ್ ಬುಕಿಂಗ್ ಮತ್ತು ಬೋರ್ಡಿಂಗ್ ಪಾಸ್ ಪಡೆಯಲು ತೊಂದರೆಯಾಗಿತ್ತು.'ಇಂಡಿಗೊ, ಸ್ಪೈಸ್‌ಜೆಟ್, ಆಕಾಸ್ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಗಳ ಕಾರ್ಯಾಚರಣೆ ಆರಂಭಗೊಂಡಿದೆ' ಎಂದು ಮೂಲಗಳು ತಿಳಿಸಿವೆ.

'ನಾನು ಅಹಮದಾಬಾದ್‌ಗೆ ತೆರಳುತ್ತಿದ್ದೇನೆ. ಆ್ಯಪ್ ಆಧಾರಿತ ಡಿಜಿ ಯಾತ್ರಾ ಸೇವೆಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಇಂದು ಎಲ್ಲವೂ ಸುಗಮವಾಗಿದೆ. ವಿಮಾನಗಳು ನಿಗದಿತ ಸಮಯಕ್ಕೆ ಹಾರಾಟ ನಡೆಸಿವೆ' ಎಂದು ದೆಹಲಿಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರೊಬ್ಬರು ಅನುಭವ ಹಂಚಿಕೊಂಡರು.

'ವಿಂಡೋಸ್ ಸಮಸ್ಯೆ ಬಗೆಹರಿದಿದೆ. ಕಾರ್ಯಾಚರಣೆಯು ಸಹಜ ಸ್ಥಿತಿಗೆ ಮರಳಲು ಕಂಪನಿಯ ಸಿಬ್ಬಂದಿ ಅವಿರತವಾಗಿ ಶ್ರಮಿಸಿದ್ದಾರೆ. ಆದರೂ, ವಾರಾಂತ್ಯದವರೆಗೂ ಕೆಲವು ವಿಮಾನಗಳ ಸಂಚಾರದಲ್ಲಿ ವಿಳಂಬವಾಗುವ ಸಾಧ್ಯತೆಯಿದೆ' ಎಂದು ಇಂಡಿಗೊ ಕಂಪನಿ ತಿಳಿಸಿದೆ.

ಇಂಡಿಗೊ ದೇಶೀಯಮಟ್ಟದ ಅತಿದೊಡ್ಡ ವಿಮಾನಯಾನ ಕಂಪನಿಯಾಗಿದೆ. ಪ್ರತಿದಿನ 2 ಸಾವಿರಕ್ಕೂ ಹೆಚ್ಚು ವಿಮಾನಗಳು ಕಾರ್ಯಾಚರಣೆ ನಡೆಸುತ್ತವೆ.

'ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ಟಿಕೆಟ್ ಬುಕಿಂಗ್ ಮತ್ತು ಕಾಲ್ ಸೆಂಟರ್‌ಗಳ ಸೇವೆ ಆರಂಭಗೊಂಡಿದೆ. ತೊಂದರೆಗೆ ಸಿಲುಕಿದ್ದ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲು ಕ್ರಮವಹಿಸಲಾಗಿದೆ' ಎಂದು ಸ್ಪೈಸ್‌ಜೆಟ್ ಕಂಪನಿ ತಿಳಿಸಿದೆ.

'ಚೆಕ್–ಇನ್, ಬೋರ್ಡಿಂಗ್ ಪಾಸ್ ವಿತರಣೆಯಲ್ಲಿ ಸದ್ಯ ಯಾವುದೇ ಸಮಸ್ಯೆ ಕಂಡಿಲ್ಲ. ತನ್ನ ವಿಮಾನಗಳು ನಿಗದಿತ ಕಾರ್ಯಾಚರಣೆ ಆರಂಭಿಸಿವೆ' ಎಂದು ಆಕಾಸ್ ಕಂಪನಿ ತಿಳಿಸಿದೆ.

**8 ವಿಮಾನ ಸಂಚಾರಕ್ಕೆ ತೊಂದರೆ:** ಚೆನ್ನೈ ವಿಮಾನ ನಿಲ್ದಾಣದಲ್ಲಿ ದೇಶೀಯ ಮಾರ್ಗದಲ್ಲಿ 6ರಿಂದ 8 ವಿಮಾನಗಳ ಸಂಚಾರಕ್ಕೆ ಭಾಗಶಃ ತೊಂದರೆಯಾಗಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಕೆಲವು ಪ್ರಯಾಣಿಕರಿಗೆ ಕೈಬರಹದ ಬೋರ್ಡಿಂಗ್ ಪಾಸ್ ವಿತರಿಸಲಾಗಿತ್ತು. ಅಂತಹವರಿಗೆ ಕಂಪ್ಯೂಟರ್ ದೃಢೀಕೃತ ಪಾಸ್‌ಗಳನ್ನು ವಿತರಿಸಲಾಗಿದೆ. ಅಂತರರಾಷ್ಟ್ರೀಯ ಮಟ್ಟದ ವಿಮಾನ ಕಾರ್ಯಾಚರಣೆಗೆ ಅಡ್ಡಿಯಾಗಿಲ್ಲ ಎಂದು ಹೇಳಿದ್ದಾರೆ.

### ಐದು ಕಂಪನಿಗೆ ಅಡಚಣೆ

'ವಿಂಡೋಸ್‌ನಲ್ಲಿನ ಸಮಸ್ಯೆಯಿಂದಾಗಿ ಆಸ್ತಿ ನಿರ್ವಹಣೆ ಮಾಡುವ ಐದು ಕಂಪನಿಗಳ ಕಾರ್ಯಾಚರಣೆಗೆ ಅಡ್ಡಿಯಾಗಿತ್ತು. ಸದ್ಯ ಎಂದಿನಂತೆ ಕಾರ್ಯ ನಿರ್ವಹಿಸುತ್ತಿವೆ' ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ.

'ಒಟ್ಟು 44 ಆಸ್ತಿ ನಿರ್ವಹಣಾ ಕಂಪನಿಗಳ ಪೈಕಿ ಈ ಕಂಪನಿಗಳು ತೊಂದರೆಗೆ ಸಿಲುಕಿದ್ದವು. ಇದರ ಹೊರತಾಗಿ ಮ್ಯೂಚುವಲ್ ಫಂಡ್ ಉದ್ಯಮದ ದೈನಂದಿನ ಕಾರ್ಯದ ಯಾವುದೇ ಪರಿಣಾಮ ಬೀರಿಲ್ಲ' ಎಂದು ಹೇಳಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**ಉದ್ಯೋಗಾವಕಾಶ**

**Teachers/ Professors**

**ಶ್ರೀ ವೇಣುಗೋಪಾಲಸ್ವಾಮಿ ವಿದ್ಯಾದತ್ತಿ(ರಿ)**
(ಭಾರತೀಯ ವಿದ್ಯಾನಿಕೇತನ ಪ್ರೌಢಶಾಲೆ, ದೇವಸಂದ್ರ, ಕೆ.ಆರ್.ಪುರ, ಬೆಂಗಳೂರು–560036
**ಬೇಕಾಗಿದ್ದಾರೆ**
ಮೇಲ್ಕಂಡ ದತ್ತಿಯ ಆಶ್ರಯದಲ್ಲಿ ನಡೆಯುತ್ತಿರುವ ಭಾರತೀಯ ವಿದ್ಯಾನಿಕೇತನ ಪ್ರೌಢಶಾಲೆಗೆ ಕೆಳಗೆ ಕಾಣಿಸಿರುವ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಕರೆಯಲಾಗಿದೆ.

| ಕ್ರ. ಸಂ. | ಹುದ್ದೆ | ವಿದ್ಯಾರ್ಹತೆ | ವಿಷಯ | ಮೀಸಲಾತಿ |
|---|---|---|---|---|
| 1. | ವಿಜ್ಞಾನ (ಹುದ್ದೆ 1) ಸಹಶಿಕ್ಷಕರು | ಬಿ.ಎಸ್‌ಸಿ., ಬಿ.ಎಡ್. (ಸಿಬಿಝೆಡ್) | ಜೀವ ವಿಜ್ಞಾನ | ಎಸ್‌ಸಿ (ಅನುದಾನ) |
| 2. | ಕನ್ನಡ (ಹುದ್ದೆ 1) ಸಹಶಿಕ್ಷಕರು | ಬಿ.ಎ., ಬಿ.ಎಡ್. | ಐಚ್ಛಿಕ ಕನ್ನಡ | ಸಾಮಾನ್ಯ (ಅನುದಾನಿತ) |

ಅರ್ಹ ಅಭ್ಯರ್ಥಿಗಳು ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಯೊಂದಿಗೆ ಈ ಪ್ರಕಟಣೆಯ ದಿನಾಂಕದಿಂದ 21 ದಿನಗಳ ಒಳಗೆ ತಲುಪುವಂತೆ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವವರು ಒಂದು ಪ್ರತಿಯನ್ನು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ, ಬೆಂಗಳೂರು–560002 ಇವರಿಗೆ ಸಲ್ಲಿಸಬೇಕು.
–ಕೆ.ಪೂರ್ಣಿಮ ಶ್ರೀನಿವಾಸ್, ಕಾರ್ಯದರ್ಶಿಗಳು

**Multiple Vacancy**

REQUIRED EXPERIENCED Telecaller & Field executive For Bank Loan collection Salary + Incentive. 9916276701, 7899040499

**Attention Fresh Graduates!**
We are seeking B.Com or B.Sc Graduates for the position of Office Assistant at a leading private limited company in Peenya. We offer comprehensive in-house training in ACCOUNTS, SALES, HR, and COMMERCIAL OPERATIONS. Please send your resume to freshgrads24@gmail.com

**Wanted**

WANTED INSTRUCTORS for *Automobile *Mechanical *Fashion Design. Qualification: Diploma/ BE. In relevant field with minimum 2 years of Industry Experience, Teaching experience preferred. Apply to the Director, St Aloysius I.T.I, Mangaluru- 575003. Email: saitcprincipal@gmail.com. Contact No: 9480906732

WANTED EXPERIENCE ADVOCATE for Non-Litigation Work in the field of Drafting, Scrutiny and Legal Opinion Related to Property. Office: SRI HARSHAN ASSOCIATES, Hoskote, Mobile: 8553324236.

**Part-Time Jobs**

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

**General**

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿಇದೆ. ತಿಂಗಳಿಗೆ ವೇತನ 18000 ರಿಂದ 20000/- ವರೆಗೆ. ವಿಳಾಸ: ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು. 9019626612

**Drivers**

WANTED FEMALE Driver for reputed cab company. Salary 32k per month. Must have 1 year old driving license. Contact 9916242982 / 9902474455

**ವ್ಯಾಪಾರ**

**Business Offers**

**Finance**

ವಯಕ್ತಿಕ ಸಾಲ ನನಗೆ ಬೇಕಾಗಿದೆ, ಪ್ರತಿ ತಿಂಗಳು ಆಕರ್ಷಕ ಬಡ್ಡಿ ಕೊಡಲಾಗುವುದು. ಬೆಂಗಳೂರು. ಹೆಚ್ಚಿನ ಮಾಹಿತಿಗಾಗಿ ಕೂಡಲೇ ಸಂಪರ್ಕಿಸಿ: 9844424877.

**ಭವಿಷ್ಯ**

**Astrology**

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

**ಇತರೆ**

**For Sale**

ಸೆಂಟ್ರಿಂಗ್ ಸಾಮಗ್ರಗಳು ಲಭ್ಯವಿದ (ದೊಡ್ಡಪ್ರಮಾಣ), ಸೆಂಟ್ರಿಂಗ್ ಶೀಟ್ಗಳು, ಕಮಾನುಗಳು , ಕಾಲಾವದಿ ಕಟ್ಟುವಸಾಮಗ್ರರಗಳು, ಜ್ಯಾಯಕ್ಗಳು,ಕಟ್ಟ ಪ್ರಿಕರಗಳು. ಸ್ಥಳ: ಬೆಂಗಳೂರು, ಅತ್ತಿಬೆಲೆ-9042493334

**ಪ್ರವಾಸ**

**Travel**

20.09.2024 12 ದಿನಗಳು ಚಾರ್‌ಧಾಮ್ ಪ್ರವಾಸ. 10.10.2024 15 ದಿನಗಳು ಕೋನಾರ್ಕ್ ಪುರಿಜಗನ್ನಾಥ ಭುವನೇಶ್ವರ್ ಕಾಶಿ,ಗಯಾ ಅಯೋಧ್ಯ,ನೇಪಾಳ ಅಲಹಾಬಾದ್ ಪೋಕ್ರಾ,ಮುಕ್ತಿನಾಥ, 30.10.2024 16 ದಿನಗಳು ಮಹಾರಾಷ್ಟ್ರ ಮಧ್ಯಪ್ರದೇಶ ಗುಜರಾತ್ ಅಷ್ಟ ಜ್ಯೋತಿರ್ಲಿಂಗಗಳ ಪ್ರವಾಸ. ಮಲ್ಟಿ ಎಕ್ಸ್‌ಎಲ್ ಬಸ್ಸು ವಿಮಾನದಲ್ಲಿ ಪ್ರಯಾಣ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು-70. 9342287551 8050629305

★ಶ್ರೀಶ್ರೇಯಸ್ ಟೂರ್ಸ್★ 05.08.2024 8ದಿಗಳು ಅಹೋಬಲಂ ನವನಾರಸಿಂಹ, ನವನಂದಿ,ಶ್ರೀಶೈಲಂ, ಹೈದರಾಬಾದ್,ರಾಮೋಜಿ, ಅಲಂಪುರ,ಮಂತ್ರಾಲಯ. 21.08.2024 10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ. 14.10.2024 15ದಿನಗಳು ಉತ್ತರಕಾಂಡ ವಿಶೇಷ ಓಂಪರ್ವತ ಆದಿಕೈಲಾಸ್,ನೈನಿತಾಲ್ ಬೀಮ್ ತಾಲ್, ಔಗೇಶ್ವರ,ಭಾಗೇಶ್ವರ, ಮುಕ್ತೇಶ್ವರ.9743351212, 7676804971

★ಶ್ರೀಶ್ರೇಯಸ್ ಟೂರ್ಸ್★ 09.09.2024,14.10.2024 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ.09.09.2024, 04.10.2024 12ದಿನಗಳು ಚಾರ್-ದಾಮ್ ಯಾತ್ರಾಪ್ರವಾಸ. 20.09.2024,04.10.2024 6ದಿನಗಳು ಅಯೋಧ್ಯೆ ಕಾಶಿ, ಗಯಾ,ಪ್ರಯಾಗ. 20.09.2024,13.10.2024 10ದಿನಗಳು ಅಖಂಡ ಗುಜರಾತ್ ರಾಜ್ಯಪ್ರವಾಸ.04.10.2024, 7ದಿನಗಳು ಒರಿಸ್ಸಾ,ಕಲ್ಕತ್ತಾ ಪ್ರವಾಸ.14.09.2024 10 ದಿನಗಳು ದೆಹಲಿ,ಸಿಮ್ಲಾ,ಮನಾಲಿ 5ದೇವಿಯರು ವೈಷ್ಣೋದೇವಿ, ಅಮೃತಸರ್,ವಾಘಗಡಿ ಕುರುಕ್ಷೇತ್ರ.13.10.2024 13ದಿನಗಳು 4ರಾಜ್ಯಗಳ ಈಶಾನ್ಯ ಭಾರತ ಪ್ರವಾಸ ಅಸ್ಸಾಂ ಅರುಣಾಚಲ,ಮೇಘಾಲಯ ನಾಗಲ್ಯಾಂಡ್.9743351212, 7676804971

7 ದಿನಗಳ ಕಾಶಿ,ಗಯಾ ಪ್ರಯಾಗ್ ರಾಜ್ ಅಯೋಧ್ಯಾ. 12 ದಿನಗಳ ನೇಪಾಳ,ಮುಕ್ತಿನಾಥ ಕಾಶಿ. 10 ದಿನಗಳ ಗುಜರಾತ್ ಪ್ರವಾಸ. 13 ದಿನಗಳ ಚಾರ್‌ಧಾಮ್‌ಯಾತ್ರೆ 11 ದಿನಗಳ ರಾಜಸ್ಥಾನ್. 12 ದಿನಗಳ ಮಧ್ಯಪ್ರದೇಶ. ಸಂಪರ್ಕಿಸಿ: ನಂದಿ ಹಾಲಿಡೇಸ್ ಡಿವಿಜಿ.ರಸ್ತೆ ಬಸವನಗುಡಿ ಬೆಂಗಳೂರು-04. 9980270467 9740228186

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9845114560
9901641752
*Conditions apply

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

**ಲೋಕೋಪಯೋಗಿ ಇಲಾಖೆ**
ಕಾರ್ಯಪಾಲಕ ಅಭಿಯಂತರರು ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, ಮಾಡೆಲ್ ಹೌಸ್, ಕೆ.ಆರ್. ವೃತ್ತ, ಬೆಂಗಳೂರು – 560 001.

ಸಂಖ್ಯೆ : ಕಾ.ಅ./ಲೋ.ಇ./ಗು.ಭ.ವಿ./ಬೆಂ./ಸ.ಇಂ–6/ಎಂಪ್ಯಾನೆಲ್‌ಮೆಂಟ್/2024–25/688 ದಿನಾಂಕ : 19–07–2024

**ಪ್ರಕಟಣೆ**

**ಸಮಾಲೋಚಕರ ನೇಮಕಾತಿ – ಆಸಕ್ತಿ ವ್ಯಕ್ತಪಡಿಸುವಿಕೆ (Empanelment of Consultants – Expression of Interest)**

ಕರ್ನಾಟಕ ಲೋಕೋಪಯೋಗಿ ಇಲಾಖೆ ಗುಣ ಭರವಸೆ ವಲಯದ ಅಧೀನದಲ್ಲಿರುವ ಲೋ.ಇ.ಗು.ಭ ಉಪ ವಿಭಾಗಗಳ ಪ್ರಯೋಗಾಲಯಗಳಲ್ಲಿನ ಯಂತ್ರೋಪಕರಣಗಳ ಕ್ಯಾಲಿಬ್ರೇಷನ್ ಹಾಗೂ ಸರ್ವಿಸಿಂಗ್‌ಗೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆಗಳಿಗೆ ಹಾಗೂ ಇನ್ನಿತರ ಅಗತ್ಯ ಸೇವೆಗಳನ್ನು ನೀಡುವುದಕ್ಕಾಗಿ ಸಮಾಲೋಚಕರನ್ನು ನೇಮಿಸುವುದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಮಾಲೋಚಕರು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, ಬೆಂಗಳೂರು ರವರ ಕಛೇರಿ ಇ–ಮೇಲ್ (eeqcpwddvn@yahoo.co.in) ಗೆ ಅವಶ್ಯ ದಾಖಲೆಗಳೊಂದಿಗೆ ದಿನಾಂಕ : 26–07–2024 ರಿಂದ 16–08–2024 ಸಂಜೆ 4.30 ರವರೆಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಈ ಅವಧಿಯಲ್ಲಿ ಮೇಲ್ಕಾಣಿಸಿದ ಇ–ಮೇಲ್‌ಗೆ ಸಲ್ಲಿಸಲಾಗುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು. ವಿವರಗಳು ಈ ಕೆಳಕಂಡಂತಿದೆ.

1) ಈ Empanelment ಅವಧಿಯು 5 ವರ್ಷಗಳವರೆಗೆ ಚಾಲ್ತಿಯಲ್ಲಿರುವುದು. 2) ಸಮಾಲೋಚಕರನ್ನು ಯೋಜನೆಗಳ ಅಂದಾಜು ಮೊತ್ತವನ್ನು ಆಧರಿಸಿ Category I, II, III, IV ಎಂದು ವರ್ಗೀಕರಿಸಿ Empanel ಮಾಡಲಾಗುವುದು. 3) Category IV 2.00 ಕೋಟಿ ಮೊತ್ತದ, Category III 10.00 ಕೋಟಿ ಮೊತ್ತದ, Category II 20.00 ಕೋಟಿ ಮೊತ್ತದ, Category I ಯಾವುದೇ ಅಂದಾಜು ಮೊತ್ತದ ಯೋಜನೆಗಳಿಗೆ Request for Proposals (RFP) ಸಲ್ಲಿಸಲು ಅರ್ಹರಾಗಿರುತ್ತಾರೆ, 4) Category IV ರಲ್ಲಿ Empanel ಪಡೆಯುವ ಸಮಾಲೋಚಕರು ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಲಯದ ಅಡಿಯಲ್ಲಿನ ಯಾವುದಾದರು ಒಂದು ಗುಣ ಭರವಸೆ ವಿಭಾಗವನ್ನು ಆಯ್ಕೆ ಮಾಡಿ ಅರ್ಜಿಯಲ್ಲಿ ನಮೂದಿಸತಕ್ಕದ್ದು, ಸದರಿ ವಿಭಾಗದ ಅಡಿಯಲ್ಲಿ ಬರುವ ಗುಣಭರವಸೆ ಪ್ರಯೋಗಾಲಯ ಗಳಿಗೆ ಸಂಬಂಧಿಸಿದಂತೆ ಸಮಾಲೋಚಕರು ಸೇವೆಗೆ ಅರ್ಹರಾಗಿರುತ್ತಾರೆ. ಆದಾಗ್ಯೂ ಅರ್ಜಿಗಳು ಸ್ವೀಕೃತಿಯಾದ ನಂತರ, ವಿಭಾಗವಾರು ಆಯ್ಕೆ ಮಾಡುವ ಸಮಾಲೋಚಕರನ್ನು ಪರಿಗಣಿಸಿ, ಅವಶ್ಯವಿದ್ದಲ್ಲಿ ಸಮಾಲೋಚಕರ ಒಪ್ಪಿಗೆ ಪಡೆದು ವಿಭಾಗ ಬದಲಾವಣೆಯ ಬಗ್ಗೆ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಲಯ, ಬೆಂಗಳೂರುರವರು ಆದೇಶಿಸುವಂತೆ ಸಮಾಲೋಚಕರು ಅರ್ಹರಾಗುವರು, 5) Category III ರಲ್ಲಿ Empanel ಪಡೆಯುವ ಸಮಾಲೋಚಕರು ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಲಯದ ಅಡಿಯಲ್ಲಿನ ಯಾವುದಾದರು ಒಂದು ಗುಣ ಭರವಸೆ ವೃತ್ತವನ್ನು ಆಯ್ಕೆ ಮಾಡಿ ಅರ್ಜಿಯಲ್ಲಿ ನಮೂದಿಸತಕ್ಕದ್ದು, ಸದರಿ ಗುಣ ಭರವಸೆ ವೃತ್ತದ ಅಡಿಯಲ್ಲಿನ ಗುಣಭರವಸೆ ಪ್ರಯೋಗಾಲಯಗಳಿಗೆ ಸಂಬಂಧಿಸಿದಂತೆ ಸಮಾಲೋಚಕರು ಸೇವೆಗೆ ಅರ್ಹರಾಗಿರುತ್ತಾರೆ 6) Category I ಮತ್ತು II ರಲ್ಲಿ Empanel ಪಡೆಯುವ ಸಮಾಲೋಚಕರು ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಲಯದ ಅಡಿಯಲ್ಲಿನ ಎಲ್ಲಾ ಗುಣಭರವಸೆ ಪ್ರಯೋಗಾಲಯಗಳಿಗೆ ಸಂಬಂಧಿಸಿದಂತೆ ಸಮಾಲೋಚಕರು ಸೇವೆಗೆ ಅರ್ಹರಾಗಿರುತ್ತಾರೆ. 7) ಸಮಾಲೋಚಕರಿಗೆ ಇರಬೇಕಾದ ಕನಿಷ್ಠ ಅರ್ಹತೆಗಳನ್ನು ಹಾಗೂ ಸಲ್ಲಿಸಬೇಕಾಗಿರುವ ಅಗತ್ಯ ದಾಖಲಾತಿಗಳನ್ನು ನಿಗಧಿಪಡಿಸಿದ್ದು, ಅದರಂತೆ ಸಲ್ಲಿಸಲಾದ ವಿವರಗಳನ್ನು ಪರಿಶೀಲಿಸಿ ಪರಿಗಣಿಸಲಾಗುವುದು.

ಸಮಾಲೋಚಕರ Empanelment ಅನ್ನು ಸರ್ಕಾರದ ಸುತ್ತೋಲೆ : ಲೋ.ಇ : 95; ಬಿ.ಎಂ.ಎಸ್ : 2020 ದಿನಾಂಕ : 10–06–2020 ರನ್ವಯ ನೀಡಿರುವ ಸೂಚನೆಗಳನ್ವಯ ಪರಿಗಣಿಸಲಾಗುವುದು. ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುವ ದಾಖಲೆಗಳು ಮೇಲ್ಕಾಣಿಸಿದ ಸುತ್ತೋಲೆಯಂತಿರಬೇಕು. ಇ–ಮೇಲ್‌ನಲ್ಲಿ ಸಲ್ಲಿಸುವ ದಾಖಲೆಗಳ ಮೂಲ ಪ್ರತಿಗಳನ್ನು ಕಡ್ಡಾಯವಾಗಿ ಪರಿಶೀಲನೆಗಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು.

ಈ ಪ್ರಕ್ರಿಯೆಗಾಗಿ ಪೂರ್ವಭಾವಿ ಸಭೆಯನ್ನು ದಿನಾಂಕ : 05–08–2024 ರ ಬೆಳಿಗ್ಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, ಬೆಂಗಳೂರು ರವರ ಕಛೇರಿಯಲ್ಲಿ ಹಮ್ಮಿಕೊಳ್ಳಲಾದೆ. ಆಸಕ್ತಿಯುಳ್ಳ ಸಮಾಲೋಚಕರು ಸದರಿ ಸಭೆಗೆ ಹಾಜರಾಗಿ ಅಥವಾ ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರವರ ಕಛೇರಿಗೆ ನೇರವಾಗಿ ಭೇಟಿ ನೀಡಿ ಹೆಚ್ಚಿನ ಮಾಹಿತಿಗಳನ್ನು ಪಡೆಯಬಹುದಾಗಿದೆ.

ಸಹಿ/–
ಕಾರ್ಯಪಾಲಕ ಇಂಜಿನಿಯರ್,
ಲೋ. ಇ. ಗುಣ ಭರವಸೆ ವಿಭಾಗ, ಬೆಂಗಳೂರು.

ವಾಸಾಇ/ಬೆಂ.ನ./1020/ಮಣಿಪಾಲ್/2024–25

# ಕುವೈತ್: ಅಗ್ನಿ ಅವಘಡ– ಭಾರತೀಯ ಕುಟುಂಬದ ನಾಲ್ವರು ಸಾವು

ದುಬೈ/ಕುವೈತ್ ಸಿಟಿ (ಪಿಟಿಐ): ಕುವೈತ್ ಸಿಟಿಯ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಭಾರತೀಯ ದಂಪತಿ ಹಾಗೂ ಅವರ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಕೇರಳದ ಅಲಪ್ಪುಳ ಜಿಲ್ಲೆಯ ನೀರಾಟ್ಟುಪುರಂನ ಮ್ಯಾಥ್ಯೂಸ್ ಮುಲಕಲ್, ಪತ್ನಿ ಲಿನಿ ಅಬ್ರಹಾಂ ಹಾಗೂ ಇಬ್ಬರು ಮಕ್ಕಳು ಮೃತಪಟ್ಟವರು. ಮ್ಯಾಥ್ಯೂಸ್ ಅವರು ರಾಯಿಟರ್ಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.ಲಿನಿ ನರ್ಸ್‌ಆಗಿದ್ದರು.

'ರಜೆಗಾಗಿ ಕೇರಳಕ್ಕೆ ತೆರಳಿದ್ದ ಈ ಕುಟುಂಬ ಶುಕ್ರವಾರ ರಾತ್ರಿ ದುಬೈಗೆ ವಾಪಸಾಗಿತ್ತು. ಅದೇ ದಿನ ರಾತ್ರಿ ಈ ದುರಂತ ಸಂಭವಿಸಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏರ್ ಕಂಡಿಷನರ್‌ನಲ್ಲಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಾಗ, ಉಸಿರುಗಟ್ಟಿ ಈ ನಾಲ್ವರು ಮೃತಪಟ್ಟಿದ್ದಾರೆ ಎಂದು ಮೂಲಗಳನ್ನು ಉಲ್ಲೇಖಿಸಿ ಅರಬ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

# ಬಾಂಗ್ಲಾದೇಶ: ನಿಷೇಧಾಜ್ಞೆ ನಡುವೆಯೇ ಪ್ರತಿಭಟನೆ

ಢಾಕಾ (ಎಪಿ): ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ವಿರೋಧಿಸಿ ಪ್ರತಿಭಟನೆ ನಡೆಯುತ್ತಿರುವ ಬಾಂಗ್ಲಾದೇಶದ ಹಲವೆಡೆ ಶನಿವಾರ ಕಠಿಣ ನಿಷೇಧಾಜ್ಞೆ ಮುಂದುವರಿದಿತ್ತು. ರಾಜಧಾನಿ ಢಾಕಾದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ನಿಗಾವಹಿಸುವ ಸಲುವಾಗಿ ಭದ್ರತಾ ಪಡೆಗಳು ಪಹರೆ ಕಾರ್ಯದಲ್ಲಿ ನಿರತವಾಗಿವೆ.

ಮಧ್ಯರಾತ್ರಿಯಿಂದಲೇ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಮಧ್ಯಾಹ್ನ 12 ಗಂಟೆಯಿಂದ 2 ಗಂಟೆವರೆಗೆ ನಿಷೇಧಾಜ್ಞೆ ಸಡಿಲಿಸಲಾಗುತ್ತದೆ. ಈ ವೇಳೆ ಜನರು ಅಗತ್ಯವಸ್ತುಗಳನ್ನು ಕೊಳ್ಳಬಹುದು. ಪರಿಸ್ಥಿತಿ ಕೈಮೀರಿದರೆ 'ಕಂಡಲ್ಲಿ ಗುಂಡು' ಹಾರಿಸುವ ಅಧಿಕಾರವನ್ನು ಭದ್ರತಾ ಪಡೆಗಳಿಗೆ ನೀಡಲಾಗಿದೆ ಎಂದು ಸಂಸದ ಒಬೈದುಲ್ ಕ್ವಾದರ್ ತಿಳಿಸಿದ್ದಾರೆ.

ಇಲ್ಲಿಯವರೆಗೆ 103 ಮಂದಿ ಮೃತಪಟ್ಟಿದ್ದಾರೆ ಎಂದು ಡೈಲಿ ಪ್ರೊಥೊಮ್ ಅಲೋ ಸುದ್ದಿಪತ್ರಿಕೆ ವರದಿ ಮಾಡಿದೆ. ಹಿಂಸಾಚಾರದಲ್ಲಿ ಸುಮಾರು ಸಾವಿರ ಮಂದಿ ಗಾಯಗೊಂಡಿದ್ದಾರೆ ಎಂದು ಢಾಕಾದಲ್ಲಿಯ ಅಮೆರಿಕ ರಾಯಭಾರ ಕಚೇರಿಯು ವರದಿ ಮಾಡಿದೆ.

ಢಾಕಾ ಜಿಲ್ಲೆಯ ನರ್ಸಿಂಗ್ಡಿಯ ಕಾರಾಗೃಹದ ಮೇಲೆ ಪ್ರತಿಭಟನಕಾರರು ದಾಳಿ ನಡೆಸಿದ ಬಳಿಕ ಸುಮಾರು 800 ಕೈದಿಗಳು ತಪ್ಪಿಸಿಕೊಂಡಿದ್ದಾರೆ. ಬಾಂಗ್ಲಾದೇಶ ಸೆಂಟ್ರಲ್ ಬ್ಯಾಂಕ್, ಪ್ರಧಾನಿ ಕಚೇರಿ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡುವ ಯತ್ನ ನಡೆದಿದೆ ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ.

**ಭಾರತಕ್ಕೆ ಮರಳಿದ ವಿದ್ಯಾರ್ಥಿಗಳು (ಅಗರ್ತಲಾ/ಕೋಲ್ಕತ್ತ) (ಪಿಟಿಐ):** ಬಾಂಗ್ಲಾದೇಶದಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಹಿಂಸಾಚಾರ ನಡೆಯುತ್ತಿರುವ ಕಾರಣ ಸುಮಾರು 100 ವಿದ್ಯಾರ್ಥಿಗಳು ತ್ರಿಪುರಾದ ಎರಡು ಪ್ರಮುಖ ಚೆಕ್‌ಪಾಯಿಂಟ್‌ಗಳ ಮೂಲಕ ಭಾರತಕ್ಕೆ ಶನಿವಾರ ಮರಳಿದ್ದಾರೆ ಎಂದು ಗಡಿ ಭದ್ರತಾ ಪಡೆ ತಿಳಿಸಿದೆ.

ಭಾರತೀಯ ವಿದ್ಯಾರ್ಥಿಗಳ ಜೊತೆ ವಿದೇಶಿ ವಿದ್ಯಾರ್ಥಿಗಳೂ ದೇಶಕ್ಕೆ ಮರಳಿದ್ದಾರೆ. ಈಗಾಗಲೇ ಸುಮಾರು 100 ವಿದ್ಯಾರ್ಥಿಗಳು ವಾಪಸ್ಸಾಗಿದ್ದು, ಇನ್ನೂ ಸುಮಾರು 240 ವಿದ್ಯಾರ್ಥಿಗಳು ವಾಪಸ್ಸಾಗುವ ನಿರೀಕ್ಷೆ ಇದೆ ಹಲವು ವಿದ್ಯಾರ್ಥಿಗಳು ದೇಶಕ್ಕೆ ಮರಳಲಿದ್ದಾರೆ ಎಂದು ತ್ರಿಪುರಾದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪಶ್ಚಿಮ ಬಂಗಾಳದ ಮೂಲಕವೂ ವಿದ್ಯಾರ್ಥಿಗಳು ಭಾರತಕ್ಕೆ ಮರಳುತ್ತಿದ್ದು, ಈ ವರೆಗೆ ನೇಪಾಳದ ಐವರು ವಿದ್ಯಾರ್ಥಿಗಳು ಫುಲ್ಬರಿ ಗಡಿ ಮೂಲಕ ಆಗಮಿಸಿದ್ದಾರೆ.

### ಸ್ಟಿಮ್ಯಾಚ್ ಅವರಿಂದ ತೆರವಾದ ಸ್ಥಾನಕ್ಕೆ ಸ್ಪೇನ್‌ನ ಮಾಜಿ ಆಟಗಾರ ನೇಮಕ

# ಫುಟ್‌ಬಾಲ್ ತಂಡಕ್ಕೆ ಮಾರ್ಕ್ವೆಝ್ ಕೋಚ್

**ನವದೆಹಲಿ (ಪಿಟಿಐ):** ಸ್ಪೇನ್‌ನ ಮನೊಲೊ ಮಾರ್ಕ್ವೆಝ್ ಅವರು ಭಾರತ ಪುರುಷರ ಫುಟ್‌ಬಾಲ್ ತಂಡದ ನೂತನ ಹೆಡ್ ಕೋಚ್ ಆಗಿ ಶನಿವಾರ ನೇಮಕಗೊಂಡಿದ್ದಾರೆ. ಮುಖ್ಯ ಕೋಚ್ ಸ್ಥಾನದಿಂದ ವಜಾಗೊಂಡಿದ್ದ ಇಗೊರ್ ಸ್ಟಿಮ್ಯಾಚ್ ಅವರ ಸ್ಥಾನಕ್ಕೆ ಮಾರ್ಕ್ವೆಝ್ ಅವರ ನೇಮಕವಾಗಿದೆ.

ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ಕಾರ್ಯಕಾರಿ ಸಮಿತಿ ಶನಿವಾರ ಇಲ್ಲಿ ಸಭೆ ಸೇರಿ ಮಾರ್ಕ್ವೆಝ್ ಅವರ ನೇಮಕ ಪ್ರಕಟಿಸಿತು. 55 ವರ್ಷದ ಮಾರ್ಕ್ವೆಝ್

ಮನೊಲೊ ಮಾರ್ಕೆಜ್ –ಪಿಟಿಐ ಚಿತ್ರ

ಪ್ರಸ್ತುತ ಐಎಸ್‌ಎಲ್ ತಂಡ ಎಫ್‌ಸಿ ಗೋವಾದ ಮುಖ್ಯ ಕೋಚ್ ಆಗಿದ್ದಾರೆ.

ಸಮಿತಿಯು, ಭಾರತ ಸೀನಿಯರ್ ರಾಷ್ಟ್ರೀಯ ತಂಡಕ್ಕೆ ನೂತನ ಹೆಡ್ ಕೋಚ್ ನೇಮಕದ ಬಗ್ಗೆ ಸಮಾಲೋಚನೆ ನಡೆಸಿತು. ಮನೊಲೊ ಮಾರ್ಕ್ವೆಝ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಆಯ್ಕೆ ಮಾಡಿತು ಎಂದು ಎಐಎಫ್‌ಎಫ್ ಹೇಳಿಕೆಯಲ್ಲಿ ತಿಳಿಸಿದೆ.

‘2024–25ನೇ ಸಾಲಿಗೆ ಮಾರ್ಕ್ವೆಝ್ ಅವರು ಎಫ್‌ಸಿ ಗೋವಾ ಮುಖ್ಯ ಕೋಚ್ ಪಾತ್ರದಲ್ಲಿ ಮುಂದುವರಿಯಲಿದ್ದಾರೆ. ಜೊತೆಗೆ ಎರಡೂ ಹೊಣೆಗಳನ್ನು ನಿಭಾಯಿಸಲಿದ್ದಾರೆ. ನಂತರದ ಸಾಲಿನಲ್ಲಿ ಪೂರ್ಣಪ್ರಮಾಣದಲ್ಲಿ ರಾಷ್ಟ್ರೀಯ ಹೆಡ್ ಕೋಚ್ ಹೊಣೆ ವಹಿಸಲಿದ್ದಾರೆ’ ಎಂದು ತಿಳಿಸಿದೆ. ಮಾರ್ಕ್ವೆಝ್ ಅವರ ಅವಧಿಯನ್ನು ಫೆಡರೇಷನ್ ಬಹಿರಂಗಪಡಿಸಿಲ್ಲ.

2026ರ ಫಿಫಾ ವಿಶ್ವಕಪ್ ಅರ್ಹತಾ ಸುತ್ತಿನಲ್ಲಿ ಮೂರನೇ ಸುತ್ತಿಗೇರಲು ಭಾರತ ತಂಡ ವಿಫಲವಾದ ನಂತರ ಜೂನ್ 17ರಂದು ಸ್ಟಿಮ್ಯಾಚ್ ಅವರನ್ನು ಮುಖ್ಯ ಕೋಚ್ ಸ್ಥಾನದಿಂದ ಕಿತ್ತುಹಾಕಲಾಗಿತ್ತು.

## ಸ್ಕ್ವಾಷ್: ಕ್ವಾರ್ಟರ್‌ಗೆ ಭಾರತ ತಂಡಗಳು

**ಹೂಸ್ಟನ್ (ಪಿಟಿಐ):** ಭಾರತದ ಬಾಲಕರ ಮತ್ತ ಬಾಲಕಿಯರ ತಂಡಗಳು ಇಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದವು.

ಬಾಲಕರ ‘ಎಫ್’ ಗುಂಪಿನಲ್ಲಿ ಭಾರತ 3-0ಯಿಂದ ಬ್ರೆಜಿಲ್ ತಂಡವನ್ನು ಸೋಲಿಸಿತು. ಯುವರಾಜ್ ವಾಧ್ವಾನಿ, ಶೌರ್ಯ ಬಾವಾ ಮತ್ತು ಅಯಾನ್ ವಜಿರಳ್ಳಿ ತಮ್ಮ ಸುತ್ತಿನ ಪಂದ್ಯಗಳನ್ನು ಗೆದ್ದರು. ಕ್ವಾರ್ಟರ್ ಫೈನಲ್‌ನಲ್ಲಿ ಭಾರತವು ಕೆನಡಾ ತಂಡವನ್ನು ಎದುರಿಸಲಿದೆ.

ಬಾಲಕಿಯರ ‘ಡಿ’ ಗುಂಪಿನಲ್ಲಿ ಭಾರತ ತಂಡವು ಬ್ರೆಜಿಲ್ ಮತ್ತು ಆಸ್ಟ್ರೇಲಿಯಾವನ್ನು ಒಂದೇ ರೀತಿಯ ಅಂತರದಿಂದ (3-0) ಸೋಲಿಸಿ

ಅನಾಹತ್ ಸಿಂಗ್

ಕ್ವಾರ್ಟರ್‌ಫೈನಲ್ ಸ್ಥಾನವನ್ನು ಖಚಿತಪಡಿಸಿಕೊಂಡಿತು. ಅನಾಹತ್ ಸಿಂಗ್, ನಿರುಪಮಾ ದುಬೆ, ಉನ್ನತಿ ತ್ರಿಪಾಠಿ ಮತ್ತು ಶಮೀನಾ ರಿಯಾಜ್ ಅವರನ್ನು ತಮ್ಮ ಸುತ್ತಿನ ಪಂದ್ಯಗಳಲ್ಲಿ ಜಯ ಗಳಿಸಿದರು. ಗುಂಪಿನ ಕೊನೆಯ ಪಂದ್ಯದಲ್ಲಿ ಭಾರತವು ಹಾಂಗ್‌ಕಾಂಗ್ ತಂಡವನ್ನು ಎದುರಿಸಲಿದೆ.

## ವಾಲಿಬಾಲ್: ಭಾರತ ಯು-20 ತಂಡಕ್ಕೆ ಲಕ್ಷ್ಮೀನಾರಾಯಣ ಕೋಚ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಂಚೆ ಇಲಾಖೆ ಉದ್ಯೋಗಿ ಕರ್ನಾಟಕದ ಕೆ.ಆರ್. ಲಕ್ಷ್ಮೀನಾರಾಯಣ ಅವರು ಇಂಡೊನೇಷ್ಯಾದ ಸುರಬಯದಲ್ಲಿ ಇದೇ 23 ರಿಂದ 30ರವರೆಗೆ ನಡೆಯಲಿರುವ 20 ವರ್ಷದೊಳಗಿನ ಪುರುಷರ ಏಷ್ಯನ್ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಭಾರತ ತಂಡಕ್ಕೆ ಹೆಡ್ ಕೋಚ್ ಆಗಿದ್ದಾರೆ.

ಎಫ್‌ಐವಿಬಿ ಪುರುಷರ 21 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ಗೆ ಇದು ಅರ್ಹತಾ ಟೂರ್ನಿಯಾಗಿದೆ. ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರ ಕೇಂದ್ರದಲ್ಲಿ ಜೂನ್ 22ರಿಂದ ಸಂಭವನೀಯರಿಗೆ ಸಿದ್ಧತಾ ಶಿಬಿರ ನಡೆದಿತ್ತು.

**ತಂಡ ಹೀಗಿದೆ:** ಧ್ರುವಿಲ್ ಪಟೇಲ್, ಕಾರ್ತಿಕ್ ಶರ್ಮಾ, ಸೋಹಮ್ ಮೋರೆ, ಅಕ್ಷಯ್ ಪ್ರಕಾಶ್ ಇಟ.ಪಿ. ಆದಿತ್ಯ ರಾಣಾ, ಕುಶ್ ಸಿಂಗ್, ಶುಭಮ್ ಯಾದವ್, ಆರ್ಯನ್ ಬಲಿಯಾನ್, ನಿಖಿಲ್, ಎಂ.ಕಬಿಲನ್, ಗೌರವ್ ಸಿಂಗ್ ಮತ್ತು ನವೀನ್ ಕುಮಾರ್.

## ಹಾಕಿ: ನೈಋತ್ಯ ರೈಲ್ವೆ ತಂಡಕ್ಕೆ ಜಯ

**ಬೆಂಗಳೂರು:** ನೈಋತ್ಯ ರೈಲ್ವೆ ತಂಡವು ಶನಿವಾರ ಕರ್ನಾಟಕ ಹಾಕಿ ಲೀಗ್ ಚಾಂಪಿಯನ್‌ಷಿಪ್ 8ನೇ ಆವೃತ್ತಿಯ ಟೂರ್ನಿಯ ಪಂದ್ಯದಲ್ಲಿ 4–3ರಿಂದ ಡಿವೈಇಎಸ್ ‘ಬಿ’ ತಂಡವನ್ನು ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ಎಜೀಸ್ ತಂಡವು 5–3ರಿಂದ ಕರ್ನಾಟಕ ರಾಜ್ಯ ಪೊಲೀಸ್ ತಂಡವನ್ನು ಸೋಲಿಸಿತು.

## ಸುಧಾ, ಮಯೂರ ಓದಿರಿ

### ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ಆಗಸ್ಟ್ 15ರಿಂದ

# ಮಯಂಕ್, ಮನೀಷ್ ಉಳಿಸಿಕೊಂಡ ತಂಡಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಶ್ರಯದಲ್ಲಿ ನಡೆಯಲಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಆಟಗಾರರ ಬಿಡ್ ಪ್ರಕ್ರಿಯೆ ಈ ತಿಂಗಳು ನಡೆಯಲಿದೆ. ಈ ಹಿನ್ನೆಲೆಯಲ್ಲಿ ಟೂರ್ನಿಯಲ್ಲಿರುವ ತಂಡಗಳು ತಾವು ಉಳಿಸಿಕೊಂಡ ಆಟಗಾರರ ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿವೆ.

ಪ್ರಮುಖ ಆಟಗಾರರಾದ ಮಯಂಕ್ ಅಗರವಾಲ್, ಮನೀಷ್ ಪಾಂಡೆ, ಕರುಣ್ ನಾಯರ್, ದೇವದತ್ತ ಪಡಿಕ್ಕಲ್ ಮತ್ತು ಮಧ್ಯಮ ವೇಗದ ಬೌಲರ್ ವೈಶಾಖ ವಿಜಯಕುಮಾರ್ ಅವರನ್ನು ತಂಡಗಳು ಉಳಿಸಿಕೊಂಡಿವೆ. ಟೂರ್ನಿಯ ಮೂರನೇ ಆವೃತ್ತಿಯು ಆಗಸ್ಟ್ 15ರಿಂದ ಸೆಪ್ಟೆಂಬರ್ 1ರವರೆಗೆ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಹಾಲಿ ಚಾಂಪಿಯನ್ ಹುಬ್ಬಳ್ಳಿ ಟೈಗರ್ಸ್, ರನ್ನರ್ಸ್ ಅಪ್ ಮೈಸೂರು ವಾರಿಯರ್ಸ್, ಗುಲ್ಬರ್ಗಾ ಮಿಸ್ಟಿಕ್ಸ್, ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಡ್ರಾಗನ್ಸ್ ಮತ್ತು ಶಿವಮೊಗ್ಗ ಲಯನ್ಸ್ ತಂಡಗಳು ಆಡಲಿವೆ.

ಮಯಂಕ್ ಅಗರವಾಲ್ ಮತ್ತು ಮನೀಷ್ ಪಾಂಡೆ –ಪ್ರಜಾವಾಣಿ ಸಂಗ್ರಹ ಚಿತ್ರ

### ಉಳಿಕೆ ಆಟಗಾರರು

**ಹುಬ್ಬಳ್ಳಿ ಟೈಗರ್ಸ್:** ಮನೀಷ್ ಪಾಂಡೆ, ಕೆ.ಎಲ್. ಶ್ರೀಜಿತ್, ಮನವಂತಕುಮಾರ್, ವಿದ್ವತ್ ಕಾವೇರಪ್ಪ.
**ಮೈಸೂರು ವಾರಿಯರ್ಸ್:** ಕರುಣ್ ನಾಯರ್, ಸಿ.ಎ.ಕಾರ್ತಿಕ್, ಎಸ್.ಯು. ಕಾರ್ತಿಕ್, ಮನೋಜ್ ಬಾಂಢಗೆ.
**ಗುಲ್ಬರ್ಗಾ ಮಿಸ್ಟಿಕ್ಸ್:** ದೇವದತ್ತ ಪಡಿಕ್ಕಲ್, ವೈಶಾಖ ವಿಜಯಕುಮಾರ್, ಸ್ಮರಣ್ ರವಿ, ಕೆ.ವಿ. ಅನೀಶ್.
**ಶಿವಮೊಗ್ಗ ಲಯನ್ಸ್:** ಅಭಿನವ್ ಮನೋಹರ್, ನಿಹಾಲ್ ಉಳ್ಳಾಲ್, ಶಿವರಾಜ್, ವಾಸುಕಿ ಕೌಶಿಕ್.
**ಮಂಗಳೂರು ಡ್ರ್ಯಾಗನ್ಸ್:** ನಿಕಿನ್ ಜೋಸ್, ರೋಹನ್ ಪಾಟೀಲ, ಕೆ.ವಿ. ಸಿದ್ಧಾರ್ಥ್, ಪಾರಸ್ ಗುರುಭಕ್ಷ್ ಆರ್ಯ.
**ಬೆಂಗಳೂರು ಬ್ಲಾಸ್ಟರ್ಸ್:** ಮಯಂಕ್ ಅಗರವಾಲ್, ಸೂರಜ್ ಅಹುಜಾ, ಶುಭಾಂಗ್ ಹೆಗಡೆ, ಮೊಹಸೀನ್ ಖಾನ್.


"KRISHNA BHAGYA JALA NIGAM LIMITED"
(A GOVT.OF KARNATAKA UNDERTAKING)
ಕಾರ್ಯಾಲಯ ಕಾರ್ಯಪಾಲಕಅಭಿಯಂತರರು ಕೃಭಾಜನಿನಿ, ಆಬದಂಕಾ ವಿಭಾಗ, ಹುನಗುಂದ– 587 118
Telephone NO. 08351-261110 e-mail : eearbcdivn@gmail.com
ಸಂ:ಕೃಭಾಜನಿ(ನಿ)/ಆಬದಂಕಾ/ವಿಹು/ಡಿಬಿ/2024–25/350 ದಿನಾಂಕ:19/07/2024

ಅಲ್ಪಾವಧಿಕೋಟೇಶನ್/ಟೆಂಡರ್

ಈ ಕಛೇರಿಯು "Dismantling of the transformer of capacity of 6MVA(1No) & 3MVA(2No's) in drip pump house of Ramthal (Marol) drip irrigation system and Inspection of the transformer, submitting the report for repair and probable cost of repair of transformer to the client as per the prevailing market rates as directed by the Engineer incharge.." ಕಾಮಗಾರಿಗೆ ಅಂದಾಜು ದರವನ್ನು ತಲುಪಿಸಲು ಅಲ್ಪಾವಧಿ ಕೊಟೇಶನ್ ಅನ್ನು ಅಹ್ವಾನಿಸಲಾಗಿದೆ. ಅಧೀಕೃತ CEIG registered class-1 electrical contractor/consultant ಇವರಿಂದ ಜಿ.ಎಸ್.ಟಿ. ಸೇರಿದಂತೆ ಕೊಟೇಶನ್ ಅನ್ನು ಈ ಕಚೇರಿಗೆ ದಿನಾಂಕ: 30.07.2024ರ ಸಾಯಂಕಾಲ 05.00 ಘಂಟೆಯೊಳಗೆ ಸಲ್ಲಿಸಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿ(ನಿ), ಆ.ಬ.ದಂ.ಕಾ.–ವಿಭಾಗ ಹುನಗುಂದ ಇವರ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ.
ಸದರಿ ಕೊಟೇಶನ್‌ಗಳನ್ನು ದಿನಾಂಕ: 31.07.2024ರ ಬೆಳಿಗ್ಗೆ 11.45 ಘಂಟೆಗೆ ಕಾರ್ಯಪಾಲಕ ಅಭಿಯಂತರರು, ಕೃಬಾಜನಿ(ನಿ), ಆ.ಬ.ದಂ. ಕಾಲುವೆ ವಿಭಾಗ, ಹುನಗುಂದ ಕಛೇರಿಯಲ್ಲಿ ತೆರೆಯಲಾಗುವುದು.
ಸಂಪರ್ಕಿಸುವ ಈ–ಮೇಲ್ ವಿಳಾಸ. :eearbcdivn@gmail.com.
ಸಂಪರ್ಕಿಸುವ ದೂರವಾಣಿ ಸಂಖ್ಯೆ:.,M. No.8660871627
ಸಹಿ/–ಕಾರ್ಯಪಾಲಕ ಅಭಿಯಂತರರು
DIPR/BGK/RO-NO-115/KSMCA/2024-25 ಕೃಭಾಜನಿನಿ. ಆಬದಂಕಾ ವಿಭಾಗ, ಹುನಗುಂದ.



ಸಮಗ್ರ ಶಿಕ್ಷಣ ಕರ್ನಾಟಕ
ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ಸಮಗ್ರ ಶಿಕ್ಷಣ ಕರ್ನಾಟಕ # 1–9–74 ಮಾವಿನ ಕೆರೆ ರಸ್ತೆ, ಆಜಾದ್ ನಗರ್, ರಾಯಚೂರು–584101
ಸಂಖ್ಯೆ:ಎ2/ಸಶಿಕರಾ/kgbv type-1 & type-4 ಹಾಪೂ ಟೆಂಡರ್ ಪ್ರ/2024–25 ದಿನಾಂಕ:19.07.2024

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2024–25ನೇ ಸಾಲಿಗೆ ಜಿಲ್ಲೆಯ 06 ಕೆಜಿಬಿವಿ ಟೈಪ್–1 ವಸತಿ ಶಾಲೆಗಳಿಗೆ ಹಾಗೂ 05 ಕೆಜಿಬಿವಿ ಟೈಪ್ – 4 ವಸತಿ ನಿಲಯಗಳಿಗೆ, ಆಹಾರ ಸಿದ್ದಪಡಿಸಿ ಪೂರೈಕೆಗೆ ಅಲ್ಪಾವಧಿಯ ಇ–ಟೆಂಡರ್ ಮೂಲಕ ಪ್ರತ್ಯೇಕವಾಗಿ ಟೆಂಡರಗಳನ್ನು ಅಹ್ವಾನಿಸಲಾಗಿದೆ, ಇಚ್ಛೆಯುಳ್ಳವರು http://www.kppp.karnataka.gov.in ವೆಬ್ ಸೈಟ್ ಮೂಲಕ ಟೆಂಡರನಲ್ಲಿ ಭಾಗವಹಿಸಲು ಕೋರಲಾಗಿದೆ. ಅರ್ಜಿ ಲಭ್ಯವಾಗುವ ದಿನಾಂಕ: 20.06.2024 ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02.07.2024.
ಟೆಂಡರಿನ ಮೊತ್ತ: 1) 06 ಕೆಜಿಬಿವಿ ಟೈಪ್–1 ವಸತಿ ಶಾಲೆಗಳಿಗೆ ರೂ. 1,22,40,000/– 2) 05 ಕೆಜಿಬಿವಿ ಟೈಪ್ – 4 ವಸತಿ ನಿಲಯಗಳಿಗೆ ರೂ. 1,02,00,000/–
ಸಹಿ/– ಉಪನಿರ್ದೇಶಕರು(ಆ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ ರಾಯಚೂರು
DIP/RCR/124/KSMCA/123/2024-25



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ದಾವಣಗೆರೆ ವಿಭಾಗ, ದಾವಣಗೆರೆ
ಸಂ: ಕರಾಸ/ದಾವಿ/ಸಂ/ವಾ/1103/2024–25 ದಿನಾಂಕ: 19.07.2024

ಇ–ಟೆಂಡರ್ ಪ್ರಕಟಣೆ ಸಂಖ್ಯೆ: 05/2024–25 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ ನೂತನವಾಗಿ ಪ್ರಾರಂಭಗೊಂಡಿರುವ ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣದಲ್ಲಿರುವ ಶಾಪಿಂಗ್ ಮಾಲ್ ಏರಿಯಾದ ಒಟ್ಟು ವಿಸ್ತೀರ್ಣ ಸೇರಿ ಒಂದೇ ಪರವಾನಿಗೆ ನೀಡುವ ಸಲುವಾಗಿ ‘As is where is basis" ಆಧಾರದಲ್ಲಿ ಏಕೈಕ ಪರವಾನಗಿಗೆ 06 ವರ್ಷದ ಅವಧಿಗೆ (ಪ್ರತೀ ವರ್ಷ ಶೇ 05 ರಷ್ಟು ಪರವಾನಿಗೆ ಶುಲ್ಕದ ಹೆಚ್ಚಳದೊಂದಿಗೆ) ಪರವಾನಗಿಗೆ ನೀಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08.08.2024 ರಂದು ಸಂಜೆ 17.00 ಗಂಟೆ ವರಗೆ. ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ "https://kppp.karnataka.gov.in" ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿ: 19.07.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸದರಿ ಶಾಪಿಂಗ್ ಮಾಲ್ ಏರಿಯಾದ ಒಟ್ಟು ಸ್ಥಳದ ವಿವರ ಕೆಳಕಂಡಂತಿದೆ.

| ಕ್ರ. ಸಂ | ಬಸ್ ನಿಲ್ದಾಣದ ಹೆಸರು | ಮಳಿಗೆಯ ವಿವರ | ವಿಸ್ತೀರ್ಣ (ಚ.ಅ) | ಪರವಾನಿಗೆ ಅವಧಿ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ (ಜಿಎಸ್‌ಟಿ ಹಾಗೂ ಇನ್ನಿತರ ಶುಲ್ಕ ಒಳಗೊಂಡಿರುವುದಿಲ್ಲ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 01 | ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣ | ಶಾಪಿಂಗ್ ಮಾಲ್ ಏರಿಯಾ | 151601.30 | 06 ವರ್ಷ | 59,59,000/– | 1,78,76,500/– | 500/– | 3540/– |

* ಮೇಲ್ಕಂಡ ತಳ ಅಂತಸ್ತು (ಬೆಸ್‌ಮೆಂಟ್, ಪಾರ್ಕಿಂಗ್ ಸ್ಥಳ), ವಿಸ್ತೀರ್ಣ 37751.57, ನೆಲ ಅಂತಸ್ತು (ಗ್ರೌಂಡ್ ಪ್ಲೋರ್) ವಿಸ್ತೀರ್ಣ 24197.52, ಮೊದಲ ಅಂತಸ್ತು ವಿಸ್ತೀರ್ಣ. 29884.07 ಚ.ಅಡಿ ಮತ್ತು ಎರಡನೇ ಅಂತಸ್ತು ವಿಸ್ತೀರ್ಣ 29884.07 ಚ.ಅಡಿ, ಮೂರನೇ ಅಂತಸ್ತು ವಿಸ್ತೀರ್ಣ 29884.07 ಒಟ್ಟು ವಿಸ್ತೀರ್ಣ 151601.30 ಚ.ಅಡಿ ಶಾಪಿಂಗ್ ಮಾಲ್ ಏರಿಯಾ ವಿಸ್ತೀರ್ಣಕ್ಕೆ (ಸದರಿ ಶಾಪಿಂಗ್ ಮಾಲ್ ಏರಿಯಾ ವಿಸ್ತೀರ್ಣದಲ್ಲಿ 03 ಫಿಲಂ ಥಿಯೇಟರ್‌ಗಳು ಇರುತ್ತವೆ) "As is where is basis" ಆಧಾರದಲ್ಲಿ ಏಕೈಕ ಪರವಾನಿಗೆ ನಿಗದಿಪಡಿಸಲಾಗಿರುತ್ತದೆ. ಸದರಿ ಅಂತಸ್ತುಗಳ ಶುಚಿತ್ವ ನಿರ್ವಹಣೆಯನ್ನು ಒಳಗೊಂಡು ಒಟ್ಟು ಕನಿಷ್ಟ ಮಾಸಿಕ ಪರವಾನಿಗೆ ಶುಲ್ಕ ನಿಗದಿಪಡಿಸಿದ್ದು, 06 ವರ್ಷದ ಅವಧಿಗೆ ಪರವಾನಿಗೆ ಅವಧಿ ನಿಗದಿಪಡಿಸಲಾಗಿರುತ್ತದೆ.
ಸಂಪರ್ಕಿಸುವ ದೂರವಾಣಿ ಸಂಖ್ಯೆ. ವಿಭಾಗೀಯ ಸಂಚಾರ ಅಧಿಕಾರಿ–7760990452, ಸಹಾಯಕ ಸಂಚಾರ ಅಧೀಕ್ಷಕಿ–7022030183
ವಿಭಾಗೀಯ ನಿಯಂತ್ರಣಾಧಿಕಾರಿ
ವಾ.ಸಾ.ಸಂ.ಇ/ವಾಪ್ರ/988/ಆಕಾರ್/2024–25 ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ



ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
3ನೇ ಮಹಡಿ, "ಗ್ರಾಮೀಣಾಭಿವೃದ್ಧಿ ಭವನ", ಆನಂದರಾವ್ ವೃತ್ತ, ಬೆಂಗಳೂರು – 560009.
ದೂರವಾಣಿ ಸಂಖ್ಯೆ: 080–29710021/22/23/24 ಫ್ಯಾಕ್ಸ್: 080–29710025
ಇ–ಮೇಲ್: coo.krrda.karbng@kar.nic.in ವೆಬ್‌ಸೈಟ್: http://www.krrda.in
ಸಂಖ್ಯೆ: ಕೆ.ಆರ್.ಆರ್.ಡಿ.ಎ/ತಾಂತ್ರಿಕ/02/DPR/2024–25/756 ದಿನಾಂಕ: 19–07–2024

ತಿದ್ದುಪಡಿ

ಈ ಕಚೇರಿ ಟೆಂಡರ್ ಪ್ರಕಟಣಾ ಸಂಖ್ಯೆ: ಕೆ.ಆರ್.ಆರ್.ಡಿ.ಎ/ತಾಂತ್ರಿಕ/02/DPR/2024–25/575 ದಿನಾಂಕ: 03–07–2024. ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ವತಿಯಿಂದ ಅಭಿವೃದ್ಧಿಪಡಿಸುವ ರಸ್ತೆ ಮತ್ತು ಸೇತುವೆ ಕಾಮಗಾರಿಗಳ ಸರ್ವೆ ಮತ್ತು ವಿಸ್ತೃತ ಯೋಜನಾ ವರದಿ (Detailed Project Report) ಗಳನ್ನು ತಯಾರಿಸಿ ನೀಡಲು ಸಮಾಲೋಚಕರುಗಳನ್ನು ನೇಮಕಾತಿ ಮಾಡಿಕೊಳ್ಳುವ ಸಲುವಾಗಿ ಟೆಂಡರ್‌ನ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 26–07–2024 ರಂದು ನಿಗದಿಪಡಿಸಲಾಗಿತ್ತು. ಕಾರಣಾಂತರಗಳಿಂದ ಸದರಿ ದಿನಾಂಕವನ್ನು 13–08–2024 ರ ಸಂಜೆ 4.30 ಗಂಟೆವರೆಗೆ ಮುಂದೂಡಲಾಗಿದೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರಲಾಗಿದೆ.
ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/– ಮುಖ್ಯ ಕಾರ್ಯಾಚರಣೆ ಅಧಿಕಾರಿ ಪರವಾಗಿ,
ವಾಸಾಸಂಇ/ವಾ.ಪ್ರ/1016/ಅಡ್ವರ್ಟೋರ್/2024–25 ಕೆ.ಆರ್.ಆರ್.ಡಿ.ಎ., ಬೆಂಗಳೂರು.



ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ
ಎ. ಪಿ. ಎಂ. ಸಿ ಪ್ರಾಂಗಣ, ಗದಗ. ಪಿನ್ ಕೋಡ್–582101
ಇ–ಮೇಲ್ apmcgadag4@gmail.com ದೂ: 08372–238354
ಸಂ:ಕೃಉಮಾಸ:ಗ: 258 :2024–25 ದಿನಾಂಕ: 19–07–2024

Corrigendum

ಗದಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಕರೆಯಲಾದ ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಕೃಉಮಾಸ/ಗ/222/2024–25 ದಿನಾಂಕ: 02–06–2024 ರನುಸಾರ 5 ಟಿ.ಪಿ.ಎಚ್. ಸಾಮರ್ಥ್ಯದ ಬಹುಧಾನ್ಯ ಶುದ್ಧಿಕರಣ ಘಟಕ ಹಾಗೂ 3 ಟಿ.ಪಿ.ಎಚ್. ಸಾಮರ್ಥ್ಯದ ಸಾರ್ಟೆಕ್ಸ್ ಯಂತ್ರಗಳ ಘಟಕವನ್ನು ಮಾಸಿಕ ಲೀವ್ & ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಹಂಚಿಕೆ ಮಾಡಲು ಕರೆಯಲಾದ ಟೆಂಡರ್‌ಗಳನ್ನು ಸಲ್ಲಿಸುವ ಅಂತಿಮ ದಿನಾಂಕ: 20–07–2024 ಬೆಳಿಗ್ಗೆ 11:00 ಗಂಟೆಗೆ ಇರುವುದನ್ನು ದಿನಾಂಕ: 03–08–2024 ಸಾಯಂಕಾಲ 5:00 ಗಂಟೆವರೆಗೆ ವಿಸ್ತರಿಸಲಾಗಿದೆ. ತಾಂತ್ರಿಕ ಬಿಡ್, ತೆರೆಯುವ ದಿನಾಂಕ: 05–08–2024 ಬೆಳಿಗ್ಗೆ 11–00 ಗಂಟೆಗೆ, ಆರ್ಥಿಕ ಬಿಡ್ (ಸಾಧ್ಯವಾದಲ್ಲಿ) ತೆರೆಯುವ ದಿನಾಂಕ: 09–08–2024 ಬೆಳಿಗ್ಗೆ 11–00 ಗಂಟೆಗೆ
Indent No. APMC/2024-25/SE0368 DATE: 04-07-2024
ಸಹಿ/– ಕಾರ್ಯದರ್ಶಿ,
ವಾ.ಸಾ.ಇ/ಗದಗ/100/ದೇಶಪಾಂಡೆಪಬ್ಲಿಸಿಟಿ/2024–25 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ



ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3ರವರ ಕಛೇರಿ, ಬೆಂಘತ್ಯಾನಿನಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052
ಸಂ:ಉಪ್ರವ್ಯ–3(ಬೆಂಘತ್ಯಾನಿನಿ)/ತಿದ್ದುಪಡಿ–01/24–25 ದಿನಾಂಕ:20.07.2024

ತಿದ್ದುಪಡಿ–1

ವಿಷಯ: ಟೆಂಡರ್ ಅಧಿಸೂಚನೆಯ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡುವ ಕುರಿತು.
ಉಲ್ಲೇಖ : (1) ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: ಉಪ್ರವ್ಯ–3/ಬೆಂಘತ್ಯಾನಿನಿ/ಟೆಂಡ್/01/24–25 ದಿನಾಂಕ: 08.07.2024
ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ಪ್ರಕಾರ, ಮೇಲಿನ ಟೆಂಡರ್ ಅಧಿಸೂಚನೆಯ ದಿನಾಂಕಗಳನ್ನು ಉಲ್ಲೇಖ(1) ರಂತೆ ನವೀಕರಿಸಲಾಗಿದೆ ಹಾಗೂ ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.

| ಕ್ರ. ಸಂ. | ವಿವರಗಳು | ಟೆಂಡರಿನಲ್ಲಿ ಪ್ರಕಟಿಸಲಾಗಿರುವ ದಿನಾಂಕ | ತಿದ್ದುಪಡಿ ಮಾಡಿರುವ ದಿನಾಂಕ |
|---|---|---|---|
| 1 | ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ | 22.07.2024 ರ ಸಂಜೆ 15:00ರವರೆಗೆ | 26.07.2024 ಸಂಜೆ 15:00 ರವರೆಗೆ |
| 2 | ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ | 12.08.2024 ರ ಸಂಜೆ 16:00 ಗಂಟೆಗೆ | 22.08.2024 ರ ಅಪರಾಹ್ನ 16:00 ಗಂಟೆಗೆ |
| 3 | ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | 13.08.2024 ರ ಸಂಜೆ 16:30 ಗಂಟೆಗೆ | 23.08.2024 ರ ಸಂಜೆ 16:30 ಗಂಟೆಗೆ |

ಹೆಚ್ಚಿನ ಮಾಹಿತಿಗಾಗಿ ಜಿಓಕೆ ಕೆಪಿಪಿ ಪೋರ್ಟಲ್ www.kppp.karnataka.gov.in ನಿಂದ ಪಡೆಯಬಹುದು.
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3
ವಾಸಾಸಂಇ/ವಾಪ್ರ/ಜಿಎ/1008/2024–25 ಬೆಂಘತ್ಯಾನಿನಿ



ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
3ನೇ ಮತ್ತು 4ನೇ ಮಹಡಿ, ಜನೋಪಯೋಗಿ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು – 560 001.
ದೂ: 080–25586550 / 25586402 ಫ್ಯಾಕ್ಸ್: 080–25587020 ಇ–ಮೇಲ್: info@ksicsilk.com
ಸಂ: ಕೆಎಸ್‌ಐಸಿ/ಪಿಡಿ/ಕೇಬಲ್/ಸಿಎಸ್‌ಡಬ್ಲ್ಯೂ–ಎಂವೈಎಸ್/01/2024–25 ದಿನಾಂಕ:19.07.2024

ಕೆಎಸ್‌ಐಸಿಯ ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆಗೆ 1,000 ಮೀಟರ್ 1.1 ಕೆವಿ ನಾಲ್ಕು ಕೋರ್ 2.5 SQM ಸಿಂಗಲ್ ಸ್ಟ್ರಾಂಡ್ ಕಾಪರ್ ಕಂಡಕ್ಟರ್ XLPE ಇನ್ಸುಲೇಟೆಡ್ ಆರ್ಮರ್ಡ್ ಕೇಬಲ್ ಸರಬರಾಜಿಗಾಗಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕೆಎಸ್‌ಐಸಿಯ ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆಗೆ 1,000 ಮೀಟರ್ 1.1 ಕೆವಿ ನಾಲ್ಕು ಕೋರ್ 2.5 SQM ಸಿಂಗಲ್ ಸ್ಟ್ರಾಂಡ್ ಕಾಪರ್ ಕಂಡಕ್ಟರ್ XLPE ಇನ್ಸುಲೇಟೆಡ್ ಆರ್ಮರ್ಡ್ ಕೇಬಲ್ ಸರಬರಾಜಿಗಾಗಿ ಅರ್ಹ ತಯಾರಕರು ಮತ್ತು ವಿತರಕರಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್ ದಸ್ತಾವೇಜು, ಟೆಂಡರ್ ವಿವರ, ಷರತ್ತು & ನಿಬಂಧನೆಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಕೆಪಿಪಿ ಪೋರ್ಟಲ್ ಮೂಲಕ ಇ.ಎಂ.ಡಿ ಮೊತ್ತ ರೂ. 3,600/– ದೊಂದಿಗೆ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 03.08.2024 ಮಧ್ಯಾಹ್ನ 3.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು 05.08.2024ರ ಅಪರಾಹ್ನ 3.30 ಗಂಟೆಗೆ. ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಛೇರಿಯಿಂದ ಕಛೇರಿಯ ಕೆಲಸದ ಸಮಯದಲ್ಲಿ ಅಥವಾ ಕೆಪಿಪಿ ಪೋರ್ಟಲ್ ಸಹಾಯವಾಣಿ 080–46010000, 080–68948777 ನಿಂದ ಪಡೆದುಕೊಳ್ಳಬಹುದಾಗಿದೆ.
ಸಹಿ/–
ವಾಸಾಸಂಇ/ವಾಪ್ರ/ಜಿಎ/1001/2024–25 ಪ್ರಧಾನ ವ್ಯವಸ್ಥಾಪಕರು(ಸಂ)



ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಕಾಅ–2/ಟೆಂಡರ್–11/2024–25 ದಿನಾಂಕ: 19.07.2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕೊಪ್ಪಳ ಜಿಲ್ಲೆ, ನವಲಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣ ಕಾಮಗಾರಿ, ಬೆಂಗಳೂರು ನಗರ ಜಿಲ್ಲೆ ಕೊಡಿಗೇಹಳ್ಳಿಯಲ್ಲಿ ವಸತಿ ನಿಲಯ ನಿರ್ಮಾಣ ಕಾಮಗಾರಿ, ಬೆಳಗಾವಿ ಜಿಲ್ಲೆ ಕೌಜಲಗಿಯಲ್ಲಿ ಕ್ರೀಡಾ ಸೌಲಭ್ಯ ಒದಗಿಸುವ ಕಾಮಗಾರಿ, ತಡೆಗೋಡೆ ನಿರ್ಮಾಣ ಹಾಗೂ ನೀರು ಸರಬರಾಜು ದುರಸ್ಥಿ ಕಾಮಗಾರಿಗೆ ಕ್ರಮವಾಗಿ (ಟೆಂಡರ್ ಇಂಡೆಂಟ್ ಸಂಖ್ಯೆ: 127, 327, 138/call-2, 107/call-2, 308, 266, 326 ಮತ್ತು 320) ಇ–ಪೋರ್ಟಲ್ ಮುಖಾಂತರ ದಿನಾಂಕ: 19.07.2024 ರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 02.08.2024 ಮತ್ತು 16.08.2024ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ನೋಡಬಹುದಾಗಿದೆ.
ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು–2
DIPR/CP/YC/997/2024-25 ಕ.ವ.ಶಿ.ಸಂ.ಸಂಘ



ಜಿಲ್ಲಾ ಆಸ್ಪತ್ರೆ, ಬಳ್ಳಾರಿ
DISTRICT HOSPITAL, BALLARI
ಎಸ್‌ಟಿಡಿ–08392, ಜಿಲ್ಲಾ ಶಸ್ತ್ರಚಿಕಿತ್ಸಕರು–274255
ಸ.ಆ.ಅಧಿಕಾರಿ–274254
Website: dsballari-hfws@karnataka.gov.in
e-Mail: bellaryds@gmail.com
ಸಂ.ಜಿಆಬ/ಟೆಂಡ್/02/2023–24/ಕಾಲ್–2 ದಿನಾಂಕ: 15.07.2024

ಮರು–ಟೆಂಡರ್ ಅಧಿಸೂಚನೆ

ಜಿಲ್ಲಾ ಆಸ್ಪತ್ರೆ, ಬಳ್ಳಾರಿಯಲ್ಲಿ ಖಾಲಿ ಇರುವ ಗ್ರೂಪ್–ಡಿ ಹುದ್ದೆಗಳಿಗೆ 29 ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆಯಲ್ಲಿ 01 ವರ್ಷದ ಅವಧಿಗೆ ಒಟ್ಟು ಅಂದಾಜು ಮೊತ್ತ ರೂ.76.09 ಲಕ್ಷಗಳಲ್ಲಿ ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ದ್ವಿ–ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್: http://www.kppp.karnataka.gov.in ಮೂಲಕ ಅರ್ಹ ಬಿಡ್‌ದಾರರಿಂದ ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 13.08.2024ರ ಸಂಜೆ 5.00 ಗಂಟೆ ಇರುತ್ತದೆ. ಆಸಕ್ತಿಯುಳ್ಳ ಬಿಡ್‌ದಾರರು ಟೆಂಡರ್‌ಸಲ್ಲಿಸಲು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲೆ ತಿಳಿಸಿದ ವೆಬ್‌ಸೈಟ್‌ನಲ್ಲಿ ಪಡೆಯಲು ಕೋರಿದೆ.
ಸಹಿ/– ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಬಳ್ಳಾರಿ
ವಾ.ಸಾ.ಸಂ.ಇ./ ಬಳ್ಳಾರಿ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ 251



ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001 ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in
ಸಂಖ್ಯೆ: ಪಿಸಿಬಿ/ತ್ಯಾನಿಕೋ–2/3253/2019/1675 ದಿನಾಂಕ: 15.07.2024

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರ ಗಮನಕ್ಕೆ: ಉತ್ಪಾದಕರು–ದೇಶಿಯವಾಗಿ ತನ್ನದೇ ಬ್ರಾಂಡ್ ಅಡಿಯಲ್ಲಿ ಮೂಲ ತೈಲವನ್ನು ಅಥವಾ ಲೂಬ್ರಿಕೇಶನ್ ತೈಲವನ್ನು ಉತ್ಪಾದಿಸಿ ಮಾರಾಟಕ್ಕೆ ಪ್ರಸ್ತಾವಿಸುವ ಅಥವಾ ಅನ್ಯ ತಯಾರಕರು ಉತ್ಪಾದಿಸಿದ ಅಥವಾ ಪೂರೈಕೆಮಾಡಿದ ಮೂಲ ತೈಲವನ್ನು ಬಳಸಿ ಮಾರಾಟ ಮಾಡಲು ಪ್ರಸ್ತಾವಿಸುವ ಯಾವುದೇ ವ್ಯಕ್ತಿ ಅಥವಾ ಘಟಕಗಳು;
ಸಂಗ್ರಹ ಏಜೆಂಟ್: ಬಳಸಿದ ತೈಲವನ್ನು ಸಂಗ್ರಹಿಸಿ ಮರು ಬಳಕೆ ಮಾಡುವವರಿಗೆ ಸರಬರಾಜು ಮಾಡುವ ಯಾವುದೇ ವ್ಯಕ್ತಿ ಅಥವಾ ಘಟಕ;
ಮರುಬಳಕೆ ಮಾಡುವವರು – ಅಂದರೆ ಬೇಸ್ ಆಯಿಲ್ ಅಥವಾ ಲೂಬ್ರಿಕೇಶನ್ ಆಯಿಲ್ ಅನ್ನು ಉತ್ಪಾದಿಸಲು ಬಳಸಿದ ತೈಲವನ್ನು ಮರು–ಸಂಸ್ಕರಣೆ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿರುವ ಯಾವುದೇ ವ್ಯಕ್ತಿ ಅಥವಾ ಘಟಕ ಅಥವಾ ಬಳಸಿದ ಎಣ್ಣೆಯಿಂದ ಶಕ್ತಿ ಚೇತರಿಕೆಯ ಯಾವುದೇ ಪ್ರಕ್ರಿಯೆ;
ಬಳಸಿದ ತೈಲ ಆಮದುದಾರರು– ಬಳಸಿದ ತೈಲವನ್ನು ಆಮದು ಮಾಡಿಕೊಳ್ಳುವ ಯಾವುದೇ ವ್ಯಕ್ತಿ ಅಥವಾ ಘಟಕ, ಸಗಟು ಉತ್ಪಾದಕರು – ಆಟೋಮೊಬೈಲ್ ಉದ್ಯಮ ಅಥವಾ ರೈಲ್ವೆ ಅಥವಾ ರಕ್ಷಣಾ ಸಂಸ್ಥೆಗಳು ಅಥವಾ ಸಾರಿಗೆ ಕಂಪನಿ ಅಥವಾ ಕೈಗಾರಿಕಾ ಘಟಕಗಳು ಅಥವಾ ವಿದ್ಯುತ್ ಪ್ರಸರಣ ಕಂಪನಿ ಅಥವಾ ಹೋಟೆಲ್‌ಗಳು ಅಥವಾ ರೆಸ್ಟೋರೆಂಟ್‌ಗಳು ಮತ್ತು ವಾರ್ಷಿಕ 100 ಮೆಟ್ರಿಕ್ ಟನ್‌ಗಳಿಗಿಂತ ಹೆಚ್ಚು ಬಳಸಿದ ತೈಲವನ್ನು ಉತ್ಪಾದಿಸುವ ಇತರ ಘಟಕಗಳ, ಗಮನಕ್ಕೆ;
ಈಗಾಗಲೇ ಏಪ್ರಿಲ್ 1, 2024 ರಿಂದ ಜಾರಿಯಲ್ಲಿರುವ ಅಪಾಯಕಾರಿ ಮತ್ತು ಇತರೆ ತ್ಯಾಜ್ಯಗಳು (ನಿರ್ವಹಣೆ ಮತ್ತು ಅಂತರ್ ರಾಜ್ಯ ಸಾಗಾಣೆ) ಎರಡನೇ ತಿದ್ದುಪಡಿ ನಿಯಮಗಳು, 2023 ರಂತೆ ಉತ್ಪಾದಕರು, ಕಲೆಕ್ಷನ್ ಏಜೆಂಟ್‌ಗಳು, ಮರುಬಳಕೆದಾರರು ಮತ್ತು ಬಳಸಿದ ತೈಲ ಆಮದುದಾರರು, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (CPCB)ಯ ವಿಸ್ತೃತ ಉತ್ಪಾದಕರ ಜವಾಬ್ದಾರಿ (EPR) ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೊಂದಾಯಿಸಿಕೊಳ್ಳಬೇಕು. ಹೊಸ ನಿಯಮಗಳು ಈ ಕೆಳಗಿನ ಲಿಂಕ್‌ಗಳಲ್ಲಿ ಲಭ್ಯವಿವೆ:
https://cpcb.nic.im/uploads/hwmd/HOWM-Second-Amendment-Rules-2023.Pdf
ಹಾಗೂ ಸದರಿ ನಿಯಮದ ಪ್ರಕಾರ
1. ಯಾವುದೇ ಘಟಕವು ಒಂದಕ್ಕಿಂತ ಹೆಚ್ಚು ವರ್ಗಕ್ಕೆ ಬಂದರೆ, ಅಂತ ಘಟಕವು ಪ್ರತಿಯೊಂದು ವರ್ಗಗಳ ಅಡಿಯಲ್ಲಿ ತಮ್ಮನ್ನು ನೊಂದಾಯಿಸಿಕೊಳ್ಳಬೇಕು.
2. ವಿಸ್ತೃತ ಉತ್ಪಾದಕರ ಜವಾಬ್ದಾರಿ (EPR) ನೊಂದಣಿ ಇಲ್ಲದೆ ಯಾವುದೇ ಘಟಕವು ವ್ಯವಹಾರ ನಡೆಸುವಂತಿಲ್ಲ
3. ನೊಂದಾಯಿತ ಘಟಕಗಳು ನೊಂದಾಯಿಸದ ಯಾವುದೇ ಘಟಕದೊಂದಿಗೆ ವ್ಯವಹರಿಸುವಂತಿಲ್ಲ.
4. ಯಾವುದೇ ನೊಂದಾಯಿತ ಘಟಕವು ಸುಳ್ಳು ಮಾಹಿತಿಯನ್ನು ನೀಡಿದ್ದಲ್ಲಿ ಅಥವಾ ನೊಂದಣಿಗಾಗಿ ಮಾಹಿತಿಯನ್ನು ಸಂಪೂರ್ಣವಾಗಿ ಮರೆಮಾಚುವುದು ಅಥವಾ ರಿಟರ್ನ್ ಅಥವಾ ವರದಿ ಅಥವಾ ಒದಗಿಸಬೇಕಾದ ಮಾಹಿತಿಯನ್ನು ಅಥವಾ ಯಾವುದೇ ಅಕ್ರಮಗಳ ಸಂದರ್ಭದಲ್ಲಿ, ಅಂತಹ ಘಟಕದ ನೊಂದಣಿಯನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ವಿಚಾರಣೆಗೆ ಅವಕಾಶ ನೀಡಿದ ನಂತರ ಐದು ವರ್ಷಗಳ ಅವಧಿಯವರೆಗೆ ರದ್ದುಗೊಳಿಸಬಹುದು ಮತ್ತು ಹೆಚ್ಚುವರಿಯಾಗಿ ಪರಿಸರ ಪರಿಹಾರ ಶುಲ್ಕಗಳನ್ನು ಸಹ ವಿಧಿಸಬಹುದಾಗಿರುತ್ತದೆ
5. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ನಿಯಮದ ಅಡಿಯಲ್ಲಿ ನೊಂದಾಯಿಸಲು ಬಯಸುವ ಘಟಕಗಳಿಂದ ನೊಂದಣಿ ಶುಲ್ಕಗಳು ಮತ್ತು ವಾರ್ಷಿಕ ನಿರ್ವಹಣಾ ಶುಲ್ಕಗಳನ್ನು ಅವರು ಉತ್ಪಾದಿಸಿದ, ಮರುಬಳಕೆ ಮಾಡಿದ ಅಥವಾ ನಿರ್ವಹಿಸಿದ ತೈಲದ ಪರಿಮಾಣದ ಆಧಾರದ ಮೇಲೆ ವಿಧಿಸಬಹುದು.
ಸಗಟು ಉತ್ಪಾದಕರು ಕಡ್ಡಾಯವಾಗಿ
1) ಸಂಗ್ರಹಣಾ ಏಜೆಂಟ್‌ಗಳಿಗೆ ತಮ್ಮ ಆವರಣದಿಂದ ಬಳಸಿದ ತೈಲವನ್ನು ಸಂಗ್ರಹಿಸಲು ಮತ್ತು ಸಾಗಿಸಲು ಅನುಕೂಲವಾಗುವಂತೆ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸುವುದು;
2) ಉತ್ಪಾದಿಸಿದ ತೈಲವನ್ನು ನೊಂದಾಯಿತ ಉತ್ಪಾದಕರು ಅಥವಾ ಮರು ಬಳಕೆದಾರರು ಅಥವಾ ಸಂಗ್ರಹಣೆ ಏಜೆಂಟ್‌ಗಳಿಗೆ ಮಾತ್ರ ಹಸ್ತಾಂತರಿಸುವುದನ್ನು ಖಚಿತಪಡಿಸಿಕೊಳ್ಳುವುದು;
3) ಎಲ್ಲಾ ಪಾಲುದಾರರ ಜವಾಬ್ದಾರಿಗಳು ಮತ್ತು ಇತರ ಸಂಬಂಧಿತ ಮಾಹಿತಿಯನ್ನು ಮೇಲೆ ತಿಳಿಸಲಾದ ನಿಯಮಗಳಲ್ಲಿ ವಿವರಿಸಲಾಗಿದೆ.
ಸಹಿ/–
ಡಿಐಪಿಆರ್/ಸ್ಪೆಕ್ಟ್ರಮ್/1014/2024–25 ಸದಸ್ಯ ಕಾರ್ಯದರ್ಶಿ
ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ; ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ



ದ್ರೌಪದಿಯ ಸ್ವಗತದ ಉರಿಯ ಉಯ್ಯಾಲೆ 11

ಕಾಶ್ಮೀರ ಕಣಿವೆಯ ವಿಲ್ಲೊ ಕ್ರಿಕೆಟ್ ಬ್ಯಾಟ್‌ಗಳು 12

ಕೆನಡಾ ಪ್ರವಾಸ ಡೈರಿಯ ಪುಟಗಳಿಂದ... 13



# ಒಲಿಂಪಿಕ್ ಪದಕ ಪಥ

2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಜಿಮ್ನಾಸ್ಟಿಕ್ಸ್ ಪದಕ ವಿಜೇತರಿಗೆ ಗ್ರೀಕ್ ಪರಂಪರೆಯ ಪ್ರತೀಕವಾದ ಆಲಿವ್ ಎಲೆಯ ಕಿರೀಟ ತೊಡಿಸಿದ್ದರು -ಸಂಗ್ರಹ ಚಿತ್ರ

**ಜಗತ್ತಿನ ಅತ್ಯಂತ ದೊಡ್ಡ ಕ್ರೀಡಾಕೂಟವಾದ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸುವುದೆಂದರೆ ಉತ್ತುಂಗ ಸಾಧನೆಯೇ ಸರಿ. ಆಧುನಿಕ ಒಲಿಂಪಿಕ್ಸ್‌ಗೆ ಇರುವಷ್ಟೇ ದೀರ್ಘ ಇತಿಹಾಸವು ಪದಕ ನೀಡುವ ಸಂಪ್ರದಾಯಕ್ಕೂ ಇದೆ. ಪ್ರತಿಯೊಂದು ಒಲಿಂಪಿಕ್ಸ್‌ನಲ್ಲಿಯೂ ಪದಕಗಳ ವಿನ್ಯಾಸ ಹಾಗೂ ಪ್ರದರ್ಶನ ಮೌಲ್ಯ ಬದಲಾಗುತ್ತಲೇ ಬಂದಿದೆ. ಅದರಲ್ಲಿಯ ಕೆಲವು ವೈಶಿಷ್ಟ್ಯಗಳು ಇಲ್ಲಿವೆ. ಜುಲೈ 26ರಿಂದ ಆಗಸ್ಟ್ 11ರವರೆಗೆ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ 10 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಸ್ಪರ್ಧಿಸಲಿದ್ದಾರೆ. ಗೆದ್ದವರು ಪದಕ ಧರಿಸಿ ಬೀಗಲಿದ್ದಾರೆ.**

ಗಿರೀಶ ದೊಡ್ಡಮನಿ

‘ಬೆಳಕಿನ ನಗರಿ’ ಪ್ಯಾರಿಸ್ ಈಗ ಕ್ರೀಡಾ ಮಹಾಮೇಳ ಒಲಿಂಪಿಕ್ಸ್‌ಗೆ ಸಿದ್ಧವಾಗಿದೆ. ಇನ್ನಾರು ದಿನಗಳು ಕಳೆದರೆ ಇಲ್ಲಿ ಒಲಿಂಪಿಕ್ಸ್ ಜ್ಯೋತಿಯು ಪ್ರಜ್ವಲಿಸಲಿದೆ. ವಿಶ್ವದ ಎಲ್ಲ ಭಾಷೆ, ಬಣ್ಣ ಮತ್ತು ಧರ್ಮಗಳ ಜನರು ಒಂದೇ ಸೂರಿನಡಿ ಸೇರಲಿದ್ದಾರೆ. ಆಡಿ, ಓಡಿ, ಕುಣಿದು, ಹಾಡಿ ಸಂಭ್ರಮಿಸಲಿದ್ದಾರೆ. ವಿವಿಧ ಕ್ರೀಡೆಗಳಲ್ಲಿ ಜಯಿಸಿದ ವಿಜೇತರ ಕೊರಳು ಅಲಂಕರಿಸಲಿರುವ ಪದಕಗಳೂ ಫಳಫಳ ಹೊಳೆಯಲಿವೆ.

ಒಲಿಂಪಿಕ್ ಕೂಟದಲ್ಲಿ ಯಾರು ಎಷ್ಟು ಪದಕ ಜಯಿಸುವರು ಎಂಬ ಚರ್ಚೆ ಈಗ ಬಿಸಿಯೇರಿದೆ. ಈ ಬಾರಿ ವಿಜೇತರಿಗೆ ನೀಡಲಾಗುವ ಪದಕದ ಕುರಿತೂ ಚರ್ಚೆ ಜೋರಾಗಿದೆ. ಈ ಸಲದ ವಿಜೇತರು ಪ್ಯಾರಿಸ್‌ನ ಹೆಗ್ಗುರುತು ಐಫೆಲ್ ಟವರ್‌ನ ‘ಅಂಶ’ವನ್ನೂ ತಮ್ಮೊಂದಿಗೆ ತೆಗೆದುಕೊಂಡು ಹೋಗಲಿದ್ದಾರೆ!

ಹೌದು; ಈ ಕೂಟದಲ್ಲಿ ಪ್ರದಾನ ಮಾಡಲಾಗುತ್ತಿರುವ ಪದಕಗಳಲ್ಲಿ ಐಫೆಲ್ ಟವರ್ ನವೀಕರಣದ ವೇಳೆ ತೆಗೆದ ಲೋಹದ ತುಣುಕುಗಳನ್ನು ಬಳಸಲಾಗಿದೆ. ಚಿನ್ನ, ಬೆಳ್ಳಿ ಮತ್ತು ಕಂಚಿನೊಂದಿಗೆ ಈ ಲೋಹವನ್ನೂ ಬಳಕೆ ಮಾಡಿರುವುದು ವಿಶೇಷ. ಪದಕದ ವಿನ್ಯಾಸವೂ ವಿಭಿನ್ನವಾಗಿದೆ. ಎಲ್‌ವಿಎಂಎಚ್ ಜ್ಯುಯೆಲರ್ ಶಾಮೆಟ್ ಕಂಪನಿಯು ಈ ಪದಕಗಳನ್ನು ವಿನ್ಯಾಸ ಮಾಡಿದೆ.

ಪ್ಯಾರಿಸ್ ಒಲಿಂಪಿಕ್ಸ್ ಪದಕಗಳು

ಈ ಪದಕಗಳಲ್ಲಿ ಮೂರು ವಿಶೇಷಗಳಿವೆ. ಮೊದಲನೇಯದ್ದು ದುಂಡನೆಯ ಆಕಾರದ ಪದಕದ ಒಂದು ಬದಿಯ ನಟ್ಟನಡುವೆ ಷಟ್ಕೋನಾಕೃತಿಯಲ್ಲಿ ಜೋಡಿಸಲಾಗಿರುವ ಲೋಹ. ಅದುವೇ ಐಫೆಲ್ ಟವರ್ ನವೀಕರಣದ ವೇಳೆ ತೆಗೆದ ಲೋಹದ್ದಾಗಿದೆ. 1887 ರಿಂದ 1889ರ ಅವಧಿಯಲ್ಲಿ ಐಫೆಲ್ ಟವರ್ ನಿರ್ಮಾಣವಾಯಿತು. ಅಲ್ಲಿಂದ ಇಲ್ಲಿಯವರೆಗೆ ಟವರ್‌ನ ನಿರ್ವಹಣೆ ನಿಯಮಿತವಾಗಿ ನಡೆದಿದೆ. ಆ ಸಂದರ್ಭಗಳಲ್ಲಿ ಟವರ್‌ನಿಂದ ತೆಗೆದ ಅಳಿದುಳಿದ ಲೋಹದ ತುಣುಕುಗಳನ್ನು ನಿರ್ಮಾಣ ಸಂಸ್ಥೆಯು ಜೋಪಾನ ಮಾಡಿಕೊಂಡು ಬಂದಿದೆ.



ಆಧುನಿಕ ಒಲಿಂಪಿಕ್ಸ್‌ನ ಪಿತಾಮಹ ಪಿಯರೆ ಡಿ ಕೂಬರ್ತಿ ಅವರ ತವರಿನಲ್ಲಿ ಒಂದು ಶತಮಾನದ ನಂತರ ನಡೆಯುತ್ತಿರುವ ಈ ಕೂಟದಲ್ಲಿ ಫ್ರೆಂಚ್ ಸಂಸ್ಕೃತಿ ಮತ್ತು ಪರಂಪರೆಯನ್ನು ಬಿಂಬಿಸಲು ಐಫೆಲ್ ಟವರ್‌ನ ಲೋಹದ ಬಳಕೆಯಾಗಿರುವುದು ವಿಶೇಷ.

ಎರಡನೇಯದಾಗಿ; ಪದಕದ ಹೊಳಪು. ಚಿನ್ನ, ಬೆಳ್ಳಿ ಮತ್ತು ಕಂಚಿನ ಲೋಹಗಳ ಹೊಳಪು ಕಣ್ಸೆಳೆಯುತ್ತದೆ. ಉಬ್ಬುಶಿಲ್ಪದ ಮಾದರಿಯ ವಿನ್ಯಾಸ ಮಾಡಲಾಗಿದ್ದು ಆಕರ್ಷಕವಾಗಿದೆ. ಮೂರನೇಯದು; ಜೆಮ್ ಸೆಟ್ಟಿಂಗ್. ಷಟ್ಕೋನಾಕೃತಿಯ ಲೋಹ ಮತ್ತು ಪದಕವನ್ನು ಬೆಸೆಯಲು ಆರು ಮೂಲೆಗಳಿಗೂ ರತ್ನದ ಮಾದರಿಯ ಚಿನ್ನದ ಪುಟ್ಟ ಅಚ್ಚುಗಳನ್ನು ಜೋಡಿಸಲಾಗಿದೆ.

ಪದಕದ ಇನ್ನೊಂದು ಬದಿಯು ಒಲಿಂಪಿಕ್ ಕೂಟದ ಮರುಜನ್ಮದ ಕತೆಯನ್ನು ಹೇಳುತ್ತದೆ. 1896ರಲ್ಲಿ ಆಧುನಿಕ ಒಲಿಂಪಿಕ್ಸ್‌ನ ಮೊದಲ ಕೂಟವು ಅಥೆನ್ಸ್‌ನಲ್ಲಿ ನಡೆಯಿತು. ಅಲ್ಲಿಯ ಪ್ಯಾನಾಥೆನೈಕ್ ಕ್ರೀಡಾಂಗಣದಿಂದ ಹೊರಹೊಮ್ಮುವ ‘ವಿಜಯ ಸಂದೇಶ ತರುವ ದೇವತೆ’ ಅಥೆನಾ ನೈಕಿಯ ಕಲಾಕೃತಿಯಿದೆ. 2004ರಲ್ಲಿ ಅಥೆನ್ಸ್‌ನಲ್ಲಿ ಒಲಿಂಪಿಕ್ಸ್ ನಡೆದಾಗಿನಿಂದಲೂ ಪದಕದಲ್ಲಿ ಈ ಕಲಾಕೃತಿಯ ಬಳಕೆಯು ಕಡ್ಡಾಯವಾಗಿದೆ. ಇದರೊಂದಿಗೆ ಇದೇ ಮೊದಲ ಬಾರಿ ಐಫೆಲ್ ಟವರ್‌ನ ವಿನ್ಯಾಸವನ್ನೂ ಇಲ್ಲಿ ಬಳಸಲಾಗಿದೆ. ಪ್ರಾಚೀನ ಮತ್ತು ಆಧುನಿಕ ಒಲಿಂಪಿಕ್ಸ್ ಜನನಕ್ಕೆ ಕಾರಣವಾದ ಗ್ರೀಸ್ ಮತ್ತು ಫ್ರಾನ್ಸ್‌ನ ಹೆಗ್ಗುರುತುಗಳು ಇಲ್ಲಿ ಸಂಗಮವಾಗಿವೆ.

## ಪದಕ ಪರಂಪರೆಯ ಸೊಬಗು

ಒಲಿಂಪಿಕ್ಸ್ ಪದಕಗಳನ್ನು ಈ ರೀತಿ ವಿಶೇಷವಾಗಿ ವಿನ್ಯಾಸಗೊಳಿಸುವುದು ಇದೇ ಮೊದಲೇನಲ್ಲ. ಪ್ರತಿ ಬಾರಿ ಕೂಟದ ಆತಿಥ್ಯ ವಹಿಸುವ ದೇಶಗಳು ತಮ್ಮ ನೆಲದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಪರಿಸರದ ಸೊಗಡನ್ನು ಈ ಪದಕಗಳೊಂದಿಗೆ ಅಡಕಗೊಳಿಸುವ ಕಾರ್ಯ ಮಾಡಿವೆ.

ಕ್ರಿಸ್ತಪೂರ್ವ 776ರಲ್ಲಿ ಗ್ರೀಕ್ ದೇಶದ ಪವಿತ್ರ ನಗರಿ ಒಲಿಂಪಿಯಾದಲ್ಲಿ ಈ ಮಹಾಕ್ರೀಡಾ ಮೇಳ ಹುಟ್ಟಿದಾಗಿನಿಂದಲೂ ಇದೇ ಪರಂಪರೆ ಇದೆ. ಆದರೆ ಪ್ರಾಚೀನ ಒಲಿಂಪಿಕ್ಸ್‌ನಲ್ಲಿ ಗೆದ್ದವರಿಗೆ ಪದಕಗಳನ್ನು ಕೊಡುತ್ತಿರಲಿಲ್ಲ. ಗ್ರೀಸ್‌ನಲ್ಲಿ ಯಥೇಚ್ಛವಾಗಿದ್ದ ಮತ್ತು ಪೂಜ್ಯನೀಯ ಆಲಿವ್ ಮರದ ಎಲೆಗಳಿಂದ ಸಿದ್ಧವಾದ ಕಿರೀಟವನ್ನು ವಿಜೇತರಿಗೆ ತೊಡಿಸಲಾಗುತ್ತಿತ್ತು, ಲವಂಗ, ದಾಲ್ಚಿನಿ ಗಿಡಗಳ ಕಾಂಡ ನೀಡಲಾಗುತ್ತಿತ್ತು.

ಒಲಿಂಪಿಯಾ ಅಷ್ಟೇ ಅಲ್ಲ, ಒಲಿಂಪಿಕ್ ಉತ್ಸವ ಬೇರೆ ಬೇರೆ ತಾಣಗಳಲ್ಲಿ ನಡೆದಾಗಲೂ ಇದೇ ರೀತಿಯ ಲವಂಗದ ಗಿಡ, ಪೈನ್ ಮರಗಳ ಎಲೆ, ಕಾಂಡಗಳಿಂದ ಸಿದ್ಧಗೊಳಿಸಿದ ಕಿರೀಟವನ್ನೇ ತೊಡಿಸಲಾಗುತ್ತಿತ್ತು. ಜೊತೆಗೆ ಉಣ್ಣೆಯ ರಿಬ್ಬನ್ ಅನ್ನು ತಲೆಗೆ ಕಟ್ಟಲಾಗುತ್ತಿತ್ತು ಎಂಬ ಉಲ್ಲೇಖವು ಹಲವು ಕೃತಿಗಳಲ್ಲಿದೆ.

ಕ್ರಿಸ್ತಶಕ 1896ರಲ್ಲಿ ಅಥೆನ್ಸ್‌ನಲ್ಲಿ ಆಧುನಿಕ ಒಲಿಂಪಿಕ್ ಕೂಟ ಆರಂಭವಾಯಿತು. ಕ್ರೀಡೆಗಳಲ್ಲಿ ಮೊದಲ ಎರಡು ಸ್ಥಾನ ಗಳಿಸಿದವರಿಗೆ ಕ್ರಮವಾಗಿ ಅಪ್ಪಟ ಬೆಳ್ಳಿ ಹಾಗೂ ಕಂಚು ಅಥವಾ ತಾಮ್ರದ ಪದಕ ನೀಡಲಾಯಿತು. ಆದರೆ, ಅದರೊಂದಿಗೆ ಆಲಿವ್ ಎಲೆಯ ಕಿರೀಟವನ್ನೂ ನೀಡಲಾಗಿತ್ತು. 2004ರಲ್ಲಿ ಅಥೆನ್ಸ್‌ನಲ್ಲಿ ಒಲಿಂಪಿಕ್ ಕೂಟದಲ್ಲಿ ಪದಕಗಳೊಂದಿಗೆ ಆಲಿವ್ ಕಿರೀಟಗಳನ್ನೂ ಪ್ರದಾನ ಮಾಡಲಾಗಿತ್ತು.

ಪ್ಯಾರಿಸ್‌ನಲ್ಲಿ ನಡೆದ 1900ರ ಒಲಿಂಪಿಕ್ ಕೂಟದಲ್ಲಿ ಮೊದಲ, ಎರಡನೇ ಹಾಗೂ ಮೂರನೇ ಸ್ಥಾನಗಳಿಗೆ ಪದಕ ನೀಡುವ ಪರಂಪರೆ ಆರಂಭವಾಯಿತು. ಆಗ ಪ್ರಥಮ ಸ್ಥಾನ ಪಡೆದವರಿಗೆ ಚಿನ್ನಲೇಪಿತ ಬೆಳ್ಳಿಯ ಪದಕ ನೀಡಲಾಗಿತ್ತು. ನಂತರದ ಎರಡು ಸ್ಥಾನಗಳಿಗೆ ಬೆಳ್ಳಿ ಮತ್ತು ಕಂಚು ನೀಡಲಾಗಿತ್ತು. ಆಗ 42X60 ಮಿ.ಮೀ ಸುತ್ತಳತೆಯ ಪದಕಗಳನ್ನು ಸಿದ್ಧಗೊಳಿಸಲಾಗಿತ್ತು. ಅದರಲ್ಲಿ ರೆಕ್ಕೆಗಳೊಂದಿಗೆ ವಿಹರಿಸುತ್ತಿರುವ ವಿಜಯ ದೇವತೆಯ ಕಲಾಕೃತಿ ಇತ್ತು.

1904ರಲ್ಲಿ ಸೇಂಟ್ ಲೂಯಿಸ್‌ನಲ್ಲಿ ನಡೆದ ಕೂಟದಲ್ಲಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳ ಮೇಲೆ ಗ್ರೀಕ್ ದೇವಾಲಯ, ನೈಕಿ ದೇವತೆ ಮತ್ತು ಪುರಾತನ ಕ್ರೀಡೆಗಳ ಉಬ್ಬು ಚಿತ್ತಾರಗಳಿದ್ದವು. ನಂತರ ಲಂಡನ್, ಸ್ಟಾಕ್ ಹೋಮ್‌ಗಳಲ್ಲಿ ನಡೆದ ಕೂಟಗಳಲ್ಲಿಯೂ ವಿನ್ಯಾಸಗಳನ್ನು ವಿಭಿನ್ನವಾಗಿ ಮಾಡಲಾಗಿತ್ತು.

1920ರ ಆ್ಯಂಟ್‌ವರ್ಪ್ ಕೂಟದ ಪದಕದಲ್ಲಿ ನಗ್ನ ಅಥ್ಲೀಟ್ ಎಡಗೈನಲ್ಲಿ ತಾಳೆ ಗಿಡದ ಕಾಂಡವನ್ನು ಎತ್ತಿಹಿಡಿದು, ತಲೆಗೆ ಎಲೆಯ ಕಿರೀಟ ಧರಿಸಿದ ಚಿತ್ರವಿತ್ತು. ಆ ಅಥ್ಲೀಟ್ ಹಿಂದೆ ವಿಜಯದ ವಾದ್ಯ ನುಡಿಸುತ್ತಿರುವ ಕಲಾವಿದನ ಚಿತ್ರವೂ ಇತ್ತು. ಪ್ರಾಚೀನ ಒಲಿಂಪಿಕ್ಸ್‌ನಲ್ಲಿ ಅಥ್ಲೀಟ್‌ಗಳು ನಗ್ನವಾಗಿ ಭಾಗವಹಿಸುತ್ತಿದ್ದವರ ಪ್ರತಿಕೃತಿ ಇದಾಗಿತ್ತು. ಪದಕದ ಇನ್ನೊಂದು ಬದಿಯಲ್ಲಿ ಒಲಿಂಪಿಯಾ ದೇವತೆಯ ಚಿತ್ರ ಅಚ್ಚಾಗಿತ್ತು.

1924ರಲ್ಲಿ ಇದೇ ಪ್ಯಾರಿಸ್‌ನಲ್ಲಿ ನಡೆದಿದ್ದ ಕೂಟದ ಪದಕದಲ್ಲಿ ಚಳಿಗಾಲದ ಒಲಿಂಪಿಕ್ಸ್‌ನ ಸ್ವಿಸ್ ಅಥ್ಲೀಟ್ ಒಬ್ಬ ಸ್ಕೇಟ್‌ಗಳನ್ನು ಎತ್ತಿ ಹಿಡಿದು ನಿಂತಿದ್ದ ಚಿತ್ರವಿತ್ತು. ಇನ್ನೊಂದು ಬದಿಯಲ್ಲಿ 14 ಸಾಲುಗಳ ಒಕ್ಕಣೆಯಿತ್ತು. ಅದರಲ್ಲಿ ಒಲಿಂಪಿಕ್ ಮಹತ್ವದ ಕಥೆ ಇತ್ತು.

2021ರಲ್ಲಿ ಟೋಕಿಯೊದಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ನೀರಜ್ ಚೋಪ್ರಾ ಅವರು ಚಿನ್ನದ ಪದಕದೊಂದಿಗೆ –ಪಿಟಿಐ ಚಿತ್ರ

### ಪ್ಯಾರಾ ಪದಕದಲ್ಲಿ ಬ್ರೈಲ್ ಲಿಪಿ

ಆಗಸ್ಟ್ 28ರಿಂದ ಪ್ಯಾರಿಸ್‌ನಲ್ಲಿ ನಡೆಯುವ ಪ್ಯಾರಾಲಿಂಪಿಕ್ಸ್ ಪದಕದಲ್ಲಿಯೂ ಐಫೆಲ್ ಟವರ್‌ನ ಲೋಹದ ಬಳಕೆಯಾಗಿದೆ. ಅಂಧರಿಗಾಗಿ ಬಳಸಲಾಗುವ ಬ್ರೈಲ್ ಲಿಪಿಯ ಅಕ್ಷರಗಳನ್ನು ಒಂದು ಬದಿಯಲ್ಲಿ ಅಚ್ಚು ಹಾಕಲಾಗಿದೆ. ಈ ಲಿಪಿಯನ್ನು ಕಂಡುಹಿಡಿದ ಲೂಯಿ ಬ್ರೈಲ್ ಅವರು ಫ್ರಾನ್ಸ್‌ನವರು. ಈ ಮೂಲಕ ಅವರಿಗೆ ಗೌರವ ಸಲ್ಲಿಸಲಾಗಿದೆ. ಇನ್ನೊಂದೆಡೆ ಐಫೆಲ್ ಟವರ್‌ನ ಗ್ರಾಫಿಕ್ ಚಿತ್ರವೂ ಇದೆ.

ಒಲಿಂಪಿಕ್ ಪದಕಗಳಿಗೆ ನೀಲಿ ರಿಬ್ಬನ್ ಮತ್ತು ಪ್ಯಾರಾಲಿಂಪಿಕ್ಸ್ ಪದಕಗಳಿಗೆ ಕೆಂಪು ರಿಬ್ಬನ್ ಬಳಸಲಾಗಿದೆ.

## ಜಪಾನ್ ವೈಶಿಷ್ಟ್ಯ

ನಂತರದ ವರ್ಷಗಳಲ್ಲಿ ಪದಕ ವಿನ್ಯಾಸಕ್ಕೆ ಆತಿಥೇಯ ದೇಶಗಳು ವಿಶೇಷ ಆದ್ಯತೆ ನೀಡಿದವು. ಅದಕ್ಕಾಗಿ ಬಹಳಷ್ಟು ಸಂಪನ್ಮೂಲವನ್ನೂ ವಿನಿಯೋಗಿಸಿದವು. ಆದರೆ 2020ರಲ್ಲಿ (ಕೋವಿಡ್ ಕಾರಣದಿಂದ 2021ಕ್ಕೆ ಮುಂದೂಡಲ್ಪಟ್ಟಿತ್ತು) ಜಪಾನ್ ದೇಶವು ಎಲ್ಲರಿಗಿಂತ ಒಂದು ಹೆಜ್ಜೆ ಮುಂದಿಟ್ಟು ಗಮನ ಸೆಳೆಯಿತು.

ಈ ಶತಮಾನದ ದೊಡ್ಡ ಸಮಸ್ಯೆಯಾದ ಇ ತ್ಯಾಜ್ಯ ನಿರ್ವಹಣೆಯನ್ನೇ ಜಪಾನ್ ಪರಿಕಲ್ಪನೆಯಾಗಿ ಬಳಸಿತು. ಬಳಕೆಯಾಗಿ ಕಸದ ಬುಟ್ಟಿ ಸೇರಿದ ಮೊಬೈಲ್ ಫೋನ್‌ಗಳಲ್ಲಿರುವ ಅಲ್ಪಪ್ರಮಾಣದ ಚಿನ್ನ, ಬೆಳ್ಳಿ ಮತ್ತಿತರ ಲೋಹಗಳನ್ನು ಸಂಗ್ರಹಿಸಿ ಪದಕ ತಯಾರಿಸಿತು. ಇದು ವಿಶ್ವದ ಗಮನ ಸೆಳೆಯಿತು. ಹಲವಾರು ಕಲಾವಿದರೊಂದಿಗೆ ಸುಮಾರು ಐದು ಸಾವಿರ ಪದಕಗಳನ್ನು ತಯಾರಿಸಿದ್ದು ಜಪಾನ್ ಹೆಗ್ಗಳಿಕೆ. ಪರಂಪರೆ, ಕಲಾವೈಭವದ ಪ್ರದರ್ಶನದೊಂದಿಗೆ ಈ ಹೊತ್ತಿನ ಜ್ವಲಂತ ಸಮಸ್ಯೆಯೊಂದಕ್ಕೆ ಪರಿಹಾರ ಕಂಡುಕೊಂಡ ಸಾಮಾಜಿಕ ಕಾಳಜಿಯು ಈ ಪದಕಗಳಲ್ಲಿ ಅಚ್ಚಾಗಿತ್ತು. ಕಸದ ಬುಟ್ಟಿ ಸೇರಬೇಕಿದ್ದ ಲೋಹವು ಪದಕ ವಿಜೇತರ ಕೊರಳು ಅಲಂಕರಿಸಿತು. ಅದರಲ್ಲಿ ಭಾರತದ ನೀರಜ್ ಚೋಪ್ರಾ ಗೆದ್ದ ಚಿನ್ನದ ಪದಕವೂ ಒಂದು. ಇದೀಗ ಸ್ಕ್ರ್ಯಾಪ್ ಯಾರ್ಡ್ ಸೇರಿದ್ದ ಐಫೆಲ್ ಟವರ್‌ನ ಲೋಹದ ತುಣುಕುಗಳಿಗೂ ಅಂತಹದೇ ಮೌಲ್ಯ ಬಂದಿದೆ.

ಪ್ರಜಾವಾಣಿ

ದೀಪಾವಳಿ ವಿಶೇಷಾಂಕ 2024

ಕನ್ನಡ ಕಥಾ ಜಗತ್ತಿನ ವಾರ್ಷಿಕ ಸಂಭ್ರಮ

ದೀಪಾವಳಿ ಕಥಾ–ಕವನ ಸ್ಪರ್ಧೆಯ ಪ್ರವೇಶಗಳಿಗೆ ಇದೋ ಆಹ್ವಾನ

ಪ್ರವೇಶಗಳು ನಮಗೆ ತಲುಪಲು ಕೊನೆಯ ದಿನಾಂಕ 30ನೇ ಜುಲೈ 2024

ಕಥಾ ಸ್ಪರ್ಧೆ
ಮೊದಲ ಬಹುಮಾನ ₹ 20,000
ಎರಡನೇ ಬಹುಮಾನ ₹ 15,000
ಮೂರನೇ ಬಹುಮಾನ ₹ 10,000

ಕವನ ಸ್ಪರ್ಧೆ
ಮೊದಲ ಬಹುಮಾನ ₹ 5,000
ಎರಡನೇ ಬಹುಮಾನ ₹ 3,000
ಮೂರನೇ ಬಹುಮಾನ ₹ 2,500

ಕಥೆ – ಕವನ ಕಳಿಸುವ ಮುನ್ನ

- ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು
- ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು
- ಕಥೆ- ಕವನಗಳು ಯೂನಿಕೋಡ್‌ನಲ್ಲಿ ಇರಬೇಕು
- ಕಥೆ/ ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ-ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು
- ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು
- ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್’ನ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ.
- ಸ್ಪರ್ಧೆಗೆ ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ
- ಬಹುಮಾನಿತ ಕಥೆ, ಕವನಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕುಗಳನ್ನು ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್’ ಕಾಯ್ದಿರಿಸಿಕೊಂಡಿದೆ
- ಸಂಪಾದಕರ ತೀರ್ಮಾನವೇ ಅಂತಿಮ
- ಇ-ಮೇಲ್: deepavali@prajavani.co.in

ವಿಳಾಸ: ಸಂಪಾದಕರು, ದೀಪಾವಳಿ ವಿಶೇಷಾಂಕ ವಿಭಾಗ ಪ್ರಜಾವಾಣಿ, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–560001

# ಕಣ್ಮರೆ ಆಗುತ್ತಿರುವ ಚಿತ್ರಗಳಿಗೆ ಜೀವ ತುಂಬಿದ ಥೀಮ್ ಪಾರ್ಕ್

ಸುಮಾ ಬಿ.

**ದುಗ್ಗಮ್ಮನ ಜಾತ್ರೆಲಿ** ದೀಡ್ ನಮಸ್ಕಾರ ಹಾಕುವ ಭಕ್ತರು, ಆರತಿ ಬಟ್ಟಲು ಹಿಡಿದು ದೇವಿಯ ಆರಾಧನೆಗೆಂದು ಲಗುಬಗೆಯಿಂದ ಸಾಗುವ ಮಹಿಳೆಯರು, ಕುರಿ, ಕೋಳಿ ಕಾಳಗ ನೋಡುತ್ತ ಪುಳಕಗೊಂಡ ಕ್ರೀಡಾ ರಸಿಕರು, ಎದುರಾಳಿಗೆ ಮಣ್ಣು ಮುಕ್ಕಿಸುವ ತವಕದಲಿ ಜಗಜಟ್ಟಿಗಳು, ಕಬಡ್ಡಿ ಆಟದಲ್ಲಿ ನಿರತ ಯುವಪಡೆ, ಬಂಡಿ ಓಡಿಸುವ ಬಾಲಕ, ಕುಂಟೆ ಬಿಲ್ಲೆ ಆಡುವ ಬಾಲಕಿಯರು, ಜಾನುವಾರು ಸಂತೆಯಲ್ಲಿ ವ್ಯಾಪಾರ ಕುದುರುವ ಬಗೆ, ವೈವಿಧ್ಯಮಯ ತಳಿಯ ಎತ್ತುಗಳು, ನಶಿಸುತ್ತಿರುವ ಜಾನಪದ ಕಲೆಗಳ ಸೊಬಗು...

ಇವೆಲ್ಲವನ್ನೂ ಒಂದೆಡೆಯೇ ಕಣ್ತುಂಬಿಕೊಂಡು, ಇನ್ನಷ್ಟು ಅಚ್ಚರಿಗಳನ್ನು ಮನಕ್ಕೆ ಇಳಿಸಬೇಕೆಂದರೆ ಬೆಣ್ಣೆ ನಗರಿಗೆ ಬರಬೇಕು. ‘ದಾವಣಗೆರೆಯಲ್ಲಿ ತಿನ್ನಲು ಬೆಣ್ಣೆದೋಸೆ ಬಿಟ್ಟು, ನೋಡಲು ಏನಿದೆ?’ ಎಂದು ಕೇಳುವವರಿಗೆ ನಗರದ ದೃಶ್ಯ ಕಲಾ ಕಾಲೇಜಿನ ಹಿಂದೆ ನಿರ್ಮಾಣವಾಗಿರುವ ‘ಥೀಮ್ ಪಾರ್ಕ್’ ಇದೆ.

ಈಗ ಅಭಿವೃದ್ಧಿಯ ರೆಕ್ಕೆಪುಕ್ಕ ಅಂಟಿಸಿಕೊಳ್ಳುತ್ತ ಮೇಲೇಳುತ್ತಿರುವ ಕುಂದವಾಡ ಕೆರೆ, ಅದರ ಹಿಂಭಾಗದಲ್ಲೇ ಇರುವ ‘ಗ್ಲಾಸ್ ಹೌಸ್’ ಆಕರ್ಷಣೀಯ ಪ್ರವಾಸಿತಾಣಗಳೆನಿಸಿದ್ದವು. ಥೀಮ್ ಪಾರ್ಕ್ ಪ್ರವಾಸಿತಾಣಗಳ ರೆಕ್ಕೆಗೆ ಹೊಸದೊಂದು ಗರಿಯಾಗಿದೆ. ಇದು ಶೀಘ್ರದಲ್ಲೇ ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಲಿದೆ.

ನಗರದ ಹೃದಯಭಾಗದಲ್ಲಿರುವ ದೃಶ್ಯ ಕಲಾ ಕಾಲೇಜು ಕಲಾಸಕ್ತರಿಗೆ ಪ್ರಿಯವಾದ ಸ್ಥಳ. ಕಾಲೇಜಿನ ಆವರಣ ಪ್ರವೇಶಿಸುತ್ತಿದ್ದಂತೆಯೇ ವಿದ್ಯಾರ್ಥಿಗಳ ಕೈಚಳಕದಲ್ಲಿ ಅರಳಿದ ಕಲಾಕೃತಿಗಳು ಸೆಳೆಯುತ್ತವೆ. ಮಾಡರ್ನ್ ಕಲಾಕೃತಿಗಳನ್ನು ವೀಕ್ಷಿಸುತ್ತ ತಿಳಿದಷ್ಟು, ತಿಳಿಯದಷ್ಟನ್ನು ಮನಕ್ಕೆ ಇಳಿಸುತ್ತ ಪುಟ್ಟ ಕಾನನದ ದಾರಿಯಲ್ಲಿ ನವಿಲುಗಳ ಚೀಂಕಾರವನ್ನು ಕೇಳುತ್ತಾ ಹೆಜ್ಜೆ ಹಾಕಿದರೆ ಬೇರೆಯದೇ ಲೋಕ ಎದುರುಗೊಳ್ಳುತ್ತದೆ.

ಮಧ್ಯ ಕರ್ನಾಟಕದ ಕಲೆ, ಸಂಸ್ಕೃತಿ ಬಿಂಬಿಸುವ, ನಶಿಸುತ್ತಿರುವ ಗ್ರಾಮೀಣ ಕ್ರೀಡೆಗಳನ್ನು ಮೆಲುಕು ಹಾಕುವ, ದೊಡ್ಡಾಟ, ಬಯಲಾಟ, ತೊಗಲುಬೊಂಬೆಯಾಟದ ಸಿರಿವಂತಿಕೆಯನ್ನು ಸಾರುವ ನಗರ–ಗ್ರಾಮೀಣ ಸಂಸ್ಕೃತಿಯೇ ಕಣ್ಣೆದುರು ಹಾದುಹೋಗುತ್ತದೆ. ಒಂದೊಂದು ಕಲಾಕೃತಿಗಳ ಹಾವ–ಭಾವ, ನೋಟ, ಗಾಂಭೀರ್ಯ ನೈಜವೆಂಬಂತೆ ರಚಿಸಿದ್ದಾರೆ ಕಲಾವಿದರು. ಅರೆಕ್ಷಣ ಅಚ್ಚರಿಯಿಂದ ಮೂಗಿನ ಮೇಲೆ ಬೆರಳು ಹೋಗದೆ ಇರದು. ಈ ಕಲಾ ಸಿರಿವಂತಿಕೆಯ ರೂವಾರಿ ಹಾವೇರಿ ಜಿಲ್ಲೆ ಗೊಟಗೋಡಿಯ ಕಲಾವಿದ ರಾಜಹರ್ಷ ಸೊಲಬಕ್ಕನವರ.

11ನೇ ಪುಟಕ್ಕೆ...

ದಾವಣಗೆರೆ ನಗರದ ದೃಶ್ಯ ಕಲಾ ಕಾಲೇಜು ಹಿಂಭಾಗದಲ್ಲಿರುವ ಥೀಮ್ ಪಾರ್ಕ್‌ನಲ್ಲಿ ದುಗ್ಗಮನ ಜಾತ್ರೆಯ ಸೊಬಗು

ಚಿತ್ರಗಳು: ಸತೀಶ್ ಬಡಿಗೇರ

ನಶಿಸುತ್ತಿರುವ ಗ್ರಾಮೀಣ ಕ್ರೀಡೆ ಬುಗುರಿ ಆಟದ ನೋಟ

### ಹೀಗೆ ಹುಟ್ಟಿತು ಥೀಮ್ ಪಾರ್ಕ್ ಪರಿಕಲ್ಪನೆ

ದಾವಣಗೆರೆಯಲ್ಲಿ ‘ಸ್ಮಾರ್ಟ್ ಸಿಟಿ’ ಯೋಜನೆ ಆರಂಭವಾದಾಗ ಈ ಯೋಜನೆಯ ಅನುದಾನದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಗೆ ಉತ್ತೇಜನ ನೀಡುವ ಉದ್ದೇಶದಿಂದ ₹ 3.5 ಕೋಟಿಯನ್ನು ಮೀಸಲಿರಿಸಲಾಯಿತು. ಬ್ಯಾಂಕ್‌ನಲ್ಲಿದ್ದ ಅನುದಾನ ಕೆಲ ವರ್ಷಗಳ ಬಳಿಕ ಬಡ್ಡಿ ಸೇರಿ ₹ 5.5 ಕೋಟಿ ಆಗಿತ್ತು. ಈ ಹಣದ ಒಂದಷ್ಟನ್ನು ಕನ್ನಡ ಭವನ ಹಾಗೂ ಸ್ಕೂಲ್ ಆಫ್ ಆರ್ಟ್ಸ್‌ನ ವಿವಿಧ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಯೋಚಿಸಲಾಗಿತ್ತು. ಇಷ್ಟು ದೊಡ್ಡ ಮೊತ್ತವನ್ನು ಶಾಶ್ವತವಾಗಿ ಉಳಿಯುವಂತಹ ಯೋಜನೆಗೆ ವಿನಿಯೋಗಿಸಿದರೆ ಒಳಿತು ಎಂಬ ಸಲಹೆ ಕೇಳಿಬಂದಿತು. ಆಗ ರೂಪುಗೊಂಡಿದ್ದು ಥೀಮ್ ಪಾರ್ಕ್ ಪರಿಕಲ್ಪನೆ.

‘ಯೋಜನೆ ಆರಂಭಕ್ಕೂ ಮುನ್ನ (ಕೋವಿಡ್‌ಗೂ ಮುನ್ನ) ಗೊಟಗೋಡಿಯ ರಾಕ್ ಗಾರ್ಡನ್ ರೂವಾರಿ ಟಿ.ಬಿ. ಸೊಲಬಕ್ಕನವರ್ ಅವರ ಮಾರ್ಗದರ್ಶನದಲ್ಲಿ ಬೆಂಗಳೂರಿನ ಜಕ್ಕೂರಿನಲ್ಲಿ ನಿರ್ಮಾಣಗೊಂಡಿರುವ ಮಾದರಿ ಪಾರಂಪರಿಕ ಗ್ರಾಮ, ಗೊಟಗೋಡಿಯ ರಾಕ್ ಗಾರ್ಡನ್, ಕಾರವಾರದ ಉದ್ಯಾನ, ಮಹಾರಾಷ್ಟ್ರದ ಕೊಲ್ಲಾಪುರದ ಬಳಿ ಇರುವ ಕನ್ಹೇರಿ ಮಠದ ಉದ್ಯಾನ ಮುಂತಾದೆಡೆ ಎಡತಾಕಿ ಬಂದೆವು. ಅಲ್ಲಿನ ಥೀಮ್ ಪಾರ್ಕ್‌ಗಳ ಸಾಧಕ–ಬಾಧಕಗಳನ್ನು ತುಲನೆಗೊಳಪಡಿಸಿ ಬೆಣ್ಣೆನಗರಿಯ ಥೀಮ್ ಪಾರ್ಕ್ ಜನನಕ್ಕೆ ಯೋಜನೆ ರೂಪಿಸಲಾಯಿತು’ ಎಂದು ಮೆಲುಕು ಹಾಕುವರು ರಂಗಕರ್ಮಿ ಬಾ.ಮ.ಬಸವರಾಜಯ್ಯ.

ಮಹಾಭಾರತದಲ್ಲಿ ದ್ರೌಪದಿಯ ಕಥೆಗೆ ಹಲವು ಮಜಲುಗಳಿವೆ. ಯಜ್ಞಬಲದಿಂದ ಮೂಡಿಬಂದ ಚಿರಯೌವನೆಯ ಬದಕನ್ನು ಪರಿಚಯಿಸುವ ವಿಶಿಷ್ಟ ನಾಟಕ 'ಉರಿಯ ಉಯ್ಯಾಲೆ' ಇತ್ತೀಚೆಗಷ್ಟೇ ಧಾರವಾಡದಲ್ಲಿ ಪ್ರದರ್ಶನಗೊಂಡಿತು..

ಏಕವ್ಯಕ್ತಿ ನಾಟಕದಲ್ಲಿ ದ್ರೌಪದಿ ಪಾತ್ರಧಾರಿ

# ದ್ರೌಪದಿಯ ಸ್ವಗತದ ಉರಿಯ ಉಯ್ಯಾಲೆ

**ಕೃಷ್ಣ ಕಟ್ಟಿ**

ಜಗತ್ತಿನ ಶ್ರೇಷ್ಠ ಮಹಾಕಾವ್ಯ ಮಹಾಭಾರತ. ಈ ಕಾವ್ಯದ ಒಡಲಿನಲ್ಲಿ ಸಾವಿರಾರು ಕಥೆ, ಕಾದಂಬರಿ ಹಾಗೂ ನಾಟಕಗಳು ಮೂಡಿಬಂದಿವೆ. ಮಹಾಭಾರತ ಬರೀ ಇತಿಹಾಸ ಅಥವಾ ಪುರಾಣವಲ್ಲ, ಅದು ಭಾರತೀಯ ಸಂಸ್ಕೃತಿಯ ಅನಾವರಣ. ನಮ್ಮ ಕಥೆಯೂ ಹೌದು, ಮಹಾಭಾರತದ ಕಥಾನಾಯಕಿ ದ್ರೌಪದಿ, ಪಾಂಚಾಲ ದೇಶದ ದ್ರುಪದ ರಾಜನ ಮಗಳು. ಯಜ್ಞಬಲದಿಂದ ಮೂಡಿಬಂದ ಚಿರಯೌವನೆ. ಮಹಾಭಾರತದ ಕಥೆ ಕಾಲತೀತವಾದರೂ ಮಾನವ ಸಹಜ ಆಮಿಷಗಳು, ನಿಸರ್ಗ ಸಹಜ, ಕಾಲಧರ್ಮಕ್ಕೆ ಅನುಗುಣವಾಗಿ ಪ್ರತಿಯೊಬ್ಬರಿಗೂ ಜೀವನ ಸಂಧ್ಯಾಕಾಲ ಆವರಿಸುತ್ತದೆ. ಮಹಾಭಾರತ ಯುದ್ಧ ನಂತರದ ಸಂದರ್ಭದಲ್ಲಿ ದ್ರೌಪದಿಯು ತನ್ನ ವರ್ಣರಂಜಿತ ಬದುಕಿನ ಪುಟಗಳನ್ನು ತೆರೆದು ನೋಡಿದಾಗ ಅವಳ ಬದುಕು ಜೀವನ ಜೋಕಾಲಿಯಾಗದೆ ಉರಿಯ ಉಯ್ಯಾಲೆಯಾಗಿರುತ್ತದೆ.

ಇದು ಕವಿ, ನಾಟಕಕಾರ ಎಚ್.ಎಸ್. ವೆಂಕಟೇಶಮೂರ್ತಿ ರಚಿಸಿರುವ 'ಉರಿಯ ಉಯ್ಯಾಲೆ' ಎಂಬ ಏಕವ್ಯಕ್ತಿ ನಾಟಕದ ಕಥಾವಸ್ತು. ಈ ನಾಟಕವನ್ನು ಧಾರವಾಡದ ಅಭಿನಯ ಭಾರತಿ ತಂಡದವರು ಇತ್ತೀಚೆಗೆ ಧಾರವಾಡದ ಸೃಜನ ರಂಗಮಂದಿರದಲ್ಲಿ ವಸಂತ ನಾಟಕೋತ್ಸವದ ಅಂಗವಾಗಿ ಪ್ರದರ್ಶಿಸಿ, ಪ್ರೇಕ್ಷಕರನ್ನು ಭಾವನಾಲೋಕಕ್ಕೆ ಸೆಳೆದು ಮೆಚ್ಚುಗೆ ಗಳಿಸಿತು. ಹಿರಿಯ ರಂಗ ನಿರ್ದೇಶಕ ಶ್ರೀಪತಿ ಮಂಜನಬೈಲು ಅವರ ಸಮರ್ಥ ನಿರ್ದೇಶನದಲ್ಲಿ ಕಲಾವಿದೆ ಜ್ಯೋತಿ ಮೋಹನ್ ದೀಕ್ಷಿತ್ ಅವರು ದ್ರೌಪದಿಯ ಜೀವನದ ಏರಿಳಿತಗಳನ್ನು ಸಮರ್ಥವಾಗಿ ಬಿಂಬಿಸಿದರು.

ದ್ರೌಪದಿಯು ಪಂಚ ಪಾಂಡವರೊಡನೆ ಸಹಬಾಳ್ವೆ ನಡೆಯಿಸಿ, ಅವರವರ ಭಾವಕ್ಕನುಗುಣವಾಗಿ ಸ್ಪಂದಿಸಿ ವಿಷಾದ ಭಾವದಿಂದ ತನ್ನ ಅಂತರಂಗವನ್ನು ಕೆಣಕಿ ನೋಡುತ್ತಾಳೆ. ಯುದ್ಧ ನಂತರದ ಜೀವನ ಶೂನ್ಯತೆ ಆವರಿಸ ತೊಡಗಿದಾಗ, ಕನ್ನಡಿಯಲ್ಲಿ ತನ್ನ ಬಿಂಬವನ್ನು ನೋಡಿಕೊಳ್ಳುತ್ತಾ "ಕೃಷ್ಣೆ ನಿನಗೆ ವಯಸ್ಸಾಯ್ತು, ನೀನು ಮುದುಕಿಯಾದೆ" ಎಂದು ತನ್ನನ್ನೇ ತಾನು ಛೇಡಿಸಿ ಕೊಳ್ಳುತ್ತಾಳೆ. ಸ್ವರ್ಗಾರೋಹಣ ಪಾಂಡವರೆಲ್ಲರೂ ಹೊರಡುವ ಸಂದರ್ಭದಲ್ಲಿ ಚಳಿಗಾಳಿ ತಡೆಯಲು ಬಟ್ಟೆ ಬರೆ ಹೊಂದಿಸಿಕೊಳ್ಳವ ತವಕದೊಂದಿಗೆ ನಾಟಕ ಅನಾವರಣಗೊಳ್ಳುತ್ತದೆ. ಆಗ ದ್ರೌಪದಿಯ ನೆನಪಿನಚಿತ್ರಗಳು ಮೆರವಣಿಗೆಯಂತೆ ಸಾಗಿ ಬರುತ್ತವೆ. ನಾಟಕದ ಸುದೀರ್ಘ ಸ್ವಗತ ಸಂಭಾಷಣೆಗಳು ಹಲವು ಭಾವಗಳಿಗೆ ಬಣ್ಣ ಹಚ್ಚುತ್ತಾ ಶ್ರವ್ಯ ದೃಶ್ಯಗಳ ಮೂಲಕ ನಮ್ಮ ಅಂತಃಕರಣದೊಡನೆ ಅನುಸಂಧಾನ ಮಾಡುತ್ತವೆ. ಆಂಗಿಕ ವಾಚಕಗಳ ಸೂಕ್ತ ಸಮನ್ವಯ, ಸರಳ ರಂಗ ವಿನ್ಯಾಸ, ಹಿತಮಿತವಾದ ಬೆಳಕಿನ ಸಂಯೋಜನೆ ಹಾಗೂ ಅರ್ಥಪೂರ್ಣ ಭಾವಸ್ಫೂರಕ ಸಂಗೀತ ಸಂಯೋಜನೆಯಲ್ಲಿ ನಿರ್ದೇಶಕರ ಜಾಣ್ಮೆ ಎದ್ದು ಕಾಣುತ್ತಿತ್ತು.

ನಾಟಕದ ಉದ್ದಕ್ಕೂ ಎರಡೇ ಸೀರೆಗಳ ಬಳಕೆ ಅರ್ಥಪೂರ್ಣ ಎನಿಸಿ ಗಮನ ಸೆಳೆಯುತ್ತವೆ. ದ್ರೌಪದಿಯ ಸ್ವಯಂವರದ ಸಂಭ್ರಮಕ್ಕೆ ಒಂದು ಸೀರೆ ಹಾಗೂ ದ್ರೌಪದಿ ವಸ್ತ್ರಾಪಹರಣ ಸಂದರ್ಭದಲ್ಲಿ ಅಕ್ಷಯಂಬರವಾಗುವ ಮತ್ತೊಂದು ಸೀರೆಯ ಬಳಕೆ ಜೀವನದ ಈಗ ಈ ಭಾವಗಳನ್ನು ಸಾಕ್ಷೀಕರಿಸುತ್ತವೆ.

ಉಪ ಪಾಂಡವರ ಹತ್ಯೆ ಹಾಗೂ ಸ್ವರ್ಗಾರೋಹಣದ ದೃಶ್ಯ ಸಂಯೋಜನೆಯಲ್ಲಿ ನಿರ್ದೇಶಕ ಹಾಗೂ ನಟಿಯ ಸಮರ್ಥ ಸಂಯೋಜನೆ ಎದ್ದು ಕಾಣುತ್ತಿತ್ತು. ಸಾತ್ವಿಕ ಆಂಗೀಕ ಹಾಗೂ ವಾಚಿಕ ಅಭಿನಯದ ಅಲೆಗಳು ತ್ರಿವೇಣಿ ಸಂಗಮದಂತೆ ನೋಡುಗರನ್ನು ಆವರಿಸಿಕೊಂಡು ಒಂದೂವರೆ ಗಂಟೆ ರಸಾನುಭವ ನೀಡಿದೆ. ದ್ರೌಪದಿಯ ತಮುಲಗಳನ್ನು ಜ್ಯೋತಿ ಮೋಹನ್ ದೀಕ್ಷಿತ್ ಅವರು ಸಮರ್ಥವಾಗಿ ವ್ಯಕ್ತಪಡಿಸಿದರು. ಹೆಜ್ಜೆ ಹೆಜ್ಜೆಗೂ ಅರ್ಥಪೂರ್ಣ ದೃಶ್ಯ ಸಂಯೋಜನೆಯು ಮಹಾಭಾರತದ ಎಳೆಎಳೆಗಳನ್ನು ಬಿಡಿಸಿ ತೋರಿಸಿತು.

ಇದೊಂದು ಉತ್ತರ ಕರ್ನಾಟಕ ಭಾಗದ ಉತ್ತಮ ಪ್ರಯೋಗವೆನಿಸಿದ್ದು, ಈ ತರಹದ ಪ್ರಬುದ್ಧ ನಾಟಕವನ್ನು ನೋಡಲು ಅನುವು ಮಾಡಿಕೊಟ್ಟ ಅಭಿನಯ ಭಾರತಿ ತಂಡದವರಿಗೂ, ತಾಂತ್ರಿಕ ವರ್ಗದವರಿಗೂ ಹಾಗೂ ನಾಟಕಕಾರರಿಗೂ ಅಭಿನಂದನೆಗಳು. ನಾಡಿನುದ್ದಕ್ಕೂ ಈ ನಾಟಕದ ಮರು ಪ್ರಯೋಗಗಳು ನಡೆಯಲಿ.

## ಮೊದಲ ಓದು

### ಮೊಗಳ್ಳಿ ಗಣೇಶರ ಮೂರು ಕೃತಿಗಳು

**ಮೊಗಳ್ಳಿ ಗಣೇಶ** ಅವರ ಮೂರು ಕೃತಿಗಳು ಹೊರಬಂದಿವೆ. ನಾನೆಂಬುದು ಕಿಂಚಿತ್ತು (ಆತ್ಮಕಥನ); ಅಲ್ಲಿ ಯಾರೂ ಇಲ್ಲ (ಗಪದ್ಯ ಕಾದಂಬರಿ); ಹೊಕ್ಕಳು ಕಾದಂಬರಿ.

ಕಥಾಲೋಕದಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ಮೊಗಳ್ಳಿ ಗಣೇಶ ಅವರು ಆತ್ಮಕಥನವನ್ನೂ ಕತೆಗಾರರಂತೆ ನಿರೂಪಿಸುತ್ತ ಹೋಗಿದ್ದಾರೆ. ಬರೆಹ ನಿರುದ್ವಿಗ್ನವಾಗಿದ್ದರೂ, ಓದುಗರಿಗೆ ಆಗಾಗ ನಿಟ್ಟುಸಿರು ಮೂಡಿಸುವಂತೆ, ಹಣೆಗಂಟು ಹಾಕುವಂತೆ, ಅರಿವಿಲ್ಲದೇ ಲೊಚಗುಟ್ಟುವಂತೆ, ಕಣ್ಣೀರ ಪಸೆ ಒರೆಸಿಕೊಳ್ಳುವಂತೆ ಮಾಡುತ್ತದೆ.

ಬಾಲ್ಯದಲ್ಲಿ ಉಂಡ ಅಪ್ಪನ ಕ್ರೋಧ, ಆಕ್ರೋಶ, ಪ್ರೀತಿಗಾಗಿ ತಹತಹಿಸಿದ್ದು, ಬದಲಿಗೆ ಸಿಕ್ಕಿದ್ದು ಬರೀ ಅವಮಾನ. ಇಂಥ ಅಪಾರ ಸಿಟ್ಟು ಸೆಡವುಗಳ ನಡುವೆ, ಅಪಮಾನಗಳ ಹುದುಲೊಳಗೆ ಕಳೆದುಹೋಗಬಹುದಾದ ಹುಡುಗನಿಗೆ ಕಾದಿದ್ದು ಪ್ರೀತಿಯೆಂಬ ಹುಲುಕಡ್ಡಿಯೇ. ತಾತನ ಮುಚ್ಚಟೆ, ಚಿಕ್ಕಪ್ಪನ ಪ್ರೀತಿಯ ಬಿಸುಪು, ಓದಿನಲ್ಲಿ ಮುಂದಿರುವ ವಿಶ್ವಾಸ ಇವೆಲ್ಲ ಕೈ ಹಿಡಿದು ನಡೆಸುತ್ತವೆ.

ಪ್ರೇಮಪತ್ರಗಳು, ನೋವಿನ ಧ್ವನಿಯಾಗಿ ಬದಲಾದ ಬಗೆ, ನೋವಿನ ಧ್ವನಿಗೆ ಬಂಡಾಯ ಮತ್ತು ಕ್ರಾಂತಿಯ ಕಾವನ್ನು ಕೊಟ್ಟ ಸ್ನೇಹಿತರು, ಅಮಿತವಾದ ಓದು, ಅವರೊಳಗಿನ ಚಿಂತನ ಮಥನಗಳು ನಾವು ನೋಡಿರುವ ಕತೆಗಾರನ ಹಿಂದಿನ ಕತೆಯನ್ನು ಅರಹುತ್ತ ಹೋಗುತ್ತವೆ. ಹತಾಶೆಯಿಂದ ಆರಂಭವಾಗುವ ಆತ್ಮಕಥನದಲ್ಲಿ ನಿರೂಪಕರಾಗಿಯೇ ಬದುಕನ್ನು ನೋಡುತ್ತ ಹೋಗುತ್ತಾರೆ. ಓದುಗರಿಗೆ ಕಾಣಿಸುತ್ತ ಹೋಗುತ್ತಾರೆ. ತಾಯಿಯ ನಿಟ್ಟುಸಿರಿಗೆ ಸಮರ್ಪಿಸಿದ ಈ ಕೃತಿ ಜಾತಿ ಪದ್ಧತಿ, ಮೇಲರಿಮೆ, ಕೀಳರಿಮೆಗಳ ಸುತ್ತ ಮಾತಾಡುತ್ತಲೇ ತಾವು ಅದನ್ನೆಲ್ಲವನ್ನೂ ಮೀರಿರುವ ಬಗ್ಗೆ ತಣ್ಣಗೆ ಹೇಳುತ್ತಾರೆ. ಓದಿಸಿಕೊಂಡು ಹೋಗುವ, ತಾಯಿಯೊಂದಿಗೆ ನಮ್ಮ ನಿಟ್ಟುಸಿರುಗಳನ್ನೂ ಬೆಸೆಯುವ ಕೃತಿಯಾಗಿದೆ.

ಗಪದ್ಯ ಕಾದಂಬರಿ ಎಂಬ ಅಡಿಟಿಪ್ಪಣಿಯೊಂದಿಗೆ ಪ್ರಕಟವಾಗಿರುವ 'ಅಲ್ಲಿ ಯಾರೂ ಇಲ್ಲ' ಕೃತಿಯು (ಪುಟ 340, ಬೆಲೆ ₹375) ವಿಶೇಷ ಕಥನವಾಗಿದೆ. ಕಾವ್ಯದ ಭಾಷೆಯನ್ನು ಸಿದ್ಧಿಸಿಕೊಂಡಿರುವ ಲೇಖಕರಿಗೆ ಇಲ್ಲಿ ಹೇಳಬಹುದಾದ ಎಲ್ಲವನ್ನೂ ಕಾವ್ಯಾತ್ಮಕವಾಗಿ ಹೇಳುತ್ತಲೇ ಪರಸ್ಪರ ಒಂದು ಬೆಸುಗೆ ಹಾಕುತ್ತ ಹೋಗುತ್ತಾರೆ. ಕೃತಿಯ ವಿಶೇಷವೆಂದರೆ ಇವೆಲ್ಲವೂ ಒಂದಕ್ಕೆ ಒಂದು ಕೊಂಡಿಯಂತೆ ಇದ್ದರೂ ಪರಸ್ಪರ ಪ್ರತ್ಯೇಕತೆಯನ್ನೂ ಕಾದುಕೊಳ್ಳುತ್ತವೆ. ಹಾಗಿದ್ದಾಗಲೂ ತಣ್ಣಗೆ ಒಂದು ಕತೆಯೂ ಈ ಕಾವ್ಯದೊಂದಿಗೆ ಹರಿಯುತ್ತಲೇ ಹೋಗುತ್ತದೆ. ಇದು ಯಾರದ್ದಾದರೂ ಆಗಿರಬಹುದಾದ ಕತೆ, ಯಾರಿಗಾದರೂ ಹೊಸೆಯುವಂಥ ಕೃತಿ. ವಿಭಿನ್ನ ಮತ್ತು ಸೋಜಿಗದ ಓದು. ವಿರಾಮವನ್ನು ಬೇಡುವ ಕೃತಿ. ಒಂದೇ ಗುಕ್ಕಿನಲ್ಲಿ ಓದುವಂಥದ್ದಲ್ಲ.

ಕಾವ್ಯದ ಭಾಷೆಯಲ್ಲಿಯೇ ಕತೆ ಹೇಳುವುದು ಲೇಖಕರ ವೈಶಿಷ್ಟ್ಯವಾಗಿದೆ. ಅವರ 'ಹೊಕ್ಕುಳು' ಕೃತಿ (₹360) ಓದುವಾಗ ಈ ಗುಣದ ದಟ್ಟ ಅನುಭವವಾಗುತ್ತದೆ. ಅವರ ಆತ್ಮಕಥನದ ನೆರಳಿನಂತಿದೆಯೇ ಎಂಬ ಅನುಮಾನ ಕಾಡುವಾಗಲೇ ಲೇಖಕರು ಈ ಪಾತ್ರಗಳು ತಮ್ಮ ಜೀವನದ ಪಾತ್ರಗಳೆಂದು ಹೇಳುತ್ತಾರೆ. ಆದರೆ ಮಹಿಳೆಯರ ಬದುಕಿನಲ್ಲಿ ಹಾಸುಹೊಕ್ಕಿರುವ ಕ್ರೌರ್ಯ, ಅದನ್ನು ಅನುಭವಿಸಿ, ದಕ್ಕಿಸಿಕೊಂಡು ಅವನ್ನು ಅನುಭವಿಸುತ್ತಲೇ ಅನುಭಾವಿಯಾಗಿ ಬದಲಾಗುವ ಪಾತ್ರಗಳು ಅವುಗಳ ಅಧ್ಯಾಯದ ಹೆಸರುಗಳಂತೆಯೇ ಉಸಿರು ಒಂದು, ಎರಡು ಎಂಬ ನಿಡಿದಾದ ಉಸಿರನ್ನು ಹೊರಹೊಮ್ಮಿಸುತ್ತವೆ.

ಗಂಡುಮಕ್ಕಳ ಅಹಮಿಕೆಯನ್ನು ಓಲೈಸುವ ಹೆಣ್ಣುಮಕ್ಕಳು, ಇನ್ನೊಂದು ಮಹಿಳೆಯ ಕ್ರೌರ್ಯವನ್ನು ಮೌನವಾಗಿ ನೋಡುವ ತಣ್ಣಗಿನ ಕ್ರೌರ್ಯವನ್ನು ಮತ್ತಷ್ಟು ಹೃದಯವನ್ನು ವಿಹ್ವಲಗೊಳಿಸುತ್ತದೆ.

ಮೂರೂ ಕೃತಿಗಳನ್ನು ಒಟ್ಟಿಗೆ ಓದಿದರೂ, ಪ್ರತ್ಯೇಕವಾಗಿ ಓದಿದರೂ ಅವಮಾನಗಳನ್ನೂ, ಕ್ರೌರ್ಯವನ್ನೂ ಉಣಬಡಿಸಿದ ಸಮಾಜದಲ್ಲಿ ಲೇಖಕ ಬೆಳೆದು ಬಂದ ಬಗೆಯನ್ನು ಸಶಕ್ತವಾಗಿ ಹಿಡಿದಿಡಲಾಗಿದೆ. ಈ ಮೂರು ಕೃತಿಗಳನ್ನು ಸಾಹಿತ್ಯಾಸಕ್ತರು ಖಂಡಿತ ಗಮನಿಸಬಹುದು.

**ನಾನೆಂಬುದು ಕಿಂಚಿತ್ತು ಅಲ್ಲಿ ಯಾರೂ ಇಲ್ಲ ಹೊಕ್ಕುಳು**
ಲೇ: ಮೊಗಳ್ಳಿ ಗಣೇಶ
ಪ್ರ: ದೇಸಿ ಪ್ರಕಾಶನ
ಸಂ: 94484 39998

### ಸಂದರ್ಶನಗಳಲ್ಲಿ ತಿರುಮಲೇಶ್ ದರ್ಶನ

**ಪ್ರಕಟಿತ** ಸಂದರ್ಶನಗಳ ಸಂಗ್ರಹ ಕೃತಿ ಇದಾಗಿದೆ. ತಿರುಮಲೇಶ್ ಅವರ ಕಾವ್ಯ, ಕಥೆ, ಅವರ ಬದುಕು, ಬರೆಹಗಳನ್ನು ಓದುಗರ ಮುಂದೆ ಇಡುತ್ತಲೇ ಕಾಲನ ಮಡಿಲಲ್ಲಿ ಕಣ್ಮರೆಯಾದಂತಿರುವ ಹಲವಾರು ಕವಿತೆ ಮತ್ತು ಪುಸ್ತಕಗಳ ಮರು ಓದಿಗೆ ಈ ಕೃತಿಯು ಪ್ರೇರಣೆ ನೀಡುತ್ತದೆ. ತಿರುಮಲೇಶ್ ಅವರ ಸಾಹಿತ್ಯ, ಭಾಷೆ, ವಿಷಯವಸ್ತುಗಳು, ಅವರ ತಿರುಗಾಟ ಜೊತೆಗೆ ವೈಯಕ್ತಿಕ ಬದುಕು ಇವೆಲ್ಲವನ್ನೂ ಹದವಾಗಿ ಹಿಡಿದಿಟ್ಟಿರುವ ಆರೇಳು ಸಂದರ್ಶನಗಳು ಇಲ್ಲಿವೆ. ಪ್ರತಿ ಸಂದರ್ಶನದಲ್ಲಿಯೂ ಭಾಷೆಯನ್ನು ಬಳಸಿಕೊಳ್ಳುವ ಕುರಿತ ಜಿಜ್ಞಾಸೆ ಗಮನಸೆಳೆಯುತ್ತದೆ. ಓದದ ಕವಿತೆಗಳು, ಅನುವಾದಗಳು ಕಥನಕುತೂಹಲವನ್ನು ಕೆರಳಿಸುತ್ತವೆ. ಪ್ರಶಸ್ತಿ ವಾಪಸಾತಿ ಘಟನೆ, ಪ್ರತಿ ಊರಿನಲ್ಲಿ ತಳ ಊರುವಾಗಿನ ಅತಂಕ, ತಾಯ್ನೆಲದಿಂದ ದೂರ ಇರುವಾಗ ತಾಯ್ನೆಲದ ಸೆಳೆತ, ಎಳೆತ, ಅನ್ಯ ಭಾಷೆ, ಸಂಸ್ಕೃತಿಯನ್ನು ಕನ್ನಡಕ್ಕೆ ತರುವ, ಪರಿಚಯಿಸಿದ ತಂತ್ರ ಇವೆಲ್ಲ ತಿರುಮಲೇಶ್ ಅವರ ಸಂದರ್ಶನ ಮಾತ್ರವಾಗದೇ ಅವರ ಬದುಕಿನ ದರ್ಶನವನ್ನು ಮಾಡಿಸುತ್ತವೆ.

ಮೂಲ ಸಂದರ್ಶನಗಳನ್ನು ಹಾಗೆಯೇ ಸಂಕಲನಕ್ಕೆ ಬಳಸಿರುವುದರಿಂದ ಹಲವಾರು ಕಡೆ ತಿರುಮಲೇಶ್ ಅವರ ಬಾಲ್ಯ, ಊರು, ವಿದ್ಯಾಭ್ಯಾಸದ ವಿಷಯಗಳು ಪುನರಾವರ್ತನೆ ಆಗುತ್ತವೆ. ಆದರೆ ಇವು ಮುಂದಿನ ಪ್ರಶ್ನೆಗಳಿಗೆ ಪೂರಕ ಆಗಿರುವುದರಿಂದ, ಅಲ್ಲಿ ಉಳಿಸಿಕೊಳ್ಳುವುದು ಅನಿವಾರ್ಯವಾಗಿಯೂ ಗೋಚರಿಸುತ್ತವೆ.

ಪು: 202 ₹360

**ಬದ್ಧತೆ ಎನ್ನುವುದು ಬಂಧನ**
ಸಂ: ಎಂ.ಎಸ್. ಶ್ರೀರಾಮ್
ಪ್ರ: ಬಹುವಚನ
ಸಂ: 9035220992

### ರಂಗಭೂಮಿಯ ಅಪ್ರತಿಮ ಸಾಧಕಿ 'ರಾಮಿ'

**ಮೈಸೂರು** ರಂಗಭೂಮಿಯಲ್ಲಿ ರಂಗನಟಿಯಾಗಿ, ನಿರ್ದೇಶಕಿಯಾಗಿ ಸಾಕಷ್ಟು ಹೆಸರು ಮಾಡಿರುವ ರಾಮೇಶ್ವರಿ ವರ್ಮ ಅವರ ರಂಗಭೂಮಿಯ ಜೊತೆಗಿನ ನಂಟಿನ ಬಗೆಗಿನ ಮಾಹಿತಿಯು 'ಬಿಟ್ಟೇನೆಂದರೂ ಬಿಡದು-ಈ ಮಾಯೆ' ಪುಸ್ತಕದಲ್ಲಿದೆ.

ರಂಗಭೂಮಿ ಒಂದು ವಿಸ್ಮಯ ಜಗತ್ತು. ಈ ಜಗತ್ತನ್ನು ಒಮ್ಮೆ ಒಳಹೊಕ್ಕರೆ ಹೊರಬಹುದು ಕಷ್ಟ ಎನ್ನುವ ರಾಮೇಶ್ವರಿ ವರ್ಮ, ಪರಿಚಯದವರ ಪಾಲಿನ 'ರಾಮಿ' ಆಗಿದ್ದರು. ರಂಗಭೂಮಿಯಲ್ಲಿ 60ಕ್ಕೂ ಅಧಿಕ ವರ್ಷಗಳ ಕಾಲ ರಂಗನಟಿಯಾಗಿ, ನಿರ್ದೇಶಕಿಯಾಗಿ, ಸಂಘಟಕಿಯಾಗಿ ರಂಗ ಪಯಣ ನಡೆಸಿದ್ದಾರೆ. ಅದರ ಚಿತ್ರಣ ಈ ಪುಸ್ತಕದ ಉದ್ದಕ್ಕೂ ಇದೆ. ಅಲ್ಲಿನ ಅನುಭವಗಳು ಹಾಗೂ ದಿಗ್ಗಜ ನಿರ್ದೇಶಕರ ನಾಟಕಗಳಲ್ಲಿ ನಟಿಸಿದ ನೆನಪುಗಳನ್ನು ಮೆಲುಕು ಹಾಕಿದ್ದಾರೆ.

ಈ ಕೃತಿಯನ್ನು ಓದುಗರು ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. ಮೊದಲ ಭಾಗದಲ್ಲಿ ರಾಮೇಶ್ವರಿ ವರ್ಮ ಅವರ ರಂಗಭೂಮಿಯ ಜೊತೆಗಿನ ನಂಟು, ಹವ್ಯಾಸಿ ರಂಗಭೂಮಿಯ ಅಭಿರುಚಿ, ಅಭಿನಯದ ನಾಟಕಗಳು, ಅವರು ನೋಡಿದ ನಾಟಕಗಳು, ರಂಗಭೂಮಿ ನಟಿ ಹಾಗೂ ನಿರ್ದೇಶಕಿಯಾಗಿ ಅವರ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಎರಡನೇ ಭಾಗದಲ್ಲಿ ಮೈಸೂರು ಹವ್ಯಾಸಿ ರಂಗಭೂಮಿಯಲ್ಲಿನ ಹಿರಿಯ, ಸಮಕಾಲೀನ, ಹೊಸ ತಲೆಮಾರಿನ ಕಲಾವಿದರ ಜೊತೆಗಿನ ಒಡನಾಟ, ಅನುಭವಗಳು, ರಂಗಭೂಮಿಯಲ್ಲಿನ ಬದಲಾವಣೆ, ಸುಧಾರಣೆ ಹಾಗೂ ತಂತ್ರಗಾರಿಕೆಯ ಬಗೆಗಿನ ಒಳನೋಟಗಳಿವೆ. ಇವುಗಳು ರಂಗಭೂಮಿಯ ಬಗ್ಗೆ ಮಾಹಿತಿ ನೀಡಿವುದರ ಜೊತೆಗೆ ಹೊಸ ಒಳವುಗಳನ್ನು ಓದುಗರಲ್ಲಿ ಮೂಡಿಸುತ್ತವೆ. ಈಗಾಗಲೇ ಇರುವ ದಾಖಲೆಗಳ ಜೊತೆಗೆ ತಮ್ಮ 60 ವರ್ಷಗಳ ರಂಗಭೂಮಿಯಲ್ಲಿನ ಅನುಭವಗಳನ್ನು ಸೇರಿಸಿ ಪ್ರಸ್ತುತ ಪಡಿಸಿದ್ದಾರೆ. ರಂಗಭೂಮಿಯ ಸವಾಲುಗಳು, ವಾಸ್ತವದ ಕುರಿತು ಈ ಕೃತಿ ಬೆಳಕು ಚೆಲ್ಲುತ್ತದೆ.

ಇದರಲ್ಲಿ ರಾಮೇಶ್ವರಿ ವರ್ಮ ಅವರ ಆರಂಭದ ರಂಗ ಪಯಣದ ಜೀವನ ಕಥನದಿಂದ ಹಿಡಿದು ರಂಗಭೂಮಿಯಲ್ಲಿನ ಇತ್ತೀಚಿನ ಪ್ರಯೋಗಗಳವರೆಗೆ ಹಾಗೂ ಮೈಸೂರು ಹವ್ಯಾಸಿ ರಂಗಭೂಮಿಯ ಕುರಿತಾದ ಉಪಯುಕ್ತ ಮಾಹಿತಿ ಇದೆ.




ಪು: 264 ₹360

**ಬಿಟ್ಟೇನೆಂದರೂ ಬಿಡದು ಈ ಮಾಯೆ**
ಸಂ: ಮೀನಾ ಮೈಸೂರು
ಪ್ರ : ಅಪರಾಜಿತೆ ಪ್ರಕಾಶನ
ಸಂ: 9845790862

# ಕಣ್ಮರೆ ಆಗುತ್ತಿರುವ ಚಿತ್ರಗಳಿಗೆ...

**10ನೇ ಪುಟದಿಂದ...**

ಥೀಮ್ ಪಾರ್ಕ್ ಒಂದೂವರೆ ಎಕರೆ ಪ್ರದೇಶದಲ್ಲಿ ಮೈದಳೆದಿದ್ದು, ಬಯಲುರಂಗಮಂದಿರ, ವೈವಿಧ್ಯಮಯ ಸಂದೇಶ ಸಾರುವ ಕಲಾಕೃತಿಗಳು ಮೇಳೈಸಿವೆ. ಜಲ್ಲಿಕಲ್ಲು, ಕಬ್ಬಿಣ, ಸಿಮೆಂಟ್ ಒಳಗೊಂಡ (ಆರ್‌ಸಿಸಿ) ಮಾಧ್ಯಮದಲ್ಲಿ ಕಲಾಕೃತಿಗಳು ರಚನೆಗೊಂಡಿದ್ದು, ಅಂದಾಜು 350 ರಿಂದ 400 ಕಲಾಕೃತಿಗಳು ಸೂಜಿಗಲ್ಲಿನಂತೆ ಸೆಳೆಯುತ್ತಿವೆ. 150 ಕಲಾವಿದರ ಸತತ ಒಂದು ವರ್ಷ ಶ್ರಮದ ಫಲವಾಗಿ ಥೀಮ್ ಪಾರ್ಕ್ ರೂಪುಗೊಂಡಿದೆ. ನಗರದಲ್ಲಿ ನಾಟಕ ಪ್ರದರ್ಶನಕ್ಕೆಂದೇ ಸೂಕ್ತ ರಂಗಮಂದಿರ ಈವರೆಗೆ ಇರಲಿಲ್ಲ. ಇಲ್ಲಿರುವ ಬಯಲುರಂಗಮಂದಿರ ಆ ಕೊರತೆಯನ್ನು ನೀಗಿಸಲಿದೆ.

'ಆರ್‌ಸಿಸಿ ಮಾಧ್ಯಮ ನೂರು ವರ್ಷ ಬಾಳಿಕೆ ಬರುವಂತಹದ್ದು. ಬಿಸಿಲು-ಮಳೆಗೆ ಮೈಯೊಡ್ಡಿದರೆ ಬಣ್ಣ ಮಾಸಬಹುದು, ಕೆಲವೆಡೆ ಬಿರುಕು ಬಿಡಬಹುದು. ಆದರೆ ಕಲಾಕೃತಿ ನಶಿಸದು. ಆರ್‌ಸಿಸಿ ಕಟ್ಟಡ ಬಹುವರ್ಷ ಬಾಳಿಕೆ ಬರುವ ರೀತಿ ಕಲಾಕೃತಿಗಳ ಬಗ್ಗೆಯೂ ಕಾಳಜಿ ವಹಿಸಿದರೆ ಶತಮಾನದವರೆಗೂ ಹೊಸದರಂತೆ ಇರುತ್ತವೆ. ಸೂಪರ್ ರಿಯಾಲಿಸಂ ಶೈಲಿಯಲ್ಲಿ ಇಲ್ಲಿನ ಕಲಾಕೃತಿಗಳನ್ನು ರಚಿಸಲಾಗಿದೆ. ಅಂದರೆ ನೈಜತೆಗೆ ಬಹಳ ಹತ್ತಿರ ಇರುವ ಕಲಾಕೃತಿಗಳಿವು'- ಹೀಗೆ ಕಲಾಕೃತಿಗಳ ಒಳಹೊರಗನ್ನು ಬಿಡಿಸಿಟ್ಟರು ಕಲಾವಿದ ರಾಜಹರ್ಷ ಸೊಲಬಕ್ಕನವರ.

ಈ ಥೀಮ್ ಪಾರ್ಕ್ ರೂಪುಗೊಂಡಿರುವುದು ಸ್ಮಾರ್ಟ್ ಸಿಟಿ ಯೋಜನೆಯಡಿ. ಸ್ಮಾರ್ಟ್ ಸಿಟಿ ಎಂದೊಡನೆ ಥುತ್ತನೆ ಎದುರಾಗುವುದು ಅಭಿವೃದ್ಧಿಗೊಂಡ ರಸ್ತೆಗಳು, ಕಟ್ಟಡಗಳು, ಕೆರೆ ಏರಿಗಳು, ವಾಕಿಂಗ್ ಪಾತ್..

ಇದೆಲ್ಲದರ ನಡುವೆಯೂ ಕಲೆ, ಸಂಸ್ಕೃತಿಗೂ ಸ್ಮಾರ್ಟ್ ಸಿಟಿ ಯೋಜನೆಯ ಹಣ ಬಳಸಬಹುದು ಎನ್ನುವುದನ್ನು ಇದು ಎತ್ತಿ ತೋರಿಸಿದೆ. ಒಟ್ಟು ₹ 6 ಕೋಟಿ ವೆಚ್ಚದಲ್ಲಿ ಥೀಮ್ ಪಾರ್ಕ್ ರೂಪುಗೊಂಡಿದ್ದು, ಇದರ ನಿರ್ವಹಣೆ ಜವಾಬ್ದಾರಿಯನ್ನು ದಾವಣಗೆರೆ ವಿಶ್ವವಿದ್ಯಾಲಯಕ್ಕೆ ವಹಿಸಲಾಗಿದೆ.

### ಇವೆಲ್ಲ ಇವೆ...

ಉದ್ಯಾನದ ಒಳಗೆ ಅಡಿ ಇಡುತ್ತಿದ್ದಂತೆ ಭುವನೇಶ್ವರಿ ದೇವಿಯ ಕಲಾಕೃತಿ ಭಕ್ತಿಯ ಭಾವ ಸ್ಫುರಿಸುತ್ತದೆ. ದಾವಣಗೆರೆಯ ದುಗ್ಗಮ್ಮನ ಜಾತ್ರೆಯ ಕಲಾಕೃತಿಗಳು, ಪರಿಸರದ ಪಾಠ ಹೇಳುವ ಅಪ್ಪಿಕೊ ಚಳವಳಿಯ ಕಲಾಕೃತಿಗಳು, ಆರೋಗ್ಯದ ಗುಟ್ಟು ಮನಮುಟ್ಟಿಸುವ ಯೋಗ ಕಲಾಕೃತಿಗಳು, ಮಕ್ಕಳಿಂದ ದೂರವೇ ಉಳಿದಿರುವ ಕುಂಟೆಬಿಲ್ಲೆ, ಗೋಲಿ ಆಟ, ಬಂಡಿ, ಚಿನ್ನಿದಾಂಡು ಆಡುವ ಮಕ್ಕಳ ಕಲಾಕೃತಿಗಳು, ಆಧುನಿಕ ಭರಾಟೆಯಲ್ಲಿ ತೆರೆಯ ಅಂಚಿಗೆ ಸರಿದಿರುವ ದೊಡ್ಡಾಟ, ಹುಲಿ ಕುಣಿತ, ತಮಟೆ ವಾದನ, ಸೂತ್ರದ ಬೊಂಬೆಯಾಟ, ಜನಪದ ಹಾಡುಗಾರರು, ಲಂಬಾಣಿ ನೃತ್ಯದ ಕಲಾಕೃತಿಗಳು ಗಮನ ಸೆಳೆಯುತ್ತವೆ.

ಉದ್ಯಾನದ ಪ್ರಮುಖ ಆಕರ್ಷಣೆ ಜಾನುವಾರು ಸಂತೆ'. ಸಂತೆಯಲ್ಲಿ ಎತ್ತು, ಹಸು, ಎಮ್ಮೆಗಳ ವ್ಯಾಪಾರ ಕುದುರಿಸುವ ಕಲಾಕೃತಿಗಳು ಮನಮುಟ್ಟುವಂತಿವೆ. ಹಳ್ಳಿಕಾರ್, ಅಮೃತ್ ಮಹಲ್, ಕಿಲಾರಿ, ಜವಾರಿ, ದೇವಳಿ ತಳಿಯ ಎತ್ತುಗಳು ಹಾಗೂ ಗೌಳಿ, ಸುರ್ವೆ, ಮುರ್ರಾ ತಳಿಯ ಎಮ್ಮೆಗಳ ಕಲಾಕೃತಿಗಳು ನೈಜವೆಂಬಂತೆ ಚಿತ್ರಿತವಾಗಿವೆ. ಉದ್ಯಾನದ ಆದಿಯಲ್ಲೇ ಎದುರಾಗುವ ಚಿಟ್ಟೆ ಜೀವನ ಚಕ್ರ ಮಕ್ಕಳ ಮನದುಂಬುತ್ತದೆ.

ನಮ್ಮದೇ ಕಲೆ, ಸಂಸ್ಕೃತಿ, ಬದುಕನ್ನು ನೈಜವೆಂಬಂತೆ ಚಿತ್ರಿಸಿರುವ ಈ ಥೀಮ್ ಪಾರ್ಕ್ ಅನ್ನು ಎಲ್ಲರೂ ಒಮ್ಮೆ ನೋಡಲೇಬೇಕು.

ಕೋಳಿ ಕಾಳಗದ ನೋಟ

## ಮುನ್ನೋಟ 21-07-2024 ರಿಂದ 27-07-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — **ಅಶ್ವಿನಿ, ಭರಣಿ, ಕೃತ್ತಿಕಾ 1**
ನೀವು ಕೈಹಾಕಿದ ಕೆಲಸಗಳು ಯಶಸ್ವಿಯಾಗಿ ಕೈಗೂಡುತ್ತವೆ. ವೃತ್ತಿಯಲ್ಲಿ ಹೆಚ್ಚಿನ ಸ್ಥಾನಮಾನಗಳು ದೊರೆಯುವ ಸಾಧ್ಯತೆಗಳಿವೆ. ಸ್ಥಾನ ಬದಲಾವಣೆ ಅಥವಾ ವರ್ಗಾವಣೆಗೆ ಯತ್ನಿಸುತ್ತಿರುವವರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಆರೋಗ್ಯದ ಸಮಸ್ಯೆ ಕಾಣಿಸಬಹುದು. ಮಕ್ಕಳಿಗೆ, ಹಿರಿಯರಿಗೆ ಅಜೀರ್ಣ ಸಮಸ್ಯೆ ಕಾಡಬಹುದು. ಕೃಷಿ ಬೆಳೆಗಾರರಿಗೆ ನಿರೀಕ್ಷಿತಮಟ್ಟದ ಲಾಭ ದೊರೆಯದಿರಬಹುದು.

**ವೃಷಭ** — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ನಿಮ್ಮ ಕೆಲಸ ಕಾರ್ಯಗಳಲ್ಲಿ ಹಿನ್ನಡೆ ಕಾಣಬಹುದು. ಆರಂಭಿಸಿದ ಕೆಲಸಗಳು ಮುಗಿಯದೇ ಹೆಚ್ಚು ಒತ್ತಡವನ್ನು ಅನುಭವಿಸುವಿರಿ. ಮನೆ ಕಟ್ಟುತ್ತಿರುವವರಿಗೆ ಕೆಲಸ ಕಾರ್ಯಗಳು ನಿಧಾನವಾಗಬಹುದು. ಸ್ಟೇಷನರಿ ವಸ್ತುಗಳನ್ನು ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ. ಕೃಷಿಕರಿಗೆ ಆದಾಯ ಕಡಿಮೆಯಾಗಬಹುದು.

**ಮಿಥುನ** — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಈ ವಾರ ಬಹಳ ಅದ್ಭುತವಾಗಿರುತ್ತದೆ. ಕೈ ಹಾಕಿದ ಕೆಲಸಗಳಲ್ಲಿ ಯಶಸ್ಸನ್ನು ಕಾಣುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ನಿಂತು ಹೋಗಿದ್ದ ಕೆಲಸಗಳನ್ನು ಈಗ ಪೂರೈಸಿಕೊಳ್ಳಬಹುದು. ಕೆಲವರಿಗೆ ಕೀರ್ತಿ ಗೌರವಗಳು ದೊರೆಯುತ್ತವೆ. ವ್ಯಾಪಾರದಲ್ಲಿ ಹೆಚ್ಚು ಅಭಿವೃದ್ಧಿ ಇರುತ್ತದೆ. ಕೆಲವರಿಗೆ ಸಂಧಿವಾತ ಅಥವಾ ತಲೆನೋವು ಕಾಡಬಹುದು. ಹಿರಿಯರ ಆರೋಗ್ಯದ ಬಗ್ಗೆ ಹೆಚ್ಚು ಗಮನ ಕೊಡಿ.

**ಕಟಕ** — **ಪುನರ್ವಸು 4 ಪುಷ್ಯ, ಆಶ್ಲೇಷ**
ವಾರದ ಆರಂಭ ಅಂತಹ ಶುಭದಾಯಕವಾಗಿರುವುದಿಲ್ಲ. ತಕ್ಷಣದ ನಷ್ಟ ಕಾಣಿಸಬಹುದು. ಭೂಮಿ ವ್ಯಾಪಾರ ಮಾಡುವುದು ಶ್ರೇಯಸ್ಕರವಲ್ಲ. ಕೃಷಿಕರಿಗೆ ಸ್ವಲ್ಪ ಹಿನ್ನಡೆಯಾದರೂ ಬೆಳೆದ ಬೆಳೆಗೆ ಉತ್ತಮ ಲಾಭದೊರೆಯುತ್ತದೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಹೆಚ್ಚು ಎಚ್ಚರವಾಗಿರಿ. ಗಣಿಗಾರಿಕೆ ನಡೆಸುವವರಿಗೆ ಹೆಚ್ಚು ವ್ಯವಹಾರವಿರುತ್ತದೆ. ಉದ್ಯೋಗ ಸ್ಥಳದಲ್ಲಿ ನಾಯಕರಾಗುವ ಅವಕಾಶಗಳು ಇರುತ್ತವೆ.

**ಸಿಂಹ** — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ವೃತ್ತಿಪರ ವ್ಯಾಸಂಗ ಮಾಡುವವರಿಗೆ ಹೆಚ್ಚಿನ ಅನುಕೂಲವಿರುತ್ತದೆ. ಸಾಮಾನ್ಯ ವಿದ್ಯಾರ್ಥಿಗಳಿಗೆ ಸ್ವಲ್ಪ ಒತ್ತಡಗಳು ಹೆಚ್ಚಾಗುವ ಸಾಧ್ಯತೆ ಇದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಸರ್ಕಾರಿ ಅಧಿಕಾರಿಗಳಿಗೆ ಬಡ್ತಿ ದೊರೆಯುವ ಸಂದರ್ಭಗಳಿವೆ. ಕೆಲವರಿಗೆ ದೂರಪ್ರದೇಶಗಳಿಗೆ ವರ್ಗಾವಣೆಯಾದರೂ ಹೆಚ್ಚಿನ ಹಣಕಾಸು ಅನುಕೂಲಗಳು ದೊರೆಯುತ್ತವೆ. ಹಿರಿಯರೊಂದಿಗೆ ಸಂಬಂಧವನ್ನು ಚೆನ್ನಾಗಿ ಇಟ್ಟುಕೊಳ್ಳಿ.

**ಕನ್ಯಾ** — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಆರಂಭದಲ್ಲಿ ನಿಮ್ಮ ಕೆಲಸ ಕಾರ್ಯಗಳು ವೇಗವಾಗಿ ನಡೆಯುತ್ತವೆ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಸಾಕುಪ್ರಾಣಿಗಳಿಂದ ತೊಂದರೆ ಬರಬಹುದು. ಹಂಗಾಮಿ ಉದ್ಯೋಗದಲ್ಲಿರುವವರು ಶ್ರದ್ಧೆಯಿಂದ ಕೆಲಸ ಮಾಡಿದಲ್ಲಿ ಉದ್ಯೋಗ ಕಾಯಂ ಆಗುವ ಸಾಧ್ಯತೆ ಇದೆ. ಆರೋಗ್ಯದಲ್ಲಿ ದಿಢೀರ್ ಸಮಸ್ಯೆಗಳು ಆಗುವ ಸಂದರ್ಭವಿದೆ. ಪಾಲುದಾರಿಕೆಯ ವ್ಯವಹಾರಗಳಿಂದ ಆದಾಯ ಬರುತ್ತದೆ.

**ತುಲಾ** — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ಮನಸ್ಸು ನಿಮ್ಮ ಹತೋಟಿಯಲ್ಲಿ ಇರುವುದಿಲ್ಲ. ಕೋಪತಾಪಗಳು ಹೆಚ್ಚಾಗಿ ಕಾಡುತ್ತವೆ. ಕೆಲಸ ಕಾರ್ಯಗಳು ಬಹಳ ನಿಧಾನವಾಗಿ ಮಾನಸಿಕ ಒತ್ತಡ ಹೆಚ್ಚುತ್ತದೆ. ಯಾವುದೇ ದ್ವಂದ್ವವಿಲ್ಲದೆ ಹೊಸ ಕಾರ್ಯಗಳನ್ನು ಆರಂಭಿಸಿದಾಗ ಉತ್ತಮ ಫಲ ಸಿಗುತ್ತದೆ. ಮನಸ್ಸಿನ ಒತ್ತಡದಿಂದ ರಕ್ತದ ಒತ್ತಡ ಅಥವಾ ಇತರೆ ನೋವುಗಳು ಕಾಣಿಸಬಹುದು. ಕುಲದೇವರ ಪ್ರಾರ್ಥನೆಯಿಂದ ಒಳಿತನ್ನು ಕಾಣಬಹುದು.

**ವೃಶ್ಚಿಕ** — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ಮಾಮೂಲಿಯ ಜೀವನ ನಡೆಯುತ್ತದೆ. ಆದಾಯವು ನಿರೀಕ್ಷೆಯಷ್ಟಿರುತ್ತದೆ. ಸ್ಥಿರಾಸ್ತಿ ಮಾಡುವ ವಿಚಾರದಲ್ಲಿ ನಿಧಾನ ಮಾಡಿರಿ. ವಿದ್ಯಾರ್ಥಿಗಳಿಗೆ ಉತ್ತಮವಾದ ವಾರ. ವಿದೇಶದಲ್ಲಿ ಓದಬೇಕೆನ್ನುತ್ತಿರುವವರಿಗೆ ಅವಕಾಶ ಮತ್ತು ಅನುಕೂಲಗಳು ದೊರೆಯುತ್ತವೆ. ವೃತ್ತಿಪರ ವ್ಯಾಸಂಗಕ್ಕೆ ಅನುಕೂಲತೆಗಳು ದೊರೆಯುತ್ತವೆ. ಕುಟುಂಬದಲ್ಲಿ ಹೊಂದಾಣಿಕೆಯನ್ನು ಮಾಡಿಕೊಳ್ಳುವುದು ಬಹಳ ಮುಖ್ಯ.

**ಧನುಸ್ಸು** — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಕಾರ್ಯಸಿದ್ಧಿಯಾಗುವ ಕಾಲ ಒದಗಿ ಬಂದಿದೆ. ನಿಮ್ಮ ಆಸೆಗಳು ಬಹುತೇಕ ಪೂರ್ಣಗೊಳ್ಳಬಹುದು. ಚುರುಕುತನದಿಂದ ಕೆಲಸ ಮಾಡುವುದು ನಿಮಗೆ ಒಳಿತು. ಇದರಿಂದ ಯಶಸ್ಸು ದೊರೆಯುತ್ತದೆ. ನಿಮ್ಮ ಸಮಯವನ್ನು ಸರಿಯಾಗಿ ಬಳಸಿಕೊಂಡಲ್ಲಿ ಆರ್ಥಿಕ ಸ್ಥಿತಿಯಲ್ಲಿ ಮೇಲೆರಬಹುದು. ಆದಾಯವು ಸಾಮಾನ್ಯವಾಗಿರುತ್ತದೆ. ಸಿದ್ಧ ಉಡುಪುಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ.

**ಮಕರ** — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಶ್ರಮಪಟ್ಟು ಮೇಲೆ ಬರುವಿರಿ. ನೀವು ನ್ಯಾಯವಾಗಿ ಮಾತನಾಡುವುದರಿಂದ ಶತ್ರುಗಳಷ್ಟೇ ಮಿತ್ರರೂ ಇರುವರು. ಆದಾಯವು ಸಾಮಾನ್ಯವಾಗಿದ್ದು ಅದರಲ್ಲೇ ನಿರ್ವಹಣೆ ಮಾಡುವಿರಿ. ನಿಮ್ಮ ಪರಾಕ್ರಮವನ್ನು ಕಂಡು ಶತ್ರುಗಳು ದಂಗಾಗುವರು. ಕೃಷಿಯಿಂದ ಆದಾಯ ಹೆಚ್ಚುತ್ತದೆ.

**ಕುಂಭ** — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಆದಾಯವು ಮಂದಗತಿಯಲ್ಲಿರುತ್ತದೆ. ವಿದೇಶದಲ್ಲಿರುವವರಿಗೆ ಆದಾಯ ಹೆಚ್ಚು ತ್ತದೆ. ವಿದೇಶಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಬಂಧುಗಳನ್ನು ಒಗ್ಗೂಡಿಸಲು ಹಿರಿಯರು ಶ್ರಮಪಡುವರು. ಬ್ಯಾಂಕಿಂಗ್ ಕ್ಷೇತ್ರದಲ್ಲಿರುವವರಿಗೆ ಅಭಿವೃದ್ಧಿ ಇರುತ್ತದೆ. ತಲೆ ನೋವು ಮತ್ತು ಗುಪ್ತ ರೋಗಗಳಿರುವವರು ಎಚ್ಚರ ವಹಿಸಿರಿ.

**ಮೀನ** — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ನಿಮ್ಮಲ್ಲಿ ದ್ವಿಮುಖ ನೀತಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿಯಿಂದ ಹೆಚ್ಚಿನ ಆದಾಯವಿರುತ್ತದೆ. ನಿಮ್ಮ ಉದ್ಯೋಗದ ಜಾಗದಲ್ಲಿ ಹಿರಿಯ ಅಧಿಕಾರಿಗಳನ್ನು ಓಲೈಕೆ ಮಾಡಿ ಮುನ್ನಡೆಯುವಿರಿ. ಕಬ್ಬಿಣದ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವಿರುತ್ತದೆ.

## ಪದಬಂಧ 2851



**ಮೇಲಿನಿಂದ ಕೆಳಕ್ಕೆ**
2. ಚಾತುರ್ವರ್ಣದಲ್ಲಿ ತೋಳ್ಬಲದ ಕುಲ 5
3. ಎಲ್ಲರೂ ಮನುವಿನಿಂದ ಹುಟ್ಟಿ ಅವನ ಜಾತಿಗೆ ಸೇರಿದವರಲ್ಲವೇ? 5
4. ಕೊಂಬೆಕೊಂಬೆಗೂ ಬೇರುಬಿಟ್ಟು ಆಶ್ರಯ ನೀಡುವ ಮಹಾ ವೃಕ್ಷ 5
5. ಇದು ಚಿಣ್ಣರ ಜಗತ್ತು 5
10. ವಂದನೆಗಳಿಗೆ ಪಾತ್ರನಾದವ 3
12. ರುಚಿಯಾಗಿರುವದನ್ನು ಕೊಡು ಎನ್ನುವ ಹುಡುಗಿ 3
14. ಗಿಲೀಟಿನ ಹೊಳಪು ಮತ್ತು ವಯ್ಯಾರದ ದೃಷ್ಟಿ 5
15. ಕಾವ್ಯಸೃಷ್ಟಿ ಮಾಡುವವನ ಊಹೆ 5
16. ರಾಜ ರಾಣಿಯರ ಮಲಗುವ ಕೋಣೆ 5
17. ಒಂದೇ ಸಮನೆ ಸಂಸ್ಕೃತದ ಸುಧೆ ಸುರಿಯುವ ಭೋಜರಾಜನ ಪಟ್ಟಣ 5

**ಎಡದಿಂದ ಬಲಕ್ಕೆ**
1.'ಅ' ಯಿಂದ 'ಕ್ಷ' ವರೆಗೆ ಅವಿನಾಶಿಯಾದ ಭಾಷೆಯ ಹೆಸರಲ್ಲೊಂದು ಸ್ವಾಮಿನಾರಾಯಣನ ಪುಣ್ಯಕ್ಷೇತ್ರ 5
4. ಮೈಸೂರು ದಸರಾದ ಜಂಬೂ ಸವಾರಿಯ ಗಜ ಮತ್ತು ಅದು ಹೊರುವ ಅಲಂಕೃತ ಪಟ್ಟ 5
6. ಪರಿವ್ರಾಜಕಾಚಾರ್ಯರುಗಳ ದೊರೆ 4
7. ಪಕ್ಷದ ಮೊದಲ ದಿನ ಮತ್ತು ವಾಕ್ಯದಲ್ಲಿ ವಿಂಗಡಿಸಿದ ಒಂದೊಂದು ಭಾಗ ಹಿಂದುಮುಂದಾಗಿದೆ 4
8. ಎರಡನೇ ಅಷ್ಟಸಿದ್ಧಿ ಪವಾಡ ಸದೃಶ 3
9. ಆರೋಗ್ಯ ಭಾಗ್ಯದಿಂದ ಕ್ಷೇಮದಿಂದಿರುವವ 5
11. ದ್ರವವನ್ನೆಲ್ಲಾ ಒಟ್ಟುಗೂಡಿಸಿ ಶೇಖರಿಸಿದ್ದು 5
13. ಒಳ್ಳೆಯದನ್ನು ಯೋಚಿಸುವವ 5
16. ಪೃಚ್ಛಕನ ನೂರು ಪ್ರಶ್ನೆಗಳನ್ನು ಸಂಸ್ಕೃತದಲ್ಲಿ ಉತ್ತರಿಸುವ ಕಲೆ 5
18. ಬೀಳ್ಕೊಡುವ ಕೊನೆಯಲ್ಲಿ ಆದಾಯದ ಪಾಲುಯಿದೆ 3
19. ದೊಡ್ಡ ಮನೆತನವನ್ನು ಕೊನೆಗಾಣಿಸುವವ 4
20. ಹತ್ತು ಕೊಡುಗೆಗಳಲ್ಲಿ ಒಂದು ಕಡಿಮೆ 4
21. ಸಾಸಿವೆ ಎಣ್ಣೆಗೆ ಹಾಕಿದಾಗ ಸಿಡಿಯುವ ಶಬ್ಧವನ್ನು ಹೇಗೆ ಹೇಳುವಿರಿ? 5
22. ಕಾವ್ಯದಲ್ಲಿ ವಿಷ್ಣು ಮಹೇಶ್ವರರು ಇಬ್ಬರೂ ಸೇರಿದಂತೆ 5

## ಪದಬಂಧ ಉತ್ತರ -2850

**ಮೇಲಿಂದ ಕೆಳಕ್ಕೆ**
1. ಸಚ್ಚರಿತ 2.ತಿಳಿಸಾರು 3.ತನುಮನ 4.ಸ್ಥಳಾಂತರ 5.ಚಿಂತಾಕ್ರಾಂತ 8.ಕಡುಬು 10.ಗಾವುದ 12.ಗದರು 14.ಭಾವುಕ 15.ನಳಪಾಕ 16. ಚಾಟಿಬೀಸು 17.ತಡಕಾಡು 18.ಮರಿದಾಸ 19.ವಿನಾಯಿತಿ

**ಎಡದಿಂದ ಬಲಕ್ಕೆ**
1. ಸರಸ್ವತಿ 3.ತಪ್ಪಿತಸ್ಥ 5.ಚಿಂಗಾರಿ 6.ಸಾನಮ 7.ತಕರಾರು 9.ನಗೆಗಾರ 11.ತಗಡುಬುದ್ಧಿ 13.ಸಭಾಸದನ 16.ಚಾರುಲತ 18. ಮಹಾಕವಿ 20.ಡಬರಿ 21.ನಾಟಕ 22.ಸುಡುಗಾಡು 23.ಸತ್ಯವತಿ

# ಕಾಶ್ಮೀರ ಕಣಿವೆಯ ವಿಲ್ಲೊ ಕ್ರಿಕೆಟ್ ಬ್ಯಾಟ್‌ಗಳು

ಕ್ರಿಕೆಟ್ ಬ್ಯಾಟ್ ಕಾರ್ಖಾನೆ

ಬಿ.ಎನ್. ಮುರಳಿ ಪ್ರಸಾದ್

ಭಾರತದ ಮುಕುಟ ಪ್ರಾಯವಾಗಿರುವ ಕಾಶ್ಮೀರ ಕಣಿವೆಯಲ್ಲಿ ಅಶಾಂತಿಯ ಕಾರ್ಮೋಡ ಸರಿದು ಬೆಚ್ಚನೆ ವಾತಾವರಣ ನೆಲೆಗೊಳ್ಳುತ್ತಿದೆ. ಹಾಗೆಯೇ ಸೇಬು ಮತ್ತು ಹಿಮಚ್ಛಾದಿತ ವಾತಾವರಣಕ್ಕೆ ಹೆಸರುವಾಸಿಯಾಗಿರುವ ವಾದಿ (ಕಣಿವೆ)ಯಲ್ಲಿ ಪ್ರವಾಸೋದ್ಯಮವೂ ಗರಿಗೆದರುತ್ತಿದೆ. ಇದಕ್ಕೆ ರಾಜಧಾನಿ ಸೇರಿದಂತೆ ಪ್ರಮುಖ ತಾಣಗಳು ಪ್ರವಾಸಿಗಳಿಂದ ತುಂಬಿತುಳುಕುತ್ತಿರುವುದೇ ಸಾಕ್ಷಿ. ಹೀಗೆ ಶಾಂತಿ-ಸುವ್ಯವಸ್ಥೆಯ ತಣ್ಣನೆ ಗಾಳಿಗೆ ತೆರೆದುಕೊಂಡಿರುವ ಕಣಿವೆ ರಾಜ್ಯವು ತನ್ನಲ್ಲಿನ ವಿಶೇಷತೆಗಳೊಂದಿಗೆ ಹಲವು ಉತ್ಪನ್ನಗಳ ತಯಾರಿಕೆ, ವ್ಯಾಪಾರ, ಉದ್ಯಮದ ಮೂಲಕ ಹೆಸರುವಾಸಿಯಾಗುತ್ತಿದೆ. ಇದಕ್ಕೆ ಉತ್ತಮ ನಿದರ್ಶನ ವಿಲ್ಲೊ ಕ್ರಿಕೆಟ್ ಬ್ಯಾಟ್ ತಯಾರಿಕೆ.

ಕಾಶ್ಮೀರದ ರಾಜಧಾನಿ ಶ್ರೀನಗರದ ನೆರೆಯ ಜಿಲ್ಲೆ ಪುಲ್ವಾಮಾ. ಪುಲ್ವಾಮಾ ಎಂದೊಡನೆ ಭಾರತೀಯ ಸೇನೆ ಮೇಲೆ ಉಗ್ರರು ನಡೆಸಿದ್ದ ದಾಳಿ ನೆನಪಿಗೆ ಬರುವುದು ಸಹಜ. ಆದರೆ ಇದೇ ಪುಲ್ವಾಮಾದಲ್ಲಿರುವ ಪಾಮ್ ಪೋರ್ ಕೇಸರಿ ಬೆಳೆ ಖ್ಯಾತಿ ಗಳಿಸಿದೆ. ಇಲ್ಲಿನ ಗುಣಮಟ್ಟದ ಕೇಸರಿಗೆ ವಿಶ್ವದಾದ್ಯಂತ ವಿಶೇಷ ಸ್ಥಾನಮಾನವಿದೆ. ಆದರೆ, ಇದೇ ಪ್ರದೇಶದಲ್ಲಿ ತಯಾರಾಗುವ ಕ್ರಿಕೆಟ್ ಬ್ಯಾಟ್ ಇದೀಗ ಹೆಸರು ಗಳಿಸಿದೆ.

ಕ್ರಿಕೆಟ್ ಬ್ಯಾಟ್ ತಯಾರಿಸುತ್ತಿರುವುದು

ಶ್ರೀನಗರದಿಂದ ಜಮ್ಮುವಿಗೆ ತೆರಳುವ ಮಾರ್ಗದಲ್ಲಿ ಪುಲ್ವಾಮಾ ಮೂಲಕ ಸಾಗುವ ವೇಳೆ ಹೆದ್ದಾರಿ ಆಜುಬಾಜಿನಲ್ಲಿ ಕ್ರಿಕೆಟ್ ಬ್ಯಾಟ್ ತಯಾರಿಸುವ ಹತ್ತಾರು ಕಾರ್ಖಾನೆಗಳು ಸಿಗುತ್ತವೆ. ಕ್ರಿಕೆಟ್ ಬ್ಯಾಟ್ ಅನ್ನು ದೇಶದ ಯಾವ ಭಾಗದಲ್ಲೂ ತಯಾರಿಸಬಹುದಾದರೂ ಇಲ್ಲಿ ದೊರಕುವ ವಿಲ್ಲೊಮರದ ಕ್ರಿಕೆಟ್ ಬ್ಯಾಟ್‌ಗಳು ಪ್ರತ್ಯೇಕ ಮಾರುಕಟ್ಟೆಯನ್ನೇ ಸೃಷ್ಟಿಸಿವೆ.

## ಏನಿದು ವಿಲ್ಲೊ ಬ್ಯಾಟ್?

ಕಣಿವೆ ಹಿಮಚ್ಛಾದಿತ ಪ್ರದೇಶಗಳಲ್ಲಿ ಬೆಳೆಯುವ ವಿಲ್ಲೊಮರಗಳೇ ಈ ಕ್ರಿಕೆಟ್ ಬ್ಯಾಟ್‌ಗಳ ಜೀವಾಳ. ಪುಲ್ವಾಮಾ ಜಿಲ್ಲೆಯಲ್ಲಿ ಸುಮಾರು 30 ರಿಂದ 40 ವರ್ಷಗಳ ಅವಧಿಯಲ್ಲಿ ಬೆಳೆದಿರುವ ಕಾಶ್ಮೀರಿ ವಿಲ್ಲೊಮರಗಳಿಂದ ಈ ಬ್ಯಾಟುಗಳನ್ನು ಸಿದ್ಧಪಡಿಸಲಾಗುತ್ತದೆ. ಈ ಪ್ರದೇಶದಲ್ಲಿ ಒಟ್ಟಾರೆ 105ಕ್ಕೂ ಅಧಿಕ ಬ್ಯಾಟ್ ಮಾರಾಟ ಮಾಡುವ ಮಳಿಗೆಗಳು ಸಿಗುತ್ತವೆ.

ಕಾಶ್ಮೀರಿ ವಿಲ್ಲೊಮರದಿಂದ ಮಾಡುವ ಈ ಬ್ಯಾಟ್‌ಗಳು ಹಗುರವಾಗಿ ಇರುತ್ತವೆ. ಆದರೂ ಕಾರ್ಕ್ ಚೆಂಡನ್ನೂ ತಡೆಯುವಷ್ಟು ಬಲಿಷ್ಠವಾಗಿರುವ ಜತೆಗೆ ಬ್ಯಾಟ್‌ನ ಉಬ್ಬುತಗ್ಗಿನ ಆಕಾರವನ್ನೂ ಸುಲಭದಲ್ಲಿ ನೀಡಬಹುದು.

‘ವಿಲ್ಲೊ ಬ್ಯಾಟ್‌ಗಳಿಗೆ ಬೇಡಿಕೆ ಹೆಚ್ಚುತ್ತಿದ್ದು, ದೊಡ್ಡ ಪ್ರಮಾಣದಲ್ಲಿ ಆರ್ಡರ್ ಬಂದ ಸಂದರ್ಭದಲ್ಲಿ ತ್ವರಿತವಾಗಿ ಬ್ಯಾಟುಗಳ ತಯಾರಿಕೆಗೆ ನುರಿತ ಕಾರ್ಮಿಕರ ಕೊರತೆ ಕಾಡುತ್ತದೆ’ ಎಂದು ಉದ್ಯಮಿ ಶಾಹೀನ್ ಹೇಳುತ್ತಾರೆ.

## ನಕಲಿ ಬ್ಯಾಟ್‌ಗಳ ಹಾವಳಿ

ಕಾಶ್ಮೀರಿ ವಿಲ್ಲೊ ಹೆಸರಿನ ನಕಲಿ ಬ್ಯಾಟ್‌ಗಳು ದೇಶದಾದ್ಯಂತ ಸಿಗುತ್ತವೆ. ಆದರೆ, ಆಟಗಾರರಿಗೆ ಅಸಲಿ-ನಕಲಿಯ ಅರಿವು ಇರುತ್ತದೆ. ಈ ಮೊದಲು ಇಂಗ್ಲೆಂಡ್‌ನಿಂದ ಬರುತ್ತಿದ್ದ ಇಂಗ್ಲಿಷ್ ವಿಲ್ಲೊ ಮರಗಳಿಂದ ಮಾಡಿದ್ದ ಬ್ಯಾಟ್‌ಗಳು ಮಾತ್ರ ಸಿಗುತ್ತಿದ್ದವು. ಆದರೆ, 2019ರ ನಂತರ ಕಾಶ್ಮೀರದ ಪರಿಸ್ಥಿತಿಯಲ್ಲಿ ಸಾಕಷ್ಟು ಬದಲಾವಣೆ ಆಗಿದೆ ಎನ್ನುವ ಶಾಹೀನ್, ಇದರಿಂದಾಗಿ ಇಲ್ಲಿನ ಬ್ಯಾಟ್‌ಗಳಿಗೂ ಬೇಡಿಕೆ ಹೆಚ್ಚಿದ್ದು, ಮಾರುಕಟ್ಟೆಯೂ ಉತ್ತಮವಾಗಿದೆ ಎನ್ನುತ್ತಾರೆ.

ಈ ಮೊದಲು ಕಾಶ್ಮೀರಿ ವಿಲ್ಲೊ ಬ್ಯಾಟ್‌ಗಳನ್ನು ದೊಡ್ಡಮಟ್ಟದಲ್ಲಿ ಖರೀದಿಸುತ್ತಿದ್ದ ದೇಶದ ಇತರೆ ಭಾಗದ ವ್ಯಾಪಾರಿಗಳು ತಮ್ಮ ಬ್ರ್ಯಾಂಡ್ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದರು. ಆದರೆ, ಈಗ ಹಾಗಾಗುತ್ತಿಲ್ಲ. ಕಾಶ್ಮೀರಿ ವಿಲ್ಲೊ ಬ್ಯಾಟ್‌ಗಳಿಗೆ ಇಲ್ಲಿನ ಬ್ರ್ಯಾಂಡಿಂಗ್ ನಂತರವೇ ಇತರೆಡೆಗಳಿಗೆ ಕಳುಹಿಸಲಾಗುತ್ತಿದೆ.

ಕಾಶ್ಮೀರಿ ವಿಲ್ಲೊಮರದ ಈ ಬ್ಯಾಟ್‌ಗಳಿಗೆ ಕೀಟಬಾಧೆ ಇದೆ. ಇದಕ್ಕಾಗಿಯೇ ಕೀಟದಿಂದ ಬ್ಯಾಟ್ ಅನ್ನು ಮುಕ್ತವಾಗಿಸುವ ಸಲುವಾಗಿ ವಿವಿಧ ಹಂತಗಳಲ್ಲಿ ಔಷಧ ಸಿಂಪಡಣೆ ಮಾಡಲಾಗುತ್ತದೆ.

₹300 ರಿಂದ ₹4000 ವರೆಗಿನ ವಿಲ್ಲೊ ಬ್ಯಾಟ್‌ಗಳು ಲಭ್ಯವಿದ್ದು, ಆನ್‌ಲೈನ್ ಮೂಲಕವೂ ತರಿಸಿಕೊಳ್ಳುವ ವ್ಯವಸ್ಥೆ ಇದೆ. ದಿನೇ ದಿನೇ ಬ್ಯಾಟ್‌ಗಳಿಗೆ ಬೇಡಿಕೆ ಹೆಚ್ಚುತ್ತಿರುವುದರಿಂದ ಪುಲ್ವಾಮಾ ಜಿಲ್ಲೆಯಲ್ಲಿ ನೂರಾರು ಕುಟುಂಬಗಳು ಈ ಉದ್ದಿಮೆಯನ್ನು ಅವಲಂಬಿಸಿ ಬದುಕುತ್ತಿವೆ.

ಒಂದು ಬ್ಯಾಟ್ ತಯಾರಿಸಲು ಕನಿಷ್ಠ 18 ಮಂದಿ ಕಾರ್ಮಿಕರ ಶ್ರಮ ಅಡಗಿದ್ದು, ವಾರ್ಷಿಕ ಸುಮಾರು 60 ಸಾವಿರ ಬ್ಯಾಟ್‌ಗಳನ್ನು ತಯಾರು ಮಾಡಲಾಗುತ್ತದೆ. ಒಟ್ಟಾರೆ ಕಾಶ್ಮೀರ ಕಣಿವೆ ಇದೀಗ ಸೇಬು ಮತ್ತು ಕೇಸರಿ ಜತೆಗೆ ಕಾಶ್ಮೀರಿ ವಿಲ್ಲೊ ಬ್ಯಾಟ್‌ಗಳಿಗೂ ಪ್ರಖ್ಯಾತಿ ಪಡೆಯುತ್ತಿದ್ದು, ಈ ಉತ್ಪನ್ನ ಕಾಶ್ಮೀರದ ಹಿರಿಮೆಗೆ ಮತ್ತೊಂದು ಗರಿ ಇರಿಸಿದೆ.

‘ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಭೇಟಿ ನೀಡಿ ಬ್ಯಾಟ್‌ಗಳು ಸಿದ್ಧವಾಗುವ ಪ್ರಕ್ರಿಯೆಯನ್ನು ವೀಕ್ಷಿಸಿದ ನಂತರ ಕಾಶ್ಮೀರಿ ವಿಲ್ಲೊ ಬ್ಯಾಟ್‌ಗಳ ಅದೃಷ್ಟವೇ ಬದಲಾಗಿದೆ. ನಮ್ಮ ಬ್ಯಾಟುಗಳಿಗೆ ಭರ್ಜರಿ ಮಾರುಕಟ್ಟೆ ನಿರ್ಮಾಣವಾಗಿದ್ದು, ಇದೀಗ ಇಲ್ಲಿನ ಬ್ಯಾಟ್‌ಗಳು ಭಾರತ ಮಾತ್ರವಲ್ಲದೇ ವಿದೇಶಗಳಿಗೂ ರಫ್ತಾಗುತ್ತಿವೆ’ ಎನ್ನುತ್ತಾರೆ ಇಲ್ಲಿನ ಪ್ರಖ್ಯಾತ ಬ್ಯಾಟ್ ಉತ್ಪಾದಕ ಎಂ.ಜೆ.ಎಸ್.ನ ಶಾಹೀನ್.

ದೇಶದಲ್ಲಿ ಕಾಶ್ಮೀರಿ ಸೇಬು, ಕಾಶ್ಮೀರಿ ಕೇಸರಿ ಎನ್ನುವಂತೆಯೇ ಈಗ ಕಾಶ್ಮೀರಿ ವಿಲ್ಲೊ ಕ್ರಿಕೆಟ್ ಬ್ಯಾಟ್ ಎನ್ನುವುದು ಹೊಸ ಸೇರ್ಪಡೆ. ಇದು ಕಾಶ್ಮೀರಕ್ಕೆ ಮೊತ್ತೊಂದು ಗರಿ.

## ಕಥೆ

ಎಂ.ವಿ. ಶಶಿಭೂಷಣ ರಾಜು
ಅವರ
**ಅಂಬೇಡ್ಕರ್ ಫೋಟೋ ಮತ್ತು ಸಂವಿಧಾನ**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

## ಕವನ

ದಾದಾಪೀರ್ ನವಿಲೇಹಾಳ್
ಅವರ
**ಆಶಯ**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

## ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

## ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

### ಭಾವವಿದ್ಯುಚ್ಛಕ್ತಿ

ವಿದ್ಯುಚ್ಛಕ್ತಿ (ನಾ). ವಿದ್ಯುತ್ತಿನಿಂದ ಉಂಟಾಗುವ ಶಕ್ತಿ; ಎಲೆಕ್ಟ್ರಿಸಿಟಿ.

ಕುವೆಂಪು ಅವರು ತನ್ನ ಪ್ರಿಯ ಸತಿಯು- ತನ್ನಲ್ಲಿ ಪ್ರತಿಭೆ ಹೊಮ್ಮಿ ಬೆಳಕಿನಂತೆ ಅಂತಃಚೈತನ್ಯ ಶಕ್ತಿ ಹೊಳೆಯಲು ಕಾರಣವಾದ ವಿದ್ಯುಚ್ಛಕ್ತಿ ಎಂದು ತಿಳಿದಿದ್ದರು. ಹಾಗಾಗಿ ಅವರು ಆ ಸತಿಯನ್ನು ‘ಭಾವ ವಿದ್ಯುಚ್ಛಕ್ತಿ’ ರೂಪಕದಲ್ಲಿ ಬಣ್ಣಿಸಿದರು.

‘ದೇವಿ, ಪ್ರತಿಭೆಗೆ ನೀನೆ
ಭಾವವಿದ್ಯುಚ್ಛಕ್ತಿ;
ಕಲೆಗೆ ವಿದ್ಯಾಶಕ್ತಿ; ಪ್ರಾಣಕ್ಕೆ
ಪ್ರೇಮಶಕ್ತಿ’ (ಪ್ರಿಯಸತಿಗೆ – ಜೇನಾಗುವಾ)

### ಪುಷ್ಪಾಕ್ಷರ

ಕಾಡಿನ ಕವಿಯಾದ ಕುವೆಂಪು ಅವರು ಮಲೆನಾಡಿನ ನಿಸರ್ಗದ ಎಳೆ ಎಳೆಯನ್ನು ಬಣ್ಣಿಸಿರುವರು. ಅವರು ಸುಗ್ಗಿಯ ಕಾಲದಲ್ಲಿ ಹಸುರಿನಿಂದ ತುಂಬಿ ಕಂಗೊಳಿಸುವ ಬನವನ್ನು ಓಲೆಯಾಗಿ ಕಂಡು, ಅದರಲ್ಲಿ ಕಂಪು ಸೂಸಿ ನಳನಳಿಸುವ ಹೂಗಳನ್ನು ‘ಪುಷ್ಪಾಕ್ಷರ’ವಾಗಿ ಕಂಡಿದ್ದಾರೆ. ಪುಷ್ಪಗಳನ್ನು ಅಕ್ಷರವೆಂದು ಭಾವಿಸಿ ‘ಪುಷ್ಪಾಕ್ಷರ’ ಪದ ರಚಿಸಿದ್ದಾರೆ. ಅವರಿಗೆ ಅಕ್ಷರಗಳು ಹೂವಿನಂತೆ ಕೋಮಲ ಸುಂದರ ಭಾವ ಮೂಲಗಳು. ಅವು ಜೋಡಿಸಿ ಬರೆಯುವ ಶ್ರೇಷ್ಠವಾದ ಪರಮತತ್ವದ ಸಂದೇಶವನ್ನು ಅರಿಯುತ್ತೇನೆ, ಪ್ರಕೃತಿಯ ಆಂತರ್ಯದ ಪ್ರಕಾಶ ವೇದಾಂತ ಎಂದು ತಿಳಿಸಿದ್ದಾರೆ.

**ಸುಗ್ಗಿಯ ಬನಗಳ ಓಲೆಯ ಮೇಲೆ**
**ಪುಷ್ಪಾಕ್ಷರಗಳ ಜೋಡಿಸಿ ಬರೆಯುವ**
**ಪರ ಸಂದೇಶವನರಿಯುವೆಯೇನೈ?**
**ವೇದಾಂತವು ಅಲ್ಲಿರದೇನೈ?**

### ಬಾಳ್ಬಂಡೆ

ಬಾಳ್ಬಂಡೆ (ನಾ), ಬಾಳಿನ ಬಂಡೆ (ಬಾಳ್ + ಬಂಡೆ)

ರಾಮಚಂದ್ರನು ಋಷ್ಯಮೂಕ ಪರ್ವತವನ್ನು ನೋಡುತ್ತ, ತನಗೆ ಅಲ್ಲಿ ಬಾಳ್ಗೆಳೆಯನು ದೊರಕುವನೆಂದು ಲಕ್ಷ್ಮಣನಿಗೆ ಹೇಳುತ್ತಾನೆ. ಬಂಡೆಯನ್ನು ತದೇಕಚಿತ್ತದಿಂದ ನೋಡುತ್ತ, ‘ಕಂಡೆ ಕಂಡೆನೋ ಕಂಡೆ! ಬಂಡೆಯ ರೀತಿಯಲ್ಲಿ ಹೀಗೆ ಶಿಲೆಯಲ್ಲಿ ಕಡೆದಂತೆ ಕಂಡ ಮಾತ್ರದಿಂದಲೆ ನನಗೆ ಕುರುಡೆ? ಏಳು, ಗೆಳೆಯನೆ ಏಳು; ತಾಳು ನಿಜರೂಪವನ್ನು ತಾಳು. ಬಾಳ್ಬಂಡೆಯನ್ನು ಸೀಳಿ ಒಡೆದು ಚಿಲುಮೆಯುಕ್ಕುವಂತೆ ಮೂಡಿ ಕಣ್ಮುಂದೆ ನಿಲ್ಲು. ಈ ಕಲ್ಲುತನದ ವೇಷವನ್ನು ಕಿತ್ತೆಸೆದು ಬಾ!’ ಎಂದು ಅಪರಿಚಿತನನ್ನು ಆಹ್ವಾನಿಸುತ್ತಾನೆ.

ಕುವೆಂಪು ಅವರು ಆ ಸಂದರ್ಭದಲ್ಲಿ ‘ಬಾಳ್ಬಂಡೆ’ ಎಂಬ ಮಾತಿನಿಂದ ಅಚೇತನದಲ್ಲಿರುವ ಚೇತನವನ್ನು ದರ್ಶಿಸಿದ್ದಾರೆ.

**ಸೀಳು, ಒಡೆ, ಬಾಳ್ಬಂಡೆಯಂ; ಬುಗ್ಗೆಯುಕ್ಕು ವೋಲ್**
**ಮೂಡಿ ನಿಲ್ ಕಣ್ಮುಂದೆ, ಕಿಳ್ತೆಸೆದು ಕಲ್ತನದ**
**ಈ ವೇಷಮಂ!**

# ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



## ಡಣ್ಣ ಚಕ್ಕು ಕೇಳ್ರಪ್ಪ ಕಥೆಯ — ಗುಂಡನ ಕಳ್ಳಾಟ!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಮನೆಯ ಹಿತ್ತಲಲ್ಲಿ ಗುಂಡ ಬಿಲ್ಲು ಬಾಣ ಆಟ ಆಡುತ್ತಿದ್ದ. ಎಷ್ಟೇ ಪ್ರಯತ್ನಿಸಿದರೂ ಬಾಣವು ಗುರಿಯ ಮಧ್ಯಭಾಗಕ್ಕೆ ತಾಗುತ್ತಿರಲಿಲ್ಲ. ಕೆಲ ಕ್ಷಣ ಯೋಚಿಸಿದ ಗುಂಡ, ವೃತ್ತಾಕಾರದಲ್ಲಿದ್ದ ಗುರಿಯ ಕಾಗದವನ್ನು ಕಿತ್ತು ತಂದು. ಬಾಣವನ್ನು ಗುರಿಯ ಮಧ್ಯಭಾಗಕ್ಕೆ ಅಂಟಿಸಿ, ಬಾಣವನ್ನು ಎಳೆದು ಮರದ ಕಡೆಗೆ ಗುರಿಯಿರಿಸಿ ಹೊಡೆದ. ಬಾಣವು ನೇರವಾಗಿ ಮರಕ್ಕೆ ತಗುಲಿತು. ನೋಡಿದವರಿಗೆಲ್ಲ ಬಾಣವು ನೇರವಾಗಿ ಗುರಿಯ ಮಧ್ಯಭಾಗಕ್ಕೆ ಹೊಡೆದಿದೆ ಎಂದೆನಿಸಿತು. ಹೀಗೆ ಮಾಡಿದ ಗುಂಡ ಕಳ್ಳನೋಟ ಬೀರಿದ.




## ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ

**ಅಕ್ಷರ ಪಟ್ಟಿ**

| | | | |
|---|---|---|---|
| ಹ | ಕೊ | ಬ | ಬೇ |
| ತ | ಸು | ನೀ | ಬೆ |
| ಸ | ಕೊ | ಸ | ಬ |

1.
| | | |
|---|---|---|
| | ರ | ಡು |
| | ರ | ಡು |

2.
| | | |
|---|---|---|
| | ರ | ಳು |
| | ರ | ಳು |

3.
| | | |
|---|---|---|
| | ಡಿ | ಕೆ |
| | ಡಿ | ಕೆ |

4.
| | | |
|---|---|---|
| | ಗ | ಣಿ |
| | ಗ | ಣಿ |

5.
| | | |
|---|---|---|
| | ಲಿ | ಗೆ |
| | ಲಿ | ಗೆ |

6.
| | | |
|---|---|---|
| | ಗ | ಉ |
| | ಗ | ಉ |

## ಜಾಣಪದ ಆಟ

ಇಲ್ಲಿ ಕೊಟ್ಟಿರುವ ಚಿತ್ರಗಳಿಗೆ ಸೂಕ್ತವಾದ ಅಕ್ಷರ ಸೇರಿಸಿ ಕೂಡಿಸಿ ಓದಿ ಅರ್ಥಬದ್ಧ ಪದ ಮಾಡಿ

| | | | |
|---|---|---|---|
| 1 |  | A | ತ |
| 2 | | B | ಷ |
| 3 | | C | ಡಿ |
| 4 | | D | ವೆ |
| 5 | | E | ರು |
| 6 | | F | ಣ |
| 7 |  | G | ಳ |
| 8 |  | H | ವಿ |
| 9 | | I | ದ |
| 10 | | J | ಗ |

## ಮೋಜಿನ ENGLISH

### ‘N’JOY WORDS

‘N’ ಅಕ್ಷರದಿಂದ ಪ್ರಾರಂಭವಾಗುವ ನಾಲ್ಕಕ್ಷರದ ಪದ ಬರೆಯಿರಿ

| | | | | |
|---|---|---|---|---|
| 1 | N | | | |
| 2 | N | | | |
| 3 | N | | | |
| 4 | N | | | |
| 5 | N | | | |
| 6 | N | | | |
| 7 | N | | | |
| 8 | N | | | |
| 9 | N | | | |
| 10 | N | | | |

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಕಳೆದ ಸಂಚಿಕೆಯ ಸರಿ ಉತ್ತರಗಳು

**ಪ್ರಾಸಪದಬಂಧ:** 1.ಸಮ್ಮತ–ಒಮ್ಮತ 2.ಅದಿರು–ಬಿದಿರು 3.ಕುದುರು–ಉದುರು 4.ನೆನಕೆ–ಒನಕೆ 5.ಸಿಡಿತ–ಮಿಡಿತ 6.ಒಡತಿ–ಹೆಂಡತಿ

**ಜಾಣಪದ ಆಟ:** 1.ಕರಡಿಕುಣಿತ 2.ಸಕಲಸಿದ್ಧತೆ 3.ಗಣಿತವಿಜ್ಞಾನ 4.ಸರಳಜೀವನ 5.ಅವಳಿನಗರ 6.ಹುಬ್ಬಳ್ಳಿಶಹರ 7.ವಚನಸಂಪುಟ 8.ಆದಾಯತೆರಿಗೆ 9.ಜನರಜೀವನ 10.ಶೀತಲಸಮರ

**ಪದಶೋಧ:** ಗಂಗೂಬಾಯಿ ಹಾನಗಲ್ಲ

**ಮೋಜಿನ ಇಂಗ್ಲಿಷ್:** Task, Talk, Time, Tale, Tail, Tent, Team, Text, Tick, This, That, Teak, Tear, Tell, Take, Tour, Than, Tube, Till, Test

## ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

## ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ನವಮಿ ಟಿ.ವಿ.
ಕಾರಿಗನೂರು

ಸಾಹಿತ್ಯ ಎಸ್. ಶೇಖರ್
ಮೈಸೂರು

ಮನೋಜ್
ಗಬ್ಬೂರು

ಯಶಿಕಾ ಸಿ.
ಬೆಂಗಳೂರು

ಪೃಥ್ವಿ ಬ. ನಗದೋಡಿ
ಬೆಳಗಾವಿ

ನಿತಿನ್ ರೆಡ್ಡಿ
ಬೆಂಗಳೂರು

# ಕೆನಡಾ ಪ್ರವಾಸ ಡೈರಿಯ ಪುಟಗಳಿಂದ...

ಎಸ್.ಎಂ. ಜಂಬುಕೇಶ್ವರ

ಕೆನಡಾ ಕಣ್ಮನಗಳನ್ನು ಆವರಿಸಿಕೊಳ್ಳುವ ದೇಶ. ಅಲ್ಲಿನ ಪ್ರಕೃತಿ ಸೌಂದರ್ಯ, ಪಾರಂಪರಿಕ ತಾಣಗಳು, ಕಟ್ಟಡಗಳು, ನದಿಗಳು, ವಿಶ್ವ ಪ್ರಸಿದ್ಧ ನಯಾಗರ ಜಲಪಾತ, ಜನಜೀವನ ಎಲ್ಲವೂ ಆಕರ್ಷಕ. ಕುತೂಹಲ ಹೊಂದಿರುವ ಪ್ರವಾಸಿಗರಿಗೆ ಈ ದೇಶ ಹೇಳಿ ಮಾಡಿಸಿದಂತಿದೆ.

ಕೆನಡಾ ದೇಶದ ಹತ್ತಾರು ಸ್ಥಳಗಳನ್ನು ನಮಗೆ ತೋರಿಸಬೇಕೆಂದು ಅಮೆರಿಕದಲ್ಲಿರುವ ಮಗನ ಆಸೆಯಾಗಿತ್ತು. ಅಲ್ಲಿನ ಸ್ಥಳಗಳ ಕುರಿತು ಕೇಳಿದಾಗ, ಓದಿದಾಗ ಕುತೂಹಲ ಹೆಚ್ಚಾಗುತ್ತಲೇ ಇತ್ತು. ಈ ಕಾರಣಕ್ಕಾಗಿಯೇ ಮೊದಲೇ ಪತ್ನಿಯೊಡನೆ ಪ್ರವಾಸಕ್ಕೆ ಸಿದ್ಧತೆ ಮಾಡಿಕೊಂಡಿದ್ದೆ. ಮಗ, ಸೊಸೆಯಿದ್ದ ಹಿಲ್ಸ್‌ಬರೊದಿಂದ ಕಾರಿನಲ್ಲಿ ಸುಮಾರು 850 ಕಿ.ಮೀ. ದೂರದ ಕೆನಡಾದ ಗಡಿಯಲ್ಲಿರುವ ಆಂಟಾರಿಯೊ ತಲುಪಿದೆವು. ಅಲ್ಲಿಂದ ನಮ್ಮ ಕೆನಡಾ ಪ್ರವಾಸ ಶುರುವಾಯಿತು.

ಆಂಟಾರಿಯೊ ನಗರದ ಅಂಚಿನಲ್ಲಿ ವಿಶಾಲವಾಗಿ ಹರಿಯುತ್ತಿದ್ದ ಸೇಂಟ್ ಲಾರೆನ್ಸ್ ನದಿ ದಂಡೆಗೆ ತಿರುಗಾಡಿಕೊಂಡು ಬರಲು ಹೊರಟೆವು. ನಯಾಗರದಿಂದ ಹರಿದು ಬರುವ ಈ ನದಿಯಲ್ಲಿ ದೋಣಿಗಳು ಸಾಗುವ ದೃಶ್ಯ, ಹಾರಾಡುತ್ತಿದ್ದ ಹಕ್ಕಿಗಳು, ಸಂಜೆಯಾದ್ದರಿಂದ ಆಕಾಶದಲ್ಲಿ ವಿವಿಧ ಬಣ್ಣಗಳಲ್ಲಿ ಕಾಣುತ್ತಿದ್ದ ಮೋಡಗಳನ್ನು ಕಣ್ತುಂಬಿಕೊಂಡು ಹತ್ತಿರದಲ್ಲಿಯೇ ಇದ್ದ ಬ್ರೋಕ್ ವಿಲ್ಲೆ ರೈಲು ಸುರಂಗಮಾರ್ಗ ವೀಕ್ಷಿಸಲು ಹೋದೆವು. ಈ ಸುಂದರ ಸುರಂಗ ಮಾರ್ಗವನ್ನು 1854-1860ರಲ್ಲಿ ನಿರ್ಮಿಸಲಾಗಿದೆ. ಇಲ್ಲಿ 110 ವರ್ಷಗಳು ರೈಲುಗಳು ಸಂಚರಿಸಿದವು.

ಮುಂದಿನ ಪಯಣ ಸಾವಿರ ದ್ವೀಪಗಳ ವೀಕ್ಷಣೆಯಾಗಿತ್ತು. ಕ್ರೂಜ್‌ನಲ್ಲಿ ಎರಡು ಗಂಟೆ ಸುತ್ತಾಡಿ ಬಂದೆವು. ಸಾವಿರ ದ್ವೀಪಗಳೆಂದರೆ ವಿಶಾಲವಾಗಿ ಹರಿಯುತ್ತಿದ್ದ ನದಿಯ ಮಧ್ಯದಲ್ಲಿ ಒಂದೆರಡು ಮನೆಗಳಿದ್ದರೂ ಅದನ್ನು ದ್ವೀಪವೆಂದು ಪರಿಗಣಿಸಿದ್ದಾರೆ. ಇಂತಹ ಸಣ್ಣ ಸಣ್ಣ ದ್ವೀಪಗಳನ್ನು ನೂರಾರು ವರ್ಷಗಳ ಹಿಂದೆಯೇ ಕೆಲವರು ಖರೀದಿಸಿ ಮನೆಗಳನ್ನು ನಿರ್ಮಿಸಿಕೊಂಡು ವಾಸವಿರುತ್ತಿದ್ದರಂತೆ, ಅಂತಹ ಸಾವಿರ ದ್ವೀಪಗಳಲ್ಲಿ ಕೆಲವನ್ನು ಮಾತ್ರ ನೋಡಿದೆವು.

ಅಲ್ಲಿಂದ 200 ಕಿ.ಮೀ ದೂರದ ಮಾಂಟ್ರಿಯಲ್ ನಗರಕ್ಕೆ ಹೊರಟೆವು. ಅಲ್ಲಿ ಮೂರು ದಿನ ಉಳಿದುಕೊಂಡಿದ್ದೆವು. ಮರುದಿನ ಸುಮಾರು 300 ಕಿ.ಮೀ ದೂರದ ಕ್ಯುಬೆಕ್ ಸಿಟಿಗೆ ಭೇಟಿ ನೀಡಿದೆವು. ಕ್ಯುಬೆಕ್ ಸಿಟಿಯನ್ನು ಸಾಂಪ್ರದಾಯಿಕ ನಗರ ಎಂದು ಕರೆಯುತ್ತಾರೆ. ಇದು ಕೆನಡಾ ದೇಶದ ಎರಡನೇ ಅತಿ ದೊಡ್ಡ ನಗರವಾಗಿದ್ದು, ಕೆನಡಿಯನ್ ಪ್ರಾವಿನ್ಸ್‌ಗೆ ರಾಜಧಾನಿ. ಅಧಿಕೃತ ಭಾಷೆ ಫ್ರೆಂಚ್, ಜೊತೆಯಲ್ಲಿ ಕೆಲವು ಕಡೆ ಇಂಗ್ಲಿಷ್ ಭಾಷೆಯೂ ಬಳಕೆಯಲ್ಲಿದೆ.

ಕೆನಡಾ ನ್ಯಾಷನಲ್ ಬ್ರಾಡ್‌ಕಾಸ್ಟಿಂಗ್ ಟವರ್

ಅಲ್ಲಿನ ಮೌಂಟ್‌ಮೊರೆನ್ಸಿ ನದಿಯಿಂದ ವೇಗವಾಗಿ ಧುಮುಕುವ ಫಾಲ್ಸ್ ಬಹಳ ಪ್ರಸಿದ್ಧಿಯಾಗಿದೆ. ಅದನ್ನು ವೀಕ್ಷಿಸಲು ಸಾವಿರಾರು ಪ್ರವಾಸಿಗರು ಬರುತ್ತಾರೆ. ಅವರಲ್ಲಿ ನಾವೂ ಒಂದಾಗಿ ನಿಸರ್ಗದ ಸವಿಯನ್ನು ಅನುಭವಿಸಿದೆವು.

ಕ್ಯುಬೆಕ್ ಸಿಟಿಯು ಪುರಾತನ ಹಾಗೂ ಸ್ವಚ್ಛ ನಗರವೆಂದೇ ಹೆಸರಾಗಿದೆ. ಈ ನಗರ ನೋಡಲು ಅತಿ ಸ್ವಚ್ಛವಾಗಿದ್ದು, ಕಿರಿದಾದ ರಸ್ತೆ ಪಕ್ಕದಲ್ಲಿರುವ ಪಾರಂಪರಿಕ ಕಟ್ಟಡಗಳಿಗೆ ಹೂಗಳಿಂದ ಅಲಂಕಾರ ಮಾಡಿದ್ದನ್ನು ನೋಡಿ ಆಶ್ಚರ್ಯವಾಯಿತು. ಅಲ್ಲಿನ ಕಟ್ಟಡಗಳು ಮೂರ್ನಾಲ್ಕು ಶತಮಾನಗಳಷ್ಟು ಹಳೆಯವು. ಆ ರಸ್ತೆಯಲ್ಲಿ ಸಂಚರಿಸುವುದೇ ವಿಶಿಷ್ಟ ಅನುಭವ. ಅಲ್ಲಿನ ಒಂದು ಚಿಕ್ಕ ಜಾಗದಲ್ಲಿದ್ದ ನೋಟ್ರೆಡಾಮ್ ಚರ್ಚ್, ಮುಂದಕ್ಕೆ ನಡೆದು ಹೋದರೆ ಅಲಂಕಾರಿಕ ವಸ್ತುಗಳ ಮಾರಾಟದ ಮಳಿಗೆಗಳು, ಸ್ವಲ್ಪ ಮುಂದೆ ಸಾಗಿದರೆ ಮನೆಯ ಗೋಡೆಗೆ ಒಂದು ಭಾಗದಲ್ಲಿ ತೈಲವರ್ಣದಲ್ಲಿ ಬಿಡಿಸಿದ ಸುಂದರ ಚಿತ್ರಗಳ ಸಮೂಹ-ಹೀಗೆ ಸಾಗುತ್ತ ಹೋದರೆ ಮತ್ತೊಂದು ದೊಡ್ಡದಾದ ಮನೆಯ ಗೋಡೆಯ ಮೇಲೆ ಹಿಂದಿನ ಜನಜೀವನ ಬಿಂಬಿಸುವ ಸುಂದರ ವರ್ಣಚಿತ್ರಗಳನ್ನು ನೋಡಬಹುದು. ಅಲ್ಲಿಂದ 3-4 ಕಿ.ಮೀ ದೂರ ಹೋದರೆ ಸುಂದರ ಕಲಾಕೌಶಲದಿಂದ ಕೂಡಿದ ಕರಿಕಲ್ಲಿನಲ್ಲಿ ಹಿಂದಿನ ಕುಲಕಸುಬುಗಳನ್ನು ಬಿಂಬಿಸುವಂತಹ ಶಿಲ್ಪಗಳನ್ನು ಕೆತ್ತಿಸಿ ನಿಲ್ಲಿಸಿದ್ದ ಪಾರ್ಲಿಮೆಂಟ್ ಭವನ, ಅದರ ಮುಂದಿದ್ದ ಸುಂದರ ಶಿಲ್ಪಗಳಿಂದ ಹೊರಹೊಮ್ಮುವ ಕಾರಂಜಿ ಇವುಗಳೆಲ್ಲ ಪ್ರವಾಸಿಗರನ್ನು ಬಹಳವಾಗಿ ಆಕರ್ಷಿಸುತ್ತವೆ.

ನಯಾಗರ ಜಲಪಾತ

ಮರುದಿನ ಮಾಂಟ್ರಿಯಲ್ ನಗರದಲ್ಲಿರುವ ಅದ್ಭುತ ಕಲಾಕುಸುರಿಯಿಂದ ನಿರ್ಮಿಸಿರುವ ಪ್ರಸಿದ್ಧ ಬೆಸಿಲಿಕ ನೋಟ್ರೆಡಾಮ್ ಚರ್ಚ್ ವೀಕ್ಷಿಸಿದೆವು. ಅಲ್ಲಿನ ವಿಸ್ತಾರವಾದ ಬಟಾನಿಕಲ್ ಗಾರ್ಡನ್, ಚೀನಾ ಹಾಗೂ ಜಪಾನ್ ಮಾದರಿ ಉದ್ಯಾನಗಳಿಗೆ ಭೇಟಿ ನೀಡಿದೆವು. ನಂತರ 1976ರಲ್ಲಿ ಒಲಿಂಪಿಕ್ಸ್ ಕ್ರೀಡೆಗಳು ನಡೆದ ಸ್ಟೇಡಿಯಂ ಕಡೆಗೆ ಹೊರಟು ಅಲ್ಲಿ ಸುತ್ತಾಡಿ ಮಾರನೆಯ ದಿನ ಒಟ್ಟಾವಕ್ಕೆ ಪ್ರಯಾಣ ಬೆಳೆಸಿದೆವು. 'ಒಟ್ಟಾವ' ಕೆನಡಾದ ರಾಜಧಾನಿ. ಅಲ್ಲಿ ಪುರಾತನ ಹಾಗೂ ಸುಂದರವಾದ ವಾಸ್ತುಶಿಲ್ಪಗಳಿಂದ ಕೂಡಿದ ವಿಶಾಲವಾದ ಪಾರ್ಲಿಮೆಂಟ್ ಭವನವಿದ್ದು ಅದು ನವೀಕರಣಗೊಳ್ಳುತ್ತಿರುವುದರಿಂದ ವೀಕ್ಷಿಸಲು ಸಾಧ್ಯವಾಗಲಿಲ್ಲ. ಸೆನೆಟ್ ಭವನ ವೀಕ್ಷಣೆಗೆ ಆನ್‌ಲೈನ್‌ನಲ್ಲಿ ಅನುಮತಿ ಪಡೆದು ಹೋದೆವು. ಅಲ್ಲಿನ ಅಧಿಕಾರಿಗಳು ಎಲ್ಲ ವಿಭಾಗಗಳನ್ನು ಪರಿಚಯಿಸಿದರು. ನಂತರ ಸೆನೆಟ್ ಹಾಲ್‌ಗೂ ಕರೆದೊಯ್ದು ಸಭೆ ನಡೆಯುವ ಸ್ಥಳದ ಬಗ್ಗೆ ವಿವರಿಸಿ ಸೌಜನ್ಯದಿಂದಲೇ ಬೀಳ್ಕೊಟ್ಟರು. ಪಕ್ಕದಲ್ಲಿಯೇ ಇದ್ದ ಬೃಹತ್ ವೃತ್ತದಲ್ಲಿ ಕಲಾತ್ಮಕವಾಗಿ ನಿರ್ಮಿಸಿರುವ 1914-1918ರ ವಾರ್ ಮೆಮೋರಿಯಲ್‌ಗೆ ಭೇಟಿ ನೀಡಿದೆವು. ಅಲ್ಲಿಂದ ನಗರ ಪ್ರದಕ್ಷಿಣೆ. ಇವೆಲ್ಲವನ್ನೂ ನೋಡಿಕೊಂಡು ಟೊರಾಂಟೊ ಕಡೆಗೆ ಹೊರಟೆವು.

ಟೊರಾಂಟೊ ನಗರದಲ್ಲಿ ಎಲ್ಲಿ ನೋಡಿದರೂ ಬಹುಅಂತಸ್ತಿನ ಸುಂದರವಾದ ಕಟ್ಟಡಗಳು. ಕೆಲವು ಕಡೆ ಕೇವಲ ಕಪ್ಪುಬಣ್ಣದ ಗಾಜಿನಿಂದ ನಿರ್ಮಿಸಿದ ಗಗನಚುಂಬಿ ಕಟ್ಟಡಗಳು ಪ್ರವಾಸಿಗರನ್ನು ಬಹುವಾಗಿ ಆಕರ್ಷಿಸುತ್ತವೆ. ಒಂದು ಕೇಂದ್ರ ಸ್ಥಳದ ಮಧ್ಯದಲ್ಲಿ ಸುತ್ತಲೂ ಕಲಾತ್ಮಕವಾದ ವಾಸ್ತುಶಿಲ್ಪಗಳಿಂದ ಕೂಡಿದ ಬಹುಮಹಡಿ ಕಟ್ಟಡಗಳು, ಮಧ್ಯದಲ್ಲಿ ಸುಂದರವಾದ ಕಾರಂಜಿ. ದೊಡ್ಡ ಅಕ್ಷರಗಳಲ್ಲಿ 'TORONTO' ಎಂದು ಬರೆದು ನಿಲ್ಲಿಸಿದ್ದರು. ಅಲ್ಲಿಗೆ ಹೋದ ನೆನಪಿಗಾಗಿ ಪ್ರವಾಸಿಗರೆಲ್ಲರೂ ಫೋಟೊ ತೆಗೆಸಿಕೊಳ್ಳುವರು. ಅಂದು ಆ ಸ್ಥಳದಲ್ಲಿ ಭಾರತೀಯ ದಿವಸ ಆಚರಿಸುತ್ತಿದ್ದುದು ವಿಶೇಷವಾಗಿತ್ತು. ಒಂದು ಕಡೆ ತಿಂಡಿ-ತಿನಿಸುಗಳ ಸಾಲು, ಮತ್ತೊಂದು ಕಡೆ ಆಟಗಳ ಸಾಲು, ಮಧ್ಯದಲ್ಲಿ ವೇದಿಕೆ ಮೇಲೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಅಲ್ಲಿಗೆ ಬಂದ ಭಾರತೀಯ ಯುವಕ ಯುವತಿಯರು ಸಡಗರ, ಸಂಭ್ರಮದಿಂದ ಸುತ್ತಾಡುತ್ತಿದ್ದರು. ಅದರಲ್ಲಿ ನಾವೂ ಭಾಗಿಯಾಗಿ ಸ್ವಲ್ಪ ಹೊತ್ತು ಕಾಲ ಕಳೆದೆವು.

ನಂತರದಲ್ಲಿ ಅತಿ ಎತ್ತರದ Canada National Tower (Broadcasting) ಕಟ್ಟಡವನ್ನು ವೀಕ್ಷಿಸಲು ಹೊರಟೆವು. ಇದನ್ನು 1976ರಲ್ಲಿ ನಿರ್ಮಿಸಲಾಗಿದೆ. 553 ಮೀಟರ್ (1815 ಅಡಿ) ಎತ್ತರದ ಈ ಟವರ್ ಮೇಲೆ ಹೋಗಲು ಲಿಫ್ಟ್‌ನ ಕೇವಲ 50 ಸೆಕೆಂಡ್ ಸಾಕಾಗುತ್ತದೆ. ನಾವು ಮೇಲಕ್ಕೆ ಹೋದ ಸಮಯ ಸಂಜೆಯಾಗಿತ್ತು. ಆಕಾಶವೆಲ್ಲ ಕೆಂಬಣ್ಣದಿಂದ ಗೋಚರಿಸತೊಡಗಿತ್ತು. ಕ್ರಮೇಣ ಕತ್ತಲಾಗುತ್ತಾ ವಿದ್ಯುದ್ದೀಪಗಳಿಂದ ಅಲಂಕೃತಗೊಂಡ ಗಗನಚುಂಬಿ ಕಟ್ಟಡಗಳು, ರಸ್ತೆಯುದ್ದಕ್ಕೂ ಜಗಮಗಿಸುವ ವಿದ್ಯುತ್ ದೀಪಗಳು, ಇಡೀ ನಗರವೆಲ್ಲ ಸುಂದರ ರಮಣೀಯವಾಗಿ ಕಾಣತೊಡಗಿತು. ಪಕ್ಕದಲ್ಲಿದ್ದ ಸಮುದ್ರದಲ್ಲಿ ಸಂಜೆಯ ಸಮಯದಲ್ಲಿ ಓಡಾಡುತ್ತಿದ್ದ ಬೋಟ್‌ಗಳು, ದೂರದಲ್ಲಿ ದೊಡ್ಡದಾದ ಹಡಗುಗಳ ಚಲನೆ, ಮಸುಕಿನಲ್ಲಿಯೂ ಸುಂದರವಾಗಿ ಕಾಣುತ್ತಿದ್ದ ದೃಶ್ಯಗಳನ್ನು ಮರೆಯಲಾಗದು.

ಟೊರಾಂಟೊದಿಂದ ವಿಶ್ವ ಪ್ರಸಿದ್ಧ ನಯಾಗರದ ಕಡೆಗೆ ಹೊರಟೆವು. ನಯಾಗರ ನದಿಯು ಎರಡು ದೇಶಗಳನ್ನು ವಿಭಜಿಸುತ್ತದೆ. ಹೀಗಾಗಿ ಕೆನಡಾದಿಂದ ಬೋಟ್ ಹತ್ತುವವರಿಗೆ ಕೆಂಪುಬಣ್ಣದ ಜರ್ಕಿನ್, ಅಮೆರಿಕದಿಂದ ಹತ್ತುವವರಿಗೆ ನೀಲಿಬಣ್ಣದ ಜರ್ಕಿನ್ ಕೊಡುವರು. ಅಲ್ಲಿ ನಮ್ಮನ್ನು ಹತ್ತಿಸಿಕೊಂಡ ಬೋಟ್ ಫಾಲ್ಸ್ ಕಡೆಗೆ ಹೊರಟಿತು. ಫಾಲ್ಸ್ ಹತ್ತಿರ ಹೋದಂತೆಲ್ಲ ಅಲ್ಲಿಂದ ಧುಮುಕುವ ನೀರಿನ ರಭಸಕ್ಕೆ ಹಾರುವ ತುಂತುರು ಹನಿಗಳು ನಮ್ಮ ಮೇಲೆ ಬೀಳಲಾರಂಭಿಸಿದವು. ಸಂತೋಷ, ಸಡಗರದಿಂದ ಕೂಗುತ್ತ ಸಾಗಿದ ಆ ಅನುಭವ ಮರೆಯಲು ಸಾಧ್ಯವಿಲ್ಲ.

ಸಂಜೆ ಫಾಲ್ಸ್‌ನ ಸಮೀಪಕ್ಕೆ ಸುರಂಗದ ಮೂಲಕ ನಡೆದು ಹೋಗಲು ಟಿಕೆಟ್ ತೆಗೆದುಕೊಂಡಿದ್ದೆವು. ಫಾಲ್ಸ್‌ನ ಹತ್ತಿರದಲ್ಲಿಯೇ ನಿಂತು ಎತ್ತರದಿಂದ ನೀರು ಧುಮುಕುವ ಸೌಂದರ್ಯವನ್ನು ಅನುಭವಿಸಿ, ಅಲ್ಲಿಯೂ ಒಂದೆರಡು ಗಂಟೆ ಕಾಲ ಕಳೆದು ಮರಳಿದೆವು. ರಾತ್ರಿಯಲ್ಲಿ ನಯಾಗರ ಫಾಲ್ಸ್ ವಿವಿಧ ಬಣ್ಣಗಳಿಂದ ಕಂಗೊಳಿಸುತ್ತಿದ್ದುದನ್ನು ನೋಡಿ ಬೆರಗಾದೆವು. ಹಗಲಿನಲ್ಲಿ ಕಾಣುವುದು ಒಂದು ತರಹದ ಸುಂದರ ದೃಶ್ಯವಾದರೆ, ರಾತ್ರಿಯ ಬಣ್ಣಬಣ್ಣಗಳ ಬೆಳಕಿನಿಂದ ಕೂಡಿದ ದೃಶ್ಯ ವಿಭಿನ್ನ ರೀತಿಯ ಸಂತಸ ಕೊಡುತ್ತದೆ. ಪ್ರವಾಸಿಗರ ಆಕರ್ಷಣೆಗಾಗಿ ಬಾಣಬಿರುಸುಗಳ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿದ್ದರು.

ಈ ಹಿಂದೆ ಅಮೆರಿಕದ ಕಡೆಯಿಂದ ವೀಕ್ಷಿಸಿದ್ದಕ್ಕಿಂತ ಈ ಸಾರಿ ಕೆನಡಾ ಕಡೆಯಿಂದ ನೋಡಿದ ಮನಮೋಹಕ ದೃಶ್ಯ ಅದ್ಭುತವಾಗಿತ್ತು. ಕೆನಡಾ ಕಡೆಯಿಂದ ಕಾಣುವ ಫಾಲ್ಸ್ ದೃಶ್ಯ ಕೆಳಹಂತದಲ್ಲಿದ್ದು ಬಹಳ ಚೆನ್ನಾಗಿ ಕಾಣುತ್ತದೆ. ಇವೆಲ್ಲ ದೃಶ್ಯಗಳನ್ನು ಮನದಾಳ ಹಾಗೂ ಕ್ಯಾಮೆರಾದಲ್ಲಿ ತುಂಬಿಕೊಂಡು ಮರುದಿನ ನ್ಯುಜರ್ಸಿಯಲ್ಲಿರುವ ಮನೆ ಕಡೆಗೆ ಹೊರಟೆವು.

ಮಾಂಟ್ರಿಯಲ್ ನಗರದಲ್ಲಿರುವ ಬೆಸಿಲಿಕ ನೋಟ್ರೆಡಾಮ್ ಚರ್ಚ್

ಚಿತ್ರಗಳು: ಎಸ್.ಎಂ. ಜಂಬುಕೇಶ್ವರ

---

ವೀಣಾ ವರ್ಲ್ಡ್

## ಪ್ರವಾಸ ಸ್ಪರ್ಧೆ

ಮುಂಬರುವ ಮಂಗಳವಾರದೊಳಗೆ ವೀಣಾ ವರ್ಲ್ಡ್ ವೆಬ್‌ಸೈಟ್‌ನಲ್ಲಿ ನಿಮ್ಮ ಉತ್ತರಗಳನ್ನು ಸಲ್ಲಿಸಲು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ. ವೀಣಾ ವರ್ಲ್ಡ್ ಟೂರ್ **'ಹೈಲೈಟ್ಸ್ ಆಫ್ ರಾಜಸ್ಥಾನ'** (ಟೂರ್ ಕೋಡ್ - RJUP) ಉಚಿತವಾಗಿ ಗೆಲ್ಲುವ ಚಾನ್ಸ್ ಪಡೆಯಿರಿ. ಅದೃಷ್ಟಶಾಲಿ ವಿಜೇತರನ್ನು ಆಯ್ಕೆ ಮಾಡಿ, ಅವರ ಹೆಸರನ್ನು 4ನೇ ಆಗಸ್ಟ್, 2024 ರ ಮುಂದಿನ ಲೇಖನದಲ್ಲಿ ಪ್ರಕಟಿಸಲಾಗುವುದು ಪ್ರಕಟಿಸಲಾಗುವುದು.

1. 2028 ರ ಬೇಸಿಗೆ ಒಲಿಂಪಿಕ್ಸ್ ಎಲ್ಲಿ ನಡೆಯಲಿದೆ?
2. ಯಾವ ದೇಶದಲ್ಲಿ ಮೊದಲ ಮೈಕೆಲಿನ್ ನಕ್ಷತ್ರಗಳನ್ನು ಬೀದಿ ಆಹಾರ ಮಾರಾಟಗಾರರಿಗೆ ನೀಡಲಾಯಿತು?
3. ಸ್ಕಾಟ್ಲೆಂಡ್‌ನ ರಾಷ್ಟ್ರೀಯ ಪ್ರಾಣಿ ಯಾವುದು?
4. ಯುಕೆಯಲ್ಲಿ ಅತ್ಯಂತ ಹಳೆಯ ಪಟ್ಟಣವೆಂದು ಯಾವುದು ದಾಖಲಾಗಿದೆ?
5. ಸಲ್ಮಾನ್ ಖಾನ್ ಯಾವ ಚಿತ್ರದಿಂದ ಪಾದಾರ್ಪಣೆ ಮಾಡಿದರು?
6. 'ಬ್ರಹ್ಮಸಮಾಜ'ದ ಸ್ಥಾಪಕರು ಯಾರು?
7. ವಾಟರ್ಲೂ ಕದನದಲ್ಲಿ ಬ್ರಿಟಿಷರನ್ನು ವಿಜಯದತ್ತ ಮುನ್ನಡೆಸಿದವರು ಯಾರು?

7 ನೇ ಜುಲೈ ವೀಣಾ ವರ್ಲ್ಡ್ ಟ್ರಾವೆಲ್ ರಸಪ್ರಶ್ನೆಯ ಲಕ್ಕಿ ವಿಜೇತರು
ವೀಣಾ ವರ್ಲ್ಡ್ **'ಶಿಮ್ಲಾ ಮನಾಲಿ'** (ಟೂರ್ ಕೋಡ್ - HPPS)
**ಕೆ ಪೂಜಾಶ್ರೀ ಶಾಂತಮೂರ್ತಿ**
**ದೇವದುರ್ಗ, ರಾಯಚೂರು, ಕರ್ನಾಟಕ**
**ಅಭಿನಂದನೆಗಳು!**

veenaworld.com
Toll-Free: 1800 22 7979
Email: travel@veenaworld.com

ADVERTORIAL

## ಸಲಾಮ್ ನಮಸ್ತೆ ಆಸ್ಟ್ರೇಲಿಯಾ

ವೀಣಾ ಪಾಟೀಲ್
Founder, CPO & CNO
Veena World
sunila@veenaworld.com

ನೀವು ಎಂದಾದರೂ ಪಾರ್ಲಿಮೆಂಟ್ ನಲ್ಲಿ ಊಟ ಮಾಡಿದ್ದೀರಾ? ಹೌದು, ಇದು ಸಾಧ್ಯ, ಮತ್ತು ಭೂಮಿಯ ಕೆಳಭಾಗದ ದೇಶದಲ್ಲಿ ಈ ವಿಶಿಷ್ಟ ಅವಕಾಶವನ್ನು ನೀವು ನಂದಿಸಬಹುದು! ನಾನು ಹಲವಾರು ಬಾರಿ ಕ್ಯಾನ್‌ಬೆರಾಗೆ ಭೇಟಿ ನೀಡುವ ಪ್ರಯೋಜನ ಹೊಂದಿದ್ದೇನೆ ಮತ್ತು ಈ ಭೇಟಿಯಲ್ಲಿ, ನಾನು ಆಸ್ಟ್ರೇಲಿಯಾದ ಪಾರ್ಲಿಮೆಂಟ್ ಹೌಸ್ ಮೇಲಿರುವ ಕ್ವೀನ್ಸ್ ಟೆರೇಸ್ ಕೆಫೆಯಲ್ಲಿ ಊಟ ಮಾಡುತ್ತಿದ್ದೆ. ನಾನು ಸುತ್ತಲೂ ನೋಡಿದಾಗ, ರಾಷ್ಟ್ರದ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂಸ್ಥೆಯ ಮೇಲೆ ಕುಳಿತಿರುವ ಕ್ಷಣದ ಮಹತ್ವವನ್ನು ನಾನು ಪ್ರಶಂಸಿಸದೆ ಇರಲು ಸಾಧ್ಯವಾಗಲಿಲ್ಲ. ನೀವು ಆಸ್ಟ್ರೇಲಿಯಾದಲ್ಲಿರುವಾಗ, ಕ್ಯಾನ್‌ಬೆರಾದಲ್ಲಿರುವ ಪಾರ್ಲಿಮೆಂಟ್ ಹೌಸ್‌ಗೆ ಭೇಟಿ ನೀಡುವುದು ಅತ್ಯಗತ್ಯ. ಇದು ಕೇವಲ ಸರ್ಕಾರಿ ಕಟ್ಟಡಕ್ಕಿಂತ ಹೆಚ್ಚು; ಇದು ಆಸ್ಟ್ರೇಲಿಯನ್ ಪ್ರಜಾಪ್ರಭುತ್ವದ ಸಾರವನ್ನು ಸಂಕೇತಿಸುವ ವಾಸ್ತುಶಿಲ್ಪದ ಅದ್ಭುತವಾಗಿದೆ ಮತ್ತು ಅದರ ವಿಶಿಷ್ಟ ಸಂಸದೀಯ ಅನುಭವಕ್ಕೆ ಹೆಸರುವಾಸಿಯಾಗಿದೆ.

ಇತರ ಅನೇಕ ದೇಶಗಳಿಗಿಂತ ಭಿನ್ನವಾಗಿ, ಆಸ್ಟ್ರೇಲಿಯಾದ ಪ್ರಜಾಪ್ರಭುತ್ವದ ಆವೃತ್ತಿಯು ಸರ್ಕಾರದ ಕಾರ್ಯಚಟುವಟಿಕೆಗಳನ್ನು ನೇರವಾಗಿ ವೀಕ್ಷಿಸಲು ಸಂದರ್ಶಕರನ್ನು ಆಹ್ವಾನಿಸುತ್ತದೆ. ವಿಶ್ರಾಂತಿ ಮತ್ತು ಮುಕ್ತ ಸಂಸ್ಕೃತಿ ಆಸ್ಟ್ರೇಲಿಯದ ಅತ್ಯುತ್ತಮ ವಿಷಯ. ಸಂಸತ್ ಭವನದ ರೂಫ್ ಟಾಪ್ ಗಾರ್ಡನ್‌ಗೆ ಪ್ರವಾಸಿಗರಿಗೆ ಪ್ರವೇಶ ನೀಡಿರುವುದು ಆ ಸಂಸ್ಕೃತಿಯ ಪ್ರತಿನಿಧಿಯಾಗಿದೆ. ಅವರು ಹೇಳಿದಂತೆ, ಇದು ಪೀಪಲ್ಸ್ ಹೌಸ್ ಮತ್ತು ನಮ್ಮ ಅತಿಥಿಗಳು ಸ್ಮಾರಕಗಳನ್ನು ಹೊರಗಿನಿಂದ ಫೋಟೋ ಮಾತ್ರ ತೆಗೆಯದೇ ನಮ್ಮ ವೀಣಾ ವರ್ಲ್ಡ್ ಟೂರ್‌ಗಳಲ್ಲಿ ಖಂಡಿತವಾಗಿಯೂ ಇಂತಹ ಅನುಭವಗಳನ್ನು ಸೇರಿಸಬೇಕೆಂದು ನಾವು ನಿರ್ಧರಿಸಿದ್ದೇವೆ. ಹಾಗೆಯೇ ನಮ್ಮ ಪ್ರಯಾಣಿಕರು ಈ ವಾಸ್ತುಶಿಲ್ಪದ ಅದ್ಭುತಗಳನ್ನು ಒಳಗಿನಿಂದ ಅನ್ವೇಷಿಸಲು ಅವಕಾಶವನ್ನು ಪಡೆಯಬೇಕೆಂದು ನಾವು ಬಯಸುತ್ತೇವೆ, ಅವುಗಳ ಸೌಂದರ್ಯ ಮತ್ತು ಭವ್ಯತೆಯಲ್ಲಿ ಮುಳುಗಬೇಕು ಮತ್ತು ದೇಶದ ಶ್ರೀಮಂತ ಸಂಸ್ಕೃತಿಯನ್ನು ಹೀರಿಕೊಳ್ಳಬೇಕೆಂದು ಬಯಸುತ್ತೇವೆ.

ನನ್ನ ಶಾಲಾ ದಿನಗಳಿಂದಲೂ, ವಿಶೇಷವಾಗಿ ವರ್ಲ್ಡ್ ಮ್ಯಾಪ್ ಗಳನ್ನು ಅಧ್ಯಯನ ಮಾಡುವಾಗ ನಾನು ಆಸ್ಟ್ರೇಲಿಯಾ ಬಗ್ಗೆ ಆಕರ್ಷಿತಳಾಗಿದ್ದೇನೆ. ಈ ಕುತೂಹಲದ ಭಾವನೆಯು ಆಸ್ಟ್ರೇಲಿಯಾಕ್ಕೆ ಒಂದು ದಿನ ಭೇಟಿ ನೀಡುವ ನನ್ನ ಆಸೆಯನ್ನು ಸಾಧಿಸಲು ಸಾಧ್ಯವಾದ ಕನಸನ್ನು ಪ್ರಚೋದಿಸಿದೆ. ವೈವಿಧ್ಯಮಯ ಲ್ಯಾಂಡ್ ಸ್ಕೇಪ್ ಗಳು ಮತ್ತು ಅಸಾಧಾರಣ ಅದ್ಭುತಗಳ ಆಕರ್ಷಕ ಭೂಮಿಯೊಂದಿಗೆ, ಆಸ್ಟ್ರೇಲಿಯಾ ಸುಮಾರು 7.7 ಮಿಲಿಯನ್ ಚದರ ಕಿಲೋಮೀಟರ್‌ಗಳ ವಿಸ್ಮಯಕಾರಿ ಗಾತ್ರವನ್ನು ಒಳಗೊಂಡಿದೆ, ಇದು ವಿಶ್ವದ ಆರನೆಯ ಅತಿದೊಡ್ಡ ದೇಶವಾಗಿದೆ. ಅದರ ವಿಶಾಲತೆಯು ಅದರ ಭೌಗೋಳಿಕ ವಿಶಿಷ್ಟತೆಯಿಂದ ಮಾತ್ರ ಹೊಂದಿಕೆಯಾಗುತ್ತದೆ, ಗ್ರೇಟ್ ಬ್ಯಾರಿಯರ್ ರೀಫ್, ಭೂಮಿಯ ಮೇಲಿನ ಅತಿದೊಡ್ಡ ಹವಳದ ಬಂಡೆಯಂತಹ ಐಕಾನಿಕ್ ಹೆಗ್ಗುರುತು ಗಳನ್ನು ಹೊಂದಿರುವ ಬಗ್ಗೆ ಹೆಮ್ಮೆ ಇದೆ, ಇದು ಬಾಹ್ಯಾಕಾಶದಿಂದ ಕೂಡ ಕಾಣುತ್ತದೆ. ಅದರ ಪ್ರಾಚೀನ ಶಿಲಾ ರಚನೆಗಳೊಂದಿಗೆ ವಿಸ್ತಾರವಾದ ಹೊರಭಾಗದಿಂದ ಕ್ವೀನ್ಸ್‌ಲ್ಯಾಂಡ್‌ನ ದಟ್ಟವಾದ ರೈನ್ ಫಾರೆಸ್ಟ್ ಗಳವರೆಗೆ, ಆಸ್ಟ್ರೇಲಿಯಾ ನ್ಯಾಚುರಲ್ ಬ್ಯೂಟಿಯ ವೈಭವವನ್ನು ಪ್ರದರ್ಶಿಸುತ್ತದೆ. ಹೆಚ್ಚುವರಿಯಾಗಿ, ಕಾಂಗರೂಗಳು, ಕೋಲಾಗಳು ಮತ್ತು ಅಡಗಿಕೊಳ್ಳುವ ಪ್ಲಾಟಿಪಸ್ ಸೇರಿದಂತೆ ಭೂಮಿಯಲ್ಲಿ ಬೇರೆಲ್ಲಿಯೂ ಕಂಡುಬರದ ಸುಂದರವಾದ ವನ್ಯಜೀವಿಗಳಿಗೆ ಇದು ನೆಲೆಯಾಗಿದೆ ಎನ್ನುವುದು ನನಗೆ ಆಕರ್ಷಕವೆನಿಸುತ್ತದೆ.

ನಿಮ್ಮ ಮನಸ್ಸಿನಲ್ಲಿ ಆಸ್ಟ್ರೇಲಿಯಾದ ಚಿತ್ರವನ್ನು ಕಲ್ಪಿಸಿಕೊಂಡಾಗ, ಸಾಂಪ್ರದಾಯಿಕ ಸಿಡ್ನಿ ಒಪೇರಾ ಹೌಸ್ ಪ್ರಮುಖವಾಗಿ ಕಾಣುತ್ತದೆ. ಸ್ಪಷ್ಟವಾದ ನೀಲಿ ಆಕಾಶದ ಹಿನ್ನೆಲೆಯಲ್ಲಿ ಅದರ ವಿಶಿಷ್ಟವಾದ ಶೆಲ್-ಆಕಾರದ ವಿನ್ಯಾಸದ ಮೇಲೆ ನಾನು ಮೊದಲ ಬಾರಿಗೆ ನೋಡಿದ್ದೇನೆ ಎಂದು ಸ್ಪಷ್ಟವಾಗಿ ನೆನಪಿಸಿಕೊಳ್ಳುತ್ತೇನೆ. ರಾತ್ರಿಯಲ್ಲಿ ಬಂದರಿನಲ್ಲಿ ನೌಕಾಯಾನ ಮಾಡುವುದು

ಅದರ ಆಕರ್ಷಣೆಯನ್ನು ಹೆಚ್ಚಿಸುತ್ತದೆ. ಚಂದ್ರನ ಬೆಳಕು ಅದರ ಮೇಲ್ಮೈಯಲ್ಲಿ ಅದ್ಭುತವಾದ ಹೊಳಪನ್ನು ಪ್ರತಿಫಲಿಸುತ್ತದೆ. ಹಗಲು ಮತ್ತು ನಕ್ಷತ್ರಗಳ ಅಡಿಯಲ್ಲಿ ಮೆಚ್ಚುಗೆ ಪಡೆಯಬೇಕಾದ ಅನೇಕ ರಚನೆಗಳ ನಿಜವಾದ ವೈಭವವನ್ನು ನಾನು ತಿಳಿದುಕೊಂಡೆ. ಒಪೇರಾ ಹೌಸ್‌ನೊಳಗೆ ಅದರ ಬಗ್ಗೆ ಸಂಪೂರ್ಣ ಅರಿವಿರುವ ಮಾರ್ಗದರ್ಶಿಯೊಂದಿಗೆ ಹೆಜ್ಜೆ ಹಾಕುವುದು ಮರೆಯಲಾಗದ ಅನುಭವವಾಗಿತ್ತು, ಅಲ್ಲಿ ಇಂಟರ್ ನ್ಯಾಷನಲ್ ಡಿಸೈನ್ ಸ್ಪರ್ಧೆಯಲ್ಲಿ 200 ಎಂಟ್ರಿಗಳ ಸಮೂಹದಿಂದ ಒಪೇರಾ ಹೌಸ್‌ನ ವಿನ್ಯಾಸವನ್ನು ಆಯ್ಕೆ ಮಾಡಲಾಗಿದೆ ಎಂದು ನಾನು ತಿಳಿದಿದ್ದೇನೆ. ಡ್ಯಾನಿಶ್ ವಾಸ್ತುಶಿಲ್ಪಿ ಜೋರ್ನ್‌ಯುಟ್ಜಾನ್ ವಿನ್ಯಾಸಗೊಳಿಸಿದ ಈ ಯುನೆಸ್ಕೋ ವಿಶ್ವ ಪರಂಪರೆಯ ತಾಣವು ಸೂರ್ಯನ ಬೆಳಕಿನಲ್ಲಿ ಮಿನುಗುವ ಒಂದು ದಶಲಕ್ಷಕ್ಕೂ ಹೆಚ್ಚು ಸೆರಾಮಿಕ್ ಟೈಲ್ಸ್‌ಗಳಿಂದ ಅಲಂಕರಿಸಲ್ಪಟ್ಟ ಮೇಲ್ಛಾವಣಿಯನ್ನು ಹೊಂದಿದೆ. ಇಂದು, ಒಪೇರಾ ಹೌಸ್ ವಾರ್ಷಿಕವಾಗಿ 1,500 ಪ್ರದರ್ಶನಗಳನ್ನು ಆಯೋಜಿಸುತ್ತದೆ, ಒಪೇರಾ, ಬ್ಯಾಲೆ, ಸಂಗೀತ ಕಚೇರಿಗಳು ಮತ್ತು ಥಿಯೇಟರ್ ನಿರ್ಮಾಣಗಳಲ್ಲಿ ಹರಡುದೆ, ವಿಶ್ವಾದ್ಯಂತ ಲಕ್ಷಾಂತರ ಪ್ರವಾಸಿಗರನ್ನು ಸೆಳೆಯುತ್ತದೆ. ಆದರೆ ಕಥೆಯಲ್ಲಿ ದುಃಖದ ಭಾಗವಿದೆ ಎಂದು ನನಗೆ ತಿಳಿದಿದೆ. ಒಪೇರಾ ಹೌಸ್ 1973 ರಲ್ಲಿ ಪೂರ್ಣಗೊಂಡಿದ್ದರೂ ಸಹ, ಅದನ್ನು ವಿನ್ಯಾಸಗೊಳಿಸಿದ ವಾಸ್ತುಶಿಲ್ಪಿ ಜೋರ್ನ್‌ಯುಟ್ಜಾನ್ ಅದನ್ನು ಹತ್ತಿರದಿಂದ ನೋಡಲಿಲ್ಲ. ಉಸ್ತುವಾರಿ ಜನರೊಂದಿಗೆ ಭಿನ್ನಾಭಿಪ್ರಾಯಗಳಿದ್ದ ಕಾರಣ ಅವರು 1966 ರಲ್ಲಿ ಯೋಜನೆಯನ್ನು ತೊರೆದರು. ಆದರೂ, ಒಪೇರಾ ಹೌಸ್‌ನ ಅದ್ಭುತ ವಿನ್ಯಾಸದ ಮೂಲಕ ಅವರ ಪರಂಪರೆಯು ಜೀವಿಸಿದೆ. ನಾನು ಅಲ್ಲಿ ನಿಂತಾಗ, ಅದರ ಸೌಂದರ್ಯದಿಂದ ಅಚ್ಚರಿಗೊಂಡೆ, ಅಂತಹ ಅದ್ಭುತವಾದ ಕಟ್ಟಡವನ್ನು ನಮಗೆ ನೀಡಿದ ಉಟ್ಜಾನ್‌ಗೆ ನಾನು ಧನ್ಯವಾದ ಹೇಳಲು ಸಾಧ್ಯವಾಗಲಿಲ್ಲ. ಅವರ ಆಲೋಚನೆಗಳು ಅದರ ಟೈಮ್‌ಲೆಸ್ ವಿನ್ಯಾಸದೊಂದಿಗೆ ಇಂದಿಗೂ ಜನರನ್ನು ಹೇಗೆ ಪ್ರೇರೇಪಿಸುತ್ತಿವೆ ಎನ್ನುವುದನ್ನು ಇದು ತೋರಿಸುತ್ತದೆ!

ಮುಂದೆ ನಾನು ಸಿಡ್ನಿ ಬಂದರಿನಲ್ಲಿ ನೌಕಾಯಾನ ಮಾಡುತ್ತಿದ್ದೆ ಮತ್ತು ಭವ್ಯವಾದ ಸಿಡ್ನಿ ಬಂದರು ಸೇತುವೆಯನ್ನು ಹಾದು, ಅದರ ಸಾಂಪ್ರದಾಯಿಕ ಸಿಲ್ಹೌಟ್ ನೊಂದಿಗೆ ಕೊಲ್ಲಿಯನ್ನು ವ್ಯಾಪಿಸಿದೆ. ಸೇತುವೆಯು ಸಿಡ್ನಿಯ ಉತ್ತರ ಮತ್ತು ದಕ್ಷಿಣವನ್ನು ಸಂಪರ್ಕಿಸುತ್ತದೆ ಮತ್ತು ಇದು ಕೇವಲ ಸಾರಿಗೆ ಸಂಪರ್ಕವಲ್ಲ; ಇದು ನಗರದ ದೃಶ್ಯಾವಳಿ ಮತ್ತು ಸಿಡ್ನಿ ಒಪೇರಾ ಹೌಸ್‌ನ ವಿಹಂಗಮ ನೋಟಗಳನ್ನು ನೀಡುವ ಪ್ರೀತಿಯ ಪ್ರವಾಸಿ ಆಕರ್ಷಣೆಯಾಗಿದೆ. ಅದರ ವಿಶಿಷ್ಟ ಆಕಾರಕ್ಕಾಗಿ ಪ್ರೀತಿಯಿಂದ "ಕೋಟ್ ಹ್ಯಾಂಗರ್" ಎಂದು ಕರೆಯಲ್ಪಡುತ್ತದೆ, ನೀವು ಬ್ರಿಡ್ಜ್ ಮೇಲೆ ಏರಬಹುದು ಮತ್ತು ನೀವು ಸೇತುವೆಯ ಮೇಲೆ ನಿಂತಿರುವಂತೆ ರೋಮಾಂಚಕ ಕ್ಷಣವನ್ನು ಆನಂದಿಸಬಹುದು ಹಾಗೂ ವಿಹಂಗಮ ನೋಟವನ್ನು ಆನಂದಿಸಬಹುದು.

ಆಸ್ಟ್ರೇಲಿಯಾದ ನಗರಗಳಂತೆಯೇ, ಚಿಕ್ಕ ಪಟ್ಟಣಗಳು ಅನೇಕ ಮೋಡಿಮಾಡುವ ಆಕರ್ಷಣೆಗಳನ್ನು ಹೊಂದಿದ್ದು, ಇಲ್ಲಿ ಕಲೋನಿಯಲ್ ಹಿಸ್ಟರಿಯನ್ನು ನನಗೆ ನೆನಪಿಸುತ್ತವೆ. ನನಗೆ ಆಸ್ಟ್ರೇಲಿಯಾದ ಅತ್ಯುತ್ತಮ ಭಾಗವೆಂದರೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕಾರಿನಲ್ಲಿ ಹೋಗುವುದು. ಅವರು ಹೇಳಿದಂತೆ ಇಲ್ಲಿ ಪ್ರಯಾಣವು ಗಮ್ಯಸ್ಥಾನದಂತೆ ಉತ್ತಮವಾಗಿದೆ! ಆಸ್ಟ್ರೇಲಿಯಾ, ನನಗೆ, ರಸ್ತೆ ಪ್ರವಾಸಗಳಿಗೆ ಒಂದು ಸ್ವರ್ಗವಾಗಿದೆ ಎಂದು ಭಾವಿಸುತ್ತೇನೆ, ಇದು ಪ್ರಪಂಚದ ಅತ್ಯಂತ ಸುಂದರವಾದ ಡ್ರೈವಿಂಗ್ ಮಾರ್ಗಗಳನ್ನು ಹೊಂದಿದೆ. ವಿಶಾಲವಾದ ತೆರೆದ ಸ್ಥಳಗಳು, ಅಂತ್ಯವಿಲ್ಲದ ನೀಲಿ ಆಕಾಶಗಳು ಮತ್ತು ಅದ್ಭುತವಾಗಿ ನಿರ್ವಹಿಸಲಾದ ರಸ್ತೆಗಳೊಂದಿಗೆ, ಇಲ್ಲಿ ಚಕ್ರದ ಹಿಂದಿನ ಪ್ರತಿಯೊಂದು ಪ್ರಯಾಣವು ಒಂದು ಸಾಹಸವಾಗಿದೆ. ಭಾರತಕ್ಕೆ ಹೋಲುವ ರಸ್ತೆಯ ಎಡಭಾಗದಲ್ಲಿ ವಾಹನ ಡ್ರೈವ್ ಮಾಡಲು ಒಗ್ಗಿಕೊಂಡಿರುವ ಯಾರಾದರೂ ಆಸ್ಟ್ರೇಲಿಯಾದ ರಸ್ತೆಗಳಲ್ಲಿ ನೇವಿಗೇಟ್ ಮಾಡುವುದು ಎರಡನೆಯ ಸ್ವಭಾವದಂತೆ ಭಾಸವಾಗುತ್ತದೆ. ವ್ಯಾಪಾರ ಮತ್ತು ರಜಾದಿನಗಳಿಗಾಗಿ ನನ್ನ ಸಹೋದ್ಯೋಗಿಗಳು ಮತ್ತು ಸ್ನೇಹಿತರೊಂದಿಗೆ ಸ್ಮರಣೀಯ ರಸ್ತೆ ಪ್ರವಾಸಗಳನ್ನು ಮಾಡಲು ಮತ್ತು ಇಲ್ಲಿಗೆ ಧಾವಿಸಲು ನನಗೆ ಆಗಾಗ್ಗೆ ಅವಕಾಶವಿದೆ.

ಅತ್ಯಂತ ಅವಿಸ್ಮರಣೀಯ ಪ್ರವಾಸಗಳಲ್ಲಿ ವಿಕ್ಟೋರಿಯಾದ ಗ್ರೇಟ್ ಓಷನ್ ರಸ್ತೆಯ ಉದ್ದಕ್ಕೂ ಒಂದು ಡ್ರೈವ್ ಆಗಿತ್ತು, ಅಲ್ಲಿ ದೃಶ್ಯಾವಳಿಗಳ ಸಂಪೂರ್ಣ ಸೌಂದರ್ಯವು ಪ್ರತಿ ತಿರುವಿನಲ್ಲಿಯೂ ನನ್ನನ್ನು ಉಸಿರು ಬಿಗಿಹಿಡಿದು ನೋಡುವಂತೆ ಮಾಡಿತು. ಪ್ರಮುಖವಾಗಿ, ಈ ರಸ್ತೆಯು ಪ್ರಪಂಚದ ಅತಿದೊಡ್ಡ ಯುದ್ಧ ಸ್ಮಾರಕವಾಗಿ ನಿಂತಿದೆ, ಮೊದಲನೆಯ ಮಹಾಯುದ್ಧದಿಂದ ಹಿಂದಿರುಗಿದ ಸೈನಿಕರು ಮಾಡಿದ ತ್ಯಾಗದ ದೃಢ ಸ್ಮರಣಿಕೆಯಾಗಿದೆ. ಗ್ರೇಟ್ ಓಷನ್ ರಸ್ತೆಯನ್ನು ಅನ್ವೇಷಿಸುವುದ, ಒಂದು ಬದಿಯಲ್ಲಿ ಸಾಗರ, ಇನ್ನೊಂದು ಬದಿಯಲ್ಲಿ ಪರ್ವತಗಳೊಂದಿಗೆ ಅದ್ಭುತವಾಗಿದೆ. ವೀಣಾ ವರ್ಲ್ಡ್‌ನ ಆಸ್ಟ್ರೇಲಿಯಾ ಪ್ರವಾಸದಲ್ಲಿ ನಮ್ಮ ಅತಿಥಿಗಳು ಹನ್ನೆರಡು ಅಪೋಸ್ಟಲ್ಸ್ ರಾಕ್ ರಚನೆಗಳ ಪಕ್ಷಿನೋಟಗಳನ್ನು ನೀಡುವ ಹೆಲಿಕಾಪ್ಟರ್ ಸವಾರಿಯ ರೋಮಾಂಚನವನ್ನು ಆನಂದಿಸುತ್ತಾರೆ. ನೀವು ಗ್ರೇಟ್ ಓಷನ್ ರಸ್ತೆಯಲ್ಲಿ ಹಿಂತಿರುಗಲು ಬಯಸಿದರೆ, ಪೋರ್ಟ್ ಕ್ಯಾಂಪ್‌ಬೆಲ್ ಮತ್ತು ಆಂಗ್ಲೆಸಿಯಾದಂತಹ ಕಡಲತೀರದ ಹಳ್ಳಿಗಳು, ಕರಾವಳಿ ಜೀವನದಲ್ಲಿ ಮುಳುಗಲು, ಸ್ಥಳೀಯ ಭಕ್ಷ್ಯಗಳನ್ನು ಸವಿಯಲು ಮತ್ತು ಆಸ್ಟ್ರೇಲಿಯಾದ ಸುಂದರವಾದ ಭೂದೃಶ್ಯಕ್ಕಾಗಿ ಆಳವಾದ ಮೆಚ್ಚುಗೆಯನ್ನು ಪಡೆಯಲು ನಿಮಗೆ ಅವಕಾಶ ನೀಡುತ್ತದೆ.

ಮೆಲ್ಬೋರ್ನ್‌ನಿಂದ ಕೇವಲ ಒಂದು ಕೂಗಳತೆ ದೂರದಲ್ಲಿ ಫಿಲಿಪ್ ದ್ವೀಪವಿದೆ, ಇದು ಮೋಡಿಮಾಡುವ ಪೆಂಗ್ವಿನ್ ಪರೇಡ್‌ಗೆ ನೆಲೆಯಾಗಿದೆ. ದ್ವೀಪವು ಸುಂದರವಾಗಿದೆ ಮತ್ತು ನಾನು ಬೋರ್ಡ್ ವಾಕ್ ಸಮೀಪಿಸಿ ಅಂಚಿನಲ್ಲಿ ನಡೆಯಲು ದಾರಿ ಮಾಡಿಕೊಂಡೆ. ಸೂರ್ಯಾಸ್ತದ ಸಮಯದಲ್ಲಿ ಸಣ್ಣ ಪೆಂಗ್ವಿನ್‌ಗಳು ನೀರಿನಿಂದ ಕಾಣಿಸಿಕೊಳ್ಳಲು ಪ್ರಾರಂಭಿಸಿದವು ಮತ್ತು ತಮ್ಮ ಗೂಡುಗಳಿಗೆ ದಾರಿ ಮಾಡಿಕೊಟ್ಟವು. ಈ ಆರಾಧ್ಯ ಜೀವಿಗಳು ಸೂರ್ಯಾಸ್ತದ ಸಮಯದಲ್ಲಿ ದಡಕ್ಕೆ ಅಲೆದಾಡುವುದನ್ನು ನೋಡುವುದು ಅವುಗಳ ನೈಸರ್ಗಿಕ ನಡವಳಿಕೆಯ ಬಗ್ಗೆ ಆಕರ್ಷಕ ನೋಟ ನೀಡಿತು, ಆಸ್ಟ್ರೇಲಿಯಾದ ವೈವಿಧ್ಯಮಯ ವನ್ಯಜೀವಿಗಳಿಗೆ ಮತ್ತೊಂದು ಆಯಾಮ ಸೇರಿಸಿತು.

ವರ್ಷಪೂರ್ತಿ ಪರಿಪೂರ್ಣ ರಜಾದಿನದ ತಾಣವನ್ನು ಖಚಿತಪಡಿಸುವ ವೈವಿಧ್ಯಮಯ ಹವಾಮಾನದೊಂದಿಗೆ, ಆಸ್ಟ್ರೇಲಿಯಾವು ಪ್ರತಿಯೊಬ್ಬ ಪ್ರಯಾಣಿಕರಿಗೆ ನೀಡಲು ನಿಜವಾಗಿಯೂ ಏನನ್ನಾದರೂ ಹೊಂದಿದೆ. ನೀವು ಗೋಲ್ಡ್ ಕೋಸ್ಟ್‌ನ ಬಿಸಿಲಿನಿಂದ ಮುಳುಗಿರುವ ಕಡಲತೀರಗಳಿಗೆ ಅಥವಾ ಮೆಲ್ಬೋರ್ನ್‌ನ ರೋಮಾಂಚಕ ಸಾಂಸ್ಕೃತಿಕ ದೃಶ್ಯಕ್ಕೆ ಆಕರ್ಷಿತರಾಗಿದ್ದರೂ, ಈ ಆಕರ್ಷಕ ಖಂಡದ ಪ್ರತಿಯೊಂದು ಮೂಲೆಯಲ್ಲಿಯೂ ಮ್ಯಾಜಿಕ್ ಕಂಡುಬರುತ್ತದೆ. ವೀಣಾ ವರ್ಲ್ಡ್‌ನಲ್ಲಿ, ಆಸ್ಟ್ರೇಲಿಯಾದ ಮೂಲತತ್ವದಲ್ಲಿ ನಿಮ್ಮನ್ನು ಮುಳುಗಿಸುವ ಪ್ರವಾಸಗಳನ್ನು ಕ್ಯುರೇಟ್ ಮಾಡಲು ನಾವು ಬದ್ಧರಾಗಿದ್ದೇವೆ, ಜೀವಮಾನವಿಡೀ ಉಳಿಯುವಂತಹ ಪಾಲಿಸಬೇಕಾದ ನೆನಪುಗಳನ್ನು ಸೃಷ್ಟಿಸುತ್ತೇವೆ. ಆದ್ದರಿಂದ ಬನ್ನಿ, ನನ್ನೊಂದಿಗೆ ಒಂದು ಸಾಹಸಕ್ಕೆ ಸೇರಿಕೊಳ್ಳಿ ಮತ್ತು ಆಸ್ಟ್ರೇಲಿಯಾದ ಅಪ್ರತಿಮ ಸೌಂದರ್ಯವನ್ನು ವೀಣಾ ವರ್ಲ್ಡ್ ಜೊತೆಗೆ ಅನ್ವೇಷಿ ಸೋಣ.

ವೀಣಾ ವರ್ಲ್ಡ್ ವೆಬ್‌ಸೈಟ್ www.veenaworld.com ನಲ್ಲಿ ಪ್ರತಿ ವಾರ ವಿವಿಧ ಪ್ರಕಟಣೆಗಳಲ್ಲಿ ಪ್ರಕಟವಾಗುವ ಸುನೀಲ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ಈಗ ಓದಿ.

**ಒನ್ ಕಂಟ್ರಿ ... ಒನ್ ಕಾಂಟಿನೆಂಟ್**
**ಒನ್ ಅನ್ ಫರ್ಗೆಟೇಬಲ್ ಟೂರ್...**
**ಕಮ್, ಡಿಸ್ಕವರ್ ಆಸ್ಟ್ರೇಲಿಯಾ ವಿತ್ ವೀಣಾ ವರ್ಲ್ಡ್**

ಆಸ್ಟ್ರೇಲಿಯಾ ವಿಶ್ವದ ಅತಿದೊಡ್ಡ ದ್ವೀಪ ಮತ್ತು ಚಿಕ್ಕ ಖಂಡವಾಗಿದೆ. ಭವ್ಯವಾದ ಗ್ರೇಟ್ ಬ್ಯಾರಿಯರ್ ರೀಫ್‌ನಿಂದ ಐಕಾನಿಕ್ ಸಿಡ್ನಿ ಒಪೇರಾ ಹೌಸ್, ಮೆಲ್ಬೋರ್ನ್ ಕ್ರಿಕೆಟ್ ಗ್ರೌಂಡ್ ಮತ್ತು ಅನನ್ಯ ವನ್ಯಜೀವಿಗಳು, ವಿಶ್ವದರ್ಜೆಯ ಥೀಮ್ ಪಾರ್ಕ್‌ಗಳು ಮತ್ತು ಅದ್ಭುತವಾದ ಗ್ರೇಟ್ ಓಷನ್ ರಸ್ತೆಯವರೆಗೆ, ಆಸ್ಟ್ರೇಲಿಯಾವು ಎಲ್ಲರಿಗೂ ಏನನ್ನಾದರೂ ನೀಡುತ್ತದೆ. ಕುಟುಂಬಗಳು ಮತ್ತು ಸಾಹಸಿಗಳಿಗೆ ಇದು ಪರಿಪೂರ್ಣ ತಾಣವಾಗಿದೆ. ಆಸ್ಟ್ರೇಲಿಯಾವು ವೀಣಾ ಪ್ರಪಂಚದ ಹೃದಯಭಾಗದಲ್ಲಿದೆ ಮತ್ತು ಸಾವಿರಾರು ಪ್ರವಾಸಿಗರು ಈಗಾಗಲೇ ಅದರ ಅದ್ಭುತಗಳನ್ನು ಅನುಭವಿಸಿದ್ದಾರೆ. ಈಗ, ನಿಮ್ಮ ಸರದಿ.
**ಚಲೋ, ಬಾಗ್ ಭರೋ, ನಿಕಲ್ ಪಡೋ!**

**ಆಸ್ಟ್ರೇಲಿಯಾ**
ವೀಣಾ ವರ್ಲ್ಡ್ ನೊಂದಿಗೆ
ಸಂಪೂರ್ಣ ಆಸ್ಟ್ರೇಲಿಯಾ • ಆಸ್ಟ್ರೇಲಿಯಾದ ಅತ್ಯುತ್ತಮ ತಾಣಗಳು, ಹಿರಿಯರ ವಿಶೇಷ ಆಸ್ಟ್ರೇಲಿಯಾ • ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್

Email: travel@veenaworld.com | veenaworld.com
Veena World Bengaluru: 887 997 2217 | Toll-Free: 1800 22 7979

VEENA WORLD
Travel. Explore. Celebrate Life.

ನಾಲ್ಕನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ಆರ್ಚರಿಪಟು ದೀಪಿಕಾ ಕುಮಾರಿ ಮನದ ಮಾತು

# ಮಗಳ ನೆನಪಿನ ಜೊತೆ ಪದಕದ ಸವಾಲು

ಆರ್ಚರಿಪಟು ದೀಪಿಕಾ ಕುಮಾರಿ –ಪಿಟಿಐ ಚಿತ್ರ

**ಜಾಕ್ಸ್ (ಫ್ರಾನ್ಸ್) (ಪಿಟಿಐ):** ಆರ್ಚರಿಪಟು ದೀಪಿಕಾ ಕುಮಾರಿ ಅವರು ತೊಳಲಾಟದಲ್ಲಿದ್ದಾರೆ. 19 ತಿಂಗಳ ಪುಟ್ಟ ಮಗಳನ್ನು ಬಿಟ್ಟು ದೂರದ ಪ್ಯಾರಿಸ್‌ನ ಕ್ರೀಡಾಗ್ರಾಮದಲ್ಲಿ ಇರಬೇಕಾದ ಅನಿವಾರ್ಯತೆ ಒಂದೆಡೆ. ಇನ್ನೊಂದೆಡೆ ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಪದಕವನ್ನು ಗೆಲ್ಲಲೇಬೇಕೆಂಬ ತವಕ.

ಇದು ಅವರ ಪಾಲಿಗೆ ನಾಲ್ಕನೇ ಒಲಿಂಪಿಕ್ಸ್. ಈ ಬಾರಿ ಪದಕ ಗೆಲ್ಲಲೇ ಬೇಕೆಂಬ ಛಲ ಹೊತ್ತ ದೀಪಿಕಾ, ಅಭ್ಯಾಸ ಕ್ಕಾಗಿ ಎರಡು ತಿಂಗಳಿಂದ ಮಗುವಿಂದ ದೂರವಿದ್ದಾರೆ. ಎಳೆಯ ಕಂದನ ನೆನಪಾದರೂ, ದೇಶಕ್ಕಾಗಿ ಪದಕ ಗೆಲ್ಲುವ ಅವರ ದೃಢನಿಶ್ಚಯದಿಂದ ಅವರು ಈ ಕಠಿಣ ನಿರ್ಧಾರ ಕೈಗೊಂಡಿದ್ದಾರೆ.

'ಪುಟ್ಟ ಮಗುವಿನಿಂದ ಬಹುದೂರ ವಿರುವ ನೋವನ್ನು ವಿವರಿಸುವುದು ಕಷ್ಟ. ಆದರೆ ಹಲವು ವರ್ಷಗಳಿಂದ ಏನು ಸಾಧಿಸಲು ಪ್ರಯತ್ನಿಸಿದ್ದೀರೊ, ಅದಕ್ಕೀಗ ಅವಕಾಶ ಒದಗಿದೆ' ಎಂದು ದೀಪಿಕಾ ಪಿಟಿಐಗೆ ವಿಶೇಷ ಸಂದರ್ಶನದಲ್ಲಿ ತಿಳಿಸಿದರು.

ಅವರ ಪತಿ, ಮಾಜಿ ಅಂತರರಾಷ್ಟ್ರೀಯ ಆರ್ಚರಿ ಪಟು ಅತನು ದಾಸ್ ಅವರು ಸಾಹಸಪಟ್ಟು ಮಗಳು ವೇದಿಕಾಳನ್ನು, ಪುಣೆಯ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್‌ಗೆ ಕರೆತಂದು ಪತ್ನಿಗೆ ತೋರಿಸಿದ್ದರು. ಅದೂ ಕೂಡ ಫ್ರಾನ್ಸ್‌ಗೆ ಹೊರಡುವ ಸ್ವಲ್ಪ ಮೊದಲು.

ಅದು ದೀಪಿಕಾ ಅವರಿಗೆ ಭಾವುಕ ಕ್ಷಣ. 'ಮಗು ಜೊತೆಯಲ್ಲಿಲ್ಲದೇ ಇರುವ ಕಷ್ಟ ಹೇಳಲಾಗದು. ಆದರೆ ಅತ್ತೆ-ಮಾವನ ಜೊತೆ ಅವಳು ಚೆನ್ನಾಗಿ ಹೊಂದಿಕೊಂಡಿದ್ದಾಳೆ' ಎಂದು ಕೊಂಚ ಸಮಾಧಾನದಿಂದ ಹೇಳಿದರು.

**ಎದುರಾಯಿತು ಸವಾಲು:** 2022 ರಲ್ಲಿ ಮಗುವಿಗೆ ಜನ್ಮನೀಡಿದ ನಂತರ ದೀಪಿಕಾ ಅವರಿಗೆ ಕೆಲವು ಸವಾಲುಗಳೂ ಎದುರಾದವು. ಸ್ನಾಯು ಸಮಸ್ಯೆಗೆ ಒಳಗಾದ ಅವರಿಗೆ 19 ಕೆ.ಜಿ. ತೂಕದ ಬಿಲ್ಲು ಎತ್ತುವುದೂ ಕಷ್ಟವಾಗಿತ್ತು. ಒಂದು ಹಂತದಲ್ಲಿ ತಮ್ಮ ಕ್ರೀಡಾ ಜೀವನ ಮುಗಿಯಿತೆಂದೇ ಭಾವಿಸಿದ್ದರು. ಆದರೆ ಛಲ ಬಿಡಲಿಲ್ಲ. ನೋವು ಒಂದು ಹಂತಕ್ಕೆ ಕಡಿಮೆಯಾದ ಮೇಲೆ ನಿತ್ಯವೂ ಜಾಗಿಂಗ್ ನಡೆಸುತ್ತಿದ್ದರು. ಜಿಮ್‌ನಲ್ಲೂ ಶ್ರಮ ಹಾಕಿದರು.

ಕಳೆದ ವರ್ಷ ಗೋವಾದಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಗಳಲ್ಲಿ ಮಿಂಚಿದರು. ಎರಡು ಚಿನ್ನ, ಒಂದು ಬೆಳ್ಳಿ ಪದಕಗಳಿಗೆ ಒಡತಿಯಾದರು. ಕೊರಿಯಾದ ಪ್ರಸಿದ್ಧ ಕೋಚ್ ಕಿಮ್ ಹ್ಯುಂಗ್ ತಕ್ ಅವರಿಂದ ತರಬೇತಿ ಪಡೆಯುವ ನಿರ್ಧಾರಕ್ಕೆ ಬಂದರು. ಅವರು ವಿಶ್ವದ ಅನೇಕ ಖ್ಯಾತನಾಮ ಬಿಲ್ಗಾರರಿಗೆ ತರಬೇತಿ ನೀಡಿದವರು.

'ಬರೇ ಕೌಶಲ ಮಾತ್ರವಲ್ಲ, ಅವರ ಮಾರ್ಗದರ್ಶನದಿಂದ ಶೂಟಿಂಗ್ ವೇಳೆ ಸ್ಪಷ್ಟತೆ ದೊರೆಯಿತು. ಇದು ನನ್ನ ಆತ್ಮವಿಶ್ವಾಸ ಹೆಚ್ಚಿಸಿತು' ಎಂದು ದೀಪಿಕಾ ಹೇಳಿದರು. ಶಾಂಘೈ ವಿಶ್ವಕಪ್‌ನಲ್ಲಿ ಬೆಳ್ಳಿ ಗೆದ್ದರು. ಇದು ಎರಡು ವರ್ಷಗಳಲ್ಲಿ ಅವರ ಮೊದಲ 'ಪೋಡಿಯಂ' (ಮೊದಲ ಮೂರರಲ್ಲಿ ಸ್ಥಾನ ಪಡೆಯುವುದು) ಸಾಧನೆಯಾಯಿತು.

ಮೂರು ತಿಂಗಳ ದೀರ್ಘ ಆಯ್ಕೆ ಟ್ರಯಲ್ಸ್‌ನಲ್ಲಿ 39 ವರ್ಷದ ದೀಪಿಕಾ ಅಮೋಘ ಕೌಶಲ ತೋರಿದರು. ಪ್ಯಾರಿಸ್ ಕೂಟಕ್ಕೆ ಆಯ್ಕೆಯಾದರು.

ಪ್ಯಾರಿಸ್ ಅವರ ಪಾಲಿಗೆ ಸವಿನೆನಪುಗಳ ಬುತ್ತಿ. ಇಲ್ಲಿಯೇ ನಡೆದ 2021ರ ವಿಶ್ವಕಪ್‌ನಲ್ಲಿ ಹ್ಯಾಟ್ರಿಕ್ ಚಿನ್ನ. ವೈಯಕ್ತಿಕ, ತಂಡ ವಿಭಾಗದ, ಮಿಶ್ರ ತಂಡ (ಗಂಡ ಅತನು ಜೊತೆ) ವಿಭಾಗದಲ್ಲಿ ಮೊದಲಿಗರಾಗಿದ್ದರು.

2013ರಲ್ಲಿ ಫ್ರಾನ್ಸ್ ರಾಜಧಾನಿಯಲ್ಲೇ ನಡೆದ ವಿಶ್ವಕಪ್ ಫೈನಲ್‌ನಲ್ಲಿ ಬೆಳ್ಳಿಯ ಪದಕ ಕೊರಳಿಗೆ ಹಾಕಿಕೊಂಡಿದ್ದರು. ಒಲಿಂಪಿಕ್ಸ್ ತಮ್ಮ ಪಾಲಿಗೆ ಇತರ ಯಾವುದೇ ಅತ್ಯುನ್ನತ ಕೂಟದಂತೆ ಎಂದಿದ್ದಾರೆ ದೀಪಿಕಾ.

## ಕ್ರೀಡಾಗ್ರಾಮ ತಲುಪಿದ ಆರ್ಚರಿ, ರೋಯಿಂಗ್ ತಂಡ

**ಪ್ಯಾರಿಸ್ (ಪಿಟಿಐ):** ಭಾರತದ ಆರ್ಚರಿ ಮತ್ತು ರೋಯಿಂಗ್ ತಂಡಗಳು ಇಲ್ಲಿನ ಒಲಿಂಪಿಕ್ಸ್ ಕ್ರೀಡಾ ಗ್ರಾಮಕ್ಕೆ ಶುಕ್ರವಾರ ಬಂದಿಳಿದಿವೆ. ಇವು ಕ್ರೀಡಾಗ್ರಾಮಕ್ಕೆ ಬಂದ ಭಾರತದ ಮೊದಲ ತಂಡಗಳು ಎನಿಸಿವೆ ಎಂದು ತಂಡದ ಷೆಫ್-ಡಿ-ಮಿಷನ್ ಗಗನ್ ನಾರಂಗ್ ಶನಿವಾರ ಮಾಹಿತಿ ನೀಡಿದ್ದಾರೆ.

ಈ ಎರಡು ತಂಡಗಳ ಸ್ಪರ್ಧಿಗಳು ತಮ್ಮ ಅಭಿಯಾನ ಆರಂಭಿಸಲು ಕಾತರರಾಗಿದ್ದಾರೆ ಎಂದೂ ಹೇಳಿದ್ದಾರೆ. ಭಾರತ ಪುರುಷರ ಹಾಕಿ ತಂಡ, ನೆದರ್ಲೆಂಡ್ಸ್‌ನಿಂದ ಇಲ್ಲಿಗೆ ತಲುಪಬೇಕಾಗಿದೆ. ಜುಲೈ 26 ರಿಂದ ಆಗಸ್ಟ್ 11ರವರೆಗೆ ಪ್ಯಾರಿಸ್ ಕ್ರೀಡೆಗಳು ನಡೆಯಲಿವೆ.

'ನಾನು ಗುರುವಾರ ರಾತ್ರಿಯೇ ಪ್ಯಾರಿಸ್‌ಗೆ ಬಂದಿಳಿದಿದ್ದು, ಕ್ರೀಡಾ ಗ್ರಾಮದೊಳಗೆ ಮಾಡಿರುವ ವ್ಯವಸ್ಥೆಗಳನ್ನು ಪರಿಶೀಲಿಸಿದ್ದೇನೆ. ಆರ್ಚರಿ ಮತ್ತು ರೋಯಿಂಗ್ ತಂಡಗಳು ಇಲ್ಲಿ ತಲುಪಿದ ಭಾರತದ ಮೊದಲ ತಂಡಗಳಾಗಿವೆ. ಅವರಿಗೆ ಚೆಕ್ ಇನ್ ಆಗಲು ಏನೂ ಸಮಸ್ಯೆಯಾಗಲಿಲ್ಲ. ಅವರು ಹೊಂದಿಕೊಳ್ಳುತ್ತಿದ್ದು, ಕ್ರೀಡಾ ಗ್ರಾಮದ ಪರಿಚಯ ಮಾಡಿಕೊಳ್ಳುತ್ತಿದ್ದಾರೆ' ಎಂದು 2012ರ ಲಂಡನ್ ಒಲಿಂಪಿಕ್ಸ್‌ನ ಶೂಟಿಂಗ್ ಕಂಚಿನ ಪದಕ ವಿಜೇತ ನಾರಂಗ್ ವಿವರಿಸಿದರು. 'ಅವರು ಖುಷಿಯಾಗಿದ್ದಾರೆ. ಭಾರತ ಹಾಕಿ ತಂಡ ಕೂಡ ಶನಿವಾರವೇ ತಲುಪಬೇಕಾಗಿದೆ. ಕ್ರೀಡಾಪಟುವಾಗಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ದಿನಗಳು ನೆನಪಿಗೆ ಬಂದವು' ಎಂದರು.

'ತಮ್ಮ ತಮ್ಮ ಸ್ಪರ್ಧೆಗಳಿಗೆ ಮೊದಲು ಅಥ್ಲೀಟುಗಳಿಗೆ ಎಲ್ಲವೂ ಲಭ್ಯವಾಗುವಂತೆ ಖಾತರಿಪಡಿಸಿಕೊಳ್ಳುವುದನ್ನು ನಾವು ಬಯಸಿದ್ದೇವೆ' ಎಂದರು. ನಾರಂಗ್ ನಾಲ್ಕು ಬಾರಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದು ಅತ್ಯುನ್ನತ ಕ್ರೀಡಾ ಪ್ರಶಸ್ತಿಯಾದ ಖೇಲ್ ರತ್ನ ಮತ್ತು ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ. ತಮ್ಮನ್ನು ಭಾರತ ಒಲಿಂಪಿಕ್ಸ್ ತಂಡದ ಷೆಫ್ ಡಿ ಮಿಷನ್ ಆಗಿ ನೇಮಕ ಮಾಡಿದ ಭಾರತ ಒಲಿಂಪಿಕ್ ಸಂಸ್ಥೆಗೆ ಅವರು ಕೃತಜ್ಞತೆ ಸಲ್ಲಿಸಿದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 20 ವಿವಿಧ ಕ್ರೀಡೆಗಳಲ್ಲಿ 117 ಮಂದಿ ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ.

## ಸರ್ವಿಸಸ್‌ನ ಇಬ್ಬರು ಮಹಿಳಾ ಅಥ್ಲೀಟ್‌ಗಳು

ಜೈಸ್ಮೈನ್ ಲಂಬೊರಿಯಾ

**ನವದೆಹಲಿ (ಪಿಟಿಐ):** ಭಾರತೀಯ ಸೇನೆಯ (ಸರ್ವಿಸಸ್ ತಂಡ) ಇಬ್ಬರು ಮಹಿಳಾ ಕ್ರೀಡಾಪಟುಗಳು ಇದೇ ಮೊದಲ ಬಾರಿ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸಲಿದ್ದಾರೆ.

2022ರಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬಾಕ್ಸಿಂಗ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ಹವಾಲ್ದಾರ್ ಜೈಸ್ಮೈನ್ ಲಂಬೊರಿಯಾ ಮತ್ತು ಹೋದ ವರ್ಷದ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗಳಿಸಿದ್ದ ಸಿಪಿಒ ರಿತಿಕಾ ಹೂಡಾ ಅವರು ಒಲಿಂಪಿಕ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಪ್ಯಾರಿಸ್‌ನಲ್ಲಿ ಸ್ಪರ್ಧಿಸಲಿರುವ ಭಾರತ ತಂಡದಲ್ಲಿ ಒಟ್ಟು 117 ಕ್ರೀಡಾಪಟುಗಳು ಇದ್ದಾರೆ. ಅದರಲ್ಲಿ ಒಟ್ಟು 24 ಅಥ್ಲೀಟ್‌ಗಳು ಸರ್ವಿಸಸ್‌ನವರು. ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಅಥ್ಲೀಟ್, ಸುಬೇದಾರ್ ನೀರಜ್ ಚೋಪ್ರಾ ಅವರು ಪ್ರಮುಖರಾಗಿದ್ದಾರೆ. ಈ ತಂಡದಲ್ಲಿ 22 ಮಂದಿ ಪುರುಷರಿದ್ದಾರೆ ಎಂದು ಕೇಂದ್ರ ರಕ್ಷಣಾ ಸಚಿವಾಲಯ ತಿಳಿಸಿದೆ.

ಸರ್ವಿಸಸ್‌ನ ಅಮಿತ್ ಪಂಘಲ್ (ಬಾಕ್ಸಿಂಗ್), ತಜೀಂದರ್ ಸಿಂಗ್ ತೂರ್ (ಶಾಟ್‌ಪಟ್), ಅವಿನಾಶ್ ಸಾಬಳೆ (3000 ಮೀ ಸ್ಟೀಪಲ್‌ಚೇಸ್), ಮೊಹಮ್ಮದ್ ಅನಾಸ್ ಯಾಹಿಯಾ, ಮೊಹಮ್ಮದ್ ಅಜ್ಮಲ್, ಸಂತೋಷಕುಮಾರ್ ತಮಿಳರಸನ್ ಮತ್ತು ಮಿಜೊ ಚಾಕೊ ಕುರಿಯನ್ (4X400 ಮೀ ರಿಲೆ), ಅಬ್ದುಲ್ಲಾ ಅಬೂಬಕ್ಕರ್ (ಟ್ರಿಪಲ್ ಜಂಪ್), ತರುಣದೀಪ್ ರಾಯ್ ಮತ್ತು ಧೀರಜ್ ಬೊಮ್ಮದೇವರ (ಆರ್ಚರಿ) ಮತ್ತು ಸಂದೀಪ್ ಸಿಂಗ್ (ಶೂಟಿಂಗ್) ಅವರೂ ಭಾರತ ತಂಡದಲ್ಲಿದ್ದಾರೆ.

## ರಾಜ್ಯದ ಕ್ರೀಡಾಪಟುಗಳಿಗೆ ತಲಾ ₹5 ಲಕ್ಷ ಪ್ರೋತ್ಸಾಹಧನ

**ಬೆಂಗಳೂರು:** ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ದೇಶವನ್ನು ಪ್ರತಿನಿಧಿಸುತ್ತಿರುವ ರಾಜ್ಯದ ಒಂಬತ್ತು ಕ್ರೀಡಾಪಟುಗಳಿಗೆ ತಲಾ ₹5 ಲಕ್ಷ ಪ್ರೋತ್ಸಾಹಧನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಮಂಜೂರು ಮಾಡಿದ್ದಾರೆ.

ಇದೇ 26ರಿಂದ ಆಗಸ್ಟ್ 11ರವರೆಗೆ ಪ್ಯಾರಿಸ್‌ನಲ್ಲಿ ಒಲಿಂಪಿಕ್ಸ್ ನಡೆಯಲಿದೆ. ಆ ಕೂಟದಲ್ಲಿ ಭಾಗಿಯಾಗುತ್ತಿರುವ ರಾಜ್ಯದ ಒಂಬತ್ತು ಮಂದಿ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡಬೇಕು ಎಂದು ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆ ಅಧ್ಯಕ್ಷ ಮತ್ತು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಅವರು ಮನವಿ ಸಲ್ಲಿಸಿದ್ದರು.

ಅಶ್ವಿನಿ ಪೊನ್ನಪ್ಪ (ಬ್ಯಾಡ್ಮಿಂಟನ್ ಡಬಲ್ಸ್), ಅದಿತಿ ಅಶೋಕ್ (ಗಾಲ್ಫ್), ಧಿನಿಧಿ ದೇಸಿಂಗು (ಫ್ರೀಸ್ಟೈಲ್ ಈಜು), ಎಂ.ಆರ್.ಪೂವಮ್ಮ (ಮಿಶ್ರ ರಿಲೇ ಓಟ) ಮತ್ತು ಅರ್ಚನಾ ಕಾಮತ್ (ಟೇಬಲ್ ಟೆನಿಸ್) ಪ್ಯಾರಿಸ್ ಕೂಟದಲ್ಲಿ ಭಾಗವಹಿಸುತ್ತಿರುವ ರಾಜ್ಯದ ಮಹಿಳಾ ಕ್ರೀಡಾಪಟುಗಳು.

ಶ್ರೀಹರಿ ನಟರಾಜ್ (ಈಜು), ರೋಹನ್ ಬೋಪಣ್ಣ (ಟೆನಿಸ್ ಡಬಲ್ಸ್), ನಿಶಾಂತ್ ದೇವ್ (ಬಾಕ್ಸಿಂಗ್ 71 ಕೆ.ಜಿ. ವಿಭಾಗ), ಮಿಜೊ ಚಾಕೊ (ಮಿಶ್ರ ರಿಲೆ) ಅವರು ಒಲಿಂಪಿಕ್ಸ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸುತ್ತಿರುವ ನಾಲ್ವರು ಪುರುಷ ಕ್ರೀಡಾಪಟುಗಳಾಗಿದ್ದಾರೆ.

ಈ ಒಂಬತ್ತು ಕ್ರೀಡಾಪಟುಗಳಿಗೆ ರಾಜ್ಯ ಒಲಿಂಪಿಕ್ಸ್ ಸಂಸ್ಥೆಯಿಂದ ಪ್ರತ್ಯೇಕ ನೆರವು ನೀಡಲಾಗುತ್ತದೆ ಎಂದು ಗೋವಿಂದರಾಜು ಅವರು ಹೇಳಿದರು.

## ಕುಸ್ತಿಪಟುಗಳಿಂದ ಈ ಬಾರಿಯೂ ಪದಕ: ಯೋಗೇಶ್ವರ್ ವಿಶ್ವಾಸ

**ನವದೆಹಲಿ (ಪಿಟಿಐ):** ಭಾರತದ ಪೈಲ್ವಾನರು ಒಲಿಂಪಿಕ್ ಕ್ರೀಡೆಗಳಲ್ಲಿ ಮತ್ತೆ ದೇಶಕ್ಕೆ ಪದಕಗಳನ್ನು ಗೆದ್ದುಕೊಡಲಿದ್ದಾರೆ. ಈ ಬಾರಿ ಅನುಕೂಲಕರ 'ಡ್ರಾ' ದೊರೆತರೆ ಪದಕಗಳು ಒಂದಕ್ಕಿಂತ ಹೆಚ್ಚಾಗಬಲ್ಲದು ಎಂದು ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಯೋಗೇಶ್ವರ ದತ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಯೋಗೇಶ್ವರ

ಭಾರತದ ಆರು ಮಂದಿ ಪೈಲ್ವಾನರು ಪ್ಯಾರಿಸ್ ಕ್ರೀಡೆಗಳಲ್ಲಿ ಕಣಕ್ಕಿಳಿಯಲಿದ್ದಾರೆ. ಕುಸ್ತಿ ಸ್ಪರ್ಧೆಗಳು ಆಗಸ್ಟ್ 5ರಂದು ಆರಂಭವಾಗಲಿವೆ.

ಪುರುಷರ ವಿಭಾಗದಲ್ಲಿ ಒಬ್ಬರು – ಅಮನ್ ಸೆಹ್ರಾವತ್ (57 ಕೆ.ಜಿ) ಮಾತ್ರ ಅರ್ಹತೆ ಪಡೆದಿದ್ದಾರೆ. ಮಹಿಳಾ ವಿಭಾಗದ ಆರು ತೂಕ ವಿಭಾಗಗಳಲ್ಲಿ ಭಾರತದ ಐವರ ತಂಡ ಕಣಕ್ಕಿಳಿಯಲಿದೆ. 62 ಕೆ.ಜಿ. ವಿಭಾಗದಲ್ಲಿ ಮಾತ್ರ ಭಾರತದ ಸ್ಪರ್ಧಿಗಳಿಲ್ಲ.

2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಸುಶೀಲ್ ಕುಮಾರ್ ಕಂಚಿನ ಪದಕ ಗೆದ್ದ ನಂತರ ಪ್ರತಿ ಒಲಿಂಪಿಕ್ಸ್‌ಗಳಲ್ಲಿ ಪೈಲ್ವಾರು ಪದಕ ತಂದುಕೊಟ್ಟಿದ್ದಾರೆ.

'ಎಲ್ಲವೂ ಡ್ರಾ (ಮುಖಾಮುಖಿ ಪಟ್ಟಿ) ಮೇಲೆ ಅವಲಂಬಿತವಾಗಿದೆ. ಭಾರತದ ಕುಸ್ತಿಸ್ಪರ್ಧಿಗಳು ಅನುಕೂಲಕರ ಡ್ರಾ ಪಡೆದಲ್ಲಿ ಮೂರು ಪದಕಗಳು ಬರಬಹುದೆಂಬುದು ನನ್ನ ನಿರೀಕ್ಷೆ' ಎಂದು ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಹಮ್ಮಿಕೊಂಡಿದ್ದ ಕಾರ್ಯಕ್ರಮದ ಸಂದರ್ಭದಲ್ಲಿ ಅವರು ಪಿಟಿಐ ವಿಡಿಯೊಗೆ ತಿಳಿಸಿದರು.

ಕಳೆದ ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಭಾರತ ಕುಸ್ತಿಯಲ್ಲಿ ಸತತವಾಗಿ ಪದಕಗಳನ್ನು ಗೆಲ್ಲುತ್ತಿದೆ. ನಾವು ಸತತ ಐದನೇ ಬಾರಿಯೂ ದೇಶಕ್ಕೆ ಕುಸ್ತಿಯಿಂದ ಪದಕ ಬರಬಹುದೆಂದು ವಿಶ್ವಾಸ ವ್ಯಕ್ತಪಡಿಸೋಣ. ನಾನು ಶುಭ ಹಾರೈಸುವೆ. ಪೈಲ್ವಾನರು ಸಾಕಷ್ಟು ಸಿದ್ಧತೆ ನಡೆಸಿದ್ದಾರೆ' ಎಂದರು.

'ಒಲಿಂಪಿಕ್ಸ್‌ನಲ್ಲಿ ಹಾಕಿಯ ನಂತರ ಅತಿ ಹೆಚ್ಚು ಪದಕಗಳು ಬಂದಿರುವುದು ಕುಸ್ತಿಯಲ್ಲಿ' ಎಂದರು.

ಭಾರತ ತಂಡ ಈ ಬಾರಿ 10 ಪದಕಗಳನ್ನು ಗೆಲ್ಲಬಹುದೆಂಬುದು ನನ್ನ ನಿರೀಕ್ಷೆ ಎಂದರು.

ಪ್ರಶಸ್ತಿಯೊಂದಿಗೆ ಆರ್ಣವ್, ತನಿಷ್ಕಾ ಹಾಗೂ ಅಥರ್ವ

## ಟಿಟಿ: ಅಥರ್ವ, ತನಿಷ್ಕಾಗೆ ಪ್ರಶಸ್ತಿ

**ಮೈಸೂರು:** ಅಥರ್ವ ನವರಂಗೆ ಹಾಗೂ ತನಿಷ್ಕಾ ಕಪಿಲ್ ಕಾಲಭೈರವ ಅವರು ಇಲ್ಲಿ ನಡೆಯುತ್ತಿರುವ ಮೂರನೇ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 15 ವರ್ಷದೊಳಗಿನವರ ವಿಭಾಗದಲ್ಲಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ಸಿಂಗಲ್ಸ್ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮಿದರು. 17 ವರ್ಷದ ಒಳಗಿನ ಬಾಲಕರ ಸಿಂಗಲ್ಸ್‌ನಲ್ಲಿ ಎನ್. ಆರ್ಣವ್ ಪ್ರಶಸ್ತಿ ಗೆದ್ದರು.

ಮೈಸೂರು ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯು ನಗರದ ಮೈಸೂರು ವಿ.ವಿ. ಜಿಮ್ನಾಷಿಯಂ ಹಾಲ್‌ನಲ್ಲಿ ಆಯೋಜಿಸಿರುವ ಟೂರ್ನಿಯಲ್ಲಿ ಶನಿವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಅಥರ್ವ 8-11, 11-6, 11-7, 11-7 ಅಂತರದಿಂದ ಎನ್. ಆರ್ಣವ್ ಅವರನ್ನು ಮಣಿಸಿದರು. ಮೊದಲ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದರೂ ನಂತರ ಪುಟಿದೆದ್ದು ಉಳಿದ ಮೂರು ಸೆಟ್ ಗೆಲ್ಲುವ ಮೂಲಕ ಅವರು ಪ್ರಶಸ್ತಿ ಎತ್ತಿ ಹಿಡಿದರು.

ಸೆಮಿಫೈನಲ್‌ನಲ್ಲಿ ಆರ್ಣವ್, ಗೌರವ್ ಗೌಡ ವಿರುದ್ಧ, ಅಥರ್ವ ಅವರು ಸಿದ್ಧಾರ್ಥ ವಿರುದ್ಧ ಜಯಗಳಿಸಿದ್ದರು.

ಇದೇ ವಿಭಾಗದ ಬಾಲಕಿಯರ ಫೈನಲ್‌ನಲ್ಲಿ ತನಿಷ್ಕಾ 10-12, 11-5, 11-7, 11-9 ಅಂತರದಿಂದ ಹಿಯಾ ಸಿಂಗ್ ಅವರನ್ನು ಪರಾಭವಗೊಳಿಸಿದರು. ಸೆಮಿಫೈನಲ್‌ನಲ್ಲಿ ತನಿಷ್ಕಾ, ಕೈರಾ ಬಾಳಿಗ ಎದುರು ಹಾಗೂ ಹಿಯಾ, ಶಿವಾನಿ ಮಹೇಂದ್ರನ್ ವಿರುದ್ಧ ಗೆಲುವು ದಾಖಲಿಸಿದ್ದರು.

**ಆರ್ಣವ್‌ಗೆ ಪ್ರಶಸ್ತಿ:** 17 ವರ್ಷ ಒಳಗಿನ ಬಾಲಕರ ವಿಭಾಗದ ಸಿಂಗಲ್ಸ್‌ನಲ್ಲಿ ಎನ್. ಆರ್ಣವ್ ಪ್ರಶಸ್ತಿ ಗೆದ್ದರು. ಫೈನಲ್‌ನಲ್ಲಿ ಅವರು ಸಿದ್ಧಾರ್ಥ ಧಾರಿವಾಲ್ ಅವರನ್ನು 12-10, 11-9, 12-10 ಅಂತರದಲ್ಲಿ ಮಣಿಸಿದರು.

**THE PRINTERS (MYSORE) PRIVATE LIMITED**
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

**AD SALES**

**Qualification :** Minimum Graduate
**Experience :** 3-5 years
**Location :** Bangalore (should be open to work from Bangalore)

**REQUIREMENT:**
* Drive advertisement revenue for educational publications (DHiE, Spardhavani, Student events and other products).
* Willingness to travel across Bangalore.
* Generate and follow up on leads.
* Develop and maintain client relationships
* Should have good communication skills both in English and kannada.

**SALARY:** Open for Discussion

Please send your application for the above position mentioning the job applied for (subject of the e-mail) and along with updated resume to:

Assistant Manager-Talent Acquisition
**The Printers (Mysore) Private Limited**
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಭಾರತ– ಯುಎಇ ಹಣಾಹಣಿ ಇಂದು

# ಸೆಮಿಯತ್ತ ಹರ್ಮನ್ ಪಡೆ ಚಿತ್ತ

ಹರ್ಮನ್‌ಪ್ರೀತ್ ಕೌರ್ –ಪಿಟಿಐ ಚಿತ್ರ

ಮಹಿಳೆಯರ ಏಷ್ಯಾ ಕಪ್ 2024

**ದಂಬುಲಾ, ಶ್ರೀಲಂಕಾ (ಪಿಟಿಐ):** ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಮಹಿಳೆಯರ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ಯುನೈಟೆಡ್ ಅರಬ್ ಎಮಿರೇಟ್ಸ್ ತಂಡವನ್ನು ಎದುರಿಸಲಿದೆ.

ಹಾಲಿ ಚಾಂಪಿಯನ್ ಭಾರತ ತಂಡವು ಮೊದಲ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಭರ್ಜರಿ ಜಯ ಗಳಿಸಿತ್ತು. ಇದೀಗ ಯುಎಇ ವಿರುದ್ಧ ಸುಲಭ ಜಯ ಸಾಧಿಸಿ, ಸೆಮಿಫೈನಲ್ ಪ್ರವೇಶಿಸುವತ್ತ ಚಿತ್ತ ನೆಟ್ಟಿದೆ.

ಅನುಭವ ಮತ್ತು ಸಾಮರ್ಥ್ಯದಲ್ಲಿ ಭಾರತ ತಂಡವು ಯುಎಇಗಿಂತ ಬಲಿಷ್ಠವಾಗಿದೆ. ಮಧ್ಯಮವೇಗಿ ಪೂಜಾ ವಸ್ತ್ರಕರ್, ಸ್ಪಿನ್ನರ್ ದೀಪ್ತಿ ಶರ್ಮಾ ಹಾಗೂ ರೇಣುಕಾ ಸಿಂಗ್ ಅವರು ಉತ್ತಮ ಲಯದಲ್ಲಿದ್ದಾರೆ. ಮೊದಲ ಪಂದ್ಯದಲ್ಲಿ ಪಾಕ್ ತಂಡವು ಸಾಧಾರಣ ಮೊತ್ತಕ್ಕೆ ಕುಸಿಯಲು ಈ ಮೂವರ ಬೌಲಿಂಗ್ ಕಾರಣವಾಗಿತ್ತು.

ಈ ಪಂದ್ಯದಲ್ಲಿಯೂ ಅವರು ಮಿಂಚುವ ನಿರೀಕ್ಷೆ ಇದೆ. ಭಾರತದ ಜೋಡಿ ಶಫಾಲಿ ವರ್ಮಾ ಮತ್ತು ಸ್ಮೃತಿ ಮಂದಾನ ಅವರು ಉತ್ತಮ ಆರಂಭ ನೀಡುವ ವಿಶ್ವಾಸವಿದೆ. ಮೊದಲ ಪಂದ್ಯದಲ್ಲಿ ಅವರು ಪ್ರಥಮ ವಿಕೆಟ್ ಜೊತೆಯಾಟದಲ್ಲಿ 9.3 ಓವರ್‌ಗಳಲ್ಲಿ 85 ರನ್ ಸೇರಿಸಿದ್ದರು. ಆದರೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಹೊಣೆಯರಿತು ಇನಿಂಗ್ಸ್‌ಗೆ ಬಲ ತುಂಬಬೇಕಿದೆ.

'ಇದೇ ವರ್ಷ ಬಾಂಗ್ಲಾದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿ ನಡೆಯಲಿದೆ. ಅದಕ್ಕೂ ಮುನ್ನ ನಮಗೆ ಹೆಚ್ಚು ಪಂದ್ಯಗಳು ಲಭ್ಯವಿಲ್ಲ. ಆದ್ದರಿಂದ ಏಷ್ಯಾ ಕಪ್ ಟೂರ್ನಿಯು ಪೂರ್ವಭಾವಿ ಅಭ್ಯಾಸದ ವೇದಿಕೆಯಾಗಿದೆ' ಎಂದು ತಂಡದ ಬೌಲರ್ ರೇಣುಕಾ ಸಿಂಗ್ ಸುದ್ದಿಗಾರರಿಗೆ ಹೇಳಿದರು.

ಭಾರತೀಯ ಮೂಲದ ಆಟಗಾರ್ತಿಯರು ಹೆಚ್ಚಿನ ಸಂಖ್ಯೆಯಲ್ಲಿರುವ ಯುಎಇ ಕಠಿಣ ಪೈಪೋಟಿ ಯೊಡ್ಡುವ ವಿಶ್ವಾಸದಲ್ಲಿದೆ. ಇಶಾ ರೋಹಿತ್ ಓಜಾ ನಾಯಕತ್ವದ ತಂಡವು ಮೊದಲ ಪಂದ್ಯದಲ್ಲಿ ನೇಪಾಳ ವಿರುದ್ಧ ಸೋತಿತ್ತು. ಆ ಪಂದ್ಯದಲ್ಲಿ ಕವಿಶಾ ಎಗಡೊಗೆ ಆಲ್‌ರೌಂಡ್ ಆಟವಾಡಿದ್ದರು. ಖುಷಿ ಶರ್ಮಾ ಅವರು ಉತ್ತಮ ಬ್ಯಾಟಿಂಗ್ ಮಾಡಿದ್ದರು. ಭಾರತ ತಂಡದ ವಿರುದ್ಧವೂ ಮಿಂಚುವ ಛಲದಲ್ಲಿದ್ದಾರೆ.

**ಪಂದ್ಯ ಆರಂಭ: ಮಧ್ಯಾಹ್ನ 2**
**ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಸ್ನಿ ಹಾಟ್‌ಸ್ಟಾರ್**

### ಬಾಲಕಿಗೆ ಮಂದಾನ ಮೊಬೈಲ್ ಕೊಡುಗೆ

**ದಂಬುಲಾ(ಪಿಟಿಐ):** ತಾಯಿಯ ನೆರವಿನಿಂದ ಗಾಲಿಕುರ್ಚಿಯಲ್ಲಿ ಕ್ರೀಡಾಂಗಣಕ್ಕೆ ಬಂದಿದ್ದ ಆದಿಶಾ ಹೆರಾತ್ ಎಂಬ ಬಾಲಕಿಗೆ ಭಾರತದ ಸ್ಟಾರ್ ಆಟಗಾರ್ತಿ ಸ್ಮೃತಿ ಮಂದಾನ ಮೊಬೈಲ್ ಫೋನ್ ಉಡುಗೊರೆ ನೀಡಿದ್ದಾರೆ.

ಈ ಕುರಿತು ವಿಡಿಯೊವನ್ನು ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ) ತಮ್ಮ ಎಕ್ಸ್ ಖಾತೆಯನ್ನು ಹಂಚಿಕೊಂಡು, 'ಆದಿಶಾಳ ಕ್ರಿಕೆಟ್ ಪ್ರೀತಿಯು ಆಕೆಯನ್ನು ಕ್ರೀಡಾಂಗಣಕ್ಕೆ ಬರುವಂತೆ ಮಾಡಿದೆ. ಆಕೆ ತನ್ನ ನೆಚ್ಚಿನ ಆಟಗಾರ್ತಿಯಿಂದ ಅಚ್ಚರಿಯ ಉಡುಗೊರೆ ಪಡೆದು ಖುಷಿಪಟ್ಟಳು' ಎಂದು ಬರೆದುಕೊಂಡಿದೆ.

## ಕ್ರಿಕೆಟ್: ಶ್ರೀಲಂಕಾ, ಥಾಯ್ಲೆಂಡ್‌ಗೆ ಜಯ

**ದಂಬುಲಾ (ಪಿಟಿಐ):** ವಿಶ್ಮಿ ಗುಣರತ್ನೆ (51; 48ಎ) ಅವರ ಅರ್ಧಶತಕದ ಬಲದಿಂದ ಶ್ರೀಲಂಕಾ ವನಿತೆಯರ ತಂಡವು ಇಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಬಾಂಗ್ಲಾದೇಶ ತಂಡದ ಎದುರು 7 ವಿಕೆಟ್‌ಗಳಿಂದ ಜಯಿಸಿತು.

ಮತ್ತೊಂದು ಪಂದ್ಯದಲ್ಲಿ ಮಲೇಷ್ಯಾ ವಿರುದ್ಧ ಥಾಯ್ಲೆಂಡ್ ಜಯ ಸಾಧಿಸಿತು.

**ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ:** 20 ಓವರ್‌ಗಳಲ್ಲಿ 8ಕ್ಕೆ 111 (ನಿಜರ್ ಸುಲ್ತಾನಾ ಔಟಾಗದೆ 48, ಪ್ರಭೋಧನಿ 20ಕ್ಕೆ2, ಪ್ರಿಯದರ್ಶನಿ 17ಕ್ಕೆ2) **ಶ್ರೀಲಂಕಾ:** 17.1 ಓವರ್‌ಗಳಲ್ಲಿ 3ಕ್ಕೆ 114 (ವಿಶ್ಮಿ ಗುಣರತ್ನೆ 51, ನಹೀದಾ ಅಕ್ತರ್ 12ಕ್ಕೆ3) **ಫಲಿತಾಂಶ:** ಶ್ರೀಲಂಕಾ ತಂಡಕ್ಕೆ 7 ವಿಕೆಟ್‌ಗಳ ಜಯ.
**ಥಾಯ್ಲೆಂಡ್:** 20 ಓವರ್‌ಗಳಲ್ಲಿ 6ಕ್ಕೆ133 (ಎನ್. ಕೊಂಚಾರೊನಕೈ 40, ಪನ್ನಿತಾ ಮಾಯಾ 29, ಮಹಿರಾ ಇಜ್ಜತಿ ಇಸ್ಮಾಯಿಲ್ 16ಕ್ಕೆ3) **ಮಲೇಷ್ಯಾ:** 20 ಓವರ್‌ಗಳಲ್ಲಿ 8ಕ್ಕೆ 111 (ವ್ಯಾನ್ ಜೂಲಿಯಾ 52, ಒಮಿಚ ಕೆಮಚೊಂಪು 20ಕ್ಕೆ2) **ಫಲಿತಾಂಶ:** ಥಾಯ್ಲೆಂಡ್‌ಗೆ 22 ರನ್ ಜಯ.

### ಸಂಕ್ಷಿಪ್ತ ಸುದ್ದಿ

## ಕ್ರೀಡಾ ಪ್ರಶಸ್ತಿ: ಹೆಸರು ಬದಲಾವಣೆ

**ಭುವನೇಶ್ವರ (ಪಿಟಿಐ):** ಒಡಿಶಾದಲ್ಲಿ ಈಚೆಗಷ್ಟೇ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ಬಿಜು ಪಟ್ನಾಯಕ್ ಕ್ರೀಡಾ ಪ್ರಶಸ್ತಿಯ ಹೆಸರನ್ನು 'ಒಡಿಶಾ ರಾಜ್ಯ ಕ್ರೀಡಾ ಸಮ್ಮಾನ್' ಎಂದು ಬದಲಾಯಿಸಿದೆ.

ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆಯು ಇದಕ್ಕೆ ಸಂಬಂಧಿಸಿದಂತೆ ಶುಕ್ರವಾರ ಪ್ರಶಸ್ತಿಯ ಮಾರ್ಗಸೂಚಿಗಳನ್ನು ಹೊರಡಿಸಿದೆ. ಎಂಟು ವಿಭಾಗದಲ್ಲಿ ವಾರ್ಷಿಕ ಪ್ರಶಸ್ತಿಗಳನ್ನು ನೀಡಲಾಗುವುದು. ನಗದು ಬಹುಮಾನದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೇಳಿದೆ. ಜೀವಮಾನ ಸಾಧನೆ ಪ್ರಶಸ್ತಿಗೆ ₹3 ಲಕ್ಷ ನಗದು, ಅತ್ಯುತ್ತಮ ಸಾಧನೆ ತೋರಿದವರಿಗೆ ₹2 ಲಕ್ಷ ಹಾಗೂ ಶ್ರೇಷ್ಠ ತರಬೇತುದಾರರು ಹಾಗೂ ಇತರ ವಿಭಾಗದ ಪ್ರಶಸ್ತಿಗಳ ಮೊತ್ತ ತಲಾ ₹1 ಲಕ್ಷ.

## 2 ವರ್ಷಗಳ ಬಳಿಕ ನಡಾಲ್ ಫೈನಲ್‌ಗೆ

**ಬೊಸ್ತಾದ್, ಸ್ವೀಡನ್ (ಎಪಿ):** ಸ್ಪೇನ್‌ನ ರಫೆಲ್ ನಡಾಲ್ ಅವರು ನಾರ್ಡಿಯಾ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದರು. 2022ರ ಫ್ರೆಂಚ್ ಓಪನ್ ನಂತರ ಟೂರ್ನಿಯೊಂದರಲ್ಲಿ ಮೊದಲ ಬಾರಿ ಪ್ರಶಸ್ತಿ ಸುತ್ತು ಪ್ರವೇಶಿಸಿದ್ದಾರೆ. 22 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತ ನಡಾಲ್ ಶನಿವಾರ ಸೆಮಿಫೈನಲ್‌ನಲ್ಲಿ 4-6, 6-3, 6-4ರಿಂದ ಡುಜೆ ಅಜ್ಡುಕೋವಿಕ್ ಅವರನ್ನು ಹಿಮ್ಮೆಟ್ಟಿಸಿದರು. ಅವರು ಫೈನಲ್‌ನಲ್ಲಿ ನುನೊ ಬೋರ್ಗಸ್ ಅವರನ್ನು ಎದುರಿಸಲಿದ್ದಾರೆ.

## ಟೆಸ್ಟ್: ಇಂಗ್ಲೆಂಡ್ ದಿಟ್ಟ ಹೋರಾಟ

**ನಾಟಿಂಗ್‌ಹ್ಯಾಮ್ (ಎಎಫ್‌ಪಿ):** ಮೊದಲ ಇನಿಂಗ್ಸ್‌ನಲ್ಲಿ 41 ರನ್‌ಗಳ ಹಿನ್ನಡೆ ಅನುಭವಿಸಿದ ಇಂಗ್ಲೆಂಡ್ ತಂಡವು, ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ ದಿಟ್ಟ ಹೋರಾಟ ತೋರಿದೆ.

ಪಂದ್ಯದ ಮೂರನೇ ದಿನವಾದ ಶನಿವಾರ ಆತಿಥೇಯ ತಂಡವು ಎರಡನೇ ಇನಿಂಗ್ಸ್‌ನಲ್ಲಿ 51 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 248 ರನ್ ಕಲೆ ಹಾಕಿ, 207 ರನ್‌ಗಳ ಮುನ್ನಡೆ ಸಾಧಿಸಿದೆ. ಬೆನ್ ಡಕೆಟ್ (76; 92ಎಸೆತ), ಓಲಿ ಪೋಪ್ (51;67ಎ) ಉಪಯುಕ್ತ ಕಾಣಿಕೆ ನೀಡಿದರು. ಹ್ಯಾರಿ ಬ್ರೂಕ್ (ಔಟಾಗದೇ 71; 78ಎ) ಮತ್ತು ಜೋ ರೂಟ್ (ಔಟಾಗದೇ 37;37ಎ) ಅವರು ಕ್ರೀಸ್‌ನಲ್ಲಿದ್ದಾರೆ.

ಎರಡನೇ ದಿನದಾಟಕ್ಕೆ 77 ಓವರ್‌ಗಳಲ್ಲಿ 5ಕ್ಕೆ 322 ರನ್ ಗಳಿಸಿದ್ದ ವಿಂಡೀಸ್ ತಂಡಕ್ಕೆ ಜೋಶುವಾ ಡಿಸಿಲ್ವ (ಔಟಾಗದೇ 82; 99ಎ) ಬಲ ತುಂಬಿದರು. ಜೋಶುವಾ ಮತ್ತು ಶಮರ್ ಜೋಸೆಫ್ (33) ಅವರು ಕೊನೆಯ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿದರು. ಹೀಗಾಗಿ ಪ್ರವಾಸಿ ತಂಡ 111.5 ಓವರ್‌ಗಳಲ್ಲಿ 457 ರನ್ ಸೇರಿಸಿತು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಇಂಗ್ಲೆಂಡ್: 88.3 ಓವರ್‌ಗಳಲ್ಲಿ 416. ವೆಸ್ಟ್ ಇಂಡೀಸ್: 111.5 ಓವರ್‌ಗಳಲ್ಲಿ 457 ಎರಡನೇ ಇನಿಂಗ್ಸ್: ಇಂಗ್ಲೆಂಡ್: 51 ಓವರ್‌ಗಳಲ್ಲಿ 3ಕ್ಕೆ 248 (ಬೆನ್ ಡಕೆಟ್ 76, ಓಲಿ ಪೋಪ್ 51, ಹ್ಯಾರಿ ಬ್ರೂಕ್ ಔಟಾಗದೇ 71; ಅಲ್ಜಾರಿ ಜೋಸೆಫ್ 58ಕ್ಕೆ 2)